# ಕನ್ನಡ ಸಾಹಿತ್ಯ

**ಕೃಷಿ ವಿಜ್ಞಾನಗಳ ಪದವಿ**
**ಮೊದಲ ಸೆಮಿಸ್ಟರ್ ಕನ್ನಡ ಪಠ್ಯ ಪುಸ್ತಕ**

**ಕೃಷಿ ವಿಶ್ವವಿದ್ಯಾಲಯ, ಧಾರವಾಡ**
**ಕೃಷಿ ವಿಶ್ವವಿದ್ಯಾಲಯ, ರಾಯಚೂರು**
**ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ**

**"ಕನ್ನಡ ಸಾಹಿತ್ಯ"** ಕೃಷಿ ವಿಜ್ಞಾನಗಳ ಪ್ರಥಮ ವರ್ಷದ ಬಿ.ಎಸ್ಸಿ. (ಕೃಷಿ) ಮೊದಲ ಸೆಮಿಸ್ಟರ್, ಕನ್ನಡ ಪಠ್ಯಪುಸ್ತಕ, ಪ್ರಕಟಣೆ : ಸಂಪಾದಕರು, ಸಂವಹನ ಕೇಂದ್ರ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ–577204.

**"Kannada Sahitya" Agricultural Sciences 1st Year B.Sc. (Agri.) 1st semester, Kannada textbook,** Published by : Editor, UCC, UAHS, Shivamogga-577204

| | | | | | |
|---|---|---|---|---|---|
| ಪ್ರಥಮ ಮುದ್ರಣ | : 2017 | ಪುಟಗಳು | : | x +156=166 |
| First Edition | : 2017 | Pages | : | x +156=166 |
| ಪ್ರತಿಗಳು | : 1000 | ಅಳತೆ | : | 1/8 ಡೆಮ್ಮಿ |
| Copies | : 1000 | Size | : | 1/8th Demmy |
| ಬೆಲೆ ರೂ. | : 100/– | ಕಾಗದ | : | 80ಜಿಎಸ್‌ಎಂ ಮ್ಯಾಪ್‌ಲಿಥೋ |
| Price Rs. | : 100/– | Paper | : | 80 GSM, Maplitho |

© ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

**ಅಕ್ಷರ ಸಂಯೋಜನೆ:**
ಸಂವಹನ ಕೇಂದ್ರ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

**ಪುಸ್ತಕ ದೊರೆಯುವ ಸ್ಥಳ:**
**ಸಂಪಾದಕರು**
ಸಂವಹನ ಕೇಂದ್ರ
ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ
ಶಿವಮೊಗ್ಗ–577204
ದೂರವಾಣಿ : 08182–267021

**ಮುಖಪುಟ ವಿನ್ಯಾಸ** : ಸಂವಹನ ಕೇಂದ್ರ

***ಮುದ್ರಣ:***
ಸರಸ್ವತಿ ಆಫ್‌ಸೆಟ್‌ಪ್ರಿಂಟರ್ಸ್
ಶಿವಾಜಿ ರಸ್ತೆ, ಧಾರವಾಡ–580 001

## ಪಠ್ಯ ಪುಸ್ತಕ ರಚನಾ ಸಮಿತಿ


**ಅಧ್ಯಕ್ಷರು**

**ಡಾ. ಕೆ.ಸಿ. ಶಶಿಧರ**

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಕೃಷಿ ಇಂಜಿನಿಯರಿಂಗ್ ವಿಭಾಗ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

**ಸದಸ್ಯರು**

**ಡಾ. ಮೇಟಿ ಮಲ್ಲಿಕಾರ್ಜುನ**

ಪ್ರಾಧ್ಯಾಪಕರು ಹಾಗೂ ಸಂಯೋಜಕರು

ಭಾಷಾಶಾಸ್ತ್ರ ವಿಭಾಗ

ಸಹ್ಯಾದ್ರಿ ಕಲಾ ಕಾಲೇಜು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಸಾಸ್ವೆಹಳ್ಳಿ ಸತೀಶ್**

ಉಪನ್ಯಾಸಕರು, ಕನ್ನಡ ವಿಭಾಗ

ಸರ್ಕಾರಿ ಪದವಿಪೂರ್ವ ಕಾಲೇಜು

ಮಾಳೂರು, ತೀರ್ಥಹಳ್ಳಿ, ಶಿವಮೊಗ್ಗ

**ಡಾ. ಟಿ.ಎಂ. ಸೌಮ್ಯ**

ಸಹಾಯಕ ಪ್ರಾಧ್ಯಾಪಕರು

ಬೇಸಾಯಶಾಸ್ತ್ರ ವಿಭಾಗ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಎಂ.ಸಿ. ಮಲ್ಲಿಕಾರ್ಜುನ**

ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

# ಕುಲಪತಿಯವರ ನುಡಿ

ಕರ್ನಾಟಕ ಸರ್ಕಾರದ ಆಶಯದಂತೆ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳು ಕನ್ನಡವನ್ನು ಒಂದು ಪಠ್ಯವಿಷಯವನ್ನಾಗಿ ಬೋಧಿಸಲು ಮುಂದಾಗಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ. ವಿಶ್ವವಿದ್ಯಾಲಯದ ಮೊದಲ ವರ್ಷದ ಸ್ನಾತಕ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಬೋಧಿಸಲು ಕರ್ನಾಟಕ ಸರ್ಕಾರವು ಅನುವು ಮಾಡಿಕೊಟ್ಟಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿರುವ ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ವಿಶ್ವವಿದ್ಯಾಲಯಗಳಿಗೆ ಸೂಕ್ತವಾಗುವ ಪಠ್ಯಪುಸ್ತಕ ಸಿದ್ಧಪಡಿಸಲು ನಮ್ಮ ವಿಶ್ವವಿದ್ಯಾಲಯ ಕಾರ್ಯಯೋಜನೆ ಹಾಕಿಕೊಂಡು ಕಾಲಮಿತಿಯಲ್ಲಿ ಪೂರ್ಣಗೊಳಿಸಿದೆ. ಇದಕ್ಕೆ ಬೆಂಬಲ ವ್ಯಕ್ತಪಡಿಸಿದ ಎಲ್ಲಾ ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಧನ್ಯವಾದಗಳು.

ಪ್ರಸ್ತುತ ಕನ್ನಡ ಪಠ್ಯವನ್ನು ಅಭ್ಯಾಸ ಮಾಡುತ್ತಿರುವ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಇದೊಂದು ಸುವರ್ಣಾವಕಾಶವೆಂದು ನಾನು ಭಾವಿಸಿದ್ದೇನೆ. ನಮ್ಮ ವಿದ್ಯಾರ್ಥಿಗಳು ಕೃಷಿ ವಿಜ್ಞಾನವನ್ನು ಅಭ್ಯಸಿಸುವುದರ ಜೊತೆಗೆ ಕನ್ನಡ ಪಠ್ಯಗಳ ವಿಷಯದ ಬಗ್ಗೆ ಗಂಭೀರವಾದ ಗ್ರಹಿಕೆ ಮತ್ತು ಚಿಂತನೆಗೆ ಹಚ್ಚಿ, ಅವರ ಮನೋವಿಕಾಸಕ್ಕೆ ಪೂರಕವಾಗುವಂತಹ ಪಠ್ಯವನ್ನು ಸಮಿತಿಯು ಸಿದ್ಧಪಡಿಸಿದೆ. ಜೊತೆಗೆ ಪ್ರಸಕ್ತ ವಿದ್ಯಾಮಾನಗಳಿಗೆ ಮುಖಾಮುಖಿಯಾಗುವ, ಪಠ್ಯಗಳಿಂದ ವಿದ್ಯಾರ್ಥಿಗಳ ಅಂತರಂಗ ಸೃಜನಶೀಲಗೊಂಡು ಅಧ್ಯಯನಕ್ಕೆ ತೆರೆದುಕೊಳ್ಳುವಂತೆ ಅಳವಡಿಸಿರುವುದು ಇಲ್ಲಿನ ವಿಶೇಷತೆಯಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುತ್ತಾರೆ ಎಂಬುದು ನನ್ನ ನಂಬಿಕೆ.

ಈ ಕಾರ್ಯದಲ್ಲಿ ಕೈಜೋಡಿಸಿದ ಪಠ್ಯಪುಸ್ತಕ ಸಮಿತಿ, ವಿಶ್ವವಿದ್ಯಾಲಯದ ಎಲ್ಲ ಕಾರಣೀಕರ್ತರಿಗೆ ನನ್ನ ಅಭಿನಂದನೆಗಳು

(ಡಾ. ಪಿ. ನಾರಾಯಣಸ್ವಾಮಿ)
ಕುಲಪತಿಗಳು

# ಪ್ರಸ್ತಾವನೆ

ನೆಲದ ಭಾಷೆ ಕನ್ನಡ, ನಮ್ಮ ಅನ್ನದಾತರ ನುಡಿ ಕನ್ನಡ. ಈ ನೆಲದ ನುಡಿ, ಸಂಸ್ಕೃತಿಯನ್ನ ಕಟ್ಟಿಕೊಟ್ಟಿರುವುದು ಕೃಷಿ. ಕೃಷಿಕರ ಜೀವನ ಹಿತವಾಗಿಸುವುದು, ಅವರಿಗೆ ನೆರವಾಗುವುದು ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು ಕೃಷಿ, ತೋಟಗಾರಿಕೆ, ಪಶುವೈದ್ಯವಿಜ್ಞಾನ–ತಂತ್ರಜ್ಞಾನಗಳ ವಿಶ್ವವಿದ್ಯಾಲಯಗಳ ಆಶಯವಾಗಿದೆ. ಆದರೆ ಈ ವಿಶ್ವವಿದ್ಯಾಲಯದ ಪಠ್ಯದಲ್ಲಿ ಈ ನೆಲದ ಭಾಷೆ ಕೊರತೆಯಿಂದಾಗಿ ವಿಜ್ಞಾನ ತಂತ್ರಜ್ಞಾನ ವರ್ಗಾವಣೆ ಹಾಗೂ ಸಂವಹನಕ್ಕೆ ಹಿನ್ನೆಡೆಯಾಗಿದೆ. ಈ ವಿಷಯವನ್ನು ಹಲವು ವೇದಿಕೆ ಮತ್ತು ಸಂದರ್ಭಗಳಲ್ಲಿ ನಾನು ಪ್ರಸ್ತಾಪಿಸಿದ್ದೆ. ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುವಾಗ ಸಹ ಈ ಬಗ್ಗೆ ಪ್ರಸ್ತಾಪಿಸಿದ್ದೆ. ಹೀಗೆ ಹಲವಾರು ಹಿರಿಯರು ಈ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದರು. ಈ ಎಲ್ಲಾ ಅಂಶಗಳನ್ನು ಗಮನಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಶೇಷ ಸಭೆಗಳನ್ನ ನಡೆಸಿ ದಿನಾಂಕ 09.08.2016 ರಂದು ಕೃಷಿ, ತೋಟಗಾರಿಕೆ, ಪಶುವೈದ್ಯ ಹೀಗೆ ಎಲ್ಲಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳು ಕನ್ನಡ ಭಾಷೆಯನ್ನು ಪಠ್ಯದಲ್ಲಿ ಅಳವಡಿಸಲು ಸೂಚಿಸಿದರು.

ಇದಕ್ಕೆ ಸ್ಪಂದಿಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳು ಕನ್ನಡವನ್ನು ಎರಡು ಸೆಮಿಸ್ಟರ್‌ಗಳಲ್ಲಿ ಬೋಧಿಸಲು ತೀರ್ಮಾನಿಸಿ, ಪಠ್ಯ ಪುಸ್ತಕ ಸಿದ್ಧಪಡಿಸುವ ಕಾರ್ಯವನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಲಾಯಿತು. ಇದಕ್ಕಾಗಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು ಪಠ್ಯಪುಸ್ತಕ ರಚನಾ ಸಮಿತಿ ನೇಮಿಸಿತು. ಈ ಸಮಿತಿಯು ರಾಜ್ಯಮಟ್ಟದಲ್ಲಿ ಚರ್ಚಿಸಿದ ರೂಪುರೇಷೆಗಳನ್ನು ಆದರಿಸಿ, ಪಠ್ಯಪುಸ್ತಕ ಸಿದ್ಧಪಡಿಸಿರುತ್ತದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಳವಡಿಸುವ ದಿಟ್ಟ ನಿರ್ಧಾರ ತೆಗೆದುಕೊಳ್ಳುವ ನೇತೃತ್ವ ವಹಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಡಾ. ಎಲ್. ಹನುಮಂತಯ್ಯ ಹಾಗೂ ಇಂದಿನ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರಿಗೆ ಅಭಿನಂದಿಸಿ ನನ್ನ ಕೃತಜ್ಞತೆಗಳನ್ನು ಇಲ್ಲಿ ದಾಖಲಿಚ್ಚಿಸುವೆ. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಸಿ.ವಾಸುದೇವಪ್ಪ ಇವರುಗಳಿಗೆ ಮತ್ತು ಈ ಕಾರ್ಯಕ್ಕೆ ಕೈಜೋಡಿಸಿದ ಕುಲಪತಿಗಳಾದ ಡಾ. ಡಿ.ಪಿ. ಬಿರಾದರ್, ಡಾ. ಎಸ್. ಶಿವಣ್ಣ, ಡಾ. ಪಿ.ಎಂ. ಸಾಲಿಮಠ ಇವರುಗಳಿಗೆ ನನ್ನ ವೈಯಕ್ತಿಕ ಅಭಿನಂದನೆಗಳು. ಎಲ್ಲಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಎಲ್ಲಾ ಅಧಿಕಾರಿಗಳಿಗೆ ಹಾಗೂ ಕನ್ನಡ ವಿಭಾಗದ ಪ್ರಾಧ್ಯಾಪಕರುಗಳಿಗೆ, ಶಿಕ್ಷಣ ನಿರ್ದೇಶಕರುಗಳ ಸಹಕಾರ ಸ್ಮರಿಸಲಿಚ್ಚಿಸುವೆ.

ಈ ಪಠ್ಯಪುಸ್ತಕಕ್ಕೆ ಆಯ್ದ, ಪಠ್ಯಗಳನ್ನು ತುಂಬು ಮನಸ್ಸಿನಿಂದ ನೀಡಿದ ಎಲ್ಲಾ ಲೇಖಕರಿಗೆ ಹಾಗೂ ಅವುಗಳ ಹಕ್ಕು ಸ್ವಾಮ್ಯ ಹೊಂದಿದವರಿಗೆ ವಿಶ್ವವಿದ್ಯಾಲಯವು ಆಭಾರಿಯಾಗಿದೆ.

ಡಾ. ಮೇಟಿ ಮಲ್ಲಿಕಾರ್ಜುನ ಹಾಗೂ ಡಾ. ಸಾಸ್ವೆಹಳ್ಳಿ ಸತೀಶ, ಡಾ. ಎಂ.ಸಿ.ಮಲ್ಲಿಕಾರ್ಜುನ, ಡಾ. ಸೌಮ್ಯ ಅವರು ಪಠ್ಯ ರಚನಾ ಸಮಿತಿ ಸದಸ್ಯರಾಗಿ ಸಲ್ಲಿಸಿದ ಸೇವೆ ಹಾಗೂ ಅವರ ಶ್ರಮಗಳಿಗೆ ಬೆಲೆ ಕಟ್ಟಲಾಗದು. ಅವರುಗಳಿಗೆ ನಾನು ಅಬಾರಿಯಾಗಿದ್ದೇನೆ. ಈ ಕಾರ್ಯದಲ್ಲಿ ಕೈ ಜೋಡಿಸಿದ ಎಲ್ಲರಿಗೂ ನನ್ನ ಕೃತಜ್ಞತೆಗಳು

ಸಂಪಾದಕ

# ಪರಿವಿಡಿ

ಕುಲಪತಿಯವರ ನುಡಿ \v

ಪ್ರಸ್ತಾವನೆ \vii

**ಪಠ್ಯಕ್ರಮ**

1. ಕರ್ನಾಟಕ ಸಂಸ್ಕೃತಿಯ ಒಂದು ಚಿತ್ರ \1

**ಡಾ. ರಹಮತ್ ತರೀಕೆರೆ**

2. 'ಹುಲ್ಲು' ಕಣವಿಯವರ ಒಂದು ಕವನ \16

**ಗೌರೀಶ ಕಾಯ್ಕಿಣಿ**

3. ವಂಶವಾಹಿ ಮಹಾಮೋಜಣಿ \26

**ನಾಗೇಶ ಹೆಗಡೆ**

4. ಯಾತಕ್ಕೆ ಮಳೆಹೋದವೋ... \37

ಮೂಲ: **ಪಿ.ಸಾಯಿನಾಥ್,** ಕನ್ನಡಕ್ಕೆ : **ಜಿ.ಎನ್.ಮೋಹನ್**

5. ಎರಡನೆಯ ಅಚಾತುರ್ಯ \48

**ಡಾ. ಗಣೇಶ ಎಂ. ನೀಲೆಸರ**

6. ಆಹಾರ \55

**ಈಶ್ವರ ದೈತೋಟ**

7. ವಚನ ಸಾಹಿತ್ಯದಲ್ಲಿ ಕೃಷಿ \69

**ವಚನಕಾರರು**

8. ಸರ್ವಜ್ಞ ಸಾಹಿತ್ಯದಲ್ಲಿ ಕೃಷಿ \75

**ಡಾ. ಕೆ.ಸಿ. ಶಶಿಧರ**

9. ಅವ್ವ \85

**ಪಿ.ಲಂಕೇಶ್**

10. ತೆಂಗು \90

**ಡಾ. ಜಿ.ಎಸ್. ಶಿವರುದ್ರಪ್ಪ**

11. ಅಲ್ಲೆ ಕುಂತವರೆ \93

**ಡಾ. ಸಿದ್ಧಲಿಂಗಯ್ಯ**

12. ಮಿಶ್ರ ತಳಿಗಳು \107

**ಡಾ. ಎಂ. ಮಹಾದೇವಪ್ಪ**

13. ಕೃಷಿ–ಋಷಿ ಶಂಕರ ಲಂಗಟಿ \109

**ಡಾ. ತೇಜಸ್ವಿನಿ ಬಿ. ಯಕ್ಕುಂಡಿ ಮಠ**

14. ನೀರು \115

**ಬಸವರಾಜು ಕುಕ್ಕರಹಳ್ಳಿ**

15. ಕಾಡಿನಲ್ಲಿ ಕಳೆದ ಒಂದಿರುಳು \125

**ಕುವೆಂಪು**

16. ಸಸ್ಯ ಶಾಸ್ತ್ರ \138

**ಡಾ. ಶಿವರಾಮ ಕಾರಂತ**

17. ಜೇಡ ಜಾಲ \149

**ಡಾ. ಟಿ.ಆರ್. ಅನಂತರಾಮು**

18. ಪಶು ಚಿಕಿತ್ಸೆ \151

**ಬೀ.ಚಿ.**

19. ಜ್ಞಾನಪೀಠ ಪುರಸ್ಕೃತ ಸಾಹಿತಿಗಳು \153

**ಡಾ. ಸಾಸ್ವೆಹಳ್ಳಿ ಸತೀಶ್**

ಸಂಸ್ಕೃತಿ ಪರಿಚಯ

೧

# ಕರ್ನಾಟಕ ಸಂಸ್ಕೃತಿಯ ಒಂದು ಚಿತ್ರ

ಡಾ. ರಹಮತ್ ತರೀಕೆರೆ

## ಯಾಕೆ ಈ ಸ್ಥಿತಿ?

ಕತೆಗಾರ ಡಾ. ಬೆಸಗರಹಳ್ಳಿ ರಾಮಣ್ಣನವರು ತಮ್ಮ ಅನುಭವವೊಂದನ್ನು ಹೇಳುತ್ತಿದ್ದರು. ವೈದ್ಯರಾಗಿದ್ದ ಅವರು ಒಮ್ಮೆ ಆಂಧ್ರದ ವೈದ್ಯಕೀಯ ವಿದ್ಯಾರ್ಥಿಗಳ ಜತೆ ಚರ್ಚೆ ಮಾಡುತ್ತಾ, ಪೊಟ್ಟಿ ಶ್ರೀರಾಮುಲು ಎಂಬುವರ ವಿಷಯ ತೆಗೆದರಂತೆ. ಆಗ ಆ ವಿದ್ಯಾರ್ಥಿಗಳು ಅವರು ಯಾರು, ತಮಗೇನೊ ಗೊತ್ತಿಲ್ಲ ಎಂದು ಮುಗ್ಧವಾಗಿ ಉತ್ತರಿಸಿದರಂತೆ. ರಾಮಣ್ಣನವರಿಗೆ ಆಶ್ಚರ್ಯವಾಗಿ ಅಲ್ರಯ್ಯಾ, ತೆಲುಗು ಮಾತಾಡೋ ಪ್ರದೇಶಗಳೆಲ್ಲ ಸೇರಿ ಒಂದು ರಾಜ್ಯವಾಗಬೇಕು ಅಂತ ಆ ಮನುಷ್ಯ 52 ದಿವಸ ಉಪವಾಸ ಮಾಡಿ ಪ್ರಾಣಬಿಟ್ಟೋನು. ಅವನಿಂದಲೇ ನಿಮ್ಮ ಈಗಿನ ಆಂಧ್ರಪ್ರದೇಶ ಆಗಿದ್ದು, ನಮ್ಮ ಕರ್ನಾಟಕ ಏಕೀಕರಣಕ್ಕೂ ಅವನ ಪ್ರಾಣತ್ಯಾಗ ಸಹಾಯ ಮಾಡ್ತು. ಅಂತಹವನ ಬಗ್ಗೆ ಗೊತ್ತಿಲ್ಲ ಅಂತೀದೀರಲ್ಲ. ಏನು ಹೇಳೋಣ ಅಂತ ವಿಷಾದಿಸಿದರಂತೆ.

ಇದೊಂದು ಉದಾಹರಣೆ ಅಷ್ಟೆ. ಇಂತಹವು ಇನ್ನೂ ಸಿಗಬಹುದು. ಪ್ರಶ್ನೆಯೆಂದರೆ, ಅಕ್ಷರಸ್ಥರಲ್ಲಿ ತಮ್ಮ ನಾಡಿನ ಜನರ ಬಗ್ಗೆ ಸಂಸ್ಕೃತಿ ಬಗ್ಗೆ ಅರಿವಿಲ್ಲದ ಈ ಪರಿಸ್ಥಿತಿ ಯಾಕೆ ಸೃಷ್ಟಿಯಾಗುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಎಲ್ಲೆಲ್ಲಿ ಏನು ಬೆಳೆ ಬೆಳೆಯಲಾಗುತ್ತದೆ, ಅಲ್ಲಿನ ಆಹಾರ ಪದ್ಧತಿ, ಮನೆಕಟ್ಟುವ, ಬಟ್ಟೆಧರಿಸುವ ವಿಧಾನ ಈ ಬಗ್ಗೆ ಯಾಕೆ ಸಣ್ಣ ಕುತೂಹಲವೂ ಕಾಣುವುದಿಲ್ಲ. ಬಹುಶಃ ದೋಷ ಅವರಲ್ಲಿ ಇದ್ದಂತಿಲ್ಲ ಅವರು ಕಲಿತು ಬದುಕುವ ಪರಿಸರದಲ್ಲಿ ಇದ್ದಂತಿದೆ.

ತಮ್ಮ ನಾಡಿನ ಬಗ್ಗೆ ಅರಿವಿರಬೇಕು ಎಂದರೇನು? ಅದಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಜನರಲ್ ನಾಲೆಜ್ ರೀತಿಯಲ್ಲಿ ಸಂಗ್ರಹ ಮಾಡಿ ಕೊಂಡಿರಬೇಕು ಎಂದರ್ಥವಲ್ಲ. ಕರ್ನಾಟಕದ ವಿಸ್ತೀರ್ಣ ಎಷ್ಟು ಎಂದರೆ ಪಟಾರನೆ ಉತ್ತರ ಹೇಳುವುದಕ್ಕೂ, ಇಲ್ಲಿನ ಜನರ ಬದುಕಿನ ಜತೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿರುವುದಕ್ಕೂ ವ್ಯತ್ಯಾಸವಿದೆ. ಮಾಹಿತಿ ಬರಿ ನೆನಪಿನ ಶಕ್ತಿಯಾಗಿ ಉಳಿದರೆ ಜಡವಾಗಿರುತ್ತವೆ. ಅದು ಸಂವೇದನೆಯ ಭಾಗವಾದರೆ, ನಾಡಿನ ಬಗ್ಗೆ ಆಪ್ತ ಸಂಬಂಧ ಬೆಳೆಸಿಕೊಂಡಿರುವುದಕ್ಕೂ

ವ್ಯತ್ಯಾಸವಿದೆ. ಮಾಹಿತಿ ಬರಿ ನೆನಪಿನ ಶಕ್ತಿಯಾಗಿ ಉಳಿದರೆ ಜಡವಾಗಿರುತ್ತವೆ. ಅದು ಸಂವೇದನೆಯ ಭಾಗವಾದರೆ, ನಾಡಿನ ಬಗ್ಗೆ ಆಪ್ತ ಸಂಬಂಧ ಬೆಳೆಸಿಕೊಳ್ಳಲು ಕಾರಣವಾಗುತ್ತದೆ. ಈ ಸಂಬಂಧವು ಜನರ ನೋವು ನಲಿವಿನ ಜತೆ ಮಿಡಿಯಲು ಪ್ರೇರಿಸುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತಿಯನ್ನು ತಿಳಿವ ಅಗತ್ಯವಿದೆ.

**ಸಂಸ್ಕೃತಿ ಎಂದರೇನು?**

'ಛೇ! ಅವರಿಗೆ ಕಲ್ಚರ್ರೇ ಇಲ್ಲಪ್ಪ' ಎಂಬ ಮಾತನ್ನು ನಾವೆಲ್ಲ ಕೇಳಿದ್ದೇವೆ. ಹೀಗೆ ಹೇಳುವವರ ಮನಸ್ಸಲ್ಲಿ ಸಂಸ್ಕೃತಿ ಅಂದರೆ ಏನರ್ಥವಿದೆ? ಅದೊಂದು ಸಭ್ಯತೆ, ತಾವು ಬೈಯುತ್ತಿರುವವರಲ್ಲಿ ಅದು ಇಲ್ಲ ಅಂತ ತಾನೇ? ಅವರ ಪ್ರಕಾರ ಸಂಸ್ಕೃತಿ ಎನ್ನುವುದು, ನಡೆತೆಗೆ ನೈತಿಕ ಮೌಲ್ಯಗಳಿಗೆ ಸಂಬಂಧಿಸಿದ್ದು. ಹೌದು, ಇದೇ ಸಂಸ್ಕೃತಿಗಿರುವ ಜನಪ್ರಿಯ ಅರ್ಥ. ಈ ಅರ್ಥವನ್ನು ಒಪ್ಪಿಕೊಂಡೊಡನೆ ಒಂದು ಪ್ರಶ್ನೆ ಹುಟ್ಟುತ್ತದೆ. ಯಾರೋ ಕೆಲವರು ನಂಬಿರುವುದೇ ಯಾಕೆ ಸಂಸ್ಕೃತಿ ಆಗಬೇಕು? ಬೇರೆಯವರಿಗೂ ಅವರದೇ ಸಂಸ್ಕೃತಿ ಇರಬಹುದಲ್ಲವೇ? ಬಾಯಾರಿದವರಿಗೆ ನೀರು ಕೊಡುವುದನ್ನು ಸಂಸ್ಕೃತಿ ಎಂದರೆ ಸಮಸ್ಯೆಯಿಲ್ಲ. ಅವರು ನಮಗೆ ಇಷ್ಟವಾಗದ ಆಹಾರ ತಿಂತಾರೆ, ಅವರು ಕೊಳಕಾಗಿದಾರೆ, ಅವರ ಭಾಷೆ ಒರಟು, ಆದ್ದರಿಂದ ಅವರಿಗೆ ಸಂಸ್ಕೃತಿ ಇಲ್ಲ ಎಂದರೆ ಸಮಸ್ಯೆ. ಒಂದು ನಾಡಿನ ಜನರೆಲ್ಲ ಒಂದೇ ರೀತಿಯಲ್ಲಿ ಉಣ್ಣುವ ಉಡುವ ಚಿಂತಿಸುವ ಕೆಲಸ ಮಾಡುತ್ತಿದ್ದರೆ, ಈ ಕಷ್ಟ ಇರುತ್ತಿರಲಿಲ್ಲ. ಆದರೆ ಇಲ್ಲಿ ಹಲವು ಬಗೆಯ ಜನಸಮುದಾಯಗಳಿವೆ. ಹಲವು ಧರ್ಮ ಜಾತಿ ಬುಡಕಟ್ಟುಗಳು ಇವೆ. ಬಡವರಿದ್ದಾರೆ, ಸಿರಿವಂತರಿದ್ದಾರೆ. ಈ ವಿಭಿನ್ನ ಜನ ಉಡುವ ಉಣ್ಣುವ ರೀತಿಗಳಲ್ಲಿ ಸಹಜವಾಗಿ ವ್ಯತ್ಯಾಸ ಇದೆ. ಹೀಗಿರುವಾಗ ಯಾರೋ ಕೆಲವರು ಶ್ರೇಷ್ಠ ಎಂದು ನಂಬಿರುವುದು ಮಾತ್ರ ಸಂಸ್ಕೃತಿ ಎಂದರೆ ಹೇಗೆ ಒಪ್ಪುವುದು? ನೂರಾರು ಸಮುದಾಯಗಳು ಬದುಕುವ ಭಾರತದಲ್ಲಿ, 'ಇದೇ ಸಂಸ್ಕೃತಿ' ಎಂದು ನಿರ್ಧರಿಸುವುದು ಯಾವಾಗಲೂ ಕಷ್ಟದ ಕೆಲಸ.

ಸಾಮಾನ್ಯವಾಗಿ ಎಲ್ಲ ಸಮಾಜಗಳಲ್ಲೂ ಶ್ರೇಷ್ಠ ಕನಿಷ್ಠ ಅನ್ನುವುದನ್ನ ತೀರ್ಮಾನ ಮಾಡುವವರು ಪ್ರತಿಷ್ಠಿತರು. ಒಬ್ಬ ಧಣಿ, ಕೆಲಸಗಾರರು ತನಗೆ ನಿಷ್ಠರಾಗಿ ದುಡಿಯುವುದೆ ಸಂಸ್ಕೃತಿ ಅನ್ನಬಹುದು. ಬ್ರಿಟಿಷರು ಈ ದೇಶಕ್ಕೆ ಬಂದಾಗ ಭಾರತೀಯರ ಸಂಸ್ಕೃತಿ ಅನಾಗರಿಕ ಎಂದೂ, ಅವರಿಗೆ ತಮ್ಮ ಸಭ್ಯತೆ ಕಲಿಸಿ ನಾಗರಿಕರನ್ನಾಗಿ ಮಾಡಬೇಕು ಎಂದೂ ನಂಬಿದ್ದರು. ಅಧಿಕಾರಸ್ಥ ವರ್ಗದ ಜನ ಸಂಸ್ಕೃತಿ ವ್ಯಾಖ್ಯೆ ಮಾಡಿದಾಗೆಲ್ಲ ಈ ತಾರತಮ್ಯ ಇದ್ದೇ ಇರುತ್ತದೆ.

ಎಲ್ಲ ಸಮುದಾಯಗಳಿಗೆ ತಮ್ಮ ನಂಬಿಕೆ ಆಚರಣೆಗಳನ್ನು, ಮತ್ತೊಬ್ಬರಿಗೆ ಇಷ್ಟವಾಗಲಿ ಬಿಡಲಿ, ಅನುಸರಿಸುವುದಕ್ಕೆ ಹಕ್ಕಿದೆ. ಅವರ ಹಕ್ಕು ಮತ್ತೊಬ್ಬರ ಹಕ್ಕನ್ನು ಕಿತ್ತುಕೊಳ್ಳಬಾರದು ಅಷ್ಟೆ. ಮೀನು ತಿನ್ನುವುದು ನಮಗೆ ಇಷ್ಟ ಎಂದಾಗ, ಅದು ಸಾಂಸ್ಕೃತಿಕ ಹಕ್ಕಾಗುತ್ತದೆ. ಅಸ್ಪೃಶ್ಯತೆ ಆಚರಿಸುವುದು ನಮ್ಮ ಸಂಪ್ರದಾಯ ಎಂದಾಗ

ಅದು ಇನ್ನೊಬ್ಬರನ್ನು ಕೀಳಾಗಿ ನೋಡುವ ಮಾತಾಗುತ್ತದೆ. ಎರಡೂ ನಂಬಿಕೆಗಳಾದರೂ ಅವುಗಳಲ್ಲಿ ಎಷ್ಟೊಂದು ವ್ಯತ್ಯಾಸ! ನಾಗರಿಕ ಸಮಾಜಕ್ಕೆ ಬಾಧೆಯಾಗದಂತೆ ಜನ ತಮ್ಮ ಸಂಸ್ಕೃತಿ ವಿಶಿಷ್ಟತೆ ಉಳಿಸಿಕೊಂಡರೆ, ಅದು ಕೆಡುಕಲ್ಲ. ಕನ್ನಡದ ಮೊದಲ ಕೃತಿ ಕವಿರಾಜಮಾರ್ಗದಲ್ಲಿ ಪರರ ಧರ್ಮವನ್ನು ಪರರ ವಿಚಾರಗಳನ್ನು ಸಹಿಸುವುದೇ ಬಂಗಾರ ಎಂಬ ಒಂದು ಮಾತು ಬರುತ್ತದೆ. ಹಲವು ಸಂಸ್ಕೃತಿಗಳಿಗಿರುವ ಪರಿಸರದಲ್ಲಿ ಇರಲೇಬೇಕಾದ ಡೆಮಾಕ್ರಟಿಕ್ ಸಹನೆಯನ್ನು ಇದು ಸೂಚಿಸುತ್ತಿದೆ.

ಹಾಗಾದರೆ ಸಂಸ್ಕೃತಿ ಎಂದರೇನು? ಈ ಪ್ರಶ್ನೆಗೆ ಹೀಗೆ ಉತ್ತರಿಸಬಹುದು. ಸಂಸ್ಕೃತಿ ಎಂದರೆ ಒಂದು ನಾಡಿನ ಎಲ್ಲ ಜನರ ಜೀವನ ವಿಧಾನ. ನಮ್ಮಂತಹ ದೇಶದಲ್ಲಿ ಒಂದು ಸಂಸ್ಕೃತಿಯಲ್ಲ, ಹಲವು ಸಂಸ್ಕೃತಿಗಳಿವೆ. ಅವೆಲ್ಲ ಸೇರಿಯೆ ನಾಡಿನ ಒಟ್ಟು ಸಂಸ್ಕೃತಿ. ಒಬ್ಬರ ಜೀವನ ವಿಧಾನವನ್ನು ಮತ್ತೊಬ್ಬರು ಗೌರವಿಸುವುದು ಇಲ್ಲಿ ಒಂದು ಬಹಳ ಮುಖ್ಯವಾದ ತತ್ವವಾಗಿದೆ.

## ಒಂದಲ್ಲ ಹಲವು

ಈ ತತ್ವ ಕರ್ನಾಟಕ ಸಂಸ್ಕೃತಿಗೂ ಅನ್ವಯವಾಗುತ್ತದೆ. ಜನ ನಿರ್ದಿಷ್ಟ ಧರ್ಮಕ್ಕೆ ಅಥವಾ ಭಾಷೆಗೆ ಸೇರಿದವರಾಗಿದ್ದರೂ, ಅವರ ಜೀವನ ವಿಧಾನದಲ್ಲಿ ವ್ಯತ್ಯಾಸಗಳಿವೆ. ಬೀದರ್ ಸೀಮೆಯ ಉರ್ದು ಸೊಗಡಿನ ಕನ್ನಡ ಮಾತಾಡುವವರಿಗೆ, ಕೊಳ್ಳೇಗಾಲದ ಕನ್ನಡ ಅರ್ಥವಾಗುವುದಿಲ್ಲ. ಬಿಜಾಪುರದ ಕನ್ನಡ ಉಡುಪಿಯವರಿಗೆ ಪೂರ್ತಿ ತಿಳಿಯುವುದಿಲ್ಲ. ಧಾರವಾಡದವರು ಮೈಸೂರಿಗೆ ಹೋದರೆ ಜೋಳದ ರೊಟ್ಟಿ ಸಿಗದೆ ಯಾವುದೋ ದೇಶಕ್ಕೆ ಬಂದೇವಲ್ಲ ಎಂದು ಪರದಾಡುವಂತಾಗುತ್ತದೆ. ಬಂಗುಡೆ ಮೀನು ತಿನ್ನುವ ಕರಾವಳಿಯವರು, ಬಳ್ಳಾರಿಗೆ ಹೋದರೂ ಹೀಗೇ ಅನಿಸಬಹುದು. ಕರ್ನಾಟಕದ ಪ್ರತಿ ಭಾಗದ ಜನ ಆಡುವ ಮಾತು, ಮಾಡುವ ಊಟ, ಉಡುವ ಬಟ್ಟೆಗಳಲ್ಲಿ ಇಷ್ಟೊಂದು ವೈವಿಧ್ಯವಿದೆ! ಇಲ್ಲಿನ ಸೋಲಿಗ ಸಿದ್ಧಿ ಹಾಲಕ್ಕಿ ಬುಡಕಟ್ಟು ಜನರ ಸಂಸ್ಕೃತಿಯಂತೂ ಮತ್ತೂ ವಿಶಿಷ್ಟ. ಕರ್ನಾಟಕ ಸಂಸ್ಕೃತಿ ನಿಜಕ್ಕೂ ಬಹುರೂಪಿಯಾಗಿದೆ.

ಹಾಗಾದರೆ ಯಾವುದು “ಕರ್ನಾಟಕ ಸಂಸ್ಕೃತಿ”? ಕರ್ನಾಟಕದಲ್ಲಿ ಬದುಕುತ್ತಿರುವ ಎಲ್ಲ ಸಮುದಾಯಗಳ ಸಂಸ್ಕೃತಿಗಳ ಮೊತ್ತವೆ ಕರ್ನಾಟಕ ಸಂಸ್ಕೃತಿ. ಭಾರತೀಯ ಸಂಸ್ಕೃತಿ ಎಂದಾಗಲೂ ಇದೇ ವ್ಯಾಖ್ಯೆಯಲ್ಲಿ ಅರ್ಥೈಸಬೇಕು.

## ಸಂಸ್ಕೃತಿ ಮತ್ತು ಭಾಷೆ

‘ಕರ್ನಾಟಕ ಸಂಸ್ಕೃತಿ’ ಎಂದಂತೆ, ‘ಕನ್ನಡ ಸಂಸ್ಕೃತಿ’ ಎಂಬ ಮಾತೂ ಇದೆ. ಕನ್ನಡ ಸಂಸ್ಕೃತಿ ಎಂದಾಗ ಸಂಸ್ಕೃತಿಯನ್ನು ಭಾಷೆ ಹೆಸರಿನಲ್ಲಿ ಗುರುತಿಸುತ್ತೇವೆ. ಕರ್ನಾಟಕ ಸಂಸ್ಕೃತಿ ಎಂದಾಗ ಪ್ರದೇಶದ ಹೆಸರಿನಲ್ಲಿ ಗುರುತಿಸುತ್ತೇವೆ. ಇವುಗಳ ನಡುವೆ ಸೂಕ್ಷ್ಮ ವ್ಯತ್ಯಾಸವಿದೆ. ಕನ್ನಡ ಸಂಸ್ಕೃತಿ ಎಂದೊಡನೆ, ಕನ್ನಡ ಭಾಷೆ, ಕನ್ನಡ ಮಾತೃಭಾಷೆಯ ಜನ, ಕನ್ನಡ ಲೇಖಕರು ನೆನಪಾಗುತ್ತಾರೆ. ಆದರೆ ಮನೆಮಾತು

ಕನ್ನಡವಾಗಿರದ ಜನಸಮುದಾಯಗಳೂ ಇಲ್ಲಿವೆ. ತುಳುವರಿದ್ದಾರೆ, ಕೊಡವರಿದ್ದಾರೆ. ಲಂಬಾಣಿ, ಉರ್ದು, ಕೊಂಕಣಿ, ಮಲೆಯಾಳ, ತಮಿಳು, ತೆಲುಗು, ಮರಾಠಿ ಮಾತಾಡುವ ಜನರಿದ್ದಾರೆ. ಹಾಗಿರುವಾಗ ಇವರ ಸಂಸ್ಕೃತಿ ಕನ್ನಡ ಸಂಸ್ಕೃತಿ ಹೌದೋ ಅಲ್ಲವೊ?

ಒಂದು ಭಾಷೆ ಮಾತಾಡುವ ಪ್ರದೇಶಗಳನ್ನೆಲ್ಲ ಸೇರಿಸಿ ರಾಜ್ಯ ಮಾಡಿದರೆ, ಜನ ಆ ಭಾಷೆಯಲ್ಲಿ ಶಿಕ್ಷಣ ಆಡಳಿತ ಮಾಡಿಕೊಂಡು, ಬೇಗನೆ ಅಭಿವೃದ್ಧಿ ಸಾಧಿಸುತ್ತಾರೆ. ಇದು ಭಾಷಾವಾರು ರಾಜ್ಯಗಳನ್ನು ಮಾಡಿದ್ದರ ಉದ್ದೇಶ. ಅದರಂತೆ, 1956ರಲ್ಲಿ ಕರ್ನಾಟಕ ರಾಜ್ಯ ಮೂಡಿತು. ಈ ಲೆಕ್ಕದಲ್ಲಿ ಕರ್ನಾಟಕ ಸಂಸ್ಕೃತಿಯಲ್ಲಿ ಕನ್ನಡ ಭಾಷೆ ಕೇಂದ್ರ ಸ್ಥಾನದಲ್ಲಿರುವುದು ಸಹಜ. ಆದರೆ ಕರ್ನಾಟಕದಲ್ಲಿ ವಾಸಿಸುವ ಎಲ್ಲರನ್ನೂ ನಾವು ಕನ್ನಡಿಗರು ಎಂದೇ ಕರೆಯುತ್ತೇವೆ. ತುಳು ಉರ್ದು ಕೊಡವ ಭಾಷಿಕರು, ತಂತಮ್ಮ ಭಾಷೆಯ ಜತೆಗೆ, ಪರಿಸರದಲ್ಲಿರುವ ಕನ್ನಡವನ್ನು ಉಸಿರಾಟಕ್ಕೆ ಗಾಳಿ ಪಡೆದಷ್ಟು ಸಹಜವಾಗಿ ಪಡೆದುಕೊಂಡಿದ್ದಾರೆ.

ಹೀಗಾಗಿ 'ಕನ್ನಡ ಸಂಸ್ಕೃತಿ' ಎಂಬುದಕ್ಕಿಂತ 'ಕರ್ನಾಟಕ ಸಂಸ್ಕೃತಿ' ಎಂಬ ವಿಶಾಲ ಕಲ್ಪನೆಯನ್ನು ಬಳಸುವುದೇ ನಮ್ಮ ಸಂದರ್ಭದಲ್ಲಿ ಸೂಕ್ತ. ಯಾಕೆಂದರೆ ಕರ್ನಾಟಕ ಸಂಸ್ಕೃತಿ ಮರದ ದಿಮ್ಮಿಯಂತಿಲ್ಲ. ಕೊಂಬೆರೆಂಬೆಗಳುಳ್ಳ ಮರದಂತಿದೆ. ಅದರಲ್ಲಿ ಕನ್ನಡದ ಜತೆಗೆ ತುಳು ಕೊಡವ ಸಾಹಿತ್ಯವೂ ಇದೆ. ದಖನಿ ಉರ್ದುವಿನಲ್ಲಿ ಗುಲಬರ್ಗದ ಬಂದೇನವಾಜನೂ, ತೆಲುಗಿನಲ್ಲಿ ಕೈವಾರದ ತಾತಯ್ಯನೂ ರಚಿಸಿದ ಸಾಹಿತ್ಯವೂ ಇದೆ. ಧರ್ಮಗಳ ಆಧಾರದಲ್ಲಿ ಹೇಳುವುದಾದರೆ, ಹಿಂದುಗಳು ಕ್ರೈಸ್ತರು ಜೈನರು ಮುಸ್ಲಿಮರು ಎಲ್ಲ ಸೇರಿಯೇ ಕರ್ನಾಟಕ ಸಂಸ್ಕೃತಿಯಾಗಿದೆ.

ಕನ್ನಡದ ಜತೆ ಕನ್ನಡೇತರ ಮನೆಮಾತಿನ ಜನ ಇಟ್ಟುಕೊಂಡಿರುವ ಸಂಬಂಧ ಸ್ವಾರಸ್ಯಕರವಾಗಿದೆ. ಕನ್ನಡಿಗರಾದ ಗಂಗೂಬಾಯಿ ಹಾನಗಲ್, ಭೀಮಸೇನಜೋಶಿ ಹಾಡುವ ಹಿಂದೂಸ್ಥಾನಿ ಸಂಗೀತಕ್ಕೆ ಭಾಷೆಯ ಹಂಗೇ ಇಲ್ಲ. ಅವರು ಹಿಂದೂಸ್ಥಾನಿ ರಚನೆಗಳನ್ನು ಹಾಡುತ್ತಾರೆ. ಅವರು ಹಾಡುವ ಅಭಂಗಗಳಂತೂ ಮರಾಠಿಯವು. ಡಿವಿಜಿ, ಮಾಸ್ತಿ, ಬೇಂದ್ರೆ, ನಿಸಾರ್ ಅಹಮದ್, ಸಾರಾ ಅಬೂಬಕರ್, ನಾ.ಡಿಸೋಜ, ಲಲಿತನಾಯಕ ಇವರು ಕನ್ನಡ ಲೇಖಕರು. ಆದರೆ, ಇವರಲ್ಲಿ ಯಾರ ಮನೆಮಾತೂ ಕನ್ನಡವಲ್ಲ! ಬದಲಾಗಿ ತಮಿಳು, ತೆಲುಗು, ಉರ್ದು, ಕೊಂಕಣಿ, ಲಂಬಾಣಿ. ನೂರು ವರುಷಗಳ ಹಿಂದೆ ಕನ್ನಡಕ್ಕೊಂದು ಅಪರೂಪದ ನಿಘಂಟನ್ನು ರಚಿಸಿಕೊಟ್ಟ ಕಿಟ್ಟೆಲನಂತೂ ಈ ದೇಶದವನೇ ಅಲ್ಲ, ಜರ್ಮನಿಯವನು!

ವಿಚಿತ್ರವಾದರೂ ವಾಸ್ತವ ಸಂಗತಿಯೆಂದರೆ, ಮನೆಮಾತು ಕನ್ನಡವಾದರೂ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡದ, ಕನ್ನಡ ಮಾತಾಡಲು ಕೀಳರಿಮೆ ಪಟ್ಟುಕೊಳ್ಳುವ ಬೇಕಾದಷ್ಟು ಜನ ನಮ್ಮಲ್ಲಿದ್ದಾರೆ! ಬಹುಶ ಬೆಂಗಳೂರಿನಲ್ಲಿ ಜಾಸ್ತಿ ಇದ್ದಾರೆ. ವೈದ್ಯಕೀಯ ಇಂಜಿನಿಯರಿಂಗ್ ಶಿಕ್ಷಣವನ್ನು, 2000 ವರ್ಷದ ಚರಿತ್ರೆಯುಳ್ಳ, ಕೋಟ್ಯಂತರ ಜನರಾಡುವ ಭಾಷೆಯಾದ ಕನ್ನಡದಲ್ಲಿ ಇನ್ನೂ ಕಲಿಸಲು ಯಾಕೆ ಸಾಧ್ಯವಾಗಿಲ್ಲ? ಕನ್ನಡಕ್ಕೆ ಸವಾಲು

ಒಡ್ಡಿರುವುದು ಇಂಗ್ಲೀಷೊ, ಇಲ್ಲಿನ ಜನಭಾಷೆಗಳಾದ ತುಳು ಕೊಡವ ಉರ್ದುಗಳೋ? ಸಂಸ್ಕೃತಿಯನ್ನು ಆವೇಶದಲ್ಲಿ ಗ್ರಹಿಸಿದರೆ ಇಂತಹ ದೊಡ್ಡ ಸತ್ಯಗಳು ತಪ್ಪಿಸಿಕೊಂಡು ಬಿಡುತ್ತವೆ. ಸಂಸ್ಕೃತಿಯನ್ನು ಹುಶಾರಾಗಿ ವ್ಯಾಖ್ಯಾನಿಸದಿದ್ದರೆ, ಅದು ನಿಜವೈರಿಯನ್ನು ಬಿಟ್ಟು ಸಂಗಾತಿಯನ್ನು ದ್ವೇಷಿಸುವ ಮೂಲಭೂತವಾದ ಆಗುತ್ತದೆ.

**ಸಂಸ್ಕೃತಿಯಲ್ಲಿ ಕೊಡುಕೊಳು**

ಬಿಜಿಎಲ್ ಸ್ವಾಮಿ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲಿ ನಾವು ದಿನನಿತ್ಯ ಬಳಸುವ ಮೆಣಸಿನಕಾಯಿ ಗೋಡಂಬಿ, ಕಡಲೆ, ಪಪ್ಪಾಯಿ ಹೇಗೆ ಪರದೇಶದಿಂದ ಬಂದವು ಎಂದು ವಿವರಿಸುತ್ತಾರೆ. ನಮ್ಮ ಸಂಸ್ಕೃತಿ ಎಂಬುದು ನಮಗೇ ವಿಶಿಷ್ಟವಾದ ಗುರುತುಗಳಿರುವ ಸಂಗತಿ ಎಂಬ ಮಾತು ನಿಜ. ಹಾಗೆಂದು ಅದು ಹೊರಗಿನಿಂದ ಬಂದ ಯಾವುದರ ಜತೆಗೂ ಬೆರೆಯದೆ ಮೂಲರೂಪದಲ್ಲಿ ಶುದ್ಧವಾಗಿ ಉಳಿದುಬಂದಿದೆ ಎಂದರ್ಥವಲ್ಲ. ಸಂಸ್ಕೃತಿಯು ಭೂಗರ್ಭದಿಂದ ಹುಟ್ಟಿ ಅಲ್ಲೇ ಬಿದ್ದಿರುವ ಬಂಡೆಯಂತಲ್ಲ. ಅದು ನದಿಯಂತೆ. ನೂರು ಕಡೆಯಿಂದ ಬಂದ ಜಲಧಾರೆಗಳನ್ನು ಸೇರಿಸಿಕೊಂಡು ಹರಿಯುತ್ತದೆ. ಎಂತಲೇ ಕರ್ನಾಟಕ ಸಂಸ್ಕೃತಿ ಒಂದು ದ್ವೀಪವಾಗಿಲ್ಲ. ಕನ್ನಡದಲ್ಲಿ ಸಾವಿರಾರು ಇಂಗ್ಲಿಷು ಪೋರ್ಚುಗೀಸು ಫಾರಸಿ ಅರಬ್ಬಿ ಸಂಸ್ಕೃತ ಭಾಷೆಯ ಪದಗಳು ಸೇರಿವೆ. ಅವು ಎಷ್ಟು ನಮ್ಮವಾಗಿವೆ ಎಂದರೆ, ಉಗಿಬಂಡಿ ಆರಕ್ಷಕ, ವೈದ್ಯ, ಆಭಿಯಂತರ ಮುಂತಾದವು ನಮ್ಮ ಪದಗಳಾದರೂ ವಿದೇಶಿ ಅನಿಸುತ್ತವೆ. ರೈಲು ಪೋಲಿಸು ಇಂಜಿನಿಯರು ಡಾಕ್ಟರು ಇವು ವಿದೇಶಿ ಪದಗಳಾದರೂ ನಮ್ಮವು ಅನಿಸುತ್ತವೆ.

ಜೀವಂತವಾದ ಯಾವ ಭಾಷೆಯೂ ಯಾವ ಸಂಸ್ಕೃತಿಯೂ ಒಂಟಿಯಾಗಿ ನಿಲ್ಲುವ ಹಟ ಮಾಡುವುದಿಲ್ಲ. ಅವು ಕೊಡುಕೊಳು ಮಾಡುತ್ತ ಬೆಳೆಯುತ್ತವೆ. ಕೊಡುಕೊಳೆ ಮಾಡುವಾಗ ಉಪಯುಕ್ತವಾದುದನ್ನು ಉಳಿಸಿಕೊಳ್ಳಲು ಯತ್ನಿಸುತ್ತವೆ. ಬಿಜಾಪುರದ ಗೋಳಗುಮ್ಮಟ ಗಮನಿಸಿ. ಅದರಲ್ಲಿ ಪರ್ಶಿಯನ್ ವಾಸ್ತುಶೈಲಿಯು ಭಾರತೀಯ ಶೈಲಿಯ ಜತೆ ಅದ್ಭುತವಾಗಿ ಮಿಲನಗೊಂಡಿದೆ. ಹಂಪಿಯ ಕಮಲಮಹಲ್ ಇಡಿಯಾಗಿ ಇಸ್ಲಾಮಿಕ್ ಶೈಲಿಯಲ್ಲಿದೆ. ಬ್ರಿಟಿಷ್ ಇಂಜಿನಿಯರುಗಳು ಕಟ್ಟಿಸಿದ ಈಗಿನ ಮೈಸೂರು ಅರಮನೆಯಲ್ಲಿ, ಯೂರೋಪಿನ ಪರ್ಶಿಯಾದ ಹಾಗೂ ಭಾರತೀಯ ವಾಸ್ತುಶೈಲಿಗಳೆಲ್ಲ ಮಿಲನವಾಗಿವೆ.

ಕರ್ನಾಟಕ ಸಂಸ್ಕೃತಿಗೆ ಕರ್ನಾಟಕಕ್ಕೆ ಲಗತ್ತಾಗಿರುವ ಪ್ರಾಂತ್ಯಗಳೂ ತಮ್ಮ ಕಾಣಿಕೆ ಸೇರಿಸಿವೆ. ದಕ್ಷಿಣ ಕನ್ನಡ ಜಿಲ್ಲೆಯ ಊಟ ಉಡುಗೆ ದೈವಗಳು ಜಾತ್ರೆ ಹಬ್ಬಗಳು, ಕೇರಳ ಸಂಸ್ಕೃತಿಯೊಂದಿಗೆ ಗಾಢ ಸಂಬಂಧ ಹೊಂದಿವೆ. ಉತ್ತರ ಕರ್ನಾಟಕದ ಊಟ ನಾಟಕ ಉಡುಪು ವ್ಯಾಪಾರ ಇವು ಮಹಾರಾಷ್ಟ್ರ ಸಂಸ್ಕೃತಿಯೊಂದಿಗೆ ಸಂಬಂಧ ಪಡೆದಿವೆ. ಇದೇ ರೀತಿ ಕೊಳ್ಳೇಗಾಲದಲ್ಲಿ ತಮಿಳುನಾಡಿನ, ಕೋಲಾರದಲ್ಲಿ ಆಂಧ್ರದ, ಕಾರವಾರದಲ್ಲಿ ಕೊಂಕಣಿಯ ನೆರಳು ಇದೆ.

ಕರ್ನಾಟಕ ಸಂಸ್ಕೃತಿಯ ಬೆಳೆಗೆ ಎಷ್ಟೊಂದು ಕಡೆಯ ಮೋಡಗಳು ಮಳೆಸುರಿಸಿವೆ! ಎಷ್ಟು ದಿಸೆಯಿಂದ ಬಂದ ಗಾಳಿ ಬೀಸಿದೆ! ನಮ್ಮೀ ಸಂಸ್ಕೃತಿ ನೆರೆಯ ರಾಜ್ಯಗಳ ಮಾತ್ರವಲ್ಲ, ಜಗತ್ತಿನ ಅನೇಕ ದೇಶಗಳ ಸಂಸ್ಕೃತಿ ಪ್ರಭಾವಗಳನ್ನು ತನ್ನೊಳಗೆ ಇಟ್ಟುಕೊಂಡು ರೂಪು ತಳೆದಿದೆ. ಇದಕ್ಕೆ ಒಳ್ಳೆ ಉದಾಹರಣೆ ಎಂದರೆ, ಕರ್ನಾಟಕದಲ್ಲಿ ನಡೆಯುವ ಮೊಹರಂ ಹಬ್ಬದ ಹಬ್ಬ. ಮುಸ್ಲಿಮರಿಲ್ಲದ ಹಳ್ಳಿಗಳಲ್ಲೂ ಮೊಹರಂ ಆಚರಣೆಗಳು ನಡೆಯುತ್ತವೆ. ಇಲ್ಲಿನ ಸೂಫಿಸಂತರ ದರ್ಗಾಗಳಿಗೆ, ಎಲ್ಲ ಧರ್ಮಗಳ ಜನ ನಡೆದುಕೊಳ್ಳುತ್ತಾರೆ. ಶಿರಹಟ್ಟಿ ಫಕೀರೇಶ, ಸಾವಳಗಿ ಶಿವಲಿಂಗ, ತಿಂತಿಣಿ ಮೋನಪ್ಪ ಮುಂತಾದ ಸಂತರ ಜಾಗಗಳು, ಸೂಫಿಪಂಥದ ಪ್ರಭಾವದಲ್ಲಿ ರೂಪುಗೊಂಡಿರುವ ಧಾರ್ಮಿಕ ಸಾಮರಸ್ಯದ ಕ್ಷೇತ್ರಗಳಾಗಿವೆ.

### ಹಿರೀಕರ ಸಾಧನೆ ಮಾತ್ರವೆ?

ಸಂಸ್ಕೃತಿ ಎನ್ನುವುದು ನಮ್ಮ ಪೂರ್ವಿಕರು ಗೈದ ಸಾಧನೆ ಎಂಬ ನಂಬಿಕೆ ಸಾಮಾನ್ಯವಾಗಿ ಇದೆ. ಹೀಗೆ ನಂಬಿದವರಿಗೆ ಸಂಸ್ಕೃತಿ ಎಂದೊಡನೆ ಗತಕಾಲವೆ ನೆನಪಾಗುವುದು. ಗತಕಾಲದ ಮೂಲಕ ನೋಡುತ್ತ ಹೋದರೆ, ಅದರಲ್ಲಿ ವರ್ತಮಾನದ ಪಾತ್ರವೆ ಕಾಣುವುದಿಲ್ಲ. ಆದರೆ ಸಂಸ್ಕೃತಿ ಕೇವಲ ಗತಕಾಲದ ಚಿತ್ರವಲ್ಲ ಅಥವಾ ಪೂರ್ವಜರು ಬಿಟ್ಟುಹೋದ ಆಸ್ತಿಯಲ್ಲ. ಅದು ವರ್ತಮಾನದವರ ಸಾಧನೆ ಸೋಲುಗಳನ್ನೂ ಒಳಗೊಂಡಿದೆ. ಹೀಗಾಗಿ ಕರ್ನಾಟಕ ಸಂಸ್ಕೃತಿಯಲ್ಲಿ ಹಂಪಿ ಹಳೇಬೀಡು ಶ್ರವಣಬೆಳಗೊಳ ಬಿಜಾಪುರಗಳಲ್ಲಿರುವ ಶಿಲ್ಪಕಲೆ ವಾಸ್ತುಕಲೆಗಳು ಮಾತ್ರವಲ್ಲ. ಈಗ ಕಟ್ಟುತ್ತಿರುವ ಕಟ್ಟಡಗಳು, ವಿಧಾನಸೌಧದಿಂದ ಹಿಡಿದು ನಮ್ಮ ಜನ ವಾಸಕ್ಕೆ ಕಟ್ಟಿಕೊಂಡಿರುವ ಮನೆಗಳೂ ಇವೆ. ಸಂಸ್ಕೃತಿಯ ನದಿಯೊಳಗೆ ನೆಲದಾಳದಿಂದ ಉಕ್ಕುವ ಒರತೆ ನೀರೂ ಉಂಟು. ಹೊಸದಾಗಿ ಬೀಳುವ ಮಳೆನೀರೂ ಉಂಟು.

ಸಂಸ್ಕೃತಿಯನ್ನು ಚರಿತ್ರೆಯ ಪ್ರಸಿದ್ಧ ರಾಜರಾಣಿಯರಲ್ಲಿ, ಅವರ ಅರಮನೆ ಕೋಟೆಗಳಲ್ಲಿ ಹುಡುಕುವ ಮತ್ತೊಂದು ಪದ್ಧತಿಯಿದೆ. ಅರಮನೆ ಕೋಟೆ ಇವನ್ನೆಲ್ಲ ಕಟ್ಟಿದವರು ಸಾಮಾನ್ಯ ಜನರೇ. ಆದರೆ ಹೆಸರು ಉಳಿದಿರುವುದು ಮಾತ್ರ ಕಟ್ಟಿಸಿದವರದು! ಇಂತಹ ಸಂದರ್ಭದಲ್ಲಿ ಸಮುದಾಯಗಳ ಮೂಲಕ ಸಂಸ್ಕೃತಿಯನ್ನು ನೋಡಲು ಯತ್ನಿಸಬೇಕು. ಚರಿತ್ರೆಯನ್ನು ಅಧಿಕಾರಸ್ಥರ ಕಣ್ಣಲ್ಲಿ ನೋಡುವಾಗ, ಕೆಲವರ ಸುಖಕ್ಕಾಗಿ ಹಲವರು ಕಷ್ಟಪಡುವುದು ಸರಿ ಅನಿಸತೊಡಗುತ್ತದೆ; ಜನರ ದುಡಿಮೆ ಸೇವೆ ನಿಷ್ಠೆಗಳು ತ್ಯಾಗದಂತೆಯೂ, ಜನ ನ್ಯಾಯಕ್ಕಾಗಿ ಮಾಡುವ ಪ್ರತಿಭಟನೆ ದ್ರೋಹವಾಗಿ ಕಾಣತೊಡಗುತ್ತದೆ. ಇದು ಅಪಾಯ.

ನಾವು ಯಾವುದನ್ನು 'ತ್ಯಾಗ' ಎನ್ನುತ್ತೇವೆ–ಇದು ಕೇಳಿಕೊಳ್ಳಬೇಕಾದ ಪ್ರಶ್ನೆ. ನಮ್ಮ ಪ್ರಾಚೀನರ ಬದುಕಿಗೆ ಸಂಬಂಧಿಸಿದಂತೆ ಇರುವ 'ವೀರಗಲ್ಲು' ಹಾಗೂ 'ಸಿಡಿತಲೆ ಕಲ್ಲು'ಗಳನ್ನು ಗಮನಿಸೋಣ. ವೀರಗಲ್ಲುಗಳನ್ನು ಮೂರು ಕಾರಣಕ್ಕಾಗಿ ನಿಲ್ಲಿಸಲಾಗುತ್ತಿತ್ತು. ಊರಿಗೆ ಕಳ್ಳರು ಮುತ್ತಿದಾಗ, ಊರ ಮಹಿಳೆಯರನ್ನು ಹೊರಗಿನವರು ಅಪಹರಿಸಿದಾಗ,

ಊರ ದನಗಳನ್ನು ಪರಊರಿನವರು ಕದ್ದು ಒಯ್ಯುವಾಗ ರಕ್ಷಿಸುತ್ತ ಹೋರಾಡಿ ಜೀವತೆತ್ತ ವೀರರಿಗೆ ಜನ, ವೀರಗಲ್ಲು ನಿಲ್ಲಿಸಿ ಜನ ಕೃತಜ್ಞತೆ ಸಲ್ಲಿಸುತ್ತಿದ್ದರು. ಸಿಡಿತಲೆ ಕಲ್ಲುಗಳೆಂದರೆ, ರಾಜನಿಗೆ ಸೇವಕರು ತೋರಿಸುತ್ತಿದ್ದ ಸ್ವಾಮಿನಿಷ್ಠೆಯ ಸ್ಮಾರಕಗಳು. ರಾಜನಿಗೆ ಮಕ್ಕಳಾಗಲೆಂದು ಅಥವಾ ಯುದ್ಧದಲ್ಲಿ ಗೆಲುವು ಸಿಗಲೆಂದು ಹರಸಿಕೊಂಡವರು, ತಮ್ಮ ತಲೆ ಕತ್ತರಿಸಿ ಕೊಂಡು ಹರಕೆ ತೀರಿಸುತ್ತಿದ್ದರು. ಇದರ ರೀತಿಯೂ ಭಯಾನಕವಾಗಿತ್ತು.

ವೀರಗಲ್ಲಿನದು ಸಮುದಾಯಕ್ಕಾಗಿ ಮಾಡಿದ ಪ್ರಾಣತ್ಯಾಗ ಮಾಡುವ ಶೌರ್ಯವಾದರೆ, ಸಿಡಿತಲೆಯದು ಧಣಿಗಾಗಿ ಸೇವಕರು ತೋರಿದ ನಿಷ್ಠೆ. ಈ ಎರಡೂ ಮುಖಗಳು ಕರ್ನಾಟಕದ ಗತಕಾಲದ ಚರಿತ್ರೆಯಲ್ಲಿವೆ. ಪ್ರಜಾಪ್ರಭುತ್ವದಲ್ಲಿ ಬದುಕುತ್ತಿರುವ ನಾವು, ಇದರಲ್ಲಿ ಯಾವುದನ್ನು 'ನಮ್ಮ ಸಂಸ್ಕೃತಿ' ಎಂದು ಹೆಮ್ಮೆಯಿಂದ ಮಂಡಿಸಬೇಕು? ಚರಿತ್ರೆಯನ್ನು ಧಣಿಗಳ ಮೂಲಕ ನೋಡುವುದಕ್ಕೂ ಜನರ ಮೂಲಕ ನೋಡುವುದಕ್ಕೂ ವ್ಯತ್ಯಾಸ ಮಾಡುವ ಎಚ್ಚರ ತೋರಿಸಬೇಕಾದ್ದು ಇಲ್ಲೇ.

### ವೈಭವೀಕರಣ ಮತ್ತು ಅಭಿಮಾನ

ಕರ್ನಾಟಕ ಸಂಸ್ಕೃತಿಯನ್ನು ಗತವೈಭವದ ಚಿತ್ರಗಳ ಮೂಲಕ ಕಟ್ಟಿ ತೋರಿಸುವ ರೂಢಿಯೂ ಕನ್ನಡದಲ್ಲಿದೆ. ಕನ್ನಡಿಗರು ಶೂರರೂ ಚೆಲುವರೂ ಅಭಿಮಾನಿಗಳೂ, ವಿವೇಕಿಗಳು, ರಸಿಕರೂ ಆಗಿದ್ದರು ಎಂದು 'ಕವಿರಾಜಮಾರ್ಗ' ವರ್ಣಿಸುತ್ತದೆ. ಆಂಡಯ್ಯನೆಂಬ ಕವಿಯ ಪ್ರಕಾರ, ಕನ್ನಡನಾಡಿನಲ್ಲಿ ತೆಂಗು ಅಡಕೆ, ಮಾವು, ಸಂಪಿಗೆಯ ಮರಗಳು, ಪಕ್ಷಿಗಳಲ್ಲಿ ಗಿಳಿ ಕೋಗಿಲೆ ನವಿಲುಗಳು ಮಾತ್ರ ಇದ್ದವಂತೆ. ತಮ್ಮ ದೇಶವನ್ನು ಭಾವುಕವಾಗಿ ಉತ್ಪ್ರೇಕ್ಷೆಯಿಂದ ಬಣ್ಣಿಸಿಕೊಳ್ಳುವ ಸ್ವಭಾವ ಎಲ್ಲ ಕಡೆ ಇದ್ದಂತಿದೆ. ಆದರೆ ಉತ್ತಮ ಉದಾಹರಣೆಗಳನ್ನೆ ಕಟ್ಟಿ ತೋರಿಸಿದರೆ, ಸಂಸ್ಕೃತಿಯ ನಿಜವಾದ ನೋಟ ಸಿಕ್ಕುತ್ತದೆಯೇ? ಸಂಸ್ಕೃತಿಯಲ್ಲಿ ಅಭಿಮಾನದ ಜತೆಜತೆಯಲ್ಲಿ ಲಜ್ಜೆಯ ಅಂಶಗಳೂ ಇರುತ್ತವೆ. ಕರ್ನಾಟಕದಲ್ಲಿ ಗುಣವಂತರು ಶೂರರು ಇದ್ದರು, ಈಗಲೂ ಇದ್ದಾರೆ. ಇಂತಹವರ ಜತೆ, ಕಳ್ಳರೂ ಅಪ್ರಮಾಣಿಕರೂ ದುಷ್ಟರೂ ಇದ್ದರು. ಟಿಪ್ಪುವಿನಂತಹ ಕನಸುಗಾರನೂ ಸ್ವಾಭಿಮಾನಿಯೂ ಇದ್ದ ಕಾಲದಲ್ಲೆ ಮೀರ್ ಸಾಧಿಕನಂತಹ ಸಮಯಸಾಧಕನೂ ಇದ್ದನಲ್ಲವೆ! ಪ್ರಾಚೀನ ಕರ್ನಾಟಕದಲ್ಲಿ ಜೀತಪದ್ಧತಿಯಿತ್ತು. ಅಸ್ಪೃಶ್ಯತೆಯಿತ್ತು. ಮಹಿಳೆಯರ ಮಾರಾಟವಿತ್ತು, ಬಡತನವಿತ್ತು. ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲ. ಹಸಿವಿನ ಬೆಂಕಿ ಅವರನ್ನು ಸಾಕಷ್ಟು ಸುಟ್ಟಿದೆ. ಆದ್ದರಿಂದ ಬಡವರಿಗೆ ಸಾವು ಕೊಡಬ್ಯಾಡ ಎಂಬ ಅರ್ಥದ ಜನಪದ ಗೀತೆಯನ್ನು ನೆನೆಯಬೇಕು. ಬರಗಾಲ ಬಂದಾಗ ಜನ, ಹೆತ್ತ ಮಕ್ಕಳನ್ನು ಮಾರಾಟ ಮಾಡುತ್ತಿದ್ದರು ಎಂದು 'ಮಕ್ಕಳ ಮಾರ್‍ಯಾರ ಮಳೆರಾಯ' ಎಂಬ ಹಾಡು ಹೇಳುತ್ತದೆ. ಇವೆಲ್ಲ ಕುರೂಪಗಳು ಬೇರೆ ವೇಷದಲ್ಲಿ ಈಗಲೂ ಉಳಿದುಬಂದಿವೆ. ಇವನ್ನೆಲ್ಲ ಕೂಡಿಸಿ ನೋಡಿದಾಗಲೇ ನಮ್ಮ ಸಂಸ್ಕೃತಿಯ ವಾಸ್ತವ ಚಿತ್ರ ಸಿಕ್ಕುವುದು.

## ಸಂಸ್ಕೃತಿಯಲ್ಲಿ ಸ್ವವಿಮರ್ಶೆ

ಹಾಗಾದರೆ ವರ್ತಮಾನದ ನಮಗೆ ಚರಿತ್ರೆಯ ಸುಂದರವಾದ ಅಭಿಮಾನ ಹುಟ್ಟಿಸುವ ನೆನಪುಗಳು ಬೇಡವೇ? ಅವು ಬೇಕು. ಅವುಗಳ ನೆನಪಿನಿಂದ ನಮ್ಮ ಕಣ್ಣೆದುರಿನ ಕೇಡುಗಳ ವಿರುದ್ಧ ಹೋರಾಡಲು ಚೈತನ್ಯ ಸಿಗುತ್ತವೆ. ನಮ್ಮ ಸಂಸ್ಕೃತಿಯಲ್ಲಿ ಇಂತಹ ಅಭಿಮಾನದ ಮುಖಗಳು ಬೇಕಾದಷ್ಟಿವೆ. ಆದರೆ ಅಭಿಮಾನವು ಕೊಂಚ ಜಾರಿದರೂ ವೈಭವೀಕರಣಕ್ಕೆ ಹೋಗಿಬಿಡುತ್ತದೆ. ಕರ್ನಾಟಕ ಸಂಸ್ಕೃತಿ ಬರಿ ವೈಭಗಳ ಕಥನವಲ್ಲ. ಅಲ್ಲಿ ನಾವು ಹೆಮ್ಮೆ ಪಡಲಾಗದ ನೂರಾರು ಕಪ್ಪುಕಲೆಗಳಿವೆ. ಮತಗಳು ಪರಸ್ಪರ ದ್ವೇಷದಿಂದ ತಿವಿದಾಡಿರುವ ಗಾಯಗಳಿವೆ. ಯಾವತ್ತೂ ಸಾಧನೆಗಳು ಹೆಮ್ಮೆಯಿಂದ ತಲೆಯೆತ್ತಿಸುತ್ತವೆ. ನೋವು ಪಶ್ಚಾತ್ತಾಪ ಆತ್ಮವಿಮರ್ಶೆಗೆ ಹಚ್ಚುತ್ತವೆ. ಆತ್ಮ ವಿಮರ್ಶೆ ಇಲ್ಲದೆ ಯಾವ ದೇಶವೂ ದೊಡ್ಡದಾಗಿ ಬೆಳೆದಿಲ್ಲ. ನಮ್ಮ ಚರಿತ್ರೆಯನ್ನಾಗಲೀ ವರ್ತಮಾನವನ್ನಾಗಲಿ, ಅಲ್ಲಿರುವ ಕೇಡು ನೋವು ಸೋಲುಗಳ ಸಮೇತ ಸ್ವೀಕರಿಸಬೇಕು. ನಮ್ಮಲ್ಲಿ ಕೊರತೆಯಿದೆ ಎಂದು ಒಪ್ಪಿಕೊಂಡರೆ, ಅದನ್ನು ತೊಡೆಯಲು ಯತ್ನಿಸಬಹುದು, ನೋವಿರದ ಸುಂದರ ಸಮಾಜ ಕಟ್ಟಿಕೊಳ್ಳುವ ಕನಸನ್ನು ಕಾಣಬಹುದು ತಾನೆ?

## ಸಂಘರ್ಷದ ನೆನಪುಗಳು

ಕರ್ನಾಟಕ ಸಂಸ್ಕೃತಿ ಬರಿ ಸಾಮರಸ್ಯ ತ್ಯಾಗ ನಿಷ್ಠೆಗಳಿಂದ ರೂಪುಗೊಂಡಿಲ್ಲ. ಅನೇಕ ಸ್ವಾಭಿಮಾನಿಗಳು ಅನ್ಯಾಯದ ವಿರುದ್ಧ ಮಾಡಿದ ಸಂಘರ್ಷಗಳಿಂದಲೂ ರೂಪುಗೊಂಡಿದೆ. ಸಮಾಜದಲ್ಲಿ ಅರ್ಥಪೂರ್ಣ ಬದಲಾವಣೆ ಸಂಭವಿಸುವುದೇ ಪ್ರಶ್ನಿಸುವಿಕೆಯಿಂದ, ಪ್ರತಿರೋಧದಿಂದ. ನಮ್ಮ ಜನ ಬಡವರಾಗಿದ್ದರು. ಆದರೆ ಅಭಿಮಾನಹೀನರಾಗಿರಲಿಲ್ಲ. ಕಣಸೆ ಜಟ್ಟ ಎಂಬುವನ ಕತೆ ನೆನಪಾಗುತ್ತದೆ. 1951ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೋಡು ಹಳ್ಳಿಯಲ್ಲಿ ಗೇಣಿರೈತರು ಉಳುವವನಿಗೆ ಭೂಮಿ ಎಂದು ಹೋರಾಟ ಮಾಡಿದರು. ಅವರಲ್ಲಿ ಕಣಸೆ ಜಟ್ಟನೂ ಒಬ್ಬ. ಕಾಗೋಡಿನಲ್ಲಿ ಬಯಲಾಟ ನಡೆವಾಗ ಜಮೀನುದಾರರೊಬ್ಬರೇ ಕುರ್ಚಿಯ ಮೇಲೆ ಕೂರುವ ಸಂಪ್ರದಾಯ ಇತ್ತು. ಉಳಿದ ಜನರೆಲ್ಲ ನೆಲದ ಮೇಲೆ ಕೂರುತ್ತಿದ್ದರು. ಆದರೆ ಜಟ್ಟ ನಮಗೆ ಭೂಮಿ ಬಿಟ್ಟುಕೊಡದ ಧಣಿಯ ಮುಂದೆ ಯಾಕೆ ತಗ್ಗಬೇಕು ಎಂದು, ಮನೆಯಿಂದ ಒಂದು ಕುರ್ಚಿ ಹೊತ್ತುಕೊಂಡು ಹೋಗುತ್ತಿದ್ದನಂತೆ. ಇದು ನೋಡಲು ಸಣ್ಣ ಘಟನೆಯಂತೆ ತಮಾಶೆಯಂತೆ ಕಾಣುತ್ತದೆ. ಆದರೆ ಆಳದಲ್ಲಿ ಉಳ್ಳವರಿಗೆ ಬಾಗದೆ ತಮ್ಮ ಸ್ವಾಭಿಮಾನ ಉಳಿಸಿಕೊಳ್ಳಲು ಜನ ಮಾಡುವ ಸೆಣಸಾಟವನ್ನು ಸೂಚಿಸುತ್ತದೆ. ಕರ್ನಾಟಕದ ಚರಿತ್ರೆಯಲ್ಲಿ ಇಂತಹ ಜನ ಉದ್ದಕ್ಕೂ ದಿಟ್ಟ ಹೋರಾಟ ಮಾಡಿಕೊಂಡು ಬಂದಿರುವ ನಿದರ್ಶನಗಳಿವೆ. 'ಹೋರಾಟ'ವೆಂದರೆ ರಾಜನಿಗಾಗಿ ಸೈನಿಕರು ಮಾಡಿದ ಯುದ್ಧಗಳು ಮಾತ್ರವಲ್ಲ. ಇಡೀ ನಾಡಿನ ಬಿಡುಗಡೆಗಾಗಿ ಮಾಡಿದ ವಿಶಾಲ ಯುದ್ಧಗಳೂ ಹೌದು. ಉಳ್ಳಾಲದ ರಾಣಿ ಅಬ್ಬಕ್ಕ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯ, ಕಿತ್ತೂರ ಚೆನ್ನಮ್ಮ, ಟಿಪ್ಪುಸುಲ್ತಾನ ಇವರೆಲ್ಲ ವಿದೇಶಿ ಆಕ್ರಮಣಕಾರರ ವಿರುದ್ಧ ಮಾಡಿದ ಯುದ್ಧಗಳು ಇಂತಹವು. ರೈತರು ಸರಕಾರಕ್ಕೆ ತೆರಿಗೆ ಕಟ್ಟದೆ

ತೋರಿದ ಅಸಹಕಾರವೂ ಇನ್ನೊಂದು ಬಗೆಯ ಯುದ್ಧವೆ. ಅಂಕೋಲಾದಲ್ಲಿ ಇಂತಹ ಕರನಿರಾಕರಣೆ ಚಳುವಳಿ ನಡೆಯಿತು. ಗದಗ ಜಿಲ್ಲೆಯ ಕೂರ್ಲಹಳ್ಳಿಯಲ್ಲಿ 1857ರ ಸುಮಾರಿಗೆ ಬ್ರಿಟಿಷರ ವಿರುದ್ಧ 26 ಜನ ದಂಗೆಯೆದ್ದರು. ಅವರನ್ನು ಹಿಡಿದು ಗಲ್ಲಿಗೇರಿಸಲಾಯಿತು. 1942ರಲ್ಲಿ ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಕೂಡ ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದ ಹಳ್ಳಿ ಜನರನ್ನು ಗಲ್ಲಿಗೇರಿಸಲಾಯಿತು. ಈ ಜನರನ್ನು ಚರಿತ್ರೆಯ ಪುಸ್ತಕಗಳು ನಾಯಕರಂತೆ ದಾಖಲಿಸದೆ ಇರಬಹುದು. ಆದರೆ ಇವರ ಧೀರಸಾವು ನಮ್ಮ ಸಂಸ್ಕೃತಿಯ ಸತ್ವವನ್ನು ರೂಪಿಸಿದೆ. ಉಳ್ಳಾಲ, ಶ್ರೀರಂಗಪಟ್ಟಣ, ಕಿತ್ತೂರು, ಸಂಗೊಳ್ಳಿ, ಹಲಗಲಿ, ನರಗುಂದ ಇವೆಲ್ಲ ಕರ್ನಾಟಕ ಸಂಸ್ಕೃತಿಯನ್ನು ಸಂಘರ್ಷದ ಚಾಣದಿಂದ ಕಟೆದ ತಾಣಗಳು. 20ನೇ ಶತಮಾನವಂತೂ ಜನರ ಚಳುವಳಿಗಳಿಂದ ತುಂಬಿಹೋಗಿದೆ. ಕನ್ನಡ ಚಳುವಳಿ, ರೈತ ಚಳುವಳಿ, ದಲಿತ ಚಳುವಳಿ, ಪರಿಸರ ಚಳುವಳಿ, ಮಹಿಳಾ ಹೋರಾಟ, ನದಿ ಉಳಿಸುವ ಚಳುವಳಿ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟ ಇವೆಲ್ಲ ನಮ್ಮ ಸಂಸ್ಕೃತಿಗೆ ಆಕಾರ ಕೊಟ್ಟಿವೆ.

### ಶಿಖರಗಳ ಕೆಳಗೆ ನೆಲ

ಚರಿತ್ರೆಯಲ್ಲಿ ನಾಯಕರಿರುತ್ತಾರೆ ಬಸವಣ್ಣ, ಅಕ್ಕಮಹಾದೇವಿ, ಕುಮಾರರಾಮ, ಮಂಟೆಸ್ವಾಮಿ, ಕುಮಾರವ್ಯಾಸ, ಕನಕದಾಸ, ಟಿಪ್ಪುಸುಲ್ತಾನ, ಸರ್‌ಎಂವಿ, ಕುವೆಂಪು, ಶಿವರಾಮಕಾರಂತ, ಗುಬ್ಬಿವೀರಣ್ಣ, ಶಾಂತವೇರಿ ಗೋಪಾಲಗೌಡ, ದೇವರಾಜ ಅರಸು, ರಾಜಕುಮಾರ್, ಪಿ ಲಂಕೇಶ್ ಇವರೆಲ್ಲ ಕರ್ನಾಟಕ ಸಂಸ್ಕೃತಿಯ ನಾಯಕರೆ. ಆದರೆ ನಾಯಕರ ಮೂಲಕ ಸಂಸ್ಕೃತಿ ನೋಡುವಾಗ ಮರೆತುಹೋಗುವ ಒಂದು ಅಂಶವಿದೆ. ಅದೆಂದರೆ ಈ ನಾಯಕರು ತಮ್ಮ ಪ್ರತಿಭೆ ತ್ಯಾಗ ದುಡಿಮೆಗಳಿಂದ ಮಾತ್ರ ದೊಡ್ಡವರಾದವರಲ್ಲ. ತಮ್ಮ ಪರಿಸರದಲ್ಲಿದ್ದ ಜನಬಲದಿಂದಲೂ ದೊಡ್ಡವರಾದವರು. ಬಸವಣ್ಣನನ್ನು ಅವನ ಜತೆಗಿದ್ದ ನೂರಾರು ಸಂಗಾತಿಗಳಿಂದ ಬೇರೆ ಮಾಡಿ ಹೇಗೆ ನೋಡುವುದು? ಶಿಖರಗಳು ಗಗನಚುಂಬಿಯಾಗಿರಬಹುದು. ಆದರೆ ಅವು ನೆಲದ ಮೇಲೆಯೆ ನಿಲ್ಲಬೇಕು ತಾನೇ? ನಾಯಕರು ರಂಗದ ಮೇಲೆ ಬರುತ್ತಾರೆ. ನಾಯಕರಲ್ಲದ ಲಕ್ಷಾಂತರ ಜನ ರಂಗದ ಹಿಂದೆ ದುಡಿಯುತ್ತಾರೆ. ಎಷ್ಟೋ ಸುಂದರವಾದ ಜನಪದ ಹಾಡುಗಳನ್ನು ಕಟ್ಟಿದ ಪ್ರತಿಭಾವಂತ ಕವಿ ಯಾರೆಂದು ಗೊತ್ತೆ ಆಗುವುದಿಲ್ಲ. ಸಂಸ್ಕೃತಿ ಒಂದು ಕಾಡಿದ್ದಂತೆ. ಅದರಲ್ಲಿ ಆಕಾಶದೆತ್ತರಕ್ಕೆ ಬೆಳೆದ ಮರಗಳೂ ಇವೆ. ಹೆಸರಿಲ್ಲದ ಸಣ್ಣಪುಟ್ಟ ಗಿಡಗಳೂ ಇವೆ. ನೆಲದಲ್ಲಿ ಹರಡಿರುವ ಹುಲ್ಲೂ ಇದೆ. ಇವೆಲ್ಲ ಸೇರಿತಾನೆ ಒಂದು ಕಾಡು?

### ಸಮುದಾಯದ ಸೃಜನಶೀಲತೆ

ಸಮುದಾಯಗಳ ಮೂಲಕ ನೋಡತೊಡಗಿದರೆ ಸಂಸ್ಕೃತಿಯ ವ್ಯಾಖ್ಯೆ ವಿಶಾಲಗೊಳ್ಳುತ್ತದೆ. ಆಗ ಅದು ಹೆಸರಿಲ್ಲದ ಅಧಿಕಾರವಿಲ್ಲದ ಕೋಟಿ ಮಾನವರ ಕಥನವನ್ನೂ ಒಳಗೊಳ್ಳಲಾರಂಭಿಸುತ್ತದೆ. ಆಗ ಧೀಮಂತ ಮಹಿಳೆಯರಾದ ಅತ್ತಿಮಬ್ಬೆ,

ಅಕ್ಕಮಹಾದೇವಿ, ಅಬ್ಬಕ್ಕ, ಕಿತ್ತೂರ ಚೆನ್ನಮ್ಮ, ಚಾಂದಬೀಬಿಯರ ಜತೆ, ಸಾಲುಮರದ ತಿಮ್ಮಕ್ಕನೂ ಸೇರುತ್ತಾಳೆ. ಹಾದಿ ಹೋಕರಿಗೆ ನೆರಳನ್ನು ನೀಡುವ ನೂರಾರು ಮರಗಳನ್ನು ಒಂದು ಬಡಕುಟುಂಬ ಸಾಕಿ ಬೆಳೆಸಿದ ಹಿಂದೆ ಕೆಲಸ ಮಾಡಿರುವ ಮನಸ್ಸು, ಕರ್ನಾಟಕ ಸಂಸ್ಕೃತಿಯ ಅಪೂರ್ವ ಸೃಷ್ಟಿಯಲ್ಲದೆ ಮತ್ತೇನು?

ಜನಸಮುದಾಯಗಳ ಸೃಜನಶೀಲತೆ ಎಂದರೆ, ಜನ ತಮ್ಮ ಶ್ರಮದ ಭಾಗವಾಗಿ ಪ್ರಕಟಿಸುವ ಜೀವಂತಿಕೆ; ತಮ್ಮ ಸುಖ ಸಂಭ್ರಮ ದುಃಖದುಗುಡಗಳ ಭಾಗವಾಗಿ ಚಿಮ್ಮಿಸುವ ಮಾನವೀಯತೆ. ಗದಗ ಜಿಲ್ಲೆಯ ಮುಳುಗುಂದದ ಹತ್ತಿರ ಒಬ್ಬ ರೈತ, ಬೆರ್ಚಪ್ಪನನ್ನು ಮಾಡುತ್ತಾನೆ. ಬೆಳೆದ ಬೆಳೆಗೆ ಕೆಟ್ಟದೃಷ್ಟಿ ತಾಗದಿರಲಿ ಎಂಬ ನಂಬಿಕೆಯಿಂದ ನಿಲ್ಲಿಸುವ ಬೆದರುಬೊಂಬೆಗೆ ಬೆರ್ಚಪ್ಪ ಎನ್ನುತ್ತಾರೆ. ಈ ರೈತ ಬೆರ್ಚಪ್ಪನನ್ನು ಎಲ್ಲರಂತೆ ಅಂಗಿಯೊಳಗೆ ಹುಲ್ಲುತುಂಬಿ ಮಡಕೆಯ ತಲೆಯಿಟ್ಟು, ಮಾಡುತ್ತಿರಲಿಲ್ಲ. ಅಲ್ಲಿ ಇಲ್ಲಿ ಬಿದ್ದಿದ್ದ ಬಣ್ಣದ ಚಿಂದಿ ಬಟ್ಟೆ ಆರಿಸಿತಂದು ಮಾನವಾಕೃತಿಯ ಗೊಂಬೆ ಮಾಡುತ್ತಿದ್ದ. ಅವು ಎಷ್ಟು ಸುಂದರ ಗೊಂಬೆಗಳಾಗುತ್ತಿದ್ದವು ಎಂದರೆ, ಅವನ್ನು ನೋಡಲು ದೂರದಿಂದ ಜನ ಬರುತ್ತಿದ್ದರು. ರೈತ ಇವನ್ನು ಕಲೆ ಎಂದು ಮಾಡಲಿಲ್ಲ. ಬೆರ್ಚಪ್ಪ ಎಂದು ಮಾಡಿದರೆ ಅದು ಕಲೆಯೂ ಆಯಿತು. ಇದೇ ರೀತಿ, ನಮ್ಮ ಕಸುಬುದಾರರು ಮಡಕೆ ಮಾಡುವಾಗ, ಬುಟ್ಟಿಹೆಣೆಯುವಾಗ ಕೌದಿಹೊಲೆಯುವಾಗ ಕಲಾತ್ಮಕತೆ ಮೆರೆಯುತ್ತಾರೆ. ಹಳ್ಳಿಗಾಡಿನಲ್ಲಿ ಇಂತಹ ಸಾವಿರಾರು ಪ್ರತಿಭೆಗಳಿವೆ. ಇವು ತಮ್ಮ ಸೃಜನಶೀಲತೆಯಿಂದ ಇಡೀ ಪರಿಸರವನ್ನು ಜೀವಂತವಾಗಿ ಇಡುತ್ತವೆ. ರೈತರು ಬೆಳೆ ತಿನ್ನಲು ಬರುವ ಪ್ರಾಣಿಪಕ್ಷಿಗಳನ್ನು ಓಡಿಸಲು ಅಥವಾ ಬೇಟೆಯಾಡಲು ಮಾಡಿಕೊಂಡಿರುವ ನೂರಾರು ಉಪಕರಣಗಳಲ್ಲಿ, ಪಾರಂಪರಿಕ ತಂತ್ರಜ್ಞಾನದ ಸಾಧನೆಯಿದೆ. ನಮ್ಮ ನಾಡಮದ್ದು, ಕಾಡಿನ ಜನ ನೂರಾರು ವರುಷಗಳಿಂದ ಮಾಡಿದ ಪ್ರಯೋಗಗಳ ಫಲವಾದರೆ, ನಮ್ಮ ತಿಂಡಿತಿನಿಸುಗಳು ಅಡುಗೆ ಮನೆಗಳಲ್ಲಿ ಸಾವಿರಾರು ವರುಷಗಳ ಪ್ರಯೋಗಶೀಲತೆಯ ಫಲವಾಗಿವೆ.

ದುಡಿವ ಜನರ ಸೃಜನಶೀಲತೆಯ ಅಸಲಿ ಮುಖ ಕಾಣಬೇಕಾದರೆ, ಜಾನಪದಕ್ಕೆ ಹೋಗಬೇಕು. ಜನಪದ ಸಾಹಿತ್ಯ, ಸಂಗೀತ, ಕುಣಿತ, ನಾಟಕ, ಅಡುಗೆ, ವೈದ್ಯ, ಆಚರಣೆಗಳ ಒಂದು ದೊಡ್ಡಲೋಕವೇ ಅಲ್ಲಿದೆ. ಮಂಟೆಸ್ವಾಮಿ, ಮಲೆಯ ಮಾದೇಶ್ವರ, ಜುಂಜಪ್ಪ, ಬೀರಪ್ಪ, ಎಲ್ಲಮ್ಮ ಮುಂತಾದ ದೈವಗಳ ಮೇಲೆ, ಜನಪದರು ರಾತ್ರಿಯಿಡಿ ಹಾಡಬಲ್ಲ ಕಾವ್ಯಕಟ್ಟಿದ್ದಾರೆ. ಎಂತಲೇ ಗಣ್ಯರೆನಿಸಿಕೊಂಡ ವಿಜ್ಞಾನಿಗಳು ಲೇಖಕರು ಸಂಗೀತಗಾರರು ಚಿತ್ರಗಾರರು, ನಟರು ಮಾಡಿದ ಸಾಧನೆ ಮೂಲಕವೆ ಸಂಸ್ಕೃತಿ ಚಿತ್ರ ಬರೆಯಲು ಸಾಧ್ಯವಿಲ್ಲ. ಹಾಗೆ ಬರೆದರೆ, ನಾಡಿನ ಕೋಟ್ಯಾಂತರ ದುಡಿವ ಜನ ನೂರಾರು ವರ್ಷಗಳಿಂದ ಕಟ್ಟಿಕೊಂಡಿರುವ ದೊಡ್ಡಲೋಕ ಹೊರಗುಳಿದು ಬಿಡುತ್ತದೆ. ರೈತರು ನೇಕಾರರು ಕಮ್ಮಾರರು ಕೂಲಿಕಾರರು ತಮ್ಮ ಶ್ರಮದ ಭಾಗವಾಗಿ ಸೃಷ್ಟಿಸಿರುವ ಸಂಗತಿಗಳ ಈ ಲೋಕಕ್ಕೆ ಹೋಗದಿದ್ದರೆ, ಸಂಸ್ಕೃತಿಯ ಅರ್ಥವೆ ಕುಬ್ಜವಾಗಿ ಬಿಡುತ್ತದೆ.

## ಸಂಸ್ಕೃತಿಯ ಸಂಕೀರ್ಣ ಚಿತ್ರ

ಇಷ್ಟೆಲ್ಲ ಹೇಳಿದ ಮೇಲೆ ಕರ್ನಾಟಕ ಸಂಸ್ಕೃತಿ ಎಂದರೆ, ನಮ್ಮ ಮನಸ್ಸಿನ ಪರದೆಯ ಮೇಲೆ ಮೂಡುವ ಚಿತ್ರ ಎಂತಹದು? ಆ ಚಿತ್ರದಲ್ಲಿ ರೈತರು, ಕೂಲಿಕಾರರು, ಕಸುಬುದಾರರು, ಕವಿಗಳು, ಸಂತರು, ದೊರೆಗಳು, ಆಡಳಿತಗಾರರು, ಹೋರಾಟಗಾರರು, ಬುಡಕಟ್ಟು ಜನ ಸುಳಿಯತೊಡಗುತ್ತಾರೆ; ಪಂಪ ಕುಮಾರವ್ಯಾಸರ ಕಾವ್ಯಗಳು, ಶರಣರ ವಚನಗಳು, ಕುವೆಂಪು ಕಾರಂತರ ಕಾದಂಬರಿಗಳು, ಬೇಂದ್ರೆ ಕವನಗಳು, ಜನಪದ ಗೀತೆಗಳು ಗೋಚರಿಸುತ್ತವೆ; ಬಂಗುಡೆಮೀನು, ಜೋಳದರೊಟ್ಟಿ, ರಾಗಿಮುದ್ದೆ, ಯಕ್ಷಗಾನ, ದೊಡ್ಡಾಟ, ಕೃಷ್ಣಪಾರಿಜಾತ, ಮೈಲಾರದ ಜಾತ್ರೆ, ಗೋಳಗುಮ್ಮಟ, ಹಂಪಿಯ ಗುಡಿ, ಶ್ರವಣಬೆಳಗೊಳದ ಬಾಹುಬಲಿ, ವೀರಗಲ್ಲು ಮುಂತಾದವೆಲ್ಲ ಮಿಂಚಿ ಮಾಯವಾಗುತ್ತವೆ; ಜತೆಗೆ ನಮ್ಮ ನಾಡಿನ ಬಡತನ, ಕಡಿತಲೆಯಾದ ಕಾಡು, ಚರಂಡಿಯಾಗಿರುವ ನದಿಗಳು, ಪರದೇಶಿಗರಿಗೆ ಸೂರೆಹೋಗುತ್ತಿರುವ ಸಂಪನ್ಮೂಲಗಳು, ಕನ್ನಡದ ದುಸ್ಥಿತಿ, ರೈತರ ಆತ್ಮಹತ್ಯೆ– ಇವೆಲ್ಲ ಕಾಡುತ್ತವೆ. ಇವೆಲ್ಲ ಸೇರಿದರೆ ಅದೆಂತಹ ಸಂಕೀರ್ಣ ಚಿತ್ರವಾಗುತ್ತದೆ! ಹೌದು, ಒಂದು ನಾಡಿನ ಜನಜೀವನದ ಎಲ್ಲವೂ ಸಂಸ್ಕೃತಿ ಎನ್ನುವುದಾದರೆ, ಇಂತಹ ಸಂಕೀರ್ಣ ಚಿತ್ರವೇ ಮೂಡಬೇಕು.

ಹೀಗೆ ಕರ್ನಾಟಕ ಸಂಸ್ಕೃತಿ ಬಹುರೂಪಿಯಾಗಿದೆ, ವರ್ಣರಂಜಿತವಾಗಿದೆ. ಅದರಲ್ಲಿ ಸಂಘರ್ಷವೂ ಇವೆ, ಸಾಮರಸ್ಯವೂ ಇದೆ. ಹಳತು ಹೊಸತು ಎರಡೂ ಇವೆ. ಸಂಭ್ರಮ ನೋವುಗಳೆರಡೂ ಇವೆ. ಇವೆಲ್ಲ ಇರುವುದರಿಂದಲೇ ಅದು ಜೀವಂತವಾಗಿದೆ, ಚಲನಶೀಲವಾಗಿದೆ. ಕರ್ನಾಟಕ ಸಂಸ್ಕೃತಿ ಹಡೆದ ಅಪರೂಪದ ವ್ಯಕ್ತಿ ಬಸವಣ್ಣ ಹೇಳುವಂತೆ, 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'! ಅಂದರೆ ಚಲನಶೀಲವಾಗಿರುವ ಯಾವುದಕ್ಕೂ ನಾಶದ ಭಯವಿಲ್ಲ. ಎಂತಲೇ ಅನಿಸುತ್ತದೆ; ಕರ್ನಾಟಕ ಸಂಸ್ಕೃತಿಯ ಸುಂದರ ದಿನಗಳು ಗತಕಾಲದಲ್ಲಿ ಮುಗಿದುಹೋಗಿಲ್ಲ. ಅವು ನಮ್ಮ ಕಣ್ಮುಂದೆ ರೂಪುಗೊಳ್ಳಬೇಕಾಗಿದೆ. ಅವು ಭವಿಷ್ಯದ ಕಾಲಗರ್ಭದಲ್ಲಿ ಸುಪ್ತವಾಗಿ ಅಡಗಿಕೊಂಡಿವೆ.

*****

## ಲೇಖಕರು

ರಹಮತ್ ತರೀಕೆರೆ(1959) ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಅಧ್ಯಾಪಕರಾಗಿದ್ದಾರೆ. 'ಪ್ರತಿಸಂಸ್ಕೃತಿ' 'ಮರದೊಳಗಣ ಕಿಚ್ಚು' 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು' ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ.

## ಆಶಯ

ಪ್ರಸ್ತುತ ಲೇಖನವು ಕರ್ನಾಟಕ ಸಂಸ್ಕೃತಿ ಹೇಗೆ ಬಹುರೂಪಿಯಾಗಿದೆ ಎಂದು ವಿವರಿಸಲು ಯತ್ನಿಸುತ್ತದೆ. ಯಾವುದಾದರು ಒಂದು ಭಾಷೆ ಸಮುದಾಯ ಅಥವಾ

ಧರ್ಮದ ನೆಲೆಯಲ್ಲಿ ಮಾತ್ರ ನೋಡಿದರೆ, ಅದರ ನಿಜರೂಪ ಸಿಗಲಾರದು. ಅದರಲ್ಲಿ ಹೆಮ್ಮೆಯ ಹಾಗೂ ಅಪಮಾನದ ಎರಡೂ ಚಿತ್ರಗಳಿವೆ. ಅವೆರಡನ್ನೂ ಕೂಡಿಸಿಯೇ ನೋಡಬೇಕು ಎಂದು ಲೇಖನ ಪ್ರತಿಪಾದಿಸುತ್ತದೆ.

**ಶಬ್ದಾರ್ಥಗಳು**

ಮಲೆಮಾದೇಶ್ವರ=ಕೊಳ್ಳೆಗಾಲ ತಾಲ್ಲೂಕು ಮಹದೇಶ್ವರ ಬೆಟ್ಟದಲ್ಲಿರುವ ದೈವ, ಸಂಗೊಳ್ಳಿ ರಾಯಣ್ಣ= ಕಿತ್ತೂರು ರಾಣಿ ಚೆನ್ನಮ್ಮನ ಅನುಯಾಯಿ, ಬ್ರಿಟಿಶ್ ಸರಕಾರದ ನಿದ್ದೆ ಕೆಡಿಸಿದ್ದ ಹೋರಾಟಗಾರ, ಬಾಬಾಸಾಹೇಬ=ಧಾರವಾಡ ಜಿಲ್ಲೆ ನರಗುಂದ ಸಂಸ್ಥಾನದ ಅಧಿಪತಿಯಾಗಿದ್ದವನು, ತಿಂತಿಣಿ ಮೋನಪ್ಪ=ಗುಲಬರ್ಗ ಜಿಲ್ಲೆಯ ಜನಪ್ರಿಯ ಸಂತ, ಕೈವಾರದ ತಾತಯ್ಯ=19ನೇ ಶತಮಾನದಲ್ಲಿ ಕೋಲಾರ ಭಾಗದಲ್ಲಿದ್ದ ಸಂತ, 2ನೇ ಇಬ್ರಾಹಿಂ=ಬಿಜಾಪುರವನ್ನಾಳಿದ ಪ್ರಸಿದ್ಧ ಆದಿಲಶಾಹಿ ದೊರೆ, ಸರಸ್ವತಿಯ ಆರಾಧಕನೂ ಸಂಗೀತ ಪ್ರೇಮಿಯೂ ಆಗಿದ್ದ ಈತ ಕಿತಾಬೆ ನವರಸ್ ಎಂಬ ಕೃತಿ ರಚಿಸಿದನು, ಕೈವಾರದ ತಾತಯ್ಯ=19ನೇ ಶತಮಾನದಲ್ಲಿ ಕೋಲಾರ ಭಾಗದಲ್ಲಿದ್ದ ಸಂತ, ಅಭಂಗ=ಮರಾಠಿ ಸಂತರ ತತ್ವಪದ, ಬಂದೇ ನವಾಜ್=14ನೇ ಶತಮಾನದಲ್ಲಿ ಗುಲಬರ್ಗಾದಲ್ಲಿದ್ದ ಜನಪ್ರಿಯ ಸೂಫಿಸಂತ, ಕವಿರಾಜ ಮಾರ್ಗ=9ನೇ ಶತಮಾನದ ಅಲಂಕಾರ ಗ್ರಂಥ, ಇದರಲ್ಲಿ ಕನ್ನಡ ನಾಡು, ಕನ್ನಡ ಭಾಷೆ ಹಾಗೂ ಕನ್ನಡಿಗರನ್ನು ಕುರಿತ ವರ್ಣನೆಗಳಿವೆ, ಮಂಟೆಸ್ವಾಮಿ= ಮೈಸೂರು ಮಂಡ್ಯ ಸೀಮೆಯ ಕೆಳವರ್ಗದ ಸಮುದಾಯದಲ್ಲಿ ಜನಪ್ರಿಯನಾಗಿರುವ ಸಂತ, ಇವನ ಹೆಸರಲ್ಲಿ ಹಾಡಲಾಗುವ ಸುದೀರ್ಘ ಕಥೆಯ ಮಂಟೆಸ್ವಾಮಿ ಕಾವ್ಯ, ಪರ್ಶಿಯನ್ = ಈಗಿನ ಇರಾನ್ ದೇಶಕ್ಕೆ ಸಂಬಂಧಿಸಿದ, ಶಿಶುನಾಳ=19ನೇ ಶತಮಾನದಲ್ಲಿ ಗದಗ ಜಿಲ್ಲೆಯಲ್ಲಿದ್ದ ಸಂತ, ಸೂಫಿ= ಅನುಭಾವಿ ಪಂಥದ ಯೋಗಿ, ಉರುಸು =ಸೂಫಿ ಸಂತನ ಪುಣ್ಯ ತಿಥಿಯ ನೆನಪಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಉತ್ಸವ, ಮೊಹರಂ=7ನೇ ಶತಮಾನದಲ್ಲಿ ಅರಬ್ ದೇಶದಲ್ಲಿ ತಮ್ಮ ಶತ್ರುಗಳಿಂದ ಹತರಾದ ಹಸೇನ ಹುಸೇನ ಎಂಬ ಅಣ್ಣತಮ್ಮಂದಿರ ನೆನಪಲ್ಲಿ ನಡೆವ ಆಚರಣೆ, ದರ್ಗಾ=ಸಮಾಧಿ, ಗುಬ್ಬಿವೀರಣ್ಣ=ಪ್ರಸಿದ್ಧ ನಾಟಕ ಕಂಪನಿ ನಡೆಸಿದವರು, ರಾಣಿ ಅಬ್ಬಕ್ಕ =ಪೋರ್ಚುಗೀಸರ ವಿರುದ್ಧ ಹೋರಾಡಿದ ಉಳ್ಳಾಲದ ರಾಣಿ, ಬಾಂದಬೀಬಿ=ಮೊಗಲರ ವಿರುದ್ಧ ಹೋರಾಡಿದ ಬಿಜಾಪುರದ ರಾಣಿ, ಅತ್ತಿಮಬ್ಬೆ=ದಾನಕ್ಕೆ ಹೆಸರಾಗಿದ್ದ 10ನೇ ಶತಮಾನದಲ್ಲಿದ್ದ ಒಬ್ಬ ಜೈನ ಮಹಿಳೆ, ಮುಂಡರಗಿ ಭೀಮರಾಯ=1857ರ ಕ್ರಾಂತಿಯಲ್ಲಿ ಬ್ರಿಟಿಶರ ವಿರುದ್ಧ ಹೋರಾಡಿದ ವೀರ, ಜುಂಜಪ್ಪ =ಗೊಲ್ಲ ಸಮುದಾಯದ ಸಾಂಸ್ಕೃತಿಕ ನಾಯಕ, ಬೀರಪ್ಪ=ಕುರುಬ ಸಮುದಾಯದ ಸಾಂಸ್ಕೃತಿಕ ನಾಯಕ, ಹಲಗಲಿ=ಬಾಗಲಕೋಟೆ ಜಿಲ್ಲೆಯ ಒಂದು ಹಳ್ಳಿ, 1857ರಲ್ಲಿ ಇಲ್ಲಿನ ಬೇಡರು ಶಸ್ತ್ರಗಳನ್ನು ಇಟ್ಟುಕೊಳ್ಳಬಾರದು ಎಂಬ ಬ್ರಿಟಿಶರ ಕಾನೂನನ್ನು ಪ್ರತಿಭಟಿಸಿ ಹೋರಾಡಿದರು, ಇವರಲ್ಲಿ 19ಜನರನ್ನು ಬ್ರಿಟಿಶರು ಗಲ್ಲಿಗೇರಿಸಿದರು, ಸಾಲುಮರದ ತಿಮ್ಮಕ್ಕ=ತನ್ನ ಗಂಡನೊಂದಿಗೆ ಸೇರಿ ಸಾಲುಮರಗಳನ್ನು ನೆಟ್ಟು ಮಕ್ಕಳಂತೆ ಸಾಕಿದ ಮಹಿಳೆ

## ಮಾದರಿ ಪ್ರಶ್ನೆಗಳು

1. ಪೊಟ್ಟಿ ಶ್ರೀರಾಮುಲು ಬಗ್ಗೆ ಬೆಸಗರಹಳ್ಳಿ ರಾಮಣ್ಣನವರಿಗೆ ಆದ ಅನುಭವ ಏನನ್ನು ಸೂಚಿಸುತ್ತದೆ?
2. ಸಂಸ್ಕೃತಿಯ ಬಗ್ಗೆ ಇರುವ ಜನಪ್ರಿಯ ಕಲ್ಪನೆಗಳು ಯಾವುವು?
3. ಸಂಸ್ಕೃತಿಯನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ಯಾಕೆ ವ್ಯಾಖ್ಯಾನಿಸುವ ಅಗತ್ಯವಿದೆ ?
4. ಕರ್ನಾಟಕ ಸಂಸ್ಕೃತಿಯನ್ನು ಸ್ವವಿಮರ್ಶೆಯ ಮೂಲಕ ಗ್ರಹಿಸುವ ಅಗತ್ಯ ಯಾಕಿದೆ?
5. ಸಂಸ್ಕೃತಿಯನ್ನು ಗತಕಾಲದಲ್ಲಿ ಮಾತ್ರ ಅರಸುವ ಪ್ರವೃತ್ತಿಯ ಯಾಕೆ ಸರಿಯಲ್ಲ?
6. ಕರ್ನಾಟಕ ಸಂಸ್ಕೃತಿಯಲ್ಲಿ ವೈಭವೀಕರಣದ ಅಪಾಯಗಳು ಯಾವುವು?
7. ಸಮುದಾಯದ ಸೃಜನಶೀಲತೆ ಎಂದರೇನು?
8. ಯಾಕೆ ಕರ್ನಾಟಕ ಸಂಸ್ಕೃತಿಯನ್ನು ಶಿಖರಗಳಿಂದಲೇ ಗುರುತಿಸುವುದು ಸಲ್ಲದು, ವಿವರಿಸಿ.

## ಹೆಚ್ಚಿನ ಓದು

1. ಮಂಟೆಸ್ವಾಮಿ ಹಾಗೂ ಮಲೆಮಾದೇಶ್ವರ ಮಹಾಕಾವ್ಯಗಳು
2. ಕರ್ನಾಟಕ ಜನಪದ ಕಲೆಗಳ ಕೋಶ ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ವಿಷಯ ವಿಶ್ವಕೋಶ ಕರ್ನಾಟಕ. ಪ್ರ: ಮೈಸೂರು ವಿಶ್ವವಿದ್ಯಾಲಯ,ಮೈಸೂರು
4. 'ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ', ಲೇ: ಬರಗೂರು ರಾಮಚಂದ್ರಪ್ಪ
5. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಲೇ: ಎಚ್.ತಿಪ್ಪೇರುದ್ರಸ್ವಾಮಿ
6. 'ಕರ್ನಾಟಕ ಜನತೆಯ ಸಂಸ್ಕೃತಿ' ಲೇ: ಮಾಸ್ತಿ ವೆಂಕಟೇಶ ಅಯ್ಯಂಗಾರ್
7. 'ಕರ್ನಾಟಕ ಸಂಸ್ಕೃತಿ', ಲೇ: ಎಂ. ಚಿದಾನಂದಮೂರ್ತಿ
8. 'ಕನ್ನಡ ಕನ್ನಡಿ' ಮಾಹಿತಿ ಕೋಶ, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ
9. 'ಕರ್ನಾಟಕ ಸಂಸ್ಕೃತಿ ಪರಂಪರೆ ಹಬ್ಬಗಳು, ಲೇ: ಎಸ್.ಎಸ್. ಹಿರೇಮಠ
10. ನಮ್ಮ ಸಂಸ್ಕೃತಿ ಪರಂಪರೆ, ಲೇ: ಬೆಟಗೇರಿ ಕೃಷ್ಣಶರ್ಮ
11. ನಮ್ಮ ನಾಡು ಕರ್ನಾಟಕ, ಲೇ : ಎಚ್.ಎಸ್. ಗೋಪಾಲರಾವ್
12. 'ಕಾಗೋಡು ಸತ್ಯಾಗ್ರಹ', ಲೇ: ಜಿ.ರಾಜಶೇಖರ
13. ನಮ್ಮ ಸಂಸ್ಕೃತಿಯ ಹೆಮ್ಮೆ ಸಾಲದು, ಲೇ: ಶಿವರಾಮಕಾರಂತ

ವಿಮರ್ಶೆ

೨

# 'ಹುಲ್ಲು' ಕಣವಿಯವರ ಒಂದು ಕವನ

ಗೌರೀಶ ಕಾಯ್ಕಿಣಿ

'A Proper study of mankind is Man' ಎಂದಿದ್ದಾನೆ ಕವಿ ಪೋಪ. ಹಾಗೆಯೇ, 'The proper study of a poet is a poem' ಎಂದು ನಾವು ಹೇಳಬಹುದು. ಒಬ್ಬ ಉತ್ತಮ ಕವಿಯು ತನ್ನ ಪ್ರತಿ ಕವನದಲ್ಲಿಯೂ ಪ್ರತಿಬಿಂಬಿತನಾಗುತ್ತಾನೆ. ಪ್ರತಿ ಬೀಜದಲ್ಲಿ ಮರವಿದ್ದಂತೆ. ಒಂದು ಕವಿತೆಯನ್ನು ಆಯ್ದು, ಆರೈಸಿ, ಅರಿತುಕೊಂಡರೆ ಅಲ್ಲಿ ನಮಗೆ ಕವಿಯ ಹೊನ್ನಿನ ಗೆರೆ–ಬಣ್ಣಗಳ ಹೊಳಪು ಒರಗೆದ್ದು ಕಾಣಬಹುದು.

ಕವಿ ಕಣವಿಯವರ ಕಾವ್ಯದ ಗುಣಲಕ್ಷಣಗಳೇನು? ಎದೆ ತುಂಬುವ ಮಾನವೀಯತೆ, ಎದೆ ತಟ್ಟುವ ಮಾರ್ಮಿಕತೆ, ನರ್ಮಸಚಿವನ ನಯಗಾರಿಕೆಯ ಹಿತೋಕ್ತಿ, ಚತುರೋಕ್ತಿ; ಉತ್ಪ್ರೇಕ್ಷೆಯ ನವಿರಾದ ವಿಲಾಸ, ರಸಾರ್ದ್ರವಾದ ಪದಮೈತ್ರಿ; 'ಬಂಧ ವಿರದ ಬಂಧುರ' ಪದ್ಯಬಂಧ, ಆವೇಶವಿಲ್ಲದ ಉತ್ಸಾಹ ಉತ್ಸುಕತೆ, ಆಕ್ರೋಶವರಿಯದ ವಾಗ್ಮಿತೆ; ವರ್ಣ್ಯವಿಷಯದ ಆಗು ವಸ್ತುವಿರಲಿ, ವ್ಯಕ್ತಿ ಇರಲಿ ಅವಿಸ್ಮರಣೀಯ ಭಾವ–ಭಂಗಿ–ನಿಲುವು– ಒಲವುಗಳನ್ನು ಸೂಕ್ತವಾಗಿ ಸೆರೆಹಿಡಿದು ಮಾತಿನಲ್ಲಿ ಮುದ್ರಿಸುವ ಚೂಟಿಯ ಛಾಯಾಗ್ರಾಹಕತೆ ಮತ್ತು ಆಳವಾದ, ನೈಜವಾದ, ನಿರ್ಭರವಾದ ಪ್ರಕೃತಿ ಪಾರವಶ್ಯ, ನಿಸರ್ಗ ಸೌಂದರ್ಯದ ಆಸಕ್ತಿ.

ಕವಿ ವಿಮರ್ಶಕ ಡಾ. ಶಂಕರ ಮೊಖಾಸಿಯವರು ಕಣವಿಯವರಲ್ಲಿ Nature mysticism ಹದಗೆಡದ ರೂಪದಲ್ಲಿ ಕಂಡಿದ್ದಾರೆ. ಇಲ್ಲಿಯ Mysticism ದ (ಅನುಭಾವ?) ವಿಚಾರ ನನಗೆ ಹೊಳೆಯದು. ಆದರೆ ಅವರಲ್ಲಿ ನಿಸರ್ಗದ ಬಗೆಗೆ ಅತ್ಯಂತ ಆತ್ಮೀಯವಾದ ಆಸಕ್ತಿಯಿದೆ. ಇದನ್ನು ನಾವು ಭಕ್ತಿಯೇ ಅನ್ನಬಹುದು. ಆದರೆ 'ಭಕ್ತಿ' ಎಂಬ ಮಾತಿನಿಂದ ಹೊಳೆಯುವ ದೈವಿಕತೆ, ಶರಣಾಗತಿ ಇತ್ಯಾದಿಗಳ 'ಕಾಂಡ' ಇಲ್ಲಿ ಕಾಣುವುದಿಲ್ಲ. ನಿಸರ್ಗವನ್ನು ಈ ಕವಿ ಮನಸಾರೆ 'ಭಜಿಸು'ತ್ತಾರೆ. ಪ್ರೀತಿಸುತ್ತಾರೆ. ಆದ್ದರಿಂದ ತನ್ನ ಕಾವ್ಯಕ್ಕೆ ಸ್ಫೂರ್ತಿ ಪಡೆಯುವುದಿರಲಿ, ಅದರಲ್ಲಿ

ಕಾವ್ಯವನ್ನೂ ಮರೆಯುತ್ತಾರೆ. ಅವರ 'ಬರೆಯಲೊಲ್ಲದ ಕವಿತೆ' ('ನಗರದಲ್ಲಿ ನೆರಳು' ಸಂಗ್ರಹ) ಯಲ್ಲಿಯ ಈ ಸಾಲುಗಳನ್ನು ನೋಡಬಹುದು.

ಇಂಥ ತಂಪೊತ್ತಿನಲ್ಲಿ ಮಾನ್ಯ ಸಂಪಾದಕರೆ
ಕವಿತೆ 'ಏತಕೆ ಬೇಕು ಹೇಳಿ ....................
........................................ ಬಾಡಿರುವ
ಹೂಗಳ ತೆಗೆದು, ಒಣಗಿದೆಲೆಗಳ ಗುಡಿಸಿ, ಅಲ್ಲಲ್ಲಿ
ಅಸ್ತಿತ್ವಕ್ಕೆ ಧಕ್ಕೆ ಬಾರದ ಹಾಗೆ ಬೆಳೆದ ಕಸ-ಕಳೆಯ
ಕೆತ್ತಿ, ಕುರುಪಿಯಾಡಿಸಿ, ಜರಜರಿಯಿಂದ ನೀರೆರೆಯುವಲ್ಲಿ ನನಗೆ ಸುಖವುಂಟು.

ಈ ಸುಖದ ಇದಿರು ಕವಿಗೆ ಸಂಪಾದಕರ ಚೆಕ್ಕು, 'ಗೌರವದ ಚವರಿ' ಯಾವುದೂ ಮರುಳಗೊಳಿಸದು. ಈ ಬಗೆಯ ತನ್ಮಯತೆಯಿಂದ ಈ ಕವಿಯ ಪ್ರಕೃತಿ ವರ್ಣನೆ ಯಾವಾಗಲೂ ಉತ್ಕಟ ಪ್ರಾಮಾಣಿಕತೆ (Sincerity) ಯಿಂದ ತುಂಬಿರುತ್ತದೆ.

ಈ ಹಿನ್ನೆಲೆಯಲ್ಲಿ ನಾನು ವಿಶ್ಲೇಷಣೆಗೆ ಆಯ್ದುಕೊಂಡದ್ದು ಕವಿಯ 'ಹುಲ್ಲು' ಕವನ. ದೀಪಾವಳಿ ವಿಶೇಷ ಸಂಚಿಕೆ 'ಪಾಂಚಾಲಿ'ಯಲ್ಲಿ ಪ್ರಕಟವಾದ ಹೊಚ್ಚ ಹೊಸ ಕವನ.

ಬೆಳಕಿನ ಬಣ್ಣಗಳನ್ನು ಅಳೆದು ತಿಳಿಯಲು ಒಂದು ಕಿರಣವನ್ನು ಲೋಲಕದೊಳಗಿಂದ ಹಾಯಿಸಿ ಕಂಡರೆ ಸಾಕು. ಅದೇ ರೀತಿ ಈ ಕವನದ ವಿಮರ್ಶೆ. ಕವನವೇ ಒಂದು ಮನೋಲೋಲಕ ಅದರ ಓದುಗರ ಪ್ರವಾಹವನ್ನು ಪೃಥಃಕರಿಸಿ ಅವರ ಮಾದರಿಗಳನು ಗುರುತಿಸಲು. (A poem is a mental prism capable of separating the stream of its readers into a number of distinguishable types' – J.A. Richards).

ಆಧುನಿಕ ಕವಿತೆಗೆ, ಅದೂ 'ನವ್ಯ'ವೆಂಬ ಕವನಕ್ಕೆ 'ರಸ'ವೆಂಬುದೊಂದು ಉಂಟೆ? ರಸಕ್ಕೆ ಒಂದು ಮಾನವೀಯ ಸಂದರ್ಭ ಬೇಕು. ಸ್ಥಾಯೀ ಭಾವಗಳೆಲ್ಲ ಮಾನವ ಜೀವನದ ಅಂಗಗಳು. 'ತ್ರೈಗುಣೋದ್ಭವ ಲೋಕಚರಿತ'ದಿಂದ ಕಥೆ, ನಾಟ್ಯ, ಇತ್ಯಾದಿಗಳಲ್ಲಿ ರಸೋತ್ಪತ್ತಿ. ಬಿಡಿ ಕವನಗಳಲ್ಲಿ ಕವಿಯ ಆಶಯ ಅಂತರಂಗವೇ ಏಕಪಾತ್ರ. ಅಲ್ಲಿ ಯಾವ ಮಾನವೀಯ ಘಟನೆಯೂ ನಡೆಯುವುದಿಲ್ಲ. ಕವನ ಓದಿ ಮುಗಿದಾಗ ಏನೋ ಒಂದು ಉತ್ಸಾಹ, ಉತ್ತೇಜನ, ಉದ್ರೇಕ, ಆನಂದ ಉಂಟಾಗುವುದು ಖಂಡಿತ. ಆದರೆ ಅದು ಅಖಂಡ ರಸಾನುಭವವಲ್ಲ. ಅದನ್ನು ಹೆಚ್ಚೆಂದರೆ ಭವಭೂತಿ ಹೇಳುವ 'ಕೌತುಕರಸ' ವೆನ್ನಬಹುದು. ಆದ್ದರಿಂದ ಇಂಥ ಕವಿತೆಯ 'ರಸ' ಪರಿಚಯವೆಂದರೆ ಅದರ ಆನಂದವರ್ಧಕ ಸೌಂದರ್ಯದ ಪದಪ್ರತ್ಯಯದಿಂದ ಉಂಟಾಗುವ ವಿಶಿಷ್ಟ ಬೌದ್ಧಿಕ ಸುಖದ ಅರ್ಥಮಾಡಿಕೊಳ್ಳುವ ಪ್ರಯತ್ನ.

'ಹುಲ್ಲು' ಕವನದ ವಸ್ತು ಅಪೂರ್ವ, ಹುಲ್ಲು ತೀರ ಸಾಮಾನ್ಯ, ಸರ್ವಸಾಧಾರಣ, ಜನಸಾಮಾನ್ಯರಂತೆ, ಆದರೆ ನಾವೆಲ್ಲ ಪ್ರಾಣಿಕೋಟಿ ಬದುಕುವುದು ಹುಲ್ಲಿನಿಂದಲೇ ಎಂದರೆ ತಪ್ಪಲ್ಲ. ನಾವು ಉಣ್ಣುವ ಧಾನ್ಯ, ಧವಸ ಹುಲ್ಲಿನಿಂದಲೇ. ನಾವು ಕುಡಿಯುವ ಹಾಲು ಹೈನು ದನದ ಹೊಟ್ಟೆಯ ರಸಾಯನ ಶಾಲೆಯಲ್ಲಿ ಹುಲ್ಲಿನಿಂದ ತಯಾರಾದ ವಸ್ತುವೇ! ಬೇರೆ ಗಿಡಮರಗಳು ಇಲ್ಲದಿರುವಲ್ಲಿ ನೆಲದ ಮರ್ಯಾದೆ ಮುಚ್ಚುವುದು ಹುಲ್ಲೇ ಸರಿ. ಶೂರ ವೀರರೆಂಬ ಪುಂಡರು ಹೋರಾಡಿ ಒಬ್ಬರನೊಬ್ಬರು ಕೊಂದು ಭೂಮಿತಾಯಿಯ ಮೈಯನ್ನೆಲ್ಲ ನೆತ್ತರದಿಂದ ತೋಯಿಸಿದಾಗ ಆ ಬಗ್ಗೆ ನೊಂದು ನಾಚಿ ಭೂಮಿ ಅದನ್ನೆಲ್ಲ ಹುಲ್ಲು ಹಾಸಿದ ಹಸಿರು ಸೆರಗಿನಿಂದ ಮುಚ್ಚಿಕೊಂಡು ಬಿಡುತ್ತಾಳೆ?

ಇಷ್ಟಾದರೂ ಹುಲ್ಲು ನಮಗೆ ಹೀನಾಯ. 'ಹುಲುಮನುಜ'ನೆಂದು ನಾವು ಹೀಯಾಳಿಸುತ್ತೇವೆ. ತೃಣೀಕರಿಸು ಎಂಬುದು ತಿರಸ್ಕರಿಸು ಎಂಬ ಅರ್ಥವನ್ನು ಕೊಡುತ್ತದೆ. ಅನಾಯಾಸವಾಗಿ ತಾನೆ ತಾನಾಗಿ ಬೆಳೆಯುವ ಹುಲ್ಲು ನಮ್ಮ ಮಟ್ಟಿಗೆ ದೀನದಲಿತ.

ಈ ದೀನದಲಿತ ಪಂಥಕ್ಕೆ ದನಿಕೊಟ್ಟಿದ್ದಾರೆ ಕವಿ ಈ ಕವನದಲ್ಲಿ. ಹುಲ್ಲು ದುರ್ಗಮ್ಯ ಜೀವೇಷಣೆಯ ಪ್ರತೀಕವಾಗಿ ಕಂಡಿದ್ದಾರೆ. ಹುಲ್ಲಿಲ್ಲದ ತಾಣವೆಲ್ಲಿ? ಹುಲ್ಲಿಗೆ ಯಾರ ಅಂಕೆ–ಅಂಕುಶ? 'ನಿತ್ಯ ಸರ್ವಗತಃ ಸ್ಥಾಣುಃ, ಅಚಲೋಯಂ ಸನಾತನಃ' ಎಂಬ ಪರಮಾತ್ಮನ ಪ್ರತೀಕ ನಿಜವಾಗಿಯೂ 'ಅಶ್ವತ್ಥ'ವಲ್ಲ. ಈ ಹುಲ್ಲು.

ಈ ಕವನ, ಮಳೆಯಿಂದ ಮೊದಲಾಗಿ ಮಳೆಯೇ ಇಲ್ಲದ ಮರುಭೂಮಿಯಲ್ಲಿ ಕೊನೆಯಾಗುತ್ತದೆ.

ಹುಲ್ಲಿನ ಹುಟ್ಟು ಗುಟ್ಟು ಕವಿ ಸಜೀವವಾಗಿ ಚಿತ್ರಿಸಿದ್ದಾರೆ. ಅದು ಧುತ್ತೆಂದು ಬೆಳೆದು ನಿಂತಿದೆ. ಎಂಥ ಇಕ್ಕಟ್ಟಿನಲ್ಲೂ ತುರಾಯಿ ಹಚ್ಚಿಕೊಂಡು ಹೊರ ಬರುತ್ತದೆ. ಈ ಮಾತು ಹುಲ್ಲಿನ ಪುಟ್ಟ ದಿಮಾಕನ್ನು ತುಂಬ ಸೊಗಸಾಗಿ ಚಿತ್ರಿಸುತ್ತದೆ ಗೊಂಡೆಯೋ, ಮೊಗ್ಗೆಯೋ, ಹೂವೋ ತಲೆಗಿಟ್ಟುಕೊಂಡು ಹುಲ್ಲು–ಕದರು ಕಾಣಿಸಿಕೊಳ್ಳುತ್ತದೆ. ಅದರ ಪುಟ್ಟಬಾಳಿನಲ್ಲಿಯೂ ಅಟ್ಟಹಾಸವೆಷ್ಟು? ನಮಗೆ ಜಿಟಿಜಿಟಿ ಮಳೆ ಹೊಲ ಬೇಸರ. ಆದರೆ ಅಲ್ಪಪ್ರಾಣಕ್ಕೆ ಅದು ಧಾರಾಕಾರ ಹಾಲೆರೆದಂತೆ ಅದನ್ನೆ ಗಟಗಟ ಕುಡಿದು ಧುತ್ತೆಂದು ಮತ್ತೆ ಹಾಜರು ನಾಗರಿಕತೆಗೆ ನಿಸರ್ಗದ ಸವಾಲು ಎಸೆದು 'ಮೂಲಪ್ರವೃತ್ತಿಯನ್ನು ಪೂರ್ತಿ ನಿರ್ಮೂಲನೆ ಮಾಡಲು ಸಾಧ್ಯವೇ? ಮೂಲ ಸಾಬೀತು ಇರುವತನಕವೂ ಅದು ಮತ್ತೆ ಮತ್ತೆ ಮೈದೋರುತ್ತದೆ.

'ತುರಾಯಿ ಹಚ್ಚಿಕೊಂಡು' ಎಂಬ ಚಿತ್ರಮಯ ಚಿಕ್ಕಪದ ಪ್ರಯೋಗ ತುಂಬ ಧ್ವನಿನಿಬಿಡವಾಗಿದೆ.

**'ಹಿತ್ತಲ ಮಾತು ಗೊತ್ತೆ ಇದೆ'**
**(ಮರುಭೂಮಿಯ ಮಾತು ಬೇರೆ)**

ಇಂಥ ಸಾಲುಗಳು ಈ ವೃತ್ತಬಂಧವಿರದ ಸ್ವಚ್ಛಂದ ಛಂದದ ಕವನದ ಒಳತೋಲವನ್ನು ಕಾಯ್ದುಕೊಳ್ಳುತ್ತದೆ. ಇದಕ್ಕೆ ಅಲ್ಲಲ್ಲಿಯೇ ಅಂತ್ಯ ಪ್ರಾಸಗಳು – ಗುತ್ತಿಗೆ, ಹೊತ್ತಿಗೆ, ಕರಿಕೆ–ತುರಿಕೆ, ಹುಲ್ಲು–ಬಿಲ್ಲು, ಬಾಣ–ತಾಣ ಇತ್ಯಾದಿ ಬೆಳ್ಳಿಯ ಕೀಲು ಜಡಿಯಂತೆ ಅಚ್ಚುಕಟ್ಟನ್ನು ಒದಗಿಸಿವೆ.

ಹುಲ್ಲು ಕಿತ್ತಷ್ಟು ಮತ್ತೆ ಮತ್ತೆ ಹುಟ್ಟಿಬರುತ್ತದೆಂಬ ಒಂದು ವಿಚಾರವನ್ನು ಕವಿ ಅನೇಕ ಪರ್ಯಾಯೋಕ್ತಿಗಳಿಂದ (Elegant Variations) ವರ್ಣಿಸುತ್ತಾರೆ. ಅಲ್ಲಿ ಅವರಿತ್ತ 'ಕಷ್ಟದ ಮರುದಿನದ ಮುಖದ ಉಪಮೆ ಒಮ್ಮೆಲೆ ಮನಸ್ಸು ಸೆರೆ ಹಿಡಿಯುವಂತಿದೆ. 'ಕಣ್ಣುಜ್ಜಿ ಬಿಟ್ಟೇ' ಎಂಬ ಮಾತಿನ ಹಿಂದಿನ ಮಕ್ಕಳ ಕಣ್ಣು ಮುಚ್ಚಾಟದ ಧ್ವನಿ ಈ ಪುಟ್ಟ ಹುಲ್ಲ ಚೆಲ್ಲಾಟಕ್ಕೆ, ಫಕ್ಕನೆ ಕಣ್ಣಿಗೆ ಬೀಳುವ ತುಂಬ ಸರಳತನಕ್ಕೆ ಅರ್ಥವತ್ತಾದ ಶ್ರುತಿ ಕೊಡುತ್ತದೆ. ಅದೇ ರೀತಿ 'ಕಾಮನಬಿಲ್ಲು ..... ಬಿಡುವುದು ಬಾಣ. ಇಲ್ಲಿಯ ಹೋಲಿಕೆ ಹಳೆಯದೆನಿಸಿದರೂ ಅದರ ಕ್ರಿಯಾಶೀಲ ತಿರುವು ಹೊಸತು – ಹೃದ್ಯ.'

ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ ಇರಬಹುದು. ಆದರೆ ಪರೀಕ್ಷಿಸಿ ನೋಡಿ; ಅದರ ತಳದಲ್ಲಿ ಹುಲ್ಲು ಮೆತ್ತಗೆ ಮಲಗಿರುತ್ತದೆ.

ಬೇಲಿದಾಟಿ ಒಳಗೆ ನುಗ್ಗತ್ತದೆ
ಕಾಲ ಕೆಳಗೆ ಬಂದು ಜಗ್ಗುತ್ತದೆ.
ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲಲ್ಲಿ
ಹಿಗ್ಗುತ್ತದೆ.

(ಮುಖ ಕ್ಷೌರದ ನಂತರ ಕ್ರಾಪಿನ ಹೋಲಿಕೆ!) ಈ ಪಂಕ್ತಿಗಳಲ್ಲಿಯ ಕ್ರಿಯಾಪದಗಳು ಪ್ರಾಸಕ್ಕಾಗಿ ಬಂದವಲ್ಲ. ಯಥಾರ್ಥತೆಯಲ್ಲಿ ಪ್ರಾಸವೂ ಸಾರ್ಥಕವಾಗಿದೆ.

'ಮಳೆಗೆ ಮಣ್ಣೆ ಮೊಳೆಯುತಿದೆ' – ಅಂದಿದ್ದಾರೆ. ಅಂಬಿಕಾತನಯದತ್ತರು ತಮ್ಮದೊಂದು ಕವನದಲ್ಲಿ. ಆದರೆ ಈ ಕವಿ ಬೀಜದ ಕಸುವನ್ನೂ, ಮಣ್ಣಿನ ಹಸಿವನ್ನೂ ಬೇರೆಯಾಗಿ ಗುರುತಿಸುತ್ತಾರೆ. ಆದರೆ ಕವನದ ಕೊನೆಯಲ್ಲಿ ಹುಲ್ಲಿನ ಬೆಳೆಗೆ ಬೀಜ ಮಣ್ಣುಗಳೊಂದಿಗೆ ಮಳೆಯನ್ನು ಮುಖ್ಯ ಅಂಗವಾಗಿ ಕವಿ ನಮೂದಿಸಿದ್ದಾರೆ. 'ಮಳೆಗೆ ಹುಲ್ಲು ಮೊಳೆಯುವುದು'. ಇದು ಕವನದ ಆರಂಭಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಜಿಟಿಜಿಟಿ ಮಳೆ, ಷೇಕ್ಸ್‌ಪಿಯರ್ ಹೇಳುವ gentle rain ಅಲ್ಲ. ಆದರೂ ಇದು ಕರುಣೆಯ ಪ್ರತೀಕ. ('ಕರುಣೆ ತೋರದೆ ಕುರುಪಿಯಿಂದ ಕೆತ್ತಿ ಕೆತ್ತಿ ತೆಗೆದಾಗ'). ಈ ಕರುಣೆ ಮಳೆಗರೆದಾಗಲೇ ಹುಲ್ಲು ಮತ್ತೆ ತಲೆಯೆತ್ತುವುದು. ಅಂದರೆ ದೀನದಲಿತ ಜನಾಂಗ ದೇಶದ ನಿಜವಾದ ಬುಡಕಟ್ಟಿನ ಎಲ್ಲೆಲ್ಲೂ ನೆಲೆಸಿದ ಜನಪದ. ಮೇಲಿನವರ ಕರುಣೆಯಿಂದಲೇ ಚೇತರಿಸಿಕೊಂಡು ಏಳಬಲ್ಲದು ಎಂಬ ಭಾವ ಇಲ್ಲಿ ಮಿಡಿದಂತಿದೆ.

ಈವರೆಗಿನ ವಿಶ್ಲೇಷಣೆ, 'ಹುಲ್ಲು' ದುರ್ಗಮ್ಯ ಜೀವೇಷಣೆ ಅಥವಾ ಜೀವನೋತ್ಸಾಹದ ಪ್ರತೀಕವೆಂದು ಕಂಡುಕೊಂಡಾಗ ಮೂಡಿ ಬಂದ ಮೀಮಾಂಸೆ. ಆದರೆ ಈ ಕವನದಿಂದ ಕವಿ ಇನ್ನೊಂದು ಆಳದ ಪಾತಳಿಯಲ್ಲಿ ಆಶಯವನ್ನು

ತುಂಬಿದ್ದಾನೆ. ಇಲ್ಲಿ 'ಹುಲ್ಲು' ಜೀವನೋತ್ಸಾಹದಂತೆ ಜೀವಜೀವದ ಜೀವಾಳದ ಪ್ರೇರಣೆಯೂ, ಪ್ರಚೋದನೆಯೂ ಆದ ಕಾಮಕ್ಕೂ ಪ್ರತೀಕವಾಗಿದೆ. ಫ್ರಾಡನ ಮತದಂತೆ ಮಳೆಯು ಒಂದು ಕಾಮಪ್ರತೀಕ. ಆದರೆ ಇಲ್ಲಿ ಕವಿ ಮಳೆಗೆ ಜುಮ್ಮೆಂದು ನಿಮಿರಿ ನಿಲ್ಲುವ ಹುಲ್ಲು ಕಾಮದ ಪ್ರತೀಕವಾಗಿ ಒಟ್ಟು ಕಂಡಿದ್ದಾನೆ.

ಈ ಕೋನದಿಂದ ಕಂಡರೆ ಕವನದಲ್ಲಿ ಕೊನೆಯವರೆಗೂ ಅರ್ಥಪೂರ್ಣತೆ ಮಿಡಿಯುತ್ತದೆ. ಕಾಮಪ್ರವೃತ್ತಿಯ ಸಾರ್ವತ್ರಿಕತೆ, ಸಾರ್ವಭೌಮಿಕತೆಯನ್ನು ಈ ಕವನ ಕಂಡರಿಸುತ್ತದೆ. ಈ ದೃಷ್ಟಿಯಿಂದ ಇಲ್ಲಿಯ ಯಾವ ಪಂಕ್ತಿಯೂ ನಿರರ್ಥಕವಲ್ಲ, ವ್ಯರ್ಥವಲ್ಲ. ಜಿಟಿಜಿಟಿ ಮಳೆಗೆ ('ಆಷಾಡಸ್ಯ ಪ್ರಥಮ ದಿವಸೇ ......') ಬೆಳೆದು ನಿಂತಲ್ಲಿಂದ ಹಿಡಿದು ಮಳೆಯೇ ಇಲ್ಲದ ಮರುಭೂಮಿಯವರೆಗೂ, ಹಿತ್ತಲ ಬೇಲಿಯಿಂದ ಹಿಡಿದು ಬೋಳುಬಂಡೆಯವರೆಗೂ ಇದಕ್ಕೆ 'ಅರ್ಥ' ಹೊರಡುತ್ತದೆ.

'ಎಂಥ ಇಕ್ಕಟ್ಟಿನಲ್ಲೂ ಹೊರಬರುತ್ತದೆ.... ' ಈ ಸಾಲಿನಿಂದಲೇ ಈ ಭಾವಕ್ಕೆ ವಿಚಿತ್ರ ಸ್ವಾರಸ್ಯ ಕಟ್ಟುತ್ತದೆ, ಈ ಸಾಲು ಇಲ್ಲಿಯ ಪ್ರತೀಕಾತ್ಮತೆಗೆ Key note ಆಗಬಲ್ಲುದು. 'ಎಲ್ಲಾದರೂ ಸ್ವಲ್ಪ ಪಡುವ ಸಿಕ್ಕರೆ ಸಾಕು', 'ಹಿತ್ತ ಮಾತು ಗೊತ್ತೇ ಇದೆ', 'ಹೂದೋಟದಲ್ಲಿ ಹೇಳಿ ಕಳಿಸಿದ ಹಾಗೆ, 'ನೀರೆರೆದು ಬೆಳೆಸಿದ ಗಿಡಕ್ಕೆ' ಅಂದರೆ ನಾಗರಿಕ ಸಂಸ್ಕೃತಿಗೂ ಈ ಕಾಮದ ಸವಾಲು. ಎಂಥ ಪರಿಷ್ಕೃತ ಪ್ರತಿಷ್ಠೆಯ ಜಂಭವನ್ನೂ ಅದು ನಡುಗಿಸಬಲ್ಲದು. ಹಸಿವು–ಕಸುವುಗಳು ಕಾಮಕ್ಕೂ ಸಲ್ಲುವುವು. 'ಮುಸುಗಡುವದು'ಅವರದೇ ಭಾಷೆ. 'ಕಜ್ಜಿಯ ತುರಿಕೆ' ಅದರದೇ 'ಕಂಡೂ ಶಮನ' ಕಾಮನ ಬಿಲ್ಲಿನ ಬಾಣ ಕಣ್ಮುಚ್ಚಿ ಬಿಟ್ಟ ಬಾಣ. 'ಹೇಳಿ ಎಲ್ಲಿಲ್ಲ ಅದರ ತಾನ?'

ಮಂದೆ ಇಲ್ಲವೆಂಬ ತಾಣಗಳ ಪರೀಕ್ಷೆ. 'ಬಂಡೆಗಲ್ಲಿನ ಬೋಳುತಲೆ' ನಿವೃತ್ತ, ಸಂನ್ಯಸ್ತ, ವಿರಕ್ತವೆಂಬ ಸ್ಥಾನ. ಆ ಬಂಡೆಯ ಕೆಳಗೂ ಈ ಹುಲ್ಲು ನುಣ್ಣಗೆ ಬಾಚಿದೆ ಅಲ್ಲ – ಮೆತ್ತಗೆ ಮಲಗಿರುತ್ತದೆ. 'ಬೇಲಿದಾಟಿ ಒಳಗೆ ನುಗ್ಗುತ್ತದೆ. ತಾರುಣ್ಯೋನ್ಮಾದಕ್ಕೆ ಯಾವ ಬೇಲಿಯ ಅಡೆ–ತಡೆ? 'ಮಗ್ಗುಲಲ್ಲಿ ಹಿಗ್ಗುತ್ತದೆ.' ಇದು ವಿಧಿವತ್ತಾಗಿ ಲಾನಿನ ಕ್ರಾಪು ಕತ್ತರಿಸಿದ ಮೇಲೆ ಅಂದರೆ ಗಾರ್ಹಸ್ಥ್ಯ–ದಾಂಪತ್ಯದ ಅಧಿಕೃತ ರೀತಿಯಲ್ಲಿ. ಆದರೆ ಈ ಕಾಮಪ್ರವೃತ್ತಿ ಒಗ್ಗಿ ಹೋಗುತ್ತದೆ ಹೀಗೆ ಬರುಬರುತ್ತ' ಎಂದು ಮತ್ತೆ ಸಮಾರೋಪಗೊಳಿಸುವುದೇಕೆ? ಇದು ಮಾಮೂಲಿನ ತೀರ್ಮಾನವಾಗದೇ?

ಇನ್ನೂ ಜೀವನೋತ್ಸಾಹ ಮತ್ತೆ ಮತ್ತೆ ಗಮಿತ ಗಲಿತವಾದರೆ ಅದು ಅಂಥ ದೀನಾವಸ್ಥೆಗೆ ಬರುಬರುತ್ತ ಒಗ್ಗಿ ಹೋಗುವುದು ನಿಜ. ಆದರೆ ಈ ಸಾಲಿನ ಹಿಂದಿನ ಸಾಲುಗಳು ಅಂಥ ತೊತ್ತುಳಿಗುಳಿತದ ಧ್ವನಿಯನ್ನು ಕೊಡುವುದಿಲ್ಲ. ಅಲ್ಲೆಲ್ಲ ನುಗ್ಗು ಹಿಗ್ಗುಗಳದೇ ಮಾತು.

'ಹುಲ್ಲು' ಕಾಮದ ಪ್ರತೀಕವಾಗಿ ತೆಗೆದುಕೊಂಡಾಗ ಮರುಭೂಮಿ ಓಯಸಿಸ್ ಎಲ್ಲವೂ ಅರ್ಥಪೂರ್ಣವಾಗುತ್ತದೆ. (ಆದರೆ ಅದು ಬರಿ ಜೀವನೋತ್ಸಾಹದ ಪ್ರತೀಕ–ಪ್ರತಿಮೆಯಾದಾಗ ಇದು ಅಷ್ಟೊಂದು ಪೂರಕ ಪೋಷಕವೆನಿಸುವುದಿಲ್ಲ. ಹಾಯಾಗಿ

ಮೆಲುಕಾಡಿಸುತ್ತ ಮಲಗಿದ ಒಂದು ದಲಿತ, ಗಮಿತ ಪ್ರಾಣಶಕ್ತಿ (Vitalityದಲ್ಲಿ). ಮರುಭೂಮಿ ಬಂಜೆತನಕ್ಕೆ, ಓಯಸಿಸ್ ಅಲ್ಲಿಯೂ ವ್ಯಕ್ತವಾಗುವ ಲೈಂಗಿಕ ಹಸಿವೆಯ ಹಸಿ-ಹಸಿರಿಗೆ ಪ್ರತಿಮೆಗಳಾಗುತ್ತವೆ. ಆದರೆ ಆಗ 'ದೂರ ಅಲ್ಲೊಂದು ಓಯಸಿಸ್ಸು ಉಂಟಲ್ಲ ಮಾರಾಯರೆ' ಎಂಬ ಉದ್ಗಾರದಲ್ಲಿ ಅನಗತ್ಯ ಲೇವಡಿ (Mockery) ಧ್ವನಿಸುವಂತಿದೆ. ಆದರೂ ಆ ಬಂಜೆತನದಲ್ಲಿಯೂ ಒಂಟಿ ಬಾಳಿನಲ್ಲಿಯೂ ಮಲಗಿ ಮೆಲುಕಾಡಿಸುವ ಈಪ್ಸೆ 'ಒಂಟಿ'ಯ ಪ್ರತಿಮೆಯಲ್ಲಿ ಮಾರ್ಮಿಕವಾಗಿಯೇ ಮೈವೆತ್ತಿದೆ. ಈ ದೃಷ್ಟಿಯಿಂದ ಧ್ವನ್ಯರ್ಥದ ಈ ಪಾತಳಿಯಲ್ಲಿ 'ಹುಲ್ಲು' ತುಂಬ ಸಾರ್ಥಕವಾಗಿದೆ.

ಉತ್ತಮ ಕವಿತೆಯ ಗಮಕವೇ ಇದು. ಅರ್ಥದ ಮರ್ಮವನ್ನು ಯಾವ ಪಾತಳಿಯಲ್ಲಿ, ಯಾವ ಕೋನದಿಂದ ನೋಡಿಕೊಂಡರೂ ಅದು ಸುಸಂಗತವಾಗಿ ಆತ್ಮ ವಿಸಂಗತಿಯಿಲ್ಲದೆ ಅಸ್ವಾದ್ಯವಾಗಬೇಕು. ಶ್ರೀ ಅರವಿಂದರು 'Future poetry' ಯಲ್ಲಿ ಒಂದೆಡೆಗೆ ಹೇಳುವಂತೆ 'Modern Poetry has achieved a far greater subtlity, fineness and depth of suggestion in style and thought than the ancients'.

ಈ ಮಾತು ಈ ಕವನದಲ್ಲಿಯೂ ಯಥಾರ್ಥವಾಗಿದೆ. ಕವಿ ಕಣವಿ ಈ ಆಳವನ್ನು ಅದರ ಸೂಕ್ಷ್ಮತೆ (Subtlity) ಮತ್ತು ನವಿರು (Fineness)ಗಳಲ್ಲಿ ಕೂಡಿಯೇ ಸಾಧಿಸಿದ್ದಾರೆ. ದುರ್ದಮ್ಯ ಜೀವನೋತ್ಸಾಹದ ಪ್ರತೀಕಾತ್ಮತೆಯಲ್ಲಿ ಕವನ ಕೊನೆತನಕೂ ಉತ್ಕಟತೆಯನ್ನು ಸಾಧಿಸಿದಂತೆ ಕಾಣಲಿಕ್ಕಿಲ್ಲ. ಆದರೆ ಈ ಕಾಮದ ಪ್ರತೀಕತೆಯಲ್ಲಿ ಅದು ಸಾದ್ಯಂತ ಸಾಫಲ್ಯವನ್ನು ಪಡೆದಿದೆ. 'ದಲಿತ'ತೆಯ ಆಶಯವು ಜೀವನೋತ್ಸಾಹದ ಅಭಿವ್ಯಕ್ತಿಯದೇ ಒಂದು ಆಯಾಮವಾಗಿ ಬಂದಿದೆ.

ಹೀಗೆ 'ಹುಲ್ಲು' ಎರಡು ದೃಷ್ಟಿಗಳಿಂದಲೂ ಸಿದ್ಧಿಸಿದ ಕಾವ್ಯಸೃಷ್ಟಿ.

## ಹುಲ್ಲು

ಈ ಜುಲೈ ತಿಂಗಳ ಜಿಟಿಜಿಟಿ ಮಳೆ-
ಗಟಗಟ ಕುಡಿದು ಧುತ್ತೆಂದು ಬೆಳೆದು ನಿಂತಿದೆ ಹುಲ್ಲು.
ಎಲ್ಲಾದರೂ ಸ್ವಲ್ಪ ಪಡುವು ಸಿಕ್ಕರೆ ಸಾಕು;
ಸಿಮೆಂಟು ಗೋಡೆಯ ಬಿರುಕು, ಟಾರು ಬೀದಿಯ ಒಡಕು-
ಎಂಥ ಇಕ್ಕಟ್ಟಿನಲ್ಲೂ ಹೊರಬರುತ್ತದೆ ತುರಾಯಿ ಹಚ್ಚಿಕೊಂಡು.
ಗುಡ್ಡ-ಮರಡಿ-ಬಯಲು ಸ್ವಂತ ಸಾಮ್ರಾಜ್ಯ
ಹಿತ್ತಿಲದ ಮಾತು ಗೊತ್ತೇ ಇದೆ;

ಅಂಗಳದ ಅಂಗುಲಂಗುಲ ಕೂಡ ಅದರದೇ ಗುತ್ತಿಗೆ.
ಹೂದೋಟದಲಿ ಹೇಳಿಕಳಿಸಿದ ಹಾಗೆ ಹೊತ್ತಿಗೆ

ಮೊದಲೇ ಬಂದು ಡೇರೆ ಹೊಡೆದು ತಳವೂರುತ್ತದೆ
ನೀರೆರೆದು ಬೆಳೆಸಿದ ಹೂವಿನಗಿಡಕ್ಕೆಸೆದು ಸವಾಲು;
ಬೀಜದ ಕಸುವೋ, ಮಣ್ಣಿನ ಹಸಿವೋ
ಮುಸುಗುಡುತ್ತದೆ ದನ ಮೇಗು ಹೋದ ಮೇಲೂ.

ಕರುಣೆ ತೋರದೆ ಕುರುಪಿಯಂತೆ ಕೆತ್ತಿ ಕೆತ್ತಿ ತೆಗೆದು
ಹೊರಗೊಗೆದು ಹಸನಾಯಿತೆಂದು ಉಸಿರು ಬಿಡು
ವಷ್ಟರಲ್ಲೇ ಕಷ್ಟದ ಮರುದಿನದ ಮುಖದಂತೆ
ಬ್ಲೇಡಿಗೆ ತಯಾರು, ನೀವಾರು, ನಿಮ್ಮ ಹೆಸರೇನು
ಕಸುಬಾವುದು–ಐದೆಸೆಯೆಲ್ಲ ಅದಕೆ ಗೊತ್ತು.
ಕರಿಕೆ: ಕಜ್ಜಿಯ ತುರಿಕೆ, ಹುಲ್ಲು, ಕಾಮನಬಿಲ್ಲು
ಕಣ್ಮುಚ್ಚಿ ಬಿಟ್ಟೇ–

ಬಿಡುತ್ತದೆ ಬಾಣ; ಹೇಳಿ ಎಲ್ಲಿಲ್ಲ ಅದರ ತಾಣ?
ಇರಬಹುದು ಬಂಡೆಗಲ್ಲಿನ ಬೋಳುತಲೆ ಅಲ್ಲಲ್ಲಿ, ಅದರ
ತಳದಲ್ಲಿ ಮೆತ್ತಗೆ ಮಲಗಿರುತ್ತದೆ, ಪರೀಕ್ಷಿಸಿ ನೋಡಿ.
ಬೇಲಿದಾಟಿ ಒಳಗೆ ನುಗ್ಗುತ್ತದೆ; ಕಾಲ ಕೆಳಗೇ ಬಂದು
ಜಗ್ಗುತ್ತದೆ. ಲಾನಿನ ಕ್ರಾಪು ಕತ್ತರಿಸಿದಾಗ ಮಗ್ಗುಲದಲ್ಲಿ
ಹಿಗ್ಗುತ್ತದೆ; ಬರುಬರುತ್ತ ಒಗ್ಗಿ ಹೋಗುತ್ತದೆ.

ಮಳೆಗೆ ಹುಲ್ಲು ಮೊಳೆಯುವದುಮೂಲಪ್ರವೃತ್ತಿ, ನಿಸರ್ಗ.
ಕಳೆ ತೆಗೆದು ಬಿತ್ತಿ ಬೆಳೆಯುವದು ನಾಗರಿಕ ಮಾರ್ಗ
ಮರುಭೂಮಿಯ ಮಾತು ಬೇರೆ; ಅಲ್ಲಿ ಮಳೆಯೂ ಇಲ್ಲ,
ಆದರೂ ದೂರ ಅಲ್ಲೊಂದು ಓಯಸಿಸ್ಸು ಉಂಟಲ್ಲ ಮಾರಾಯರೆ
ಅದಕ್ಕೇ ಅಲ್ಲಿ ಒಂಟಿ ಮಲಗಿ ಮೆಲುಕಾಡಿಸುವುದು

*****

**ಲೇಖಕರು**

ಗೌರೀಶ ಕಾಯ್ಕಿಣಿಯವರು 1912 ಸೆಪ್ಟೆಂಬರ್ 12ರಂದು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಜನಿಸಿದರು. ಗೌರೀಶ ಕಾಯ್ಕಿಣಿಯವರು ಹಿಂದಿಯಲ್ಲಿ ವಿಶಾರದರೂ ಆಗಿದ್ದಾರೆ. ವಿಜ್ಞಾನ ಮತ್ತು ವಿಜ್ಞಾನಿಗಳ ಬಗ್ಗೆ ಅಪಾರ ಗೌರವವಿದ್ದ

ಇವರು ಮುಂದಿನ ತತ್ವಜ್ಞಾನವೆಂದರೆ ವಿಜ್ಞಾನ ಎಂದು ಹೇಳುತ್ತಿದ್ದರು. ಕಾವ್ಯ, ನಾಟಕ, ರೇಡಿಯೊ ನಾಟಕ, ಕಥಾಸಂಕಲನ, ಪ್ರವಾಸ ಸಾಹಿತ್ಯ, ವ್ಯಕ್ತಿಚಿತ್ರಣ, ಪರಿಚಯ ಲೇಖನ, ಸಾಹಿತ್ಯ ಸಮೀಕ್ಷೆ, ವೈಚಾರಿಕ, ಅನುವಾದ, ಇಂಗ್ಲಿಷ್ ಕೃತಿಗಳು, ಕೊಂಕಣಿ ಕೃತಿಗಳು, ಮರಾಠಿ ಕೃತಿಗಳು, ಸಮಗ್ರ ಸಂಪುಟಗಳು ಇವಲ್ಲದೆ ನಾಡಿನ ವಿವಿಧ ಪತ್ರಿಕೆಗಳಲ್ಲಿ ಸಾವಿರಾರು ಬಿಡಿ ಬರಹಗಳು ಹಾಗು ಅಂಕಣಗಳು ಪ್ರಕಟವಾಗಿವೆ.

**ಆಶಯ**

ಈ ವಿಮರ್ಶೆಯನ್ನು ಗೌರೀಶ ಕಾಯ್ಕಿಣಿ ಅವರ ಆಯ್ದ ಲೇಖನಗಳು ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಕಣವಿಯವರ ಹುಲ್ಲು ಕವನದಲ್ಲಿ ಹುಲ್ಲಿನ ಅರಿವು, ಇರುವು, ಹರವು ಜೊತೆ ಹೋಲಿಕೆಗಳನ್ನು ಬೆಸೆದು ಕಟ್ಟಿದ ರೀತಿಯೇ ವಿಶಿಷ್ಠ. ಇಂತಹ ವಿಶಿಷ್ಠ ಕವನವನ್ನು ಲೇಖಕರು ವಿಮರ್ಶೆಯ ದನಿಗಳನ್ನು ಎತ್ತಿ ಒರೆಗೆ ಹಚ್ಚಿರುವ ಶೈಲಿಗಳು ಉತ್ತಮ ವಿಮರ್ಶೆಯ ಗುಣ ವಿಶೇಷಣಗಳನ್ನು ಸೂಚಿಸುತ್ತದೆ.

**ಶಬ್ದಾರ್ಥಗಳು**

ಬಂಧುರ = ಚೆಲುವಾದುದು, ಸುಂದರವಾದುದು, ಬಂಧ = ಕಟ್ಟು ಜೋಡಣೆ, ಹಿತೋಕ್ತಿ = ಹಿತವಾದ ಮಾತು, ನಿರ್ಭರ = ವೇಗ ರಭಸ ಕ್ರೌರ್ಯ, ಉತ್ಕಟ = ಆಧಿಕ್ಯ ಪ್ರಾಬಲ್ಯ, ಪ್ರತೀಕ = ಪ್ರತಿಕೃತಿ, ಪ್ರತಿ ರೂಪ

**ಮಾದರಿ ಪ್ರಶ್ನೆಗಳು**

1. ಕವಿ ಕಣವಿಯವರ ಕಾವ್ಯದ ಗುಣಲಕ್ಷಣಗಳನ್ನು ವಿಮರ್ಶಕರು ಯಾವ ಬಗೆಯಲ್ಲಿ ಗುರುತಿಸಿದ್ದಾರೆ?
2. ಹುಲ್ಲಿನ ಹುಟ್ಟು ಗುಟ್ಟು ಕವಿಯ ಚಿತ್ರಣವನ್ನು ವಿಮರ್ಶಕ ಹೇಗೆ ವಿಶ್ಲೇಷಣೆ ಮಾಡಿದ್ದಾರೆ?
3. ಹುಲ್ಲನ್ನು ಸಾಮಾನ್ಯ ಜನ ಕಾಣುವ ಬಗೆ ಮತ್ತು ವಿಮರ್ಶಕರು ವಿವರಿಸಿರುವ ಬಗೆ ತಿಳಿಸಿ?
4. ಹುಲ್ಲಿನ ಮಹತ್ವವನ್ನು ತಿಳಿಸಲು ಕವಿ ಬಳಸಿರುವ ವಿಧಾನಗಳನ್ನು ಕಾಯ್ಕಿಣಿಯವರು ಹೇಗೆ ವ್ಯಕ್ತಗೊಳಿಸಿದ್ದಾರೆ?
5. ಹುಲ್ಲಿನ ವಿಚಿತ್ರ ಸ್ವಾರಸ್ಯವೇನು?
7. ಹುಲ್ಲು ಯಾವುದಕ್ಕೆ ಪ್ರತೀಕವಾಗಿದೆ.
8. ಹುಲ್ಲು ಕವನದ ಆಶಯವೇನು?

**ಹೆಚ್ಚಿನ ಓದು**

1. 'ಪರಿಶೀಲನ'(1967) ಲೇ: ಜಿ.ಎಸ್.ಶಿವರುದ್ರಪ್ಪ
2. 'ಗೋಪಾಲಕೃಷ್ಣ ಅಡಿಗ ಒಂದು ಕಾವ್ಯಾಭ್ಯಾಸ' ಲೇ : ಸುಮತೀಂದ್ರ ನಾಡಿಗ
3. 'ಹಾಡೆ ಹಾದಿಯ ತೋರಿತು', ಲೇ: ಎಚ್.ಎಸ್.ರಾಘವೇಂದ್ರರಾವ್
4. 'ಕನ್ನಡ ಸಾಹಿತ್ಯಪ್ರತಿಭೆಯ ಸ್ವರೂಪ' ಲೇ:ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ನುಡಿ ಚಿತ್ರ

೩

# ವಂಶವಾಹಿ ಮಹಾಮೋಜಣಿ

ನಾಗೇಶ ಹೆಗಡೆ

ನಾವೀಗ ಮತ್ತೆ ಒಂದು ಸೂಕ್ಷ್ಮ ಬ್ರಹ್ಮಾಂಡಕ್ಕೆ ಇಳಿಯೋಣ. ಕಣ್ಣೆವೆ ಮಿಟುಕಿಸುವಷ್ಟು ವೇಳೆ ಇದಕ್ಕೆ ಸಾಕು.

ನಿಮ್ಮ ಕಣ್ಣೆವೆಯ ಒಂದು ರೋಮವನ್ನು ಕಿತ್ತುಕೊಳ್ಳಿ. ಅದರ ಬುಡವನ್ನು ಒಂದು ಸೂಕ್ಷ್ಮದರ್ಶಕ ಯಂತ್ರದ ಅಡಿಯಲ್ಲಿಟ್ಟು ನೋಡಿ. ನಿಮ್ಮ ನೂರೆಂಟು ಜೀವಂತ ಜೀವಕೋಶಗಳು ರೋಮದ ಬುಡಕ್ಕೆ ಅಂಟಿರುವುದು ಕಾಣುತ್ತದೆ.

ಅದರಲ್ಲಿ ಯಾವುದಾದರೂ ಒಂದು ಜೀವಕೋಶವನ್ನು ಆಯ್ದುಕೊಂಡು ಹೋಳುಮಾಡಿ, ಇನ್ನೂ ಶಕ್ತಿಶಾಲಿ ಸೂಕ್ಷ್ಮದರ್ಶಕ ಯಂತ್ರದೊಳಕ್ಕೆ ಅದನ್ನಿಟ್ಟು ನೋಡಿ.

ಈಗ ಜೀವಕೋಶದ ಹೋಳಿನ ಮಧ್ಯೆ ಒಂದು ನಾಭಿ ಕೇಂದ್ರ ಕಾಣುತ್ತದೆ. ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪುಟ್ಟ ಪುಟ್ಟ ಗುಣಾಕಾರ ಚಿಹ್ನೆಗಳು ಕಾಣುತ್ತವೆ. ಇವಕ್ಕೆ ವರ್ಣತಂತುಗಳು (ಅಥವಾ ಕ್ರೊಮೋಸೋಮ್) ಎನ್ನುತ್ತಾರೆ. ಲೆಕ್ಕ ಮಾಡಿದರೆ ಒಟ್ಟೂ 23 ಜೋಡಿ (ಅಂದರೆ 46) ವರ್ಣತಂತುಗಳು ಕಾಣುತ್ತವೆ. ಇನ್ನೂ ಸ್ವಲ್ಪ ಸಮೀಪದಿಂದ ನೋಡಿದರೆ ಈ ಗುಣಾಕಾರ ಚಿಹ್ನೆಗಳು ಟೊಳ್ಳಾದ ಸಣಕಲು ಬದನೆಕಾಯಿ ಹಾಗೆ ಕಾಣುತ್ತವೆ.

ಸಣಕಲು ಬದನೆಕಾಯಿ ಅಥವಾ ಎಳೆ ಸೋರೆಕಾಯಿಯ ಹಾಗೆ ಕಾಣುವ ಈ ವರ್ಣತಂತುವನ್ನು ಬಿಚ್ಚಬಹುದು. ಸೆಣಬಿನ ಸುರುಳಿ ಬಿಚ್ಚಿದ ಹಾಗೆ ಇದನ್ನೇ ಬಿಚ್ಚುತ್ತ ಹೋದರೆ ಸುಂದರವಾದ ತಿರುವಣಿ ಏಣಿಯ ಹಾಗೆ ಸುರುಳಿಸುರುಳಿಯಾದ ಜೋಡಿ ಎಳೆ ಹೊರಬರುತ್ತದೆ. ನೂಲೇಣಿಯ ಹಾಗೆ ಅಥವಾ ರೈಲ್ವೆ ಹಳಿಯ ಹಾಗೆ ಉದ್ದಕ್ಕೆ ಬಿಚ್ಚುತ್ತ ಹೋಗಬಹುದು.

### ಉದ್ದಕ್ಕೆ ಎಂದರೆ ಎಷ್ಟುದ್ದಕ್ಕೆ?

ಈ ನೂಲೇಣಿಗೆ ಒಟ್ಟು ಸುಮಾರು 350 ಕೋಟಿ ಪಾವಟಿಗೆಗಳಿವೆ. ಈಗ ಅದನ್ನು ರೈಲ್ವೆ ಹಳಿಗಳ ಹಾಗೆ ಉದ್ದ ಮಲಗಿಸೋಣ. ಹಳಿಗಳ ಮಧ್ಯೆಯ ಅಡ್ಡಪಟ್ಟಿಗಳು ಇರುತ್ತವೆ. ತಾನೆ? ಒಂದೊಂದು ಮೀಟರ್ ದೂರದಲ್ಲಿ ಒಂದೊಂದು ಅಡ್ಡಪಟ್ಟಿ ಇದೆಯೆಂದು ಪರಿಗಣಿಸಿದರೆ ಸುರುಳಿಯನ್ನು ಎಳೆಯುತ್ತ ಇಡೀ ಭೂಮಿಯನ್ನು ಸುಮಾರು ಒಂದುನೂರು ಬಾರಿ ಸುತ್ತು ಹಾಕಿಸಬಹುದು, ರೈಲ್ವೆ ಹಳಿ ಹಾಸಿದ ಹಾಗೆ.

ಇದನ್ನು ಅಳೆಯಲು ವಿಜ್ಞಾನಿಗಳು ಹೊರಟಿದ್ದಾರೆ. ಅಳೆಯುವುದೆಂದರೆ ಕೇವಲ ಉದ್ದ ಅಳೆಯುವುದಲ್ಲ; ಹಿಂದಿನ ಕಾಲದ ಶಾನುಬೋಗರು ಜಮೀನು, ಮನೆ, ಹಳ್ಳ, ಹಾದಿ ಮೋಜಣಿ ಮಾಡಿಸಿದ ಹಾಗೆ ಈ ವರ್ಣತಂತುವಿನಲ್ಲಿ ಎಲ್ಲಿ ಏನೇನಿದೆ ಅದರ ಚಹರೆ ಏನೇನು ಎಂಬುದನ್ನು ವಿವರಿಸುವ ನಕ್ಷೆ ತಯಾರಿಸುವುದು; ಮನುಷ್ಯ ಜೀವಕೋಶದ ಈ ಬ್ರಹ್ಮಸೂತ್ರವನ್ನು ಅಳೆಯುವ ಕೆಲಸಕ್ಕೆ **'ಹ್ಯೂಮನ್ ಜೆನೋಮ್ ಮ್ಯಾಪಿಂಗ್'** ಎನ್ನುತ್ತಾರೆ.

ಇದು ಮಹಾ ಮೋಜಣಿ. ಏಕೆಂದರೆ ಒಬ್ಬನೇ ವ್ಯಕ್ತಿ ಇದನ್ನು ಅಳೆಯಲು ಹೊರಟರೆ ಹಗಲೂ ರಾತ್ರಿ ಕೆಲಸ ಮಾಡುತ್ತ ಮೂವತ್ತು ಸಾವಿರ ವರ್ಷಗಳು ಕಳೆದರೂ ಎಲ್ಲ 350 ಕೋಟಿ ಪಾವಟಿಗೆಗಳ ವಿವರ ಪಡೆಯುವುದು ಸಾಧ್ಯವಿಲ್ಲ. ಒಂದು ಸಾವಿರ ಕೆಲಸಗಾರರಿರುವ ದೊಡ್ಡದೊಂದು ಪ್ರಯೋಗ ಶಾಲೆಯಲ್ಲಿ ಪ್ರತಿ ದಿನವೂ 30 ಸಾವಿರ ಪಾವಟಿಗೆಗಳ ನಕ್ಷೆ ಬರೆಯುತ್ತ ಹೋದರೆ ಅವರೆಲ್ಲ ಒಂದು ಲಕ್ಷ ದಿನಗಳ ಕಾಲ (275ವರ್ಷ) ದುಡಿಯಬೇಕು. ನಮ್ಮ ತಲೆಮಾರಿನಲ್ಲೇ, ಅಂದರೆ ಮುಂದಿನ ಹತ್ತು ಹದಿನೈದು ವರ್ಷಗಳಲ್ಲೇ ನಮಗೆ ಈ ಬ್ರಹ್ಮಸೂತ್ರದ ಸ್ಪಷ್ಟ ಚಿತ್ರ ಸಿಗಬೇಕೆಂದರೆ ಅದನ್ನು ಸಾವಿರ ತುಂಡುಗಳನ್ನಾಗಿ ಮಾಡಿ, ವಿವಿಧ ದೇಶಗಳ ನೂರಿನ್ನೂರು ಪ್ರಯೋಗ ಶಾಲೆಗಳಿಗೆ ಹಂಚಿ ಅತ್ಯಾಧುನಿಕ, ಅತಿ ಶೀಘ್ರ ಕೆಲಸ ಮಾಡಬಲ್ಲ ಸಲಕರಣೆ ಹಾಗೂ ತಜ್ಞರನ್ನು ಒದಗಿಸಿ ಏಕಕಾಲದಲ್ಲಿ ಮೋಜಣಿ ಮಾಡುವುದು.

ಸಾವಿರ ತುಂಡುಗಳನ್ನಾಗಿ ಮಾಡಿ ಹಂಚುವುದು ಏನನ್ನ? ಭೂಮಿಯನ್ನು ನೂರು ಬಾರಿ ಸುತ್ತುವಷ್ಟು ಉದ್ದದ ರೈಲು ಹಳಿಯನ್ನಲ್ಲ.

ಸೂಜಿಯ ಚೂಪು ತುದಿಗೂ ಸಿಕ್ಕಲಾರದಷ್ಟು ಸೂಕ್ಷ್ಮವಾದ ಜೀವಕೋಶದಲ್ಲಿ ಹುದುಗಿರುವ ವರ್ಣತಂತುವಿನ ಸುರುಳಿಯನ್ನ.

ಮತ್ತೊಮ್ಮೆ ಈ ಸುರುಳಿಯನ್ನು ಬಿಚ್ಚಿ ನೋಡೋಣ. ಅಂದ ಹಾಗೆ ನೀವು ಮತ್ತೊಮ್ಮೆ ಕಣ್ಣಿನ ರೆಪ್ಪೆಯ ರೋಮವನ್ನೇ ಕೀಳಬೇಕಾಗಿಲ್ಲ. ನಮ್ಮ ಈ ಇಡೀ ಶರೀರದಲ್ಲಿ ಒಟ್ಟು ಸುಮಾರು ಒಂದು ಸಾವಿರ ಲಕ್ಷ ಕೋಟಿ ಜೀವಕೋಶಗಳು ಇವೆ. 1ರ ಮುಂದೆ 15 ಸೊನ್ನೆ ಇಟ್ಟಷ್ಟು ಜೀವಕೋಶಗಳು. ಒಂದೊಂದು ಕೋಶದಲ್ಲೂ ಬ್ರಹ್ಮಸೂತ್ರಗಳ 46 ಸುರುಳಿ ಇವೆ. ಸೊಳ್ಳೆ ಕಚ್ಚಿತೆಂದು ಗೀರಿಕೊಂಡಾಗ ಒಸರುವ ತುಸು ರಕ್ತದಲ್ಲಿ ಸಾವಿರಾರು ಜೀವಕೋಶ ಇರುತ್ತವೆ. ಒಂದು ಹನಿ ಮೂತ್ರದಲ್ಲಿ ಒಂದೈದಾರುನೂರು

ಕೋಶಗಳು ಸೋರಿ ಹೋಗಬಹುದು. ಸ್ನಾನ ಮಾಡಿ ಮೈ ಒರೆಸಿಕೊಂಡಾಗ ಒಂದೈವತ್ತು ಲಕ್ಷ ಒಣಕೋಶಗಳು ಟವಲಿಗೆ ಅಂಟಿಕೊಳ್ಳಬಹುದು. ಟವೆಲಿನ ಉದ್ದಗಲಕ್ಕೂ ನಜ್ಜುಗುಜ್ಜಾದ ಕೋಟಿಗಟ್ಟಲೆ ಬ್ರಹ್ಮಸೂತ್ರಗಳ ಚಿತ್ತಾರ ಮೂಡಬಹುದು.

ಈ ವರ್ಣತಂತುಗಳನ್ನು ರೈಲ್ವೆ ಹಳಿಗೆ ಹೋಲಿಸಿದೆವಷ್ಟೆ? ಈ ಹಳಿಗಳಿಗೆ ನಾಲ್ಕು ಬಗೆ ಅಡ್ಡಪಟ್ಟಿಗಳಿವೆ. ಒಂದು ಅಲ್ಯೂಮಿನಿಯಂ ಲೋಹದ್ದು ಎಂದು ಊಹಿಸಿಕೊಂಡರೆ, ಇನ್ನೊಂದು ತಾಮ್ರದ ಪಟ್ಟಿ, ಮತ್ತೊಂದು ಕಾಂಕ್ರೀಟಿನದು. ಮಗದೊಂದು ಗೊಬ್ಬಳಿ ಮರದ್ದು, ಇಂಗ್ಲಿಷಿನಲ್ಲಿ ಈ ಅಡ್ಡಪಟ್ಟಿಗಳನ್ನು A.T.C.G. ಅಕ್ಷರಗಳಿಂದ ಗುರುತಿಸುತ್ತಾರೆ (ಅಡಿನೈನ್, ಥೈಮೈನ್, ಸೈಟೊಸೈನ್, ಗುವನೈನ್ ಎಂಬ ನಾಲ್ಕು ರಸಾಯನಗಳ ಸೂತ್ರ ಇದು.) ಈ ನಾಲ್ಕೇ ಅಕ್ಷರಗಳನ್ನು ವಿವಿಧ ಕ್ರಮಗಳಲ್ಲಿ ಜೋಡಿಸಿ ನಮ್ಮ ಬ್ರಹ್ಮಲಿಪಿಯ ನಿಘಂಟು ಸಿದ್ಧವಾಗಿದೆ. 'ನಮ್ಮ' ಅಂದರೆ ನಾವು, ನೀವು, ಕೋತಿ, ಕುದುರೆ, ಹುಲ್ಲು, ಹುಳ, ಹುಪ್ಪಡಿ, ಹಾವಸೆ ಹಾಗೂ ನಮ್ಮ ಹೊಟ್ಟೆಯಲ್ಲಿರುವ ಏಕಾಣು ಜೀವಿಗಳ ಹೊಟ್ಟೆಯಲ್ಲೂ ಇವೇ ನಾಲ್ಕು ಅಕ್ಷರಗಳ ಬ್ರಹ್ಮಸೂತ್ರ ಇದೆ. ಏಕಾಣು ಜೀವಿಯ ವರ್ಣತಂತುವಿನ ಸುರುಳಿಯಲ್ಲಿ 40 ಲಕ್ಷ ಅಡ್ಡಪಟ್ಟಿ (ಅಕ್ಷರ) ಇರುತ್ತವಾದರೆ, ಸಸ್ಯ ಹಾಗೂ ಪ್ರಾಣಿಗಳಲ್ಲಿ ಇನ್ನೂ ಹೆಚ್ಚು ಕ್ಲಿಷ್ಟವಾದ ಭಾಷೆಯ ಕೋಟಿಗಟ್ಟಲೆ ಅಕ್ಷರ ಇರುತ್ತವೆ. ಮನುಷ್ಯ ಶರೀರದ ಜೀವಕೋಶಗಳಲ್ಲಿ 350 ಕೋಟಿ.

ಇದಕ್ಕೆ ಬ್ರಹ್ಮಸೂತ್ರ ಎನ್ನಲು ಕಾರಣ ಏನೆಂದರೆ ಇದರಲ್ಲಿ ನಮ್ಮ ಜೀವದ ಸಕಲ ರಹಸ್ಯಗಳೂ ಅಡಕವಾಗಿವೆ. ನಮ್ಮದಷ್ಟೇ ಅಲ್ಲ, ನಮ್ಮ ಮಕ್ಕಳ, ಮರಿಮಕ್ಕಳ, ತಾತ ಮುತ್ತಾತ ಮುತ್ತಜ್ಜಿಯವರು ಅಷ್ಟೇ ಅಲ್ಲ ಇಡೀ ಮಾನವ ಕುಲದ ಸೃಷ್ಟಿ ಸೂತ್ರ ಇದರಲ್ಲಿದೆ. ವಿಜ್ಞಾನ ತೀರಾ ಮುಂದುವರೆದರೆ, ನಮ್ಮ ಕಣ್ಣುರೆಪ್ಪೆಯ ರೋಮದ ಬುಡಕ್ಕೆ ಅಂಟಿಕೊಂಡ ನೂರಾರು ಜೀವಕೋಶಗಳ ಪೈಕಿ ಒಂದನ್ನೇ ಎತ್ತಿಕೊಂಡು ನಮ್ಮ ತದ್ರೂಪ ವ್ಯಕ್ತಿಗಳನ್ನು ತಯಾರಿಸಬಹುದು. ವಿಜ್ಞಾನ ಇನ್ನೂ ಮುಂದುವರೆದರೆ ಅದೊಂದು ಜೀವಕೋಶದ ಬ್ರಹ್ಮಸೂತ್ರವನ್ನು ಕತ್ತರಿಸಿ ಬಾಗಿಸಿ, ಜೋಡಿಸಿ ನಿಮ್ಮ ದೇಹದಿಂದ ಇಲಿ, ಹುಲಿ, ಕುಂಬಳ ಬಳ್ಳಿ ಮಿಂಚುಳ್ಳಿಗಳನ್ನೂ ಸೃಷ್ಟಿಸಬಹುದು. ಅವನ್ನೆಲ್ಲ ಮಾಡುವ ವಿಜ್ಞಾನಿ ತನ್ನದೇ ತಲೆಗೆ ಕೋಡುಮೂಡಿಸಿಕೊಳ್ಳಬಹುದು.

ವಾಸ್ತವಕ್ಕೆ ಬರೋಣ. ಮಾನವ ಜೀವಕೋಶದ ವರ್ಣತಂತುವಿನಲ್ಲಿ ಅಡಕವಾದ ಎಲ್ಲ ರಹಸ್ಯಗಳನ್ನೂ ಹೊರಕ್ಕೆ ಎಳೆಯವುದು ಅಸಂಭವ ಎಂದೇ ಹತ್ತು ವರ್ಷಗಳ ಹಿಂದೆ ಪರಿಗಣಿಸಲಾಗಿತ್ತು. ಕ್ರಮೇಣ ಇಲಿ, ಮೊಲ, ಕುರಿ, ಹೋರಿ, ಬಟಾಣಿ, ಬತ್ತ ಮುಂತಾದ ಜೀವಿಗಳ ವಂಶವಾಹಿ ವರ್ಣತಂತುಗಳನ್ನು ಕತ್ತರಿಸಿ ಹೊಲಿದು, ಕುಲಾಂತರಿ ತಳಿಗಳನ್ನು ಸೃಷ್ಟಿಸುತ್ತ ಮನುಷ್ಯರ ತಳಿ ಸೂತ್ರದಲ್ಲೂ ವಿಜ್ಞಾನಿಗಳು ಕೈಯಾಡಿಸಿದರು. ವಂಶಾರಭ್ಯ ರಕ್ತಗುಣದಲ್ಲೇ ಬಂದ ವಿಚಿತ್ರ ಕಾಯಿಲೆಗಳಿರುವ ರೋಗಿಗಳ ರಕ್ತ ಪರೀಕ್ಷೆ ಮಾಡಿ, ಅಂಥವರ ರೈಲು ಹಳಿ ಎಲ್ಲಿ ತಿರುಚಿಕೊಂಡಿದೆ ಎನ್ನುವುದನ್ನು ಪತ್ತೆ ಹಚ್ಚಿದರು. ಅದನ್ನು ಸರಿಪಡಿಸುವ ಯತ್ನಕ್ಕೆ ಕೈ ಹಾಕಿದರು.

ಅಂಥನೊಬ್ಬ ಅಕ್ಕಿ ರಾಶಿಯಲ್ಲಿ ಕೈಯಾಡಿಸಿ ಒಂದು ಬತ್ತವನ್ನು ಹೆಕ್ಕಿಬಿಡಬಹುದು. ಅದೇ ರೀತಿ ನಮ್ಮ ವಂಶವಾಹಿಯ ಅತ್ಯಂತ ಅಪರೂಪದ ದೋಷಗಳನ್ನು ಸರಿ ಮಾಡುವುದು ಒಂದಾರು ತಿಂಗಳಲ್ಲೇ ಸಾಧ್ಯವಾದೀತು. ಉದಾಹರಣೆಗೆ ಮೈಸೂರು–ಕೊಳ್ಳೇಗಾಲದ ಕಾಡುಗಳಲ್ಲಿ ವಾಸಿಸುವ ಸೋಲಿಗರ ಬುಡಕಟ್ಟು ಜನಾಂಗದಲ್ಲಿ ವಂಶಪಾರಂಪರ್ಯವಾಗಿ ಕೊಕ್ಕೆ ರೋಗ (ಸಿಕ್ಲ್‌ಸೆಲ್ ಅನೀಮಿಯಾ) ಕಾಣಿಸಿಕೊಳ್ಳುತ್ತದೆ. ಎಲ್ಲರಿಗೂ ಅಲ್ಲ, ಮುತ್ತಜ್ಜನಿಗೆ ಬಂದದ್ದು ಮರಿಮಗಳಲ್ಲಿ ಕಾಣಿಸಿಕೊಳ್ಳಬಹುದು. ಆ ಜನಾಂಗದ ಅರ್ಧದಷ್ಟು ಮಂದಿಗೆ ವರ್ಣತಂತುವಿನ ರೈಲು ಹಳಿಯ 350 ಕೋಟಿ ಅಡ್ಡಪಟ್ಟಿಗಳಲ್ಲಿ ಒಂದು ಪಟ್ಟಿ ಮಾತ್ರ ಸೊಟ್ಟಗಾಗಿದೆ. ಹುಟ್ಟಲಿರುವ ಮಗು ಗರ್ಭದಲ್ಲಿದ್ದಾಗಲೇ ಅದರ ವಂಶವಾಹಿಯಲ್ಲಿ ತಾಯಿಯ ಗುಣ ಬಂತೋ, ತಂದೆಯದೋ ಎಂದು ನೋಡಿ, ತಾಯಿಗೆ ರೋಗವಿದ್ದರೆ ತಾಯಿ ಗುಣ ಪ್ರಬಲವಾಗಿರುವ ಗರ್ಭ ತಡೆಗಟ್ಟಿ ಇನ್ನೊಮ್ಮೆ ಗರ್ಭಧರಿಸಲು ಹೇಳಬಹುದು. ತಂದೆಯ (ನಿರೋಗಿ) ವಂಶಗುಣವಿದ್ದ ಮಗುವನ್ನೇ ಹೆರಲು ಹೇಳಬಹುದು.

ಆದರೆ ವಿಜ್ಞಾನಿಗಳಿಗೆ ಅಷ್ಟಕ್ಕೇ ತೃಪ್ತಿ ಇಲ್ಲ. ಅವರಿಗೆ ವಂಶವಾಹಿಯ ಇಡೀ ಚಿತ್ರ ಬೇಕು. ಕೊಕ್ಕೆರೋಗ ತರಿಸುವ ಅಡ್ಡಪಟ್ಟಿ ಎಲ್ಲಿದೆ? ತಲೆ ಕೂದಲಿನ ಬಣ್ಣವನ್ನು ನಿರ್ಧರಿಸುವ ಸೂತ್ರ ಎಲ್ಲಿದೆ? ತಲೆ ಕೂದಲಿನ ಆಯಸ್ಸನ್ನು (ಬಕ್ಕ ತಲೆಯವರ ಹಣೆಬರಹವನ್ನು) ನಿರ್ಧರಿಸುವ ಸೂತ್ರ ಎಲ್ಲಿದೆ? ಬೊಜ್ಜನ್ನು ನಿಯಂತ್ರಿಸುವ ಸೂತ್ರ ಎಲ್ಲಿದೆ? ಉದ್ವೇಗವನ್ನು, ಕೀಳರಿಮೆಯನ್ನು, ಖಿನ್ನತೆಯನ್ನು ನಿರ್ಧರಿಸುವ ಅಡ್ಡಪಟ್ಟಿಗಳು ಎಲ್ಲಿವೆ? ಎತ್ತರವನ್ನು, ದೀರ್ಘಾಯುಸ್ಸನ್ನು, ತರ್ಕಶಕ್ತಿಯನ್ನು, ಮೈಬಣ್ಣವನ್ನು, ನೃತ್ಯ ಕಲೆ ಸಂಗೀತಗಳ ಅಭಿರುಚಿಯನ್ನು ನಿರ್ಧರಿಸುವ ತಾಣ ಈ ಬ್ರಹ್ಮಸೂತ್ರದಲ್ಲಿ ಎಲ್ಲೆಲ್ಲಿವೆ?

ಅವೆಲ್ಲವುಗಳ ಸಮಗ್ರ ಚಿತ್ರ ಸಿಕ್ಕ ಮೇಲೆ, ಸೂಪರ್‌ಮ್ಯಾನ್‌ಗಳನ್ನು ಸೃಷ್ಟಿ ಮಾಡುವುದು ಕಷ್ಟದ್ದೇನಲ್ಲ. ರೋಗಮುಕ್ತ, ಸರ್ವ ಸಮರ್ಥ ಸ್ಫುರದ್ರೂಪಿ ತಳಿಗಳನ್ನು ಸೃಷ್ಟಿಸುವ ಶಕ್ತಿ ಕೈಗೆಟುಕಿದರೆ?

ವೈಜ್ಞಾನಿಕ ಕತೆಗಳಲ್ಲಿ ಈ ವಿಚಾರಗಳು ಮೂಡುತ್ತಿದ್ದ ಹಾಗೆಯೇ ಅನೇಕ ರಾಷ್ಟ್ರಗಳು – ಜಪಾನ್, ಫ್ರಾನ್ಸ್, ಜರ್ಮನಿ ಹಾಗೂ ಅಮೆರಿಕ ರಹಸ್ಯವಾಗಿ ಮಾನವ ತಳಿ ನಕ್ಷೆ ತಯಾರಿಸುವ ಕಾರ್ಯ ಆರಂಭಿಸಿದವು. ಜಪಾನಿಯರು 9,000 ಕೋಟಿ ರೂಪಾಯಿಗಳ ಇಪ್ಪತ್ತು ವರ್ಷಗಳ 'ಮಹಾ ಮೋಜಣಿ ಯೋಜನೆ' ಆರಂಭಿಸಿದಾಗಲೂ ಕೆಲಸದ ಆಳ ವಿಸ್ತಾರದ ಅರಿವಾಗಲಿಲ್ಲ.

ಈಗ ಪುನಃ ರೈಲು ಹಳಿಯ ಬಳಿ ಬರೋಣ. ಈ ಇಡೀ ವಂಶವಾಹಿ ಸುರುಳಿಗೆ ಡಿಎನ್‌ಎ ಎನ್ನುತ್ತಾರೆ. ಇದರ ಬಹಳಷ್ಟು ಭಾಗ ಸದಾಕಾಲ ನಿಷ್ಕ್ರಿಯವಾಗಿರುತ್ತದೆ. ಸ್ಟೇಷನ್ ಇದ್ದಲ್ಲಿ ಮಾತ್ರ ರೈಲುಪಟ್ಟಿಗಳು ತುಂಬಾ ಚುರುಕು. ಒಂದೊಂದು ಸ್ಟೇಷನ್ ನಮ್ಮ ಜೀವದ ಒಂದೊಂದು ಗುಣವನ್ನೋ, ದೋಷವನ್ನೋ ನಿಯಂತ್ರಣ ಮಾಡುತ್ತವೆ. ಈ ಸ್ಟೇಷನ್ ಬಳಿ ಇರುವಷ್ಟು ಅಡ್ಡಪಟ್ಟಿಗಳಿಗೆ ಜೀನ್ ಎನ್ನುತ್ತಾರೆ. ಕೆಲವು ಜೀನ್‌ಗಳ ಸ್ಟೇಷನ್ ತುಂಬಾ ವಿಸ್ತಾರವಾದದ್ದು. ಕೆಲವು ಚಿಕ್ಕವು.

ಕೆಲವು ಬಾರಿ ಹತ್ತಾರು ಲಕ್ಷ ಅಡ್ಡಪಟ್ಟಿಗಳನ್ನು ದಾಟುತ್ತ ಹೋದರೂ ಒಂದು ಜೀನ್ ಸಿಗುವುದಿಲ್ಲ. ನಸೀಬು ಚೆನ್ನಾಗಿದ್ದರೆ ಒಂದೂವರೆ ಲಕ್ಷ ಅಡ್ಡಪಟ್ಟಿಗಳ ಉದ್ದ ಸ್ಟೇಷನ್ ಸಿಗುತ್ತದೆ. ಆಗ ತುಂಬಾ ಕಾಳಜಿಯಿಂದ ಪ್ರತಿ ಅಡ್ಡಪಟ್ಟಿಯನ್ನು ಗುರುತಿಸಿ ಎಸಿಜಿಟಿಸಿ, ಜಿಎಟಿಸಿಟಿಟಿ ಹೀಗೆ ಯಾವ ಕ್ರಮದಲ್ಲಿ ಬರೆದಿದೆಯೋ ಎಂಬುದನ್ನು ಇಡೀ ಒಂದೂವರೆ ಲಕ್ಷ ಅಕ್ಷರಗಳನ್ನು ಯಥಾಕ್ರಮದಲ್ಲಿ ಬರೆದು ಕಂಪ್ಯೂಟರಿನ ನೆನಪಿನ ಭಂಡಾರಕ್ಕೆ ಸೇರಿಸಬೇಕು. ಅದು ಯಾವುದಾದರೂ ವಿಶೇಷ ಲಕ್ಷಣವುಳ್ಳ (ಉದಾ: ಉದ್ದ ಮೂಗಿನ) ವ್ಯಕ್ತಿಯ ವಂಶವಾಹಿ ಆಗಿದ್ದಿದ್ದರೆ ಅದನ್ನೂ ಬರೆದಿಡಬೇಕು. ಯಾರಿಗೆ ಗೊತ್ತು, ಈ ಒಂದೂವರೆ ಲಕ್ಷ ಅಕ್ಷರಗಳು ಅವನ ಮೂಗನ್ನು ವರ್ಣಿಸಬಹುದು.

ಹಿಂದೆ ಹೇಳಿದಂತೆ ಹತ್ತು ಲ್ಯಾಬ್‌ಗಳಲ್ಲಿ ಮುನ್ನೂರೈವತ್ತು ಮಂದಿ ಇದೇ ಕೆಲಸ ಮಾಡುತ್ತಿದ್ದರೂ ಶತಮಾನದಲ್ಲಿ ಮುಗಿಯುವ ಕೆಲಸ ಇದಲ್ಲ. ರೈಲು ಪಟ್ಟಿಯ ಒಂದೇ ತುಂಡನ್ನು ಹತ್ತಾರು ಕಡೆ ಮೋಜಣಿ ಮಾಡುವ ಡುಪ್ಲಿಕೇಟ್ ಕೆಲಸ ಆಗಕೂಡದು ಬೇರೆ. ಅದರ ಮೇಲೆ ನಿಗಾ ಇಡಲು ಕೇಂದ್ರೀಯ ಕಂಪ್ಯೂಟರ್ ಬೇಕು.

ಜಪಾನ್ ಸುಸ್ತಾಯಿತು. ಇದು ಒಂದೊಂದೇ ದೇಶ ಕೈಗೊಳ್ಳುವ ಕೆಲಸ ಅಲ್ಲವೆಂದು ಅದಕ್ಕೆ ಮನವರಿಕೆಯಾಯಿತು. ಅತ್ತ ಅಮೆರಿಕದಲ್ಲಿ ಡಿಎನ್‌ಎ ಸುರುಳಿಯನ್ನು ಕಚ ಕಚ ಕತ್ತರಿಸಿ ಎಣಿಸುವ ಹೊಸ ಯಂತ್ರಗಳು ಬಂದಿದ್ದವು. ಪಿಸಿಆರ್ ಎಂಬ ಝೆರಾಕ್ಸ್ ಯಂತ್ರದಂಥ ಹೊಸ ಸಾಧನದಿಂದ ದಿನಕ್ಕೆ ಹತ್ತು ಲಕ್ಷ ಅಡ್ಡಪಟ್ಟಿಗಳನ್ನು ಗುರುತಿಸಿ ಪಟ್ಟಿ ಮಾಡುವ ಸಾಮರ್ಥ್ಯ ಬಂತು. ಅಮೆರಿಕ ಮತ್ತು ಯುರೋಪಿಯನ್ ದೇಶಗಳೂ ನಮ್ಮ ಜತೆ ಸೇರಿದರೆ ನಾವು ಅರ್ಧ ವೆಚ್ಚ ನೀಡುತ್ತೇವೆ ಎಂದು ಜಪಾನ್ ಹೇಳಿತು.

ಅಮೆರಿಕ ಜಪ್ಪೆನ್ನಲಿಲ್ಲ. ಇನ್ನು ಹದಿನೈದು ವರ್ಷಗಳಲ್ಲಿ ಐದು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ತಾನೇ ಮಾನವನ ಸಂಪೂರ್ಣ ತಳಿ ನಕ್ಷೆ ತಯಾರಿಸಲು ಯೋಜನೆ ಹಾಕಿತು. ಹಿಂದೆ ಮೊಟ್ಟಮೊದಲ ಅಣುಬಾಂಬ್ ತಯಾರಿಸಲು ಅಮೆರಿಕದ ಎಲ್ಲ ಪ್ರತಿಭಾವಂತರನ್ನೂ ಒಂದೆಡೆ ಕಲೆಹಾಕಿ, ಮ್ಯಾನ್‌ಹಾಟನ್ ಯೋಜನೆ ಹಾಕಿದ ಹಾಗೆ ಈ ಬಾರಿಯೂ ಹಾಕಿತು. ಅಮೆರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಈ ಕೆಲಸಕ್ಕೆ ಅಣುಶಕ್ತಿ ಇಲಾಖೆ ಹಾಗೂ ಶಸ್ತ್ರಾಸ್ತ್ರ ತಯಾರಿಸುವ ರಕ್ಷಣಾ ಇಲಾಖೆಗಳನ್ನೂ ಸೇರಿಸಿಕೊಂಡಿತು. ಶೀಘ್ರ ಡಿಎನ್‌ಎ ಸುರುಳಿ ಬಿಚ್ಚಬಲ್ಲ ಒಂದೊಂದು 15 ಲಕ್ಷ ರೂಪಾಯಿ ಬೆಲೆಯ 500 ಯಂತ್ರಗಳನ್ನು ನಿರ್ಮಿಸಿ ವಿವಿಧ ಲ್ಯಾಬ್‌ಗಳಿಗೆ ನೀಡಿ ಅವುಗಳಿಂದ ರೈಲುಪಟ್ಟಿಗಳ ಗುಣ ಲಕ್ಷಣ ಮಾಹಿತಿ ಖರೀದಿಸಲು ನಿರ್ಧರಿಸಿತು.

ಅಲ್ಲಿ ಅಷ್ಟಾದದ್ದೇ ತಡ, ಯುರೋಪ್‌ನ ಅನೇಕ ರಾಷ್ಟ್ರಗಳಲ್ಲಿ ತಳಿ ತಂತ್ರವಿಜ್ಞಾನಿಗಳು ಚುರುಕಾದರು. ಶಾಸಕರನ್ನು, ಸಚಿವರನ್ನು ಕರೆದು ಗುಟ್ಟಾಗಿ ರಾಷ್ಟ್ರಪ್ರತಿಷ್ಠೆಯ ಮಾತು ಹೇಳಿದರು. ಚಂದ್ರನ ಮೇಲೆ ಕಾಲೂರಿದ್ದು, ಅಂಟಾರ್ಕ್ಟಿಕಾ ಖಂಡಕ್ಕೆ ಲಗ್ಗೆ ಹಾಕಿದ್ದು, ಸೂಪರ್‌ಕಂಡಕ್ಟರ್ ಶೋಧ ಮಾಡಿದ್ದು, ಇವೆಲ್ಲಕ್ಕಿಂತ ಹೆಚ್ಚಿನ

ಮಹತ್ವದ್ದು 'ತಳಿ ನಕ್ಷೆ' ಎಂದರು. 'ನಾವೂ ಸ್ಪರ್ಧೆಗೆ ಇಳಿಯೋಣ ಹಣ ಕೊಡಿ' ಎಂದರು. ಫ್ರಾನ್ಸ್, ಪಶ್ಚಿಮ ಜರ್ಮನಿ, ಸ್ವೀಡನ್‌ಗಳಲ್ಲಿ ಔಷಧ ಕಂಪನಿಗಳ ಖಾಸಗಿ ವಿಜ್ಞಾನಿಗಳು ಆಗಲೇ ವಿವಿಧ ರೋಗಗಳಿಗೆ ಕಾರಣವಾಗುವ ಜೀನ್‌ಗಳನ್ನು ಪತ್ತೆ ಮಾಡಿದ್ದರು. ತಮ್ಮ ಕೆಲಸಕ್ಕೆ ಬೇಕಾದ ಹೊಸ ಹೊಸ ಯಂತ್ರಗಳನ್ನು ಶೋಧ ಮಾಡಿದ್ದರು. ಯುರೋಪಿಯನ್ ಸಮುದಾಯದ ಎಲ್ಲ ರಾಷ್ಟ್ರಗಳೂ ಒಂದಾಗಿ ಬೂಷ್ಟಿನ ಒಂದು ಪುಟ್ಟ ವರ್ಣತಂತುವಿನ ಶೋಧದ ಕಾರ್ಯಯೋಜನೆ ಹಾಕಿಕೊಂಡಿದ್ದವು. ಅದೆಲ್ಲಕ್ಕಿಂತ ಮನುಷ್ಯರ ತಳಿ ಶೋಧ ಮುಖ್ಯವೆಂದು ತೀರ್ಮಾನಿಸಿ ಒಟ್ಟಾಗಿ ಧುಮುಕಿದವು.

ಇತ್ತ ಬ್ರಿಟನ್‌ನ ಸಂಸತ್ತಿನಲ್ಲಿ ಕೋಲಾಹಲ ಉಂಟಾಯಿತು. ಯುರೋಪ್ ಸಮುದಾಯಕ್ಕೆ ಸೇರಿದ್ದರೂ ಬ್ರಿಟೀಷರಿಗೆ ತಮ್ಮದೇ ಪ್ರತಿಷ್ಠೆ ಕಾಯ್ದುಕೊಳ್ಳುವ ತವಕ. ಆದರೆ ಥ್ಯಾಚರ್ ಖಜಾನೆ ಖಾಲಿ. ಬರೀ 27 ಕೋಟಿ ರೂಪಾಯಿಗಳಷ್ಟು ಹಣ ಸಿಕ್ಕೀತೆಂದು ಆಕೆ ಹೇಳಿದರು. ಬ್ರಿಟೀಷ್ ವಿಜ್ಞಾನಿಗಳಿಗೆ ಕೋಪ ಬಂತು. ನಾವು ಲ್ಯಾಬ್‌ನಲ್ಲಿ ಏನೆಲ್ಲ ಸಾಧಿಸಿದ್ದೇವೆ. ಮಸ್ಕುಲರ್ ಡೈಸ್ಟ್ರೋಫಿ ಎಂಬರೋಗಕ್ಕೆ ಕಾರಣವಾದ ಜೀನ್ ಯಾವುದೆಂದು ಪತ್ತೆ ಮಾಡಿದ್ದೇವೆ. ಆ ಜೀನ್‌ನಲ್ಲಿ ಇರುವ 23 ಲಕ್ಷ ಅಡ್ಡಪಟ್ಟಿಗಳ ಅನುಕ್ರಮ ಪಟ್ಟಿ ಮಾಡಿದ್ದೇವೆ ಎಂದರು. ಬ್ರಿಟೀಷ್ ಪ್ರಧಾನಿ ಸ್ವತಃ ತಳಿ ತಂತ್ರಜ್ಞಾನದ ಶೈವಕಾಲದಲ್ಲಿ ಪ್ರಯೋಗ ಶಾಲೆಯಲ್ಲಿ ಕೆಲಸ ಮಾಡಿದವರು. ಎಲ್ಲ ಜೀನ್‌ಗಳ ನಕ್ಷೆ ತಯಾರಿಸುವುದು ಬೇಡ. ರೋಗಕ್ಕೆ ಕಾರಣವಾಗುವ ಹಾಗೂ ವ್ಯಾಪಾರೀ ಲಾಭ ಸಿಗುವ ಜೀನ್‌ಗಳ ಪಟ್ಟಿ ಮಾತ್ರ ಮಾಡುತ್ತಿರಿ ಎಂದರು. ಒಟ್ಟು ಬ್ರಹ್ಮಸೂತ್ರದ ಶೇಕಡಾ 3 ರಷ್ಟು ಭಾಗದಲ್ಲಿ ಮಾತ್ರ ಇಂಥ ಜೀನ್ ಇವೆ. ಇವುಗಳ ಗುಟ್ಟು ಗೊತ್ತಾದರೆ ಮನುಷ್ಯರ ಆರೋಗ್ಯದ ಜುಟ್ಟು ಸಿಕ್ಕಂತೆಯೇ. ಬ್ರಿಟೀಷ್ ವಿಜ್ಞಾನಿಗಳು ಒಪ್ಪಿದರು.

ಇತ್ತ ಭಾರತದಂಥ ಅಭಿವೃದ್ಧಿಶೀಲ ದೇಶಕ್ಕೂ ಈ ಪ್ರತಿಷ್ಠಿತ ಕ್ಷೇತ್ರದಲ್ಲಿ ಪಾಲು ಬೇಕಿತ್ತು. ಅಂಟಾರ್ಕ್ಟಿಕಾದಲ್ಲಿ ನಾವೂ ಒಂದು ಚೂರು ಜಮೀನನ್ನು ಆಕ್ರಮಿಸಿದ ಹಾಗೆ ಮಾನವ ತಳಿಸೂತ್ರದ ಶೋಧದಲ್ಲೂ ಒಂದು ಪಾಲು ಕೇಳೋಣವೆ?

'ಬೇಡ' ಎಂದರು ಹೈದರಾಬಾದ್‌ನ ತಳಿಶೋಧ ಸಂಸ್ಥೆಯ ವಿಜ್ಞಾನಿಗಳು. ಮನುಷ್ಯರ ತಳಿಸೂತ್ರ ಅಳೆಯಲು ಹಣ ಸುರಿಯುವ ಬದಲು, ನಮಗೆ ಕಿರುಕುಳ ಕೊಡುವ ರೋಗಾಣುಗಳ ಬ್ರಹ್ಮಸೂತ್ರದ ಭಾಷ್ಯ ಬರೆಯೋಣ ಎಂದರು. ಮಲೇರಿಯಾ ವೈರಾಣುವಿನ ಜೀನ್‌ಗಳ ಪರೀಕ್ಷೆ ಮಾಡಿ ಅದರ ಒಂದು ಹಲ್ಲು ಕಿತ್ತರೆ ಸಾಕಲ್ಲ – ಇಡೀ ಜಗತ್ತಿನ ಮಲೇರಿಯಾ ಔಷಧಗಳ ಭಾರೀ ಮಾರುಕಟ್ಟೆಯ ಅಧಿಪತಿ ನಾವಾಗಲು ಸಾಧ್ಯ.

ಅದೂ ಸುಲಭದ ಕೆಲಸವಲ್ಲ. ಈವರೆಗೆ ಸೈಟೊಮೆಗಾಲೊ ವೈರಸ್ ಎಂಬ ಒಂದು ರೋಗಾಣುವಿನ ಒಡೋ 250000 ಅಡ್ಡಪಟ್ಟಿಗಳ ನಕ್ಷೆ ಮಾತ್ರ ತಯಾರಾಗಿದೆ. ಅದನ್ನೂ ನಾವು ಮಾಡಿಲ್ಲ, ನಮಗೆ ಬೇಕಾದ ಅತ್ಯಾಧುನಿಕ ಸಾಧನ ಸಲಕರಣೆಯನ್ನು ಸುಧಾರಿತ ದೇಶಗಳು ಸುಲಭವಾಗಿ ಕೊಡುವುದಿಲ್ಲ.

ಜಪಾನ್, ಅಮೆರಿಕಾ, ಕೆನಡಾ ಹಾಗೂ ಐರೋಪ್ಯ ರಾಷ್ಟ್ರಗಳು ಇದೀಗ ಒಂದು ಬಗೆಯ ಒಪ್ಪಂದಕ್ಕೆ ಬಂದಿವೆ. ಮನುಷ್ಯನ ಬ್ರಹ್ಮಸೂತ್ರವನ್ನು ಎಲ್ಲರೂ ಒಟ್ಟಾಗಿ ಮೋಜಣಿ ಮಾಡುವ ಮೇಲ್ನೋಟದ ಒಪ್ಪಂದ ಇದು. ಯಾರಿಗೂ, ಯಾರ ಮೇಲೂ ಪೂರ್ತಿ ವಿಶ್ವಾಸ ಇಲ್ಲ. ಅಪರೂಪದ ತಳಿಗುಣಗಳ ರಹಸ್ಯವನ್ನು ಪ್ರತಿ ರಾಷ್ಟ್ರವೂ ತನ್ನಲ್ಲೇ ಬಚ್ಚಿಟ್ಟುಕೊಳ್ಳಲು ಬಯಸುತ್ತದೆ. ಅಂಥದ್ದನ್ನು ಪತ್ತೆ ಮಾಡಿದ ಪ್ರತಿ ವಿಜ್ಞಾನಿಯೂ ತನ್ನ ಶೋಧಕ್ಕೆ ಪ್ರತಿಫಲ ಬೇಡುತ್ತಾನೆ. ಇವೆಲ್ಲ ಗಡಬುಗಳ ಮಧ್ಯೆಯೂ ಮಾನವ ತಳಿನಕ್ಷೆಯ ದಾಖಲೆಗೆಂದೇ ಪ್ರತ್ಯೇಕ ಕಂಪ್ಯೂಟರ್ ಜಾಲ ಇದೀಗ ಸಜ್ಜಾಗಿದೆ. ಟೋಕಿಯೊ, ಅಮಸ್ಟರ್ಡಾಂ, ಕಾರ್ನ್‌ವೆಲ್, ಕೇಂಬ್ರಿಜ್, ಷಿಕ್ಯಾಗೋ, ಟೊರೊಂಟೊ ಎಲ್ಲ ಕಡೆ ದಿನ ದಿನವೂ ಪತ್ತೆಯಾಗುತ್ತಿರುವ ಮಾನವ ಬ್ರಹ್ಮಸೂತ್ರದ ತುಣುಕುಗಳು ಮಹಾ ಕಂಪ್ಯೂಟರಿನ ನರಕೇಂದ್ರದಲ್ಲಿ ಸೇರುತ್ತವೆ. ಒಟ್ಟು ಸುಮಾರು ಮೂರೂವರೆ ಸಾವಿರ ಕಂಪ್ಯೂಟರ್‌ಗಳು ಪರಸ್ಪರ ತಂತಮ್ಮಲ್ಲೇ ಸಂಭಾಷಿಸಿ ಮಾಹಿತಿಯ ಸರಮಾಲೆ ಪೋಣಿಸಲು ಸಜ್ಜಾಗಿವೆ. ಮನುಷ್ಯ ಮನುಷ್ಯನ ಮಧ್ಯೆ ವಿಶ್ವಾಸ ಕುಂದಿದ ಮೇಲೆ, ಮನುಷ್ಯನ ಗುಣ ಸ್ವಭಾವ ತಿಳಿಸುವ ತಳಿಸೂತ್ರಗಳೆಲ್ಲ ಯಂತ್ರದ ನರವ್ಯೂಹದ ಮೂಲಕ ವ್ಯಕ್ತವಾಗುತ್ತಿದೆ.

ಈ ವಿಪರ್ಯಾಸ ಸಾಲದೆಂದು ಇಡೀ ತಳಿನಕ್ಷೆ ಯೋಜನೆಯೇ ಅನೈತಿಕವೆಂದೂ ಅದನ್ನು ಕೈಬಿಡಬೇಕೆಂದೂ ವಾದಿಸುವ ಜನರು ಅಮೆರಿಕದಲ್ಲಿ ಬೀದಿ ಮೆರವಣಿಗೆ ಮಾಡುತ್ತಿದ್ದಾರೆ. ತಳಿನಕ್ಷೆ ತಯಾರಾದ ಮೇಲೆ ನಮ್ಮ ನಮ್ಮ ಅಯೋಗ್ಯತೆ ನಿರ್ಣಯಿಸುವ ಹೊಸ ಅಳತೆಗೋಲು ಬರುತ್ತದೆ. ಒಂದು ಹನಿ ರಕ್ತ ಪರೀಕ್ಷೆ ಮಾಡಿ ಯಾರು ಮೇಲು, ಯಾರು ಕೀಳೆಂಬುದನ್ನು ನಿರ್ಧರಿಸುವ ಹೊಸ ವರ್ಣ(ತಂತು) ಭೇದ ನೀತಿ ಬರುತ್ತದೆ. ಬೇಡವೇ ಬೇಡ, ನಮ್ಮ ಜನ್ಮದ ರಹಸ್ಯ ನಮ್ಮಲ್ಲೇ ಇರಲಿ ಇಂದು ಪ್ರತಿಭಟನೆ ನಡೆಯತೊಡಗಿದೆ.

ವಿವಾದ ಹೇಗೂ ಇರಲಿ, ನಮ್ಮ ತಲೆಮಾರಿನಲ್ಲೇ ಈ ವಂಶವಾಹಿ ಸುರುಳಿಯ ಸುಳಿವು ಸಿಕ್ಕಿದ್ದು ನಮ್ಮ ಅದೃಷ್ಟವೇ ಸರಿ. ಭೂಮಿ ಹುಟ್ಟಿ ನೂರು ವರ್ಷಗಳಾದುವೆಂದು ಪರಿಗಣಿಸಿದರೆ, ಕೇವಲ ಎರಡು ನಿಮಿಷಗಳ ಹಿಂದಷ್ಟೇ ಪ್ರಪಂಚಕ್ಕೆ ವಿದ್ಯುತ್ ಬೆಳಕು ಬಂತು. ಟಿವಿ ಬಂತು, ಫ್ಯಾಕ್ಸ್ ಬಂತು, ನಮ್ಮವರು ಛಕ್ಕೆಂದು ಚಂದ್ರನತ್ತ ನೆಗೆಯುವ ಅವಕಾಶ ಬಂತು.

ಆದರೆ ಅಲ್ಲೇನಿದೆ ಮಣ್ಣು? ವಿಶ್ವದ ಅತ್ಯಂತ ಮಹಾ ವಿಸ್ಮಯ ನಮ್ಮ ಅಂತರಾಳದಲ್ಲೇ ಇದೆ. ಈ ಜೀನ್ ಎಲ್ಲಿಂದ ಬಂತು? ಅದಕ್ಕೆ ತನ್ನದೇ ಆದ ತರ್ಕಶಕ್ತಿ, ಬುದ್ಧಿಮತ್ತೆ ಇದೆಯೆ? ಈ ಬರಡು ಭೂಮಿಯನ್ನೇ ತನ್ನ ಅಧಿಪತ್ಯಕ್ಕೆ ಆಯ್ದುಕೊಂಡು ಇಲ್ಲಿ ಚಿತ್ರ ವಿಚಿತ್ರವಾದ ಕೋಟ್ಯಾನುಕೋಟಿ ಜೀವಿಗಳನ್ನು ಏಕೆ ನಿರ್ಮಿಸಿತು?

ಮಹಾಸ್ವಾರ್ಥಿ ಈ ಜೀನ್. ಇವು ತಮ್ಮ ರಕ್ಷಣೆಗೆ ಏನೇನೋ ಮಾಡುತ್ತವೆ. ಮೀನುಗಳನ್ನು ನೀರಲ್ಲಿ ಮುಳುಗಿಸಿ ಇಡುತ್ತವೆ. ಕೋತಿಯನ್ನು ಮರಕ್ಕೇರಿಸುತ್ತವೆ. ನಮ್ಮನ್ನೇ ಹೈಜಾಕ್ ಮಾಡಿ ರಾಕೆಟ್ ಮೇಲೆ ಕೂರಿಸಿ, ಚಂದ್ರಲೋಕಕ್ಕೆ ರವಾನಿಸುತ್ತವೆ.

ಬದುಕುವ ದಾರಿ ಅಲ್ಲಿ ಸುಲಭವಾಗಿ ಕಾಣದಿದ್ದಾಗ ಮನುಷ್ಯನ ಕೈಗೇ ಮೈಕ್ರೋಸ್ಕೋಪ್ ಕೊಟ್ಟು ತಮ್ಮನ್ನು ತಾವೇ ನಮ್ಮೆದುರು ಮೈಬಿಚ್ಚಿ ತೋರಿಸುತ್ತಿವೆ. 'ನೋಡಿ, ಆದರೆ ಕೈಹಚ್ಚಬೇಡಿ' ಎಂದು ನಮ್ಮವರ ಮೂಲಕವೇ ಎಚ್ಚರಿಕೆ ನೀಡುತ್ತಿವೆ.

ಈಗ ಹೇಳಿ, ನಾವು ಈ ಬ್ರಹ್ಮಸೂತ್ರವನ್ನು ಪರೀಕ್ಷಿಸ ಹೊರಟಿದ್ದೇವೆಯೋ ಅಥವಾ ಈ ಬ್ರಹ್ಮಸೂತ್ರವೇ ನಮ್ಮ ಪರೀಕ್ಷೆಗೆ ಹೊರಟಿದೆಯೋ?

*****

**ಲೇಖಕರು**

ನಾಗೇಶ ಹೆಗಡೆ ಕನ್ನಡದ ಪ್ರಮುಖ ಲೇಖಕರಲ್ಲೊಬ್ಬರು – ಶಿಕ್ಷಕ, ಪರಿಸರವಾದಿ ಹಾಗೂ ಪತ್ರಕರ್ತರಾಗಿ ವಿಭಿನ್ನ ಪಾತ್ರಗಳನ್ನು ವಹಿಸಿದವರು. ಇವರು ಸುಧಾ ವಾರಪತ್ರಿಕೆಯ ಸಂಪಾದಕರಾಗಿದ್ದರು. ಕನ್ನಡದಲ್ಲಿ ವಿಜ್ಞಾನ–ತಂತ್ರಜ್ಞಾನದ ಲೇಖನಗಳನ್ನು ಬರೆದಿದ್ದಾರೆ ಮತ್ತು ಹಲವಾರು ಲೇಖಕರಿಗೆ ಪ್ರಜಾವಾಣಿ, ಸುಧಾ ಪತ್ರಿಕೆಗಳಲ್ಲಿ ಅವಕಾಶ ನೀಡಿ ಪ್ರೋತ್ಸಾಹ ನೀಡಿದ್ದಾರೆ. ಅಕ್ಷರ ಪ್ರಕಾಶನ ಪ್ರಕಟಿಸಿದ ಇವರ 'ಇರುವುದೊಂದೇ ಭೂಮಿ' ಪುಸ್ತಕ ಕನ್ನಡದಲ್ಲಿ ಪರಿಸರ ವಿಜ್ಞಾನದ ಬಗ್ಗೆ ಮೂಡಿ ಬಂದ ಮಹತ್ವದ ಕೃತಿಗಳಲ್ಲೊಂದು. ಸುಧಾ, ಕರ್ನಾಟಕ ದರ್ಶನ, ಕೃಷಿರಂಗ ಮುಂತಾದ ಅಂಕಣಗಳಲ್ಲಿ ಈಗಲೂ ನಾಗೇಶ ಹೆಗಡೆ ಪ್ರಸಿದ್ಧರಾಗಿದ್ದಾರೆ. ಇರುವುದೊಂದೇ ಭೂಮಿ, ನಮ್ಮೊಳಗಿನ ಬ್ರಹ್ಮಾಂಡ, ಮುಷ್ಠಿಯಲ್ಲಿ ಮಿಲೇನಿಯಮ್ –ಇದಲ್ಲದೆ ತರಲೆಯ ರುಚಿ ಹತ್ತಿಸುವ ಕ್ಯಾಪ್ಸೂಲಗಿತ್ತಿ ಪುಸ್ತಕಗಳು ಆಸಕ್ತಿದಾಯಕವಾಗಿವೆ.

**ಆಶಯ**

ವಂಶವಾಹಿ ಮಹಾಮೋಜಣಿ ನುಡಿ ಚಿತ್ರಕ್ಕೆ ಒಂದು ಉತ್ತಮ ಉದಾಹರಣೆ. ಜೀವ ವಿಜ್ಞಾನದ ಅದ್ಭುತ ಸಾಧನೆ ಹೂಮಸ್ ಜೆನೋಮ್ ಮ್ಯಾಪಿಂಗ್. ಇಂತಹ ವೈಜ್ಞಾನಿಕ ವಸ್ತುವನ್ನು ಜನಸಾಮಾನ್ಯರ ಓದಿಗೆ ನಿಲುಕುವಂತೆ ಸರಳವಾಗಿ, ನಿತ್ಯ ಬದುಕಿನ ಸತ್ಯಗಳೊಡನೆ, ಸಮೀಕರಿಸ ಹೇಳಿರುವ ರೀತಿಯೇ ವಿಶಿಷ್ಠವಾಗಿದೆ.

**ಶಬ್ದಾರ್ಥಗಳು**

ಬ್ರಹ್ಮಾಂಡ=ವಿಶ್ವ ಜಗತ್ತು, ಪಾವಟಿಗೆ=ಮೆಟ್ಟಿಲು ಸೋಪಾನ, ಮೋಜಣಿ= ಸರ್ವೆ ಮಾಡುವಿಕೆ, ಅಭಿವೃದ್ಧಿಶೀಲ=ಮುಂದುವರೆಯುತ್ತಿರುವ, ತದ್ರೂಪ=ರೂಪ ಆಕಾರ ಪ್ರತಿರೂಪ, ಚಹರೆ = ಲಕ್ಷಣ ರೀತಿ ಚರ್ಯೆ, ಹಾವಸೆ = ಪಾಚಿ ಹಸುರು ಬಣ್ಣ, ಗಡಚು=ಗಟ್ಟಿಯಾದುದು ಒರಟು ಕ್ಲಿಷ್ಟವಾದುದು, ತರ್ಕ=ಊಹೆ, ಪರ್ಯಾಲೋಚನೆ, ಚರ್ಚೆ

**ಮಾದರಿ ಪ್ರಶ್ನೆಗಳು**

1. ವರ್ಣತಂತುಗಳ ಮೋಜಣಿಯ ಅಂದಾಜನ್ನು ಲೇಖಕರು ಯಾವುದಕ್ಕೆ ಹೋಲಿಸಿದ್ದಾರೆ?

2. ಮಾನವ ಜೀವಕೋಶದ ವರ್ಣತಂತುವಿನಲ್ಲಿ ಅಡಕವಾದ ಎಲ್ಲ ರಹಸ್ಯಗಳನ್ನೂ ಹೊರಕ್ಕೆ ಎಳೆಯವುದು ಸಾಧ್ಯವೇ?
3. ಮಾನವ ತಳಿ ನಕ್ಷೆ ತಯಾರಿಸುವಲ್ಲಿ ಯಾವ ಯಾವ ದೇಶಗಳು ಭಾಗಿಯಾಗಿವೆ?
4. ಮನುಷ್ಯನ ಬ್ರಹ್ಮಸೂತ್ರವನ್ನು ಎಲ್ಲರೂ ಒಟ್ಟಾಗಿ ಮೋಜಣಿ ಮಾಡಲು ಯಾವ ಯಾವ ದೇಶಗಳು ಒಪ್ಪಂದ ಮಾಡಿಕೊಂಡಿವೆ?
5. ಹೈದರಾಬಾದ್‌ನ ತಳಿಶೋಧ ಸಂಸ್ಥೆಯ ವಿಜ್ಞಾನಿಗಳು ಮನುಷ್ಯರ ತಳಿಸೂತ್ರ ಅಳೆಯುವ ಬದಲು ಯಾವುದನ್ನು ಕೈಗೊಂಡರು?
6. ತಳಿಸೂತ್ರ ಕುರಿತಂತೆ ವಿಜ್ಞಾನಿಗಳಿಗೆ ಅಷ್ಟಕ್ಕೇ ತೃಪ್ತಿ ಇಲ್ಲ ಏಕೆ?
7. ಬ್ರಿಟನ್‌ನ ಸಂಸತ್ತಿನಲ್ಲಿ ಏಕೆ ಕೋಲಾಹಲ ಉಂಟಾಯಿತು ?

**ಹೆಚ್ಚಿನ ಓದು**

1. "ನಮ್ಮೊಳಗಿನ ಬ್ರಹ್ಮಾಂಡ", "ಮುಷ್ಟಿಯಲ್ಲಿ ಮಿಲೆನಿಯಮ್", "ಇರುವುದೊಂದೆ ಭೂಮಿ", ಲೇ: ನಾಗೇಶ ಹೆಗಡೆ.

ನುಡಿಚಿತ್ರ

೪

# ಯಾತಕ್ಕೆ ಮಳೆಹೋದವೋ...

**ಮೂಲ: ಪಿ.ಸಾಯಿನಾಥ್, ಕನ್ನಡಕ್ಕೆ : ಜಿ.ಎನ್.ಮೋಹನ್**

ದೇಶ ಎದುರಿಸುತ್ತಿರುವ ಅತಿ ಗಂಭೀರ, ಪ್ರಶ್ನಾತೀತ ಸಮಸ್ಯೆ ಎಂದರೆ ಬರ. ಬರ ಪರಿಹಾರ ಎನ್ನುವುದೂ ಸಹ ಅಷ್ಟೇ ಪ್ರಶ್ನಾತೀತವಾಗಿ ಗ್ರಾಮೀಣ ಭಾರತದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ 'ಉದ್ಯಮ'. ಎಷ್ಟೋ ಬಾರಿ ಬರ ಮತ್ತು ಪರಿಹಾರ ಈ ಎರಡರ ನಡುವೆ ಇರುವ ಸಂಬಂಧ ಮಾತ್ರ ಅತ್ಯಲ್ಪ. ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಪರಿಹಾರ ಹೋಗಬಹುದು. ಕೊರತೆ ಇರುವ ಪ್ರದೇಶಗಳಿಗೆ ಹೋದ ಕಡೆಯೂ ಸಹ ಯಾರಿಗೆ ಅಗತ್ಯವಿದೆಯೋ ಅವರಿಗೆ ಇದರಿಂದ ಅನುಕೂಲ ಆಗಿರುವುದು ಕಡಿಮೆ. ಹಾಗಾಗಿಯೇ ಕೆಲವರು ಬರಪರಿಹಾರವನ್ನು 'ಮೂರನೆಯ ಬೆಳೆ' ಎಂದು ಕರೆಯುವುದು. ಇಲ್ಲಿ ವ್ಯತ್ಯಾಸವೆಂದರೆ ಈ ಮೂರನೆ ಬೆಳೆಯ ಲಾಭ ಪಡೆಯುವವರು ಇದನ್ನು ಬಿತ್ತಿದವರಲ್ಲ.

ಬರ 'ಪರಿಹಾರ'ದ ಬಹುಭಾಗ ಹೋಗುವುದು ಖಾಸಗಿಯವರ ಕೈಯಲ್ಲಿರುವ ಗುತ್ತಿಗೆಗೆ. ಇವು ರಸ್ತೆ ನಿರ್ಮಿಸಲು, ಬಾವಿ ತೋಡಲು, ನೀರಿನ ಟ್ಯಾಂಕರ್‌ಗಳನ್ನು ಕಳಿಸುವುದು, ಟ್ಯಾಂಕುಗಳ ರಿಪೇರಿಯಂತಹ ಕೆಲಸಗಳಿಗೆ. ಇದರ ವೆಚ್ಚ ಎಷ್ಟಾಗಬಹುದು ಎಂದು ಯೋಚಿಸಿ. ಒಂದು ವರ್ಷದಲ್ಲಿ ಈ ಉದ್ಯಮಕ್ಕೆ ಸೇರುವ ಹಣ ಬಿಹಾರದ ಪಶುಸಂಗೋಪನಾ ಇಲಾಖೆಯ ಹಣವನ್ನು ನಗಣ್ಯ ಎನ್ನುವಂತೆ ಮಾಡುತ್ತದೆ. ಈ ಬಿಹಾರ ಹಗರಣ ಒಂದೂವರೆ ದಶಕಗಳ ಕಾಲ ಇತ್ತು. ಈ ಹಗರಣದ ವಿಶೇಷವೆಂದರೆ ಇದು ಕಾನೂನುಬದ್ಧವಾಗಿತ್ತು. ಅದಕ್ಕೆ ಜೀವವೂ ಇತ್ತು. ದುರಂತವೆಂದರೆ, ಇದು ಬರ ಹಾಗು ನೀರಿನ ಕೊರತೆಯಂತಹ ನೈಜ ಸಮಸ್ಯೆಯನ್ನು ನಿವಾರಿಸಲು ಯತ್ನಿಸಿದ್ದು ಅಪರೂಪವಾಗಿ.

1994–95ರ ಒಂದು ವರ್ಷದಲ್ಲಿಯೇ ಮಹಾರಾಷ್ಟ್ರ ಸರ್ಕಾರ ಬರ ಹಾಗು ನೀರಿನ ಕೊರತೆಯನ್ನು ಅತ್ಯಂತ ತುರ್ತಾಗಿ ಎದುರಿಸಲು 1,170 ಕೋಟಿ ರೂ.ಗಳನ್ನು ಖರ್ಚುಮಾಡಿತು.

ಇದು ಟೀ, ಕಾಫಿ, ಸಿಮೆಂಟ್, ಆಟೋಮೊಬೈಲ್ ಕ್ಷೇತ್ರಗಳಂತಹ ಸಂಘಟಿತ ವಲಯದ ಎಲ್ಲಾ ಪ್ರಮುಖ ಕಂಪನಿಗಳ ಹಿಂದಿನ ವರ್ಷದ ಒಟ್ಟು ಆದಾಯಕ್ಕಿಂತ ಮಿಗಿಲಾದದ್ದು. ಭಾರತದ ಆರ್ಥಿಕತೆ ವಿಚಕ್ಷಣಾ ಕೇಂದ್ರ(ಸಿಎಂಐಇ)ನ ವರದಿ ಪ್ರಕಾರ ತೆರಿಗೆ ಕಡಿತದ ನಂತರ ಈ ಕಂಪನಿಗಳ ಒಟ್ಟು ಆದಾಯ 1,149 ಕೋಟಿ.

1995ರ ಆಗಸ್ಟಿನಲ್ಲಿ ಪ್ರಧಾನಿ ನರಸಿಂಹರಾವ್ ಅವರು ಒರಿಸ್ಸಾದಲ್ಲಿ ಬರ ವಿರೋಧಿ ಯೋಜನೆಯೊಂದನ್ನು ಉದ್ಘಾಟಿಸಿದರು. ಈ ಯೋಜನೆ ವರ್ಷಕ್ಕೆ 750 ಕೋಟಿಯಂತೆ ಆರು ವರ್ಷಗಳಲ್ಲಿ 4557 ಕೋಟಿಗಳನ್ನು ಕಾಲಹಂಡಿ, ಬೊಂಗಿಲಾಗೀರ್, ಕೋರಪುಟ್‌ನಂತಹ ಕೆಲವೇ ಜಿಲ್ಲೆಗಳ ಮೇಲೆ ಖರ್ಚುಮಾಡುವುದಿಲ್ಲ. ಕೊರತೆಯನ್ನು ಹೊಡೆದೋಡಿಸಿ ಉತ್ತಮ ಮೂಲ ಸೌಕರ್ಯಗಳನ್ನು ನಿರ್ಮಿಸುವುದಾಗಿದ್ದಲ್ಲಿ ಇದರ ಮೇಲೆ ವೆಚ್ಚ ಮಾಡುವ ಪ್ರತಿಯೊಂದು ಪೈಸೆಯೂ ಉಪಯುಕ್ತವಾಗುತ್ತಿತ್ತು. ಆದರೆ ಇದು ಆಗುವುದು ಬಹುತೇಕ ಸಾಧ್ಯವಿಲ್ಲ. ಏಕೆಂದರೆ ಈ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಯ ಮೂಲ ಕಾರಣಗಳು ಸಹಾ ಪರಿಹಾರ ಹುಡುಕಲು ಆರಂಭಿಸುವುದಕ್ಕೂ ಸಾಧ್ಯವಿಲ್ಲ.

ಬರಪೀಡಿತ ಬ್ಲಾಕುಗಳು ಕೇಂದ್ರದ ಬರಪೀಡಿತ ಪ್ರದೇಶ ಕಾರ್ಯಕ್ರಮ(ಡಿಪಿಎಪಿ) ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಆದರೆ ಬ್ಲಾಕುಗಳನ್ನು ಡಿಪಿಎಪಿ ವ್ಯಾಪ್ತಿಗೆ ತರುವುದು ಸಂಪೂರ್ಣವಾಗಿ ರಾಜಕೀಯ ನಿರ್ಧಾರ. ಡಿಪಿಎಪಿ ಅಡಿ ಬಂದರೆ ದೊಡ್ಡದಾದ ರೀತಿಯಲ್ಲಿ ಹಣದ ಹೊಳೆ ಹರಿಸುವ ಹಲವಾರು ಯೋಜನೆಗಳ ಸರಮಾಲೆಯೇ ಬರುತ್ತದೆ. ಇದೇ ಬ್ಲಾಕುಗಳಿಗೆ ಉದ್ಯೋಗ ಖಾತರಿ ಯೋಜನೆ(ಇಎಎಸ್), ಮರುಭೂಮಿ ತಡೆ ಯೋಜನೆ, ಕುಡಿಯುವ ನೀರಿನ ಯೋಜನೆ ಹೀಗೆ ಹಲವಾರು ಕಾರ್ಯಕ್ರಮಗಳ ಹಣ ಬರುತ್ತದೆ. ಹೌದು, ಕೆಲವು ಮಂದಿಯಂತೂ ಖಂಡಿತಾ ಲಾಭ ಪಡೆಯುತ್ತಾರೆ.

ಹಲವಾರು ರಾಜ್ಯಗಳಲ್ಲಿ ಈ ಡಿಪಿಎಪಿ ಸಾಕಷ್ಟು ಕುತೂಹಲ ಸಂಗತಿಗಳನ್ನು ಎತ್ತಿ ತೋರಿಸಿದೆ. ಮಹಾರಾಷ್ಟ್ರದಲ್ಲಿ ಒಂದು ವರ್ಷದ ಹಿಂದೆ ಇದ್ದ ಡಿಪಿಎಪಿ ಬ್ಲಾಕುಗಳ ಸಂಖ್ಯೆ 96. 1996ರಲ್ಲಿ ಈ ಸಂಖ್ಯೆ 147. ಮಧ್ಯಪ್ರದೇಶದಲ್ಲಿ ಇದೇ ಅವಧಿಯಲ್ಲಿ ಡಿಪಿಎಪಿ ಬ್ಲಾಕುಗಳ ಸಂಖ್ಯೆ 60ರಿಂದ 135ಕ್ಕೆ ಬಹುತೇಕ ದುಪ್ಪಟ್ಟಾಗಿ ಹೋಯಿತು. ಬಿಹಾರದಲ್ಲಿ 80ರ ದಶಕದುದ್ದಕ್ಕೂ ಸುಮಾರು ಡಿಪಿಎಪಿ ಬ್ಲಾಕುಗಳಿದ್ದವು. 90ರ ದಶಕದ ಆರಂಭದಲ್ಲಿ ರಾಮೇಶ್ವರ ಠಾಕೂರ್ ಕೇಂದ್ರ ಸಚಿವರಾದಾಗ ಈ ಸಂಖ್ಯೆ 55 ಆಯಿತು. ಠಾಕೂರ್ ಅವರ ಸ್ವಕ್ಷೇತ್ರ ಈ ಯೋಜನೆಯಡಿ ಸೇರಿತು. ಈಗ ಈ ರಾಜ್ಯದಲ್ಲಿ 122 ಡಿಪಿಎಪಿ ಬ್ಲಾಕುಗಳಿವೆ.

ಈ ಎಲ್ಲವೂ ಆಗಿರುವುದು ಸತತ ಒಳ್ಳೆಯ ಮಳೆಗಾಲವಿದ್ದಾಗ. ಆದರೆ ಕೆಲವರಿಗೆ ಕೊರತೆಯೂ ಇತ್ತು. ಆದರೆ ಅದು ಇನ್ನೊಂದು ಬೇರೆಯದೇ ಕಥೆ.

ಈ ವಿಭಾಗದಲ್ಲಿರುವ ವರದಿಗಳು ಮುಂದಿಡುವಂತೆ ಕಾಲಹಂಡಿಯ ಪ್ರಮುಖ ಸಮಸ್ಯೆ ಎದುರಾಗಿರುವುದು ಕಡಿಮೆ ಮಳೆ ಪ್ರಮಾಣದಿಂದಾಗಿ ಅಲ್ಲ. ಇದನ್ನು

ಜಲಸಂಪನ್ಮೂಲ ತಜ್ಞರು ಹಾಗು ಆಡಳಿತಗಾರರು ಬಹುತೇಕ ಅನುಮೋದಿಸುತ್ತಾರೆ. ಕೆಲವು ಬಾರಿ ಮಳೆ ಬೀಳುವ ಸಮಯದಲ್ಲಿ ಆಗುವ ವ್ಯತ್ಯಾಸ ಹಾಗೂ ವ್ಯಾಪ್ತಿಯ ಏರುಪೇರನ್ನು ಹೊರತುಪಡಿಸಿದರೆ ಭಾರತದ ಬಹುತೇಕ ಜಿಲ್ಲೆಗಳಲ್ಲಿ ವಾರ್ಷಿಕವಾಗಿ 800 ಮಿ.ಮೀ.ನಷ್ಟು ಮಳೆಯಾಗುತ್ತದೆ. ಕಳೆದ 20 ವರ್ಷಗಳಲ್ಲಿ ಕಾಲಹಂಡಿಯಲ್ಲಿ ಆಗಿರುವ ಅತಿ ಕಡಿಮೆ ಮಳೆ ಪ್ರಮಾಣವೆಂದರೆ 978 ಮಿ.ಮೀ. ಇದು ಎಷ್ಟೋ ಜಿಲ್ಲೆಗಳು'ಸಾಧಾರಣ' ವರ್ಷಗಳಲ್ಲಿ ಕಾಣುವ ಮಳೆ ಪ್ರಮಾಣಕ್ಕಿಂತ ಹೆಚ್ಚು. ಇದಲ್ಲದಿದ್ದರೆ ಕಾಲಹಂಡಿಯ ಸರಾಸರಿ ಮಳೆಪ್ರಮಾಣ 1250 ಮಿ.ಮೀ. ಇದು ಒಳ್ಳೆಯ ಮಳೆ ಪ್ರಮಾಣವೇ. 1990–91ರಲ್ಲಿ ಈ ಜಿಲ್ಲೆಯಲ್ಲಿ 2247ಮಿ.ಮೀ. ಮಳೆಯಾಗಿತ್ತು. ಇದಲ್ಲದೆ ಕಾಲಹಂಡಿಯಲ್ಲಿ ತಲಾ ಆಹಾರ ಉತ್ಪಾದನೆ ಒರಿಸ್ಸಾ ಹಾಗೂ ಇಡೀ ದೇಶದ ಪ್ರಮಾಣಕ್ಕಿಂತ ಹೆಚ್ಚಿತ್ತು. ಹಳೆಯ ಕಾಲಹಂಡಿಯ ಅತ್ಯಂತ ಕಳಪೆ ಪ್ರದೇಶವಾಗಿದ್ದ ಈ ಪ್ರತ್ಯೇಕ ಜಿಲ್ಲೆಯಾಗಿರುವ ನೌಪಾದಲ್ಲಿಯೂ ಸಹಾ 1994ರಲ್ಲಿ ಆದ ಮಳೆಯ ಪ್ರಮಾಣ 2366 ಮಿ.ಮೀ.

ಪಲಮಾವುವಿನಲ್ಲಿ ಸಹಾ ಸರಾಸರಿ ಮಳೆಯ ಪ್ರಮಾಣ ಕೆಟ್ಟದ್ದಾಗೇನಿಲ್ಲ. ಸಾಧಾರಣ ವರ್ಷದಲ್ಲಿ ಈ ಜಿಲ್ಲೆಯಲ್ಲಿ 1200ರಿಂದ 1230ಮಿ.ಮೀ. ಮಳೆಯಾಗುತ್ತದೆ. ಇತಿಹಾಸದ ಅತಿ ಕೆಟ್ಟ ವರ್ಷದಲ್ಲಿ ಇಲ್ಲಿ 630 ಮಿ.ಮೀ. ಮಳೆಯಾಗಿದೆ. ಭಾರತದ ಕೆಲವು ಜಿಲ್ಲೆಗಳಲ್ಲಿ ಇನ್ನೂ ಕಡಿಮೆ ಮಳೆಯಿದ್ದರೂ ಈ ಮಟ್ಟದ ಅನಾಹುತವಾಗುವುದಿಲ್ಲ.

ಸುರ್ಗುಜಾದಲ್ಲಿ ಮಳೆ ಪ್ರಮಾಣ 1200 ಮಿ.ಮೀ.ಗಿಂತ ಕಡಿಮೆಯಿಲ್ಲ. ಕೆಲವು ವರ್ಷಗಳಲ್ಲಿ ಇದು 1500ರಿಂದ 1600 ಮಿ.ಮೀ. ಮಳೆ ಕಾಣುತ್ತದೆ. ಇದು ಕ್ಯಾಲಿಫೋರ್ನಿಯಾ ಪಡೆಯುವ ಮಳೆಯ ಪ್ರಮಾಣಕ್ಕಿಂತ ನಾಲ್ಕು ಪಟ್ಟು ಹೆಚ್ಚು. ಮತ್ತು ಕ್ಯಾಲಿಫೋರ್ನಿಯಾದಲ್ಲಿ ದ್ರಾಕ್ಷಿ ಬೆಳೆಯುತ್ತಾರೆ.

ಆದರೂ ಈ ಮೇಲೆ ಹೆಸರಿಸಿದ ಜಿಲ್ಲೆಗಳಲ್ಲಿ ನೀರಿಗೆ ಸಂಬಂಧಿಸಿದ ಸಮಸ್ಯೆಗಳು ಬೀಭತ್ಸವಾಗಿವೆ. ಅನುದಾನ ನಿವಾರಿಸುವ ಸಮಸ್ಯೆಗಳಿಗಿಂತ ಇವು ಭಿನ್ನ. ಸರಳವಾಗಿ ನೋಡುವುದಾದರೆ ಭಾರತದಲ್ಲಿ ಸಾಕಷ್ಟು ಮಳೆಯಾಗದ ಹಲವಾರು ಜಿಲ್ಲೆಗಳಿವೆ. ಆದರೆ ಮೇಲ್ಕಾಣಿಸಿದ ಜಿಲ್ಲೆಗಳಲ್ಲೇ ಭಾರತದ ಒಂದು ವರ್ಗವಾದ ಬಡವರು ತೀವ್ರ ಬರದಿಂದ ನರಳುತ್ತಾರೆ. ಇದು ಆಗುವುದು ಲಭ್ಯವಿರುವ ಜಲಸಂಪನ್ಮೂಲವನ್ನು ಬಲಿಷ್ಠರು ಕೈವಶ ಮಾಡಿಕೊಂಡಾಗ ಮತ್ತು ಈ ಬರ ನಿವಾರಕ ಹಣ ತರುವ 'ಯೋಜನೆ'ಗಳನ್ನು ರೂಪಿಸುವಾಗ ಈ ಬಡವರನ್ನು ಭಾಗಿಯಾಗಿ ಮಾಡುವುದಿಲ್ಲ, ಕನಿಷ್ಠ ಸಂಪರ್ಕಿಸುವುದೂ ಇಲ್ಲವೆಂದಾಗ.

ಹಣದ ಹೊಳೆ ಹರಿಯಲು ಬರ ಮತ್ತು ಡಿಪಿಎಪಿಯನ್ನು ಕೊಂಡಿ ಹಾಕಿದಾಗ ಪ್ರತಿಯೊಬ್ಬರಿಗೂ ತಮ್ಮ ಬ್ಲಾಕು ಈ ಯೋಜನೆಯಡಿ ಬರಬೇಕು ಎನ್ನುವ ಆಸೆ. ಹಲವು ಪ್ರಕರಣದಲ್ಲಿ ಬಲಿಷ್ಠರು ತಮ್ಮ ಬ್ಲಾಕುಗಳನ್ನು ಈ ಯೋಜನೆಯಡಿ ತಂದದ್ದಷ್ಟೇ ಅಲ್ಲ ಇದರಿಂದ ಬಂದ 'ಫಲ'ವನ್ನೂ ಪಡೆದುಕೊಂಡರು.

ಮಹಾರಾಷ್ಟ್ರವನ್ನೇ ತೆಗೆದುಕೊಳ್ಳಿ, ರಾಜ್ಯದಲ್ಲಿ ಬೆಳೆಯುವ ಶೇಕಡಾ 73ರಷ್ಟು ಕಬ್ಬು ಈ ಡಿಪಿಎಪಿ ಬ್ಲಾಕುಗಳಲ್ಲಿಯೇ ಬೆಳೆಯಲಾಗುತ್ತದೆ! ಅತಿ ಹೆಚ್ಚು ನೀರು ಬಯಸುವ ಬೆಳೆ ಈ ಕಬ್ಬು. ಎರಡನೆಯದಾಗಿ ಮಹಾರಾಷ್ಟ್ರದಲ್ಲಿ ನೀರಾವರಿಯಡಿ ಇರುವ ಪ್ರದೇಶಗಳ ಸ್ಥಿತಿ ಶೋಚನೀಯ. ಇದು ಶೇಕಡಾ 15 ಬೆಳೆ ಭೂಮಿಗೆ ಕುಸಿಯುತ್ತದೆ. ಆದರೆ ಡಿಪಿಎಪಿ ಬ್ಲಾಕುಗಳಲ್ಲಿ ಒಂದು ಅಂದಾಜಿನ ಪ್ರಕಾರ ಈ ಸಂಖ್ಯೆ ಶೇಕಡಾ 22. ರಾಜ್ಯದ ಸರಾಸರಿಗಿಂತ ಶೇಕಡಾ 50ರಷ್ಟು ಹೆಚ್ಚು. ಪುಣೆಯ ಬಳಿ ಇರುವ ಲೋನಾವಲದಲ್ಲಿ ಮಳೆ ಪ್ರಮಾಣ ಕಡಿಮೆ ಎಂದರೆ 1650ಮಿ.ಮೀ. ಹೆಚ್ಚೆಂದರೆ 2000 ಮಿ.ಮೀ. ಲೋನಾವಲ ಡಿಪಿಎಪಿ ಬ್ಲಾಕಿನಲ್ಲಿದೆ!

ಹಲವಾರು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಪರಿಹಾರ ಹಾಗೂ ನೀರಾವರಿಯ ಮೇಲೆ ವೆಚ್ಚ ಮಾಡುತ್ತಿರುವ ನೂರಾರು ಕೋಟಿ ಹಣದಿಂದ ನೀರಾವರಿ ಪ್ರದೇಶದಲ್ಲಿ ಪ್ರಶಂಸನೀಯ ಹೆಚ್ಚಳವೇನೂ ಆಗಿಲ್ಲ. ಡಿಪಿಎಪಿ ಬ್ಲಾಕಿನಲ್ಲಿರುವ ಸಣ್ಣ ರೈತರೇ ಹೆಚ್ಚು ಒತ್ತಡವನ್ನು ಅನುಭವಿಸುವವರು. ಇಲ್ಲಿ ನೀರನ್ನು ಶ್ರೀಮಂತರು ಹಾಗು ರೈತರು ವಶಪಡಿಸಿಕೊಂಡಿದ್ದಾರೆ. ಇಂತಹ ಪ್ರದೇಶಕ್ಕೆ ಹಣ ಚೆಲ್ಲುವ ಮೂಲಕ ಸರ್ಕಾರ ಬಾಲಿಶವಾಗಿ ವರ್ತಿಸುತ್ತಿದೆ. ಹೆಚ್ಚು ಮತ ಇರುವ ಸಣ್ಣ ಮೀನನ್ನು ಸಮಾಧಾನಪಡಿಸಬಹುದು. ವಾಸ್ತವದಲ್ಲಿ ಇಲ್ಲಿಗೆ ಹೋಗುತ್ತಿರುವ ಹಣದ ಸಿಂಹಪಾಲು ಸೇರುತ್ತಿರುವುದು ಬಲಿಷ್ಠರ ಜೇಬನ್ನು. ನೀರಾವರಿಗೆ ಬೇಕಾದ ನೀರು? ಈ ರಾಜ್ಯದ ಕೇವಲ ಶೇಕಡಾ 2ರಷ್ಟು ಮಂದಿ ರೈತರು ಮಾತ್ರ ಶೇಕಡಾ 70ರಷ್ಟು ನೀರನ್ನು ಬಳಸುತ್ತಾರೆ.

ಬರ ಎನ್ನುವುದು ಒಂದು ಸಂಕೀರ್ಣ ಪ್ರಕ್ರಿಯೆ. ಹವಾಮಾನ ಬರ ಇಲ್ಲದಿದ್ದಾಗಲೂ ಸಹ ಕೃಷಿ ಬರ ಕಾಣಿಸಿಕೊಳ್ಳಬಹುದು. ಅಂದರೆ ಸಾಕಷ್ಟು ಮಳೆಯಾಗಿದ್ದರೂ ಸಹ ಬೆಳೆ ವಿಫಲವಾಗಬಹುದು ಅಥವಾ ನದಿ, ತೊರೆ, ಜಲಪಾತಗಳ ಬತ್ತುವಿಕೆಯೊಂದಿಗೆ ಅಂತರ್ಜಲ ಮಟ್ಟ ಕುಸಿದು ಜಲಕ್ಷಾಮ ತಲೆದೋರಬಹುದು. ಇದೆಲ್ಲಕ್ಕೂ ಕಾರಣ ಗೊತ್ತಿದ್ದರೂ ಸಹ ಅದನ್ನು ಬಗೆಹರಿಸಿದ್ದಿಲ್ಲ. ಎಲ್ಲವನ್ನೂ ಪ್ರಕೃತಿಯ ಮುನಿಸಿನ ಮೇಲೆ ಎತ್ತಿಹಾಕುವುದು ಒಳ್ಳೆಯ ವಿಧಾನ. ಅದು ಹೀಗಾಗಲು ಹಲವು ಶಕ್ತಿಗಳು, ಹಲವು ಹಂತಗಳಲ್ಲಿ ಬರ ಕೈಗಾರಿಕೆಯಲ್ಲಿ ಸೇರಿಹೋಗುವುವು ಅಥವಾ ಬರವನ್ನು ಬಳಸಿಕೊಳ್ಳುವುವು.

ಅದು ಹೇಗೆ ಎಂದರೆ: ಯಾವುದೇ ಒಂದು ಜಿಲ್ಲೆಯನ್ನು ತೆಗೆದುಕೊಳ್ಳಿ. ಉದಾಹರಣೆಗೆ ಸುರ್ಗುಜಾ(ಅಥವಾ ಯಾವುದೂ ಆಗಬಹುದು). ರೈತರು ಹಲವು ನೀರು ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬ್ಲಾಕ್‌ಮಟ್ಟದ ಶಕ್ತಿಗಳು ಅಂದರೆ ಕಂಟ್ರ್ಯಾಕ್ಟರುಗಳು ಹಾಗು ರಾಜಕಾರಣಿಗಳು ಈ ವಿಷಯವನ್ನು ಕೈಗೆತ್ತಿಕೊಳ್ಳುತ್ತಾರೆ. ದೂರು ಸರಿಸುಮಾರಾಗಿ ಹೇಗಿರುತ್ತದೆಯೆಂದರೆ; ನಮ್ಮ ಬ್ಲಾಕಿಗೆ ಇತರ ಬ್ಲಾಕಿಗಳಿಗಿಂತ ಕಡಿಮೆ ಹಣ ಬಂದಿದೆ. ಜಿಲ್ಲಾಧಿಕಾರಿ ನಮ್ಮನ್ನು ಕಡೆಗಣಿಸುತ್ತಿದ್ದಾರೆ. ಅದಕ್ಕಾಗಿಯೇ ಹೀಗಾಗುತ್ತಿದೆ.

ಸರಿ ನಿಜಕ್ಕೂ ಎರಡು ಸಂಗತಿಗಳಂತೂ ಜರುಗುತ್ತವೆ. ಮೊದಲನೆಯದು ಸುರ್ಗುಜಾದ ರೈತರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ತೀವ್ರಗೊಳ್ಳುತ್ತವೆ. ಎರಡನೆಯದು, ಕೆಲವು ನಿರ್ದಿಷ್ಟ ಶಕ್ತಿಗಳು ಜಿಲ್ಲಾ ಕೇಂದ್ರದಲ್ಲಿ ಕುಳಿತು ಬ್ಲಾಕಿಗೆ ಇನ್ನೂ ಹೆಚ್ಚು ಹಣ ತರಲು ಯತ್ನಿಸುತ್ತವೆ.

ಪತ್ರಿಕೆಯೊಂದರ ಅರೆಕಾಲಿಕ ವರದಿಗಾರ (ಉದಾಹರಣೆಗೆ ಬಿಲಾಸ ಪುರದಲ್ಲಿರುವ ಜಿಲ್ಲಾಧಿಕಾರಿ ನಮ್ಮ ಬ್ಲಾಕನ್ನು ಕಡೆಗಣಿಸುತ್ತಿದ್ದಾರೆ) ಈ ಸುದ್ದಿಯನ್ನು ಕೈಗೆತ್ತಿಕೊಳ್ಳುತ್ತಾನೆ. ಬಹುತೇಕ ಪತ್ರಿಕೆಗಳು ತಮ್ಮ ಅರೆಕಾಲಿಕರಂತೂ ತಿಂಗಳಿಗೆ 50 ರೂ. ಪಡೆಯುತ್ತಾರೆ. ಹಾಗಾಗಿ ಇನ್ನಿತರ ಮೂಲಗಳಿಂದ ಆದಾಯ ಇರುವವರು ಮಾತ್ರ ಅರೆಕಾಲಿಕ ವರದಿಗಾರರಾಗಿ ಕೆಲಸ ಮಾಡಬಹುದು. ಈ ಜಿಲ್ಲೆಯ ಬಹು ಭಾಗಗಳಲ್ಲಿ ಈ ರೀತಿಯ ಅರೆಕಾಲಿಕ ವರದಿಗಾರ ಪೆಟ್ಟಿ ಅಂಗಡಿಯಾತ ಇಲ್ಲವೇ ಪುಡಿ ವ್ಯವಹಾರಸ್ಥನಾಗಿರುತ್ತಾನೆ.

ವಿವಿಧ 'ಲೋಕೋಪಯೋಗಿ ಕೆಲಸ'ಗಳಿಗೆ ಬ್ಲಾಕ್ ಹಾಗು ಜಿಲ್ಲೆಗೆ ಗುತ್ತಿಗೆಯೇನಾದರೂ ಬಂದರೆ ಫಲಾನುಭವಿಗಳ ಪಟ್ಟಿಯಲ್ಲಿ ಈ ಅರೆಕಾಲಿಕ ವರದಿಗಾರನೂ ಇರುತ್ತಾನೆ. ಇದು ಎಲ್ಲರ ವಿಚಾರದಲ್ಲಿ ನಿಜವಲ್ಲವಾದರೂ ಕೆಲವು ಅರೆಕಾಲಿಕ ವರದಿಗಾರರಿಗಂತೂ ಖಂಡಿತವಾಗಿ ಅನ್ವಯಿಸುತ್ತದೆ. ನಾನು ಹಲವು ಬುದ್ಧಿವಂತ, ವಿಷಯ ಜ್ಞಾನವಿರುವ ಇಂತಹ ವರದಿಗಾರರನ್ನು ಭೇಟಿಯಾದೆ. ಅವರು ಪ್ರತಿಭಾವಂತರು. ನೆಲದ ವಾಸ್ತವಕ್ಕೆ ಕಿವಿಗೊಟ್ಟವರು. ಪರಿಸ್ಥಿತಿಗೆ ಬೇಗ ಸ್ಪಂದಿಸುವವರು. ಈ ಪೈಕಿ ಕೆಲವರು ಸಣ್ಣ ಗುತ್ತಿಗೆದಾರರು. ಹಾಗೆಯೇ ಬ್ಲಾಕ್‌ಮಟ್ಟದ ರಾಜಕಾರಣಿಗಳು. (ಹಾಗೆಯೇ ಹಲವು ರಾಷ್ಟ್ರಮಟ್ಟದ ರಾಜಕಾರಣಿಗಳು ಹಾಗು ಪತ್ರಿಕಾ ಮಾಲೀಕರು. ಅದು ಇನ್ನೊಂದೇ ಕಥೆ)

ತೀವ್ರಗೊಳ್ಳುತ್ತಿರುವ ಬರದ ಬಗೆಗಿನ ವರದಿಗಳು ಸಂಪನ್ಮೂಲಕ್ಕಾಗಿ ಒದ್ದಾಡುತ್ತಿರುವ ಜಿಲ್ಲಾ ಆಡಳಿತದ ಮೇಲೆ ಒತ್ತಡ ಹೇರುತ್ತದೆ. (ಕೆಲವು ವರದಿಗಳಲ್ಲಿ ಸಾವಿನ ಸಂಖ್ಯೆಯನ್ನು ವೈಭವೀಕರಿಸಿದ್ದರೂ ಸತ್ಯದ ಅಂಶಗಳಿವೆ) ಜಿಲ್ಲಾಧಿಕಾರಿ ತನ್ನ ಕೆಲವು ಜಿಲ್ಲಾಮಟ್ಟದ ವರದಿಗಾರ ಮಿತ್ರರನ್ನು ಕರೆಯುತ್ತಾನೆ. ಈ ಜಿಲ್ಲೆ ನೆರೆಯ ಜಿಲ್ಲೆಗೆ ಹೋಲಿಸಿದರೆ ರಾಜ್ಯ ಸರ್ಕಾರದಿಂದ ಕಡಿಮೆ ಹಣ ಪಡೆಯುತ್ತಿದೆ ಎಂದು ವಿವರಿಸುತ್ತಾನೆ. ಇದು ನಿಜವೂ ಇರಬಹುದು. ಜಿಲ್ಲಾಧಿಕಾರಿ ರಾಜಧಾನಿಯಲ್ಲಿ ಕೂತು ಹೆಚ್ಚಿನ ಸಂಪನ್ಮೂಲಕ್ಕಾಗಿ ಪ್ರಯತ್ನಿಸುತ್ತಿರುತ್ತಾನೆ. ಸುರ್ಗುಜಾ ಅಥವಾ ಅಂತಹ ಯಾವುದೇ ಜಿಲ್ಲೆಗೆ ಮಲತಾಯಿ ಧೋರಣೆ ಅನುಕರಿಸಲಾಗುತ್ತಿದೆ ಎಂಬ ವರದಿಗಳು ರಾಜಧಾನಿಯ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳಲು ಆರಂಭಿಸುತ್ತವೆ.

ಇದು ರಾಜ್ಯ ಸರ್ಕಾರಕ್ಕೆ ಮುಜುಗರ ಉಂಟುಮಾಡುತ್ತದೆ. ಅದು ಹೇಗೆ ಪ್ರತಿಕ್ರಿಯಿಸುತ್ತದೆ? ಸ್ಥಳೀಯವಾಗಿ ಅದು ಏನನ್ನು ಮಾಡಬಹುದೋ ಅದನ್ನು ಮಾಡುತ್ತಾ ಬರಪರಿಹಾರಕ್ಕೆ ಇನ್ನೂ ಹೆಚ್ಚಿನ ಹಣ ಬೇಕು ಎಂದು ಕೇಂದ್ರವನ್ನು ಒತ್ತಾಯಿಸುತ್ತದೆ. ರಾಜ್ಯ ಸರ್ಕಾರಗಳು ಪ್ರಮುಖ ಪತ್ರಿಕೆಗಳ ಬಾತ್ಮೀದಾರರನ್ನು ರಾಜ್ಯದ ರಾಜಧಾನಿಗೆ

ಕರೆದುಕೊಂಡು ಬರುತ್ತವೆ. 'ಬರ ಪೀಡಿತ ಪ್ರದೇಶ'ಗಳಿಗೆ ಇವರ ಪ್ರವಾಸ ಆರಂಭವಾಗುತ್ತದೆ. ಸರ್ಕಾರ ಇಂತಹ ಪ್ರೆಸ್ ಟೂರುಗಳಿಗಾಗಿಯೇ ಒಂದು ವಾಹನವನ್ನು ಮೀಸಲಾಗಿಟ್ಟಿರುತ್ತದೆ. ಸೂಕ್ಷ್ಮ ಪ್ರದೇಶಗಳಿಗೆ ಹಲವೊಮ್ಮೆ ಹಿರಿಯ ಅಧಿಕಾರಿಗಳು ಪತ್ರಕರ್ತರನ್ನು ಕರೆದೊಯ್ಯುತ್ತಾರೆ.

ಹೃದಯವಿದ್ರಾವಕ ವರದಿಗಳ ಮಾತು ಬಂದಾಗ ನಗರದ ಪತ್ರಿಕೆಗಳ ನಾಜೂಕು ಬರಹಗಾರರು ಸ್ಥಳೀಯ ಪತ್ರಿಕೆಗಳವರಿಗಿಂತ ಮೇಲು ಮಟ್ಟದವರು. ಬರ ಈಗ ರಾಷ್ಟ್ರೀಯ ಪ್ರಶ್ನೆ. 'ಅಂತ್ಯವಿಲ್ಲದ ಬಿರುಕು ಬಿಟ್ಟ ನೆಲ' ಎಂಬ ಪದಗುಚ್ಛಗಳ ವರದಿ ಛಾಯಾಚಿತ್ರಗಳ ಸಮೇತ ಓದುಗರನ್ನು ಮುಟ್ಟುತ್ತದೆ. (ಈಗ 'ಬಿರುಕು ಬಿಟ್ಟ ನೆಲ' ಎನ್ನುವುದು ಬರದ ಸಂಕೇತವಾಗಿರಬೇಕಾಗಿಲ್ಲ. ಕೊಳದಲ್ಲಿ ನೀರು ಬತ್ತಿದ್ದರೂ ನೀರಿರುವ ಸ್ಥಳ ಬಿರುಕು ಬಿಟ್ಟಿರಬಹುದು. ಹಸಿರೋ ಹಸಿರು ಪ್ರದೇಶದಂತೆ ಕಾಣುವ ಕಡೆಯೂ ನೀರಿನ ಕೊರತೆ ಇರಬಹುದು. ಆದರೆ 'ಬಿರುಕು ಬಿಟ್ಟ ನೆಲ ಎನ್ನುವುದು ಛಾಯಾಚಿತ್ರಗಳ ಸಮೇತ ಒಳ್ಳೆಯ ವರದಿಯೇ). ಇದು ಆಂಗ್ಲ ಪತ್ರಿಕೆಗಳ ಮಟ್ಟಿಗಂತೂ ಇನ್ನೂ ನಿಜ. ಪ್ರಾದೇಶಿಕ ಪತ್ರಿಕೆಗಳಿಗೆ ಹಲವು ಗಂಭೀರ ಸಮಸ್ಯೆಗಳಿವೆ. ಆದರೂ ಇವು ವಾಸ್ತವಕ್ಕೆ, ಸತ್ಯಕ್ಕೆ ಹತ್ತಿರವಾಗಿವೆ.

ಕಂಗೆಟ್ಟ ಪ್ರದೇಶಗಳಿಗೆ ವರದಿಗಾರರು ಭೇಟಿ ಕೊಟ್ಟಾಗ ಮಧ್ಯಾಹ್ನದ ಸಮಯವಾಗಿದ್ದರೆ ಸುಡುವ ಬಿಸಿಲು ಕೆಲವರನ್ನು ಆಕರ್ಷಿಸುತ್ತದೆ. ನಿಮ್ಮ ಚರ್ಮ ಹಾಗು ಕೂದಲು ಬೆಂಕಿಯಂತೆ ಸುಡುವಾಗ ಇಲ್ಲಿ ಅನಾದಿಕಾಲದಿಂದಲೂ ಬರ ಇದೆ ಎಂದು ಸುಲಭವಾಗಿ ನಂಬಬಹುದು. ಇಲ್ಲಿ ಎರಡು ತಿಂಗಳ ಹಿಂದೆ ಪ್ರವಾಹ ಇದ್ದಿರಬಹುದು, ಆದರೂ ಈಗಿನ ಮಟ್ಟಿಗೆ ಅದು ವಿಷಯವಲ್ಲ.

ಪ್ರತಿಯೊಬ್ಬ ಸಂಪಾದಕನಿಗೂ ಬರ ಎಂದರೆ ಬಿರುಕು ಬಿಟ್ಟ ನೆಲ ಹಾಗು ಕಂಗೆಟ್ಟ ರೈತನ ಚಿತ್ರ ಎನ್ನುವುದು ಗೊತ್ತು. 'ಮಾನವ ಆಸಕ್ತಿ' ವರದಿ ಎಂದರೆ ಇದೇ. ಅಲ್ಲವೇ?

ರಾಜ್ಯ ಈಗ ಕೇಂದ್ರದ ಬಳಿ ತನ್ನ ಮನವಿ ಇಟ್ಟಿದೆ. ಕೇಂದ್ರ ಇದರಿಂದ ಏನೂ ತಲೆ ಬಿಸಿ ಮಾಡಿಕೊಳ್ಳುವುದಿಲ್ಲ. ಅದು ಕೆಲವು 'ನಿಷ್ಪಕ್ಷಪಾತ' ಅಂದರೆ ತನ್ನ ವಿರುದ್ಧವಾಗಿ ಬರೆಯದ ಕೆಲವು ವರದಿಗಳನ್ನು ತೆಗೆದುಕೊಂಡು ತನ್ನ ಪರವಾಗಿ ತೋರಿಸುತ್ತದೆ. ಈಗ ಅದೂ ಸಹ ತನ್ನದೊಂದು ಹಣಕಾಸು ನೆರವು ಕೇಳುವ ಪಟ್ಟಿಯನ್ನು ಸಿದ್ಧಮಾಡಿಕೊಳ್ಳುತ್ತದೆ. ಆ ಪಟ್ಟಿ ಅಂತರರಾಷ್ಟ್ರೀಯ ನೆರವು ಸಂಸ್ಥೆಗಳು, ಸಹಾಯ ಹಸ್ತಗಳ ಕಡೆ ಧಾವಿಸುತ್ತದೆ. ಯುಎನ್‌ಡಿಪಿ, ಯೂನಿಸೆಫ್ ಯಾರಾದರೂ ಸರಿ ಸ್ವಲ್ಪ ಹಣ ಈ ಕಡೆ ಎಸೆಯುವವರು ಇದ್ದರೆಂದರೆ ಅಲ್ಲಿ ಈ ಪಟ್ಟಿ ಹಾಜರ್. ಈಗ ಏನಾಯಿತು ಒಂದು ಅಂತರರಾಷ್ಟ್ರೀಯ ಸಹಾಯ ಸಮಿತಿ ವರ್ಷಕ್ಕೆ 1500 ಮಿ.ಮೀ. ಮಳೆ ಬರುವ ಜಿಲ್ಲೆಯಲ್ಲಿ ಬರದ ವಿರುದ್ಧ ಹೋರಾಡಲು ಸಿದ್ಧವಾಗಿಬಿಡುತ್ತದೆ.

ಈಗ ಚಕ್ರದ ಉಲ್ಟಾ ಚಲನೆ ಆರಂಭ. ಈ ಸಹಾಯ ಹಸ್ತ ನೀಡಲು ಸಿದ್ಧರಾಗಿ ನಿಂತಿರುವ ದೇಶಗಳ ಸರ್ಕಾರಗಳಿಗೆ ತುರ್ತುಪರಿಹಾರ ನೀಡುವುದು ಅಂದ್ರೆ ಖುಷಿ. ಅವರ ಖರ್ಚುಮಾಡುವ ಹಣದಲ್ಲಿ ಈ ಮೊತ್ತ ಲೆಕ್ಕಕ್ಕೇ ಬಾರದಷ್ಟು ನಗಣ್ಯ. ಆದರೆ ಈ 'ಒಳ್ಳೆ ಕೆಲಸ' ಮಾಡಿದ್ದಕ್ಕೆ ಸಿಗುವ ಜಾಹಿರಾತು, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುವ ಹಿರಿಮೆ ತುಂಬಾ ದೊಡ್ಡದು (ಈ ತುರ್ತು ಪರಿಸ್ಥಿತಿಗಳು ನೀಡುವ ಅವಕಾಶ ಕೇವಲ ಬರದಿಂದಲೇ ಆಗಬೇಕಿಲ್ಲ. ನೌಕಾಸೇನೆಯ ಸೈನಿಕರು ಸೋಮಾಲಿಯಾದಲ್ಲಿ ಮಕ್ಕಳನ್ನು ಅಪ್ಪಿ ಮುದ್ದಾಡುತ್ತಿರುವ ಚಿತ್ರದ ತುಣುಕನ್ನು ಟೀವಿಯಲ್ಲಿ ಪದೇ ಪದೇ ಪ್ರದರ್ಶಿಸಿಯೂ ಇದೇ ಪರಿಣಾಮವನ್ನು ಉಂಟು ಮಾಡಬಹುದು). ಶ್ರೀಮಂತ ಹಾಗು ಬಡ ರಾಷ್ಟ್ರಗಳ ನಡುವೆ ಅನೇಕ ಗಂಭೀರ ಸಮಸ್ಯೆಗಳಿರುತ್ತವೆ– ಅಸಮಾನ ವ್ಯಾಪಾರ ಸಂಬಂಧ ಇಂತಹವು. ಅವುಗಳನ್ನು ನ್ಯಾಯಪರವಾಗಿ ನಿರ್ಧರಿಸಿಕೊಂಡರೆ ಬಡ ರಾಷ್ಟ್ರಗಳಿಗೇ ಎಷ್ಟೋ ಅನುಕೂಲ ಆಗುತ್ತವೆ. ಆದರೆ ಆಗ ಈ 'ದಾನಿ' ರಾಷ್ಟ್ರಗಳು ತಮ್ಮ ಕೈಯಿಂದ ಕಳೆದುಕೊಳ್ಳುವುದು ಹೆಚ್ಚಾಗಿರುತ್ತದೆ. ಅದಕ್ಕೆ ಬದಲು ತುರ್ತು ಸಹಾಯ ನಿಧಿಗೆ ಸ್ವಲ್ಪ ಹಣ ಒಗೆಯುವುದೇ ಅವರಿಗೆ ಕ್ಷೇಮ ಮತ್ತು ಸುಲಭ.

ಈಗ ಹಣ ಹಲವಾರು ಮೂಲಗಳಿಂದ ದೆಹಲಿಗೆ ಬಂದು ಬಿದ್ದಿದೆ. ಈಗ ಈ ಉಲ್ಟಾ ಸುರುಳಿ ಚಕ್ರದಲ್ಲಿ ಮುಂದಿನ ಹೆಜ್ಜೆ, ಕೇಂದ್ರ ಸರ್ಕಾರದ ಹಲವು ವಿಭಾಗಗಳು ಈ ಪರಿಹಾರ ನಿಧಿಗಾಗಿ ಕಚ್ಚಾಡತೊಡಗುತ್ತವೆ. 'ಆತ್ಮಸಾಕ್ಷಿಯನ್ನು' ಭಾರಿ ಹಣ ಎಚ್ಚರಗೊಳಿಸುವಷ್ಟು ತೀವ್ರವಾಗಿ ಮತ್ಯಾವುದೂ ಎಚ್ಚರಗೊಳಿಸುವುದಿಲ್ಲ. ಹಠಾತ್ತಾಗಿ ಒಂದು ವಿಭಾಗಕ್ಕೆ ಅಥವಾ ಮಂತ್ರಿ ಮಂಡಲಕ್ಕೆ ಇದ್ದಕ್ಕಿದ್ದಂತೆ ತಾನು ಕಾಪಾಡಲೇ ಬೇಕಿರುವ ಅರಣ್ಯ ನೆನಪಾಗುತ್ತದೆ. ಇನ್ನೊಂದಕ್ಕೆ ತಾನು ಕಾಪಾಡಬೇಕಿರುವ ನೀರಿನ ಮೂಲಗಳು ನೆನಪಾಗುತ್ತವೆ.

ಅಲ್ಲದೆ ಪಾಪ ತಿಂಗಳಿಗೆ 30 ಸಾವಿರ ರೂ. ಫೀಸು ಕೇಳುವ ಈ ಕನ್ಸಲ್ಟೆಂಟ್‌ಗಳ ಹೊಟ್ಟೆ ಬಟ್ಟೆ ನೋಡಿಕೊಂಡು ಪೊರೆಯುವ ಕಾರ್ಯ ಬೇರೆ ಬಾಕಿ ಇದೆಯಲ್ಲ? ಸರಿ, ಅವರ ಸಲಹೆ ತೆಗೆದುಕೊಂಡು ಈ ಬರಪೀಡಿತ ಜಿಲ್ಲೆಗಳಲ್ಲಿ ಹೇಗೆ ಬರದ ವಿರುದ್ಧ ಹೋರಾಡಬೇಕು ಎಂಬುದರ ಬಗ್ಗೆ ಅಥವಾ ಹೇಗೆ ಜಲ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು ಎನ್ನುವುದರ ಬಗ್ಗೆ ಅಥವಾ ಯಾವುದೋ ಒಂದು ಕೆಲಸಕ್ಕೆ ಒಂದು ಯೋಜನೆ ಸಿದ್ಧವಾಗುತ್ತದೆ. ನಿಜ, ನೀರಿನ ಸಮಸ್ಯೆ ಒಂದು ಗಂಭೀರ ವಿಷಯ, ಅದರ ಬಗ್ಗೆ ಅಧ್ಯಯನ ನಡೆಸಲೇ ಬೇಕು. ಆದರೆ ಇಲ್ಲಿ ಹಣ ಬಂದಿದೆ ಎಂಬ ಕಾರಣಕ್ಕೆ ಯೋಜನೆಗಳೂ, ಅಧ್ಯಯನಗಳೂ ತಯಾರಾಗುತ್ತವೆ. (ಯಾವುದೇ ಹಳ್ಳಿಗಳಿಗೆ ಹೋದರೆ ಅಲ್ಲಿನ ಜಿಲ್ಲಾ ಕಲೆಕ್ಟರ್ ಅಥವಾ ಅಲ್ಲಿನ ರೈತರು ಅವರು ಎದುರಿಸುತ್ತಿರುವ ನೀರಿನ ಸಮಸ್ಯೆಯ ಬಗ್ಗೆ ಇನ್ನೂ ಅಧಿಕಾರಯುತವಾಗಿ ಹೇಳಬಹುದು. ಆದರೆ ಅವರು ತಜ್ಞರಲ್ಲವಲ್ಲ?!)

ಈಗ ಹಣ ಕೇಂದ್ರದಿಂದ ರಾಜ್ಯಗಳಿಗೆ ಬರುತ್ತದೆ. ಅದರಲ್ಲಿನ ಪಾಲಿಗಾಗಿ ಮತ್ತೆ ಕಿತ್ತಾಟ ಮುಂದುವರಿಯುತ್ತದೆ. ಜಿಲ್ಲಾ ಮಟ್ಟದಲ್ಲಿ ಬ್ಲಾಕ್ ಅಥವಾ ತಾಲ್ಲೂಕುಗಳು ತಮ್ಮ ತಮ್ಮ ಪಾಲಿನ ಹಣಕ್ಕಾಗಿ ಗಾಳ ಹಾಕತೊಡಗುತ್ತವೆ. ಸರಿ ಹಲವಾರು ಕೆಲಸಗಳಿಗೆ ಕಾಮಗಾರಿಗಳು ಆರಂಭವಾಗುತ್ತವೆ. ಅಲ್ಪಸ್ವಲ್ಪ ದುಡ್ಡು ಕಡೆಗೆ ಭಾದಿತರ ಮಡಿಲಿಗೂ ಬೀಳಬಹುದು, ಆದರೆ ಅದು ಅವರ ಯಾವುದೇ ಸಮಸ್ಯೆಯನ್ನು ತೀರಿಸುವುದಿಲ್ಲ.

ನಿಜವಾದ ಸಮಸ್ಯೆಗಳ ಮೂಲವನ್ನು ಗುರುತಿಸಿಯೇ ಇಲ್ಲವಾದ್ದರಿಂದ ಮುಂದಿನ ವರ್ಷ ಮತ್ತೆ ಇದೇ ಕಥೆಯ ಚರ್ವಿತ ಚರ್ವಣ ಆಗುತ್ತದೆ.

ಕೊನೆಗೆ ಏನಾಗುತ್ತದೆ ಸದುದ್ದೇಶ ಹೊಂದಿರುವ ಮಾಧ್ಯಮವೂ ಸೇರಿದಂತೆ ಹಲವಾರು ಮೂಲಗಳು ಜಗತ್ತಿಗೆ ಈ ಪ್ರಾಕೃತಿಕ ವೈಪರಿತ್ಯದ ಚಿತ್ರಣ ನೀಡಲು ಜೊತೆಗೂಡುತ್ತವೆ. ಅನೇಕ ಸಲ ಇದು ಒಂದು ಪ್ರಕರಣವನ್ನು ವೈಭವೀಕರಿಸಲು ಹೋಗಿ, ಅದರ ಹಿಂದಿನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕಡೆಗಣಿಸಿಬಿಡುತ್ತದೆ. ಈ ಸುರುಳಿ ಚಕ್ರ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು ಆದರೆ ಅದರ ಇರುವಿಕೆಯಂತೂ ಸುಳ್ಳಲ್ಲ.

ಆದರೂ ನೀರಿನ ಕಾರಣಕ್ಕಾಗಿ ಹಲವಾರು ಜನ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಭಾರತದ ಅನೇಕ ಹೋರಾಟಗಳು, ರಾಜ್ಯ ರಾಜ್ಯಗಳ ನಡುವಿನ ಜಗಳಗಳು ನೀರಿನೊಂದಿಗೆ ತಳುಕುಹಾಕಿಕೊಂಡಿವೆ. ಈಗ ಅದರ ತೀವ್ರತೆ ಸ್ವಲ್ಪ ಕಡಿಮೆ ಆಗಿರಬಹುದು, ಆದರೆ ನೀರಿನ ಹಂಚಿಕೆ ವಿಷಯ ಒಂದು ಕಾಲಕ್ಕೆ ಪಂಜಾಬನ್ನು ಅಲ್ಲಾಡಿಸಿ ಹಾಕಿತ್ತು. ಕರ್ನಾಟಕ ಹಾಗು ತಮಿಳುನಾಡಿನ ನಡುವೆ ನಡೆಯುತ್ತಿರುವ ಜಗಳ ಕಾವೇರಿ ನೀರಿಗೆ ಸಂಬಂಧಪಟ್ಟಿದ್ದು. (ಬಾಂಗ್ಲಾ ದೇಶದ ಜೊತೆಗಿನ ಭಾರತದ ಹಲವು ಸಮಸ್ಯೆಗಳು ಈ ನೀರಿನ ಹಂಚಿಕೆ ಮೂಲದಿಂದಲೇ ಉಂಟಾದವು) ನೀರಿನ ಕಾರಣಕ್ಕಾಗಿ ಜಗಳ ಹಳ್ಳಿಗಳ ಮಟ್ಟದಲ್ಲೂ ನಡೆಯುತ್ತಿರುತ್ತದೆ. ಹಳ್ಳಿ–ಹಳ್ಳಿಗಳ ನಡುವೆ, ಒಂದೇ ಹಳ್ಳಿ ಹಾದಿಹಾಡಿಗಳ ನಡುವೆ, ಜಾತಿಜಾತಿಗಳ ನಡುವೆ ವರ್ಗ ವರ್ಗಗಳ ನಡುವೆ ನೀರಿನ ಕಾರಣಕ್ಕೆ ಜಗಳ ಹೋರಾಟಗಳು ನಡೆಯುತ್ತಲೇ ಇರುತ್ತವೆ.

ಮಾನವ ನಿರ್ಮಿತ ಬರದ ಕಾರಣದಿಂದ ಉಂಟಾಗುವ ಸಮಸ್ಯೆಗಳು ಈಗ ಹೆಚ್ಚುತ್ತಿವೆ. ಅರಣ್ಯನಾಶ ಅಪಾರ ಹಾನಿ ಉಂಟುಮಾಡುತ್ತಿದೆ. ಇದುವರೆಗೂ ಅವರ ಪಾಲಿಗಿದ್ದ ಸಾಮೂಹಿಕ ಜಲಮೂಲಗಳು ಈಗ ಹಳ್ಳಿಗರ ಕೈ ಜಾರುತ್ತಲಿದೆ. ಪಾರಂಪರಿಕ ನೀರಾವರಿ ಪದ್ಧತಿಗಳು ವೇಗವಾಗಿ ನಾಶವಾಗುತ್ತಿವೆ. ನಿಜಕ್ಕೂ ಬರ ಪರಿಸ್ಥಿತಿ ಎದುರಿಸುತ್ತಿರುವ ಪ್ರದೇಶಗಳಲ್ಲಿ ನೀರಿನ ಮೂಲಗಳ ಖಾಸಗೀಕರಣ ಆರಂಭವಾಗಿದೆ. ಉದಾಹರಣೆಗೆ ರಾಮನಾಥದ ನೀರ್ ಬಾಸ್ ವಿಷಯವನ್ನೇ ತೆಗೆದುಕೊಳ್ಳಿ. ಈಗ ಎರಡು ರೀತಿಯ ಬರಗಳನ್ನು ನಾವು ಕಾಣುತ್ತಿದ್ದೇವೆ. ಒಂದು ನಿಜವಾದ ಬರ, ಇನ್ನೊಂದು ಮಾನವನಿರ್ಮಿತ ಬರ. ಎರಡೂ ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಇರಬಹುದು.

*****

## ಲೇಖಕರು

ಜಿ.ಎನ್. ಮೋಹನ್ ಕನ್ನಡ ಪತ್ರಿಕೋದ್ಯಮದ ಪ್ರಮುಖರಲ್ಲೊಬ್ಬರು. ಪತ್ರಿಕೆ, ಎಲೆಕ್ಟ್ರಾನಿಕ್ ಹಾಗೂ ಆನ್‌ಲೈನ್ ಈ ಮೂರೂ ಮಾಧ್ಯಮಗಳಲ್ಲಿ ನುರಿತವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ನಾಟಕದಲ್ಲಿ ಮೊದಲ ರ್‍ಯಾಂಕ್ ಹಾಗೂ ಎರಡು ಚಿನ್ನದ ಪದಕಗಳೊಂದಿಗೆ ಪದವಿ ಹಾಗೂ ಸಂವಹನದಲ್ಲಿ ಸ್ನಾತಕೋತ್ತರ ಪದವಿ ಪಡೆದ್ದಿದ್ದಾರೆ.

'ನನ್ನೊಳಗಿನ ಹಾಡು ಕ್ಯೂಬಾ' ಪ್ರವಾಸ ಕಥನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಪಾತ್ರವಾಗಿದೆ. 'ಪ್ರಶ್ನೆಗಳಿರುವುದು ಶೇಕ್ಸ್‌ಪಿಯರನಿಗೆ' ಕವನ ಸಂಕಲನ ಪ್ರತಿಷ್ಠಿತ ಪುತಿನ ಪ್ರಶಸ್ತಿಗೆ ಪಾತ್ರವಾಗಿದೆ. ರಂಗ ಕಿನ್ನರಿ ಹಾಗೂ ಥರ್ಡ್ ಬೆಲ್ ಕೃತಿಗಳು ಸತತವಾಗಿ ಎರಡು ವರ್ಷ ನಾಟಕ ಅಕಾಡೆಮಿಯ ಪುಸ್ತಕ ಗೌರವ ಪಡೆದಿವೆ.

ಪ್ರಸ್ತುತ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಕೃತಿಗೆ ಸಿದ್ಧವನಹಳ್ಳಿ ಕೃಷ್ಣಶರ್ಮ ಹಾಗೂ ಅಮ್ಮ ಪ್ರಶಸ್ತಿಗಳು ಸಂದಿವೆ. ಕರ್ನಾಟಕದ ಹಲವು ವಿಶ್ವವಿದ್ಯಾಲಯಗಳಲ್ಲಿ ಈ ಕೃತಿಯ ಆಯ್ದ ಭಾಗಗಳು ಪಠ್ಯವಾಗಿದೆ.

## ಆಶಯ

ಬರ ಪ್ರಕೃತಿದತ್ತ ಕ್ರಿಯೆ. ಬರದ ತೀವ್ರತೆ ತಗ್ಗಿಸಲು ದೀರ್ಘಾವಧಿ ಯೋಜನೆಗಳು ಬೇಕು. ಆದರೆ ಇದರ ಸುತ್ತ ನಡೆಯುವ ನಾಟಕೀಯ ನಿರ್ವಹಣೆಯನ್ನ ತಮ್ಮದೇ ಶೈಲಿಯಲ್ಲಿ ಲೇಖಕರು ಪರಿಚಯಿಸುವ ರೀತಿ ಹಾಗೂ ವಾಸ್ತವ ಸತ್ಯವನ್ನು ನುಡಿಗಳ ಮೂಲಕ ಹೆಣೆದಿರುವ ಕೌಶಲ್ಯಗಳಿಗಾಗಿ ಈ ನುಡಿ ಚಿತ್ರ ವಿಶೇಷ ಎನಿಸುತ್ತದೆ. ಕೃಷಿ ಪದವಿಧರರಿಗೆ ಬರಗಾಲ ನಿರ್ವಹಣೆ ಒಂದು ಮಹತ್ವದ ಸವಾಲಾದ್ದರಿಂದ. ಈ ನುಡಿ ಚಿತ್ರ ವಿಶಿಷ್ಠ ಅನುಭವ ನೀಡುತ್ತದೆ.

## ಶಬ್ದಾರ್ಥಗಳು

ನಗಣ್ಯ=ಲೆಕ್ಕಕ್ಕೆ ಬಾರದ, ಪ್ರಶಂಸನೀಯ =ಮೆಚ್ಚುಗೆಯ, ಕಂಗೆಟ್ಟ=ದಿಕ್ಕುತಪ್ಪಿದ, ಕನ್ಸಲ್ಟೆಂಟ್= ಸಲಹೆಗಾರ, ಜಿಲ್ಲಾ ಕಲೆಕ್ಟರ್=ಜಿಲ್ಲಾಧಿಕಾರಿ, ಚರ್ವಿತ ಚರ್ವಣ= ಪುನರುಕ್ತಿ, ವ್ಯರ್ಥವಾದ ಕಾರ್ಯ

## ಮಾದರಿ ಪ್ರಶ್ನೆಗಳು

1. ಯಾವುದನ್ನು ಮೂರನೆಯ ಬೆಳೆ ಎಂದು ಕರೆಯಲಾಗುತ್ತದೆ?
2. ಬರಗಾಲದ ಪರಿಣಾಮಗಳನ್ನು ಲೇಖಕರು ವಿವರಿಸಿರುವ ಬಗೆ ತಿಳಿಸಿ?
3. ಬರ ವಿರೋಧಿ ಯೋಜನೆಯನ್ನು ಯಾರು ಉದ್ಘಾಟಿಸಿದರು?
4. ಅರೆಕಾಲಿಕ ವರದಿಗಾರರ ಕುರಿತು ಲೇಖಕರ ಅಭಿಪ್ರಾಯವನ್ನು ತಿಳಿಸಿ?

5. ಬರ ಎನ್ನುವುದು ಒಂದು ಸಂಕೀರ್ಣ ಪ್ರಕ್ರಿಯೆ ಈ ಬಗ್ಗೆ ವಿವರಿಸಿ?

6. 'ಮಾನವ ಆಸಕ್ತಿ' ವರದಿ ಕುರಿತು ಬರೆಯಿರಿ?

7. ಮಾನವ ನಿರ್ಮಿತ ಬರವನ್ನು ಕುರಿತು ವಿವರಿಸಿ?

8. ಯಾತಕ್ಕೆ ಮಳೆ ಹೋದವೋ.. ಕುರಿತ ಲೇಖನದ ಆಶಯವೇನು?

**ಹೆಚ್ಚಿನ ಓದು**

1. "ಬರ ಅಂದ್ರೆ ಎಲ್ಲರಿಗೂ ಇಷ್ಟ", ಮೂಲ : ಪಿ.ಸಾಯಿನಾಥ್, ಕನ್ನಡಕ್ಕೆ: ಜಿ.ಎನ್. ಮೋಹನ್, ಅಭಿನವ ಪ್ರಕಾಶನ–2016, ಬೆಂಗಳೂರು.

೫

# ಎರಡನೆಯ ಅಚಾತುರ್ಯ

ಡಾ. ಗಣೇಶ ಎಂ. ನಿಲೇಸರ

"ಅಯ್ಯಯ್ಯೋ"

–ನಾಥಪ್ಪ ಇದ್ದಕ್ಕಿಂತೆ ಕೆಟ್ಟಸ್ವರದಲ್ಲಿ ಕೂಗಿಕೊಂಡ. "ಇದೇನ್ಮಾಡಿಬಿಟ್ರ ಡಾಕ್ಟ್ರೇ" ಎನ್ನುತ್ತ ತನ್ನ ಪೃಷ್ಠಭಾಗವನ್ನು ಒತ್ತಿ ಹಿಡಿದುಕೊಂಡು ಕೊಟ್ಟಿಗೆಯ ತುಂಬ ಕುಣಿದಾಡಿಬಿಟ್ಟ.

ಛೆ....ಛೆ....ಛೆ. ಸ್ಸಾರಿ, ಸೂಜಿ ಜೋರಾಗಿ ತಾಗಿತೇ?" ಕೈಯಲ್ಲಿ ಔಷಧ ತುಂಬಿದ ಸೂಜಿ ಅಳವಡಿಸಲ್ಪಟ್ಟ ಸಿರಿಂಜ್ ಹಿಡಿದು ಕೇಳಿದೆ. ಅವನು ನನ್ನನ್ನೇ ಕಡುಕೋಪದಿಂದ ದುರುಗುಟ್ಟಿಕೊಂಡು ನೋಡಿದ "ಬರೀ ತಾಗಿದ್ದಲ್ಲ.... ಕರುವಿನ ಬದಲು ನನ್ನ ಕುಂಡೆಗೇ ಇಂಜೆಕ್ಷನ್ ಚುಚ್ಚಿಬಿಟ್ರಿ... ಹ್ಣಾಂ.. ಹ್ಣೂಂ..." ನೋವಿನಿಂದ ಮುಖ ಹಿಂಡುತ್ತ ನರಳಿದ.

"ಇಲ್ಲ ಇಲ್ಲ, ಔಷಧವೇನೂ ಒಳಗೆ ಹೋಗಿಲ್ಲ, ಸ್ವಲ್ಪ ಚುಚ್ಚಿತಷ್ಟೇ.." ಅವನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದೆ.

ಆಗಿದ್ದಿಷ್ಟೇ, ಗರ್ಭ ಧರಿಸಿದ ಹಸುಗಳಲ್ಲಿ ಅಬಾರ್ಷನ್ ಉಂಟುಮಾಡುವ 'ಬ್ರುಸೆಲ್ಲೋಸಿಸ್' ರೋಗದ ವಿರುದ್ಧ ಅಂದು ಊರಿನ ಪಟೇಲ ಈಶ್ವರಪ್ಪನವರ ದನಗಳಿಗೆ ಮತ್ತು ಕರುಗಳಿಗೆಲ್ಲವಕ್ಕೂ ಲಸಿಕೆ ಹಾಕುತ್ತಿದ್ದೆ. ನಾಥಪ್ಪ ಅಲ್ಲಿಯ ಕೆಲಸಗಾರ. ಇಂಜೆಕ್ಷನ್ ಚುಚ್ಚಲು ಸೂಜಿಯನ್ನು ಕರುವಿನ ತೊಡೆಗೆ ತಾಗಿಸುತ್ತಿದ್ದಂತೆ ಕರು ಇದ್ದಕ್ಕಿದ್ದ ಹಾಗೆ ಕಾಲು ಜಾಡಿಸಿ ಕುಣಿದು ಹಿಂದುಮುಂದಾಗಿ ತಿರುಗಿ ಬಿಟ್ಟಿತು. ನಾನು ಸಾವರಿಸಿಕೊಳ್ಳುವುದರಲ್ಲಿಯೇ ಅರೆಕ್ಷಣದಲ್ಲಿ ನನ್ನ ಕೈಯಲ್ಲಿದ್ದ ಸೂಜಿ ನಾಥಪ್ಪನ ಹಿಂಭಾಗಕ್ಕೆ ಚುಚ್ಚಿತು!

ಅವನ ಕೂಗಾಟ ಕೇಳಿ ಇನ್ನಿಬ್ಬರು ಕೆಲಸಗಾರರು ರೈ ಮತ್ತು ಕಪಾಲಿ ಜೋರಾಗಿ ನಗತೊಡಗಿದರು. ಆ ಮೂರು ಜನ ಕೆಲಸಗಾರರ ಪೈಕಿ ನಾಥಪ್ಪನೇ ಒಂಥರ ಬೇರೆ. ಎಲ್ಲರ ಮೇಲೂ ಜಗಳ ಕಾಯುತ್ತಿದ್ದ. ಉಳಿದಿಬ್ಬರು ಹಾಗಲ್ಲ, ಒಬ್ಬರ

ಮೇಲೊಬ್ಬರು ಜೋಕ್ ಮಾಡಿಕೊಂಡು ನಗುನಗುತ್ತ ಕೆಲಸ ಪೂರೈಸಿಕೊಂಡು ಹೋಗುತ್ತಿದ್ದರು.

ನನ್ನ ಕೆಲಸವೇ ಹಾಗೆ. ಪ್ರಾಣಿಗಳ ಜೊತೆ ಹೆಣಗಾಡಬೇಕಾಗಿದ್ದರಿಂದ ಇಂತಹ ಸಂದರ್ಭಗಳಲ್ಲಿ ಪೆಟ್ಟು ತಗಲುವುದು ಸಾಮಾನ್ಯವಾಗಿ ನನಗೇ. ಇಂಜೆಕ್ಷನ್ ಮಾಡುವಾಗ ಅವು ಕುಣಿದಾಡುತ್ತಿದ್ದರೆ ನನ್ನ ಕೈಗೇ ಸೂಜಿ ಚುಚ್ಚುವುದು ಹೆಚ್ಚು. ಇಲ್ಲವೇ ಅವು ಜಾಡಿಸಿ ಒದೆಯುವಾಗ ನನ್ನ ತೊಡೆ, ಕಾಲುಗಳು ಏಟು ತಿನ್ನುವುದು ಸಹ ಸಾಮಾನ್ಯವೇ. ಹಸುಗಳಿಂದ ತುಳಿಸಿಕೊಳ್ಳುವುದು, ಕೋಡಿನಿಂದ ಚುಚ್ಚಿಸಿಕೊಳ್ಳುವುದು ಇವೆಲ್ಲ ಇದ್ದದ್ದೇ, ಆದರೆ ಇಂದು ಮಾತ್ರ ನನ್ನ ಬದಲು ಈ ಕೆಲಸದಾಳು ಸೂಜಿ ಚುಚ್ಚಿಸಿಕೊಂಡ!

"ಹುಂ.. ನಕ್ಕಿದ್ದು ಸಾಕು.... ಈ ಅಬಾರ್ಷನ್ ಇಂಜೆಕ್ಷನ್‌ನಿಂದ ನನಗೇನಾದ್ರೂ ತೊಂದರೆ ಆಗ್ತದೆಯೋ?" ಕೇಳಿದ ನಾಥಪ್ಪ

"ನಿನ್ ಹೊಟ್ಟೆಯೊಳಗೆ ಕರುವೇನೂ ಇಲ್ವಲ್ಲ.... ಕರು ಇದ್ದಿದ್ರೆ ಅಬಾರ್ಷನ್ ಆಗ್ತಿತ್ತು" ಕಪಾಲಿಯ ನಗುವಿನ ಜತೆ ರೈ ಕೂ ಸೇರಿಕೊಂಡ.

ನಾಥಪ್ಪ ಗುಡುಗಿದ. "ಬಾಯಲ್ಲಿ ಹೇಳೋಕೇನು.. ಆದ್ರೂ... ನನ್ಗೆ ಏನಾದ್ರೂ ಸಮಸ್ಯೆ ಆಗ್ಬಹುದಾ... ಅಂತ".

ನಾನು ಹೇಳಿದೆ. "ಇಲ್ಲ ಕಣಯ್ಯಾ.. ಸೂಜಿ ಚುಚ್ಚಿದ್ದಷ್ಟೇ. ಔಷಧ ಒಂಚೂರೂ ಒಳಗೆ ಹೋಗಿಲ್ಲ. ಹೆದರಬೇಡ, ಏನೂ ಆಗಲ್ಲ...." ಪೂರ್ಣ ತುಂಬಿಕೊಂಡಿದ್ದ ಸಿರಿಂಜನ್ನು ಅವನಿಗೆ ತೋರಿಸಿದೆ.

ಆತನಿಗೆ ಸಮಾಧಾನವಾದಂತೆ ಕಾಣಲಿಲ್ಲ. ನೀವ್ ಹೇಳೋದು ಹೇಳ್ತೀರಿ, ಚುಚ್ಚಿಸಿಕೊಂಡವನು ನಾನು. ಇನ್ನಂತೂ ನಾನು ದನ ಹಿಡಿಯಲ್ಲ. ಬೇರೆಯಾರಾದರೂ ಬನ್ನಿ....."

ರೈ ಆತನಿಗೆ ಸಮಾಧಾನ ಹೇಳಿದ. "ನೀನು ಸೀದಾ ಮನೆಗೆ ಹೋಗಿ ರೆಸ್ಟ್ ತಗೋ. ಹೇಗಿದ್ರೂ ಇತ್ತೀಚೆಗಷ್ಟೇ ಮದ್ವೆ ಆಗಿದ್ದೀಯ...... ಹೊಸ ಹೆಂಡ್ತಿ ಚೆನ್ನಾಗಿ ನೋಡ್ಕೋಳ್ತಾಳೆ ಬಿಡು.... ಕುಂಡೆಗೆ ಬಿಸಿ ನೀರ ಶಾಖ ಕೊಡೋದಕ್ಕೆ ಹೇಳು."

ಇದಾದ ನಂತರ ಪ್ರತಿ ಬಾರಿ ನಾನು ಆ ಡೈರಿ ಫಾರ್ಮ್‌ಗೆ ಚಿಕಿತ್ಸೆಗಾಗಿ ಹೋದಾಗಲೂ ನಾಥಪ್ಪನ ನನ್ನ ಮೇಲೆ ಒಂದಿಲ್ಲೊಂದು ದೂರು ಹೇಳುತ್ತಿದ್ದ. ನನ್ನನ್ನು ಕಂಡರಾಗುತ್ತಿರಲಿಲ್ಲ ಅವನಿಗೆ ಅಂದಿನ ಆ ನೋವು ಬಹು ದಿನ ಉಳಿಯಿತಂತೆ... ದೊಡ್ಡದಾಗಿ ಬಾತು ಹೋಗಿ ತುಂಬಾ ತೊಂದರೆಯಾಯಿತಂತೆ... ಹೀಗೆ ಏನೇನೋ. ಕೊನೆಕೊನೆಗೆ ಅವನು ಸುಮ್ಮನೇ ಇಲ್ಲಸಲ್ಲದ್ದನ್ನು ಕಲ್ಪಿಸಿಕೊಂಡು ಹೇಳುತ್ತಿದ್ದಾನೆಂದು ತಿಳಿದು ನಾನೂ ಸಹ ಅವನ ಕಂಪ್ಲೇಂಟುಗಳ ಬಗ್ಗೆ ಉದಾಸೀನ ಮಾಡತೊಡಗಿದೆ. ಆದರೆ ಸುಮಾರು ಒಂದು ವರ್ಷ ಕಳೆದ ಮೇಲೆ ಒಂದು ದಿನ ಅಲ್ಲಿಗೆ ಹೋದಾಗ ನನ್ನ ಮೇಲೆ ಒಂದು ಗಂಭೀರ ಅಪಾದನೆ ಮಾಡಿದ.

“ನೀವು ನನಗೆ ಸಂಸಾರ ಮಾಡುವ ಅವಕಾಶವನ್ನೇ ಕಿತ್ಕೊಂಡು ಬಿಟ್ರಿ”

“ಅಂದ್ರೇ?” ನನಗರ್ಥವಾಗಲಿಲ್ಲ.

“ನಾನು, ನನ್ಹೆಂಡ್ತಿ ಇಬ್ಬರೂ ಮಕ್ಕಳಿಗೋಸ್ಕರ ಬಹಳ ದಿನಗಳಿಂದ ಪ್ರಯತ್ನ ಮಾಡ್ತಾನೇ ಇದ್ದೀವಿ... ಆದರೆ ಏನೂ ಆಗ್ತಾ ಇಲ್ಲ..... ಆವತ್ತು ನೀವು ಆ ದರಿದ್ರ ಇಂಜೆಕ್ಷನ್ ಕೊಟ್ಟಿದ್ದು ಅಬಾರ್ಷನ್ ಅಥವಾ ಬ್ರೀಡಿಂಗ್‌ಗೆ ಸಂಬಂಧಿಸಿದ್ದು ತಾನೇ.... ಅದರಿಂದಲೇ ನನಗೆ ಮಕ್ಕಳಾಗ್ತಾ ಇಲ್ಲ. ನನ್ನ ಜೀವನವನ್ನೇ ಹಾಳ್ ಮಾಡಿಬಿಟ್ರಿ”

ನನಗೆ ಆಘಾತವಾಯ್ತು. ಯಕಃಶ್ಚಿತ್ ಆ ಬ್ರುಸೆಲ್ಲಾ ಲಸಿಕೆಯಿಂದ ಈ ತರಹದ ಪರಿಣಾಮ ಉಂಟಾಗಲು ಸಾಧ್ಯವೇ? ನಾನು ಎಷ್ಟು ಸಮಾಧಾನ ಹೇಳಿದರೂ ನಂಬುವ ಸ್ಥಿತಿಯಲ್ಲಿ ಅವನಿರಲಿಲ್ಲ. ಅವನ ಪ್ರಕಾರ ತನ್ನ ವಂಶ ಬೆಳೆಯದಿರಲು ನಾನೇ ಸಂಪೂರ್ಣ ಕಾರಣೀಕರ್ತನಾಗಿದ್ದೆ.

ಅಷ್ಟರಲ್ಲಿ ಉಕ್ಕಿ ಬರುತ್ತಿದ್ದ ನಗುವನ್ನು ಅಡಗಿಸಿಕೊಂಡು ಕಪಾಲಿ ಹೇಳಿದ, “ನೀವೇನ್ ಬೇಜಾರು ಮಾಡ್ಕೋಬೇಡಿ ಡಾಕ್ಟ್ರೆ, ಅವ್ನಿಗೆ ಆ ಕೆಲಸ ಸರಿಯಾಗಿ ಮಾಡಕ್ಕೆ ಬರಲ್ಲ.. ಹೀಗಾಗಿ ನಿಮ್ಮ ಮೇಲೆ ಗೂಬೆ ಕೂರಿಸ್ತಾ ಇದ್ದಾನೆ.....”

ಅವರಿಬ್ಬರೂ ಜೋರಾಗಿ ನಗತೊಡಗಿದರು. ನಾನು ನಗಲಿಲ್ಲ. “ಇದು ಹೇಗೆ ಸಾಧ್ಯ....?” ಎಂತಲೇ ಯೋಚಿಸತೊಡಗಿದೆ.

ಇಷ್ಟಾದ ಮೇಲೆ ನಾಥಪ್ಪನಿಗೆ ನನ್ನ ಮೇಲೆ ಇದ್ದ ತಿರಸ್ಕಾರ ಹಾಗೂ ದ್ವೇಷ ಇನ್ನೂ ಹೆಚ್ಚಾಯಿತು. ಇದರಿಂದ ಆ ಡೈರಿ ಫಾರ್ಮಿಗೆ ಹೋಗುವುದಕ್ಕೇ ನನಗೆ ಬೇಜಾರತೊಡಗಿತು. ನಂತರ ಹಲವಾರು ಬಾರಿ ಅಲ್ಲಿಗೆ ಹೋದಾಗ ಅವನು ಈ ವಿಷಯ ಪ್ರಸ್ತಾಪಿಸದಿದ್ದರೂ ಅವನ ದ್ವೇಷದ ಉರಿ ನನ್ನ ಗಮನಕ್ಕೆ ಬರುತ್ತಲೇ ಇತ್ತು. ಅವನ ಶಾಶ್ವತ ಷಂಢತನಕ್ಕೆ ನಾನೇ ಕಾರಣನಾಗಿದ್ದೆ.

ಹೀಗೇ ಕೆಲವು ತಿಂಗಳುಗಳು ಕಳೆದವು. ಆಗ ಚಳಿಗಾಲ. ಈಶ್ವರಪ್ಪನವರ ಡೈರಿ ಫಾರ್ಮಿನ ಆರೇಳು ಕರುಗಳಿಗೆ ನ್ಯುಮೋನಿಯಾ ಆವರಿಸಿಕೊಂಡಿತ್ತು. ಒಳ್ಳೆಯ ಕರುಗಳು. ಪ್ರಜಾಪತಿ ಅಂದು ಊರಿನಲ್ಲಿ ಇಲ್ಲದ್ದರಿಂದ ನಿರ್ವಾಹವಿಲ್ಲದೇ ಆಂಟಿಬಯೋಟಿಕ್ ಇಂಜಕ್ಷನ್ ನೀಡಲು ಅಲ್ಲಿಗೆ ಹೋದೆ. ಎಂದಿನಂತೆ ಆ ಮೂವರೂ ಕೆಲಸಗಾರರು ಒಂದಾದ ಮೇಲೊಂದು ಕರುಗಳನ್ನು ನನ್ನೆದುರು ಹಿಡಿದು ತಂದು ಬಿಗಿಯಾಗಿ ಹಿಡಿಯುವುದು... ನಾನು ಇಂಜೆಕ್ಷನ್ ಚುಚ್ಚುವುದು ನಡೆದಿತ್ತು. ಒಂದು ಕರುವನ್ನು ರೈ ಹಿಡಿದ್ದ. ಕಪಾಲಿ ಇನ್ನೊಂದನ್ನು ಹಿಡಿದು ತರಲು ಹೊರಗೆ ಹೋಗಿದ್ದ. ನಾಥಪ್ಪ ಒಂದು ಬಲವಾದ ಕರುವನ್ನು ಎಳೆದು ನನ್ನೆಡೆಗೆ ತರುತ್ತಿದ್ದ. ಅದು ಬಹಳ ತುಂಟ ಕರು. ಸರಿಯಾಗಿ ನಡೆದುಬರಲು ತಕರಾರು ಮಾಡುತ್ತಿತ್ತು. ಇದ್ದಕ್ಕಿದಂತೆ ಏನಾಯಿತೋ ಗೊತ್ತಿಲ್ಲ. ಆ ಕರು ನನ್ನೆಡೆಗೆ ಅವನನ್ನು ದೂಡಿರಬೇಕು, ಕಂಟ್ರೋಲು ತಪ್ಪಿ ನಾಥಪ್ಪ ನೇರವಾಗಿ ನನ್ನ ಮೇಲೆ ಬಂದು ಬಿದ್ದ. ಆ ಕ್ಷಣದಲ್ಲಿಯೇ ನನ್ನ ಕೈಯಲ್ಲಿದ್ದ ಆಂಟಿಬಯೋಟಿಕ್ ತುಂಬಿದ ಸೂಜಿ ಅವನ ಪೃಷ್ಠಕ್ಕೆ ಚುಚ್ಚಿಕೊಂಡಿತು.

"ಅಯ್ಯಯ್ಯೋ..." ಕೆಟ್ಟ ಸ್ವರದಲ್ಲಿ ಕೂಗಿಕೊಂಡ ನಾಥಪ್ಪ. ನಾನು ಕಿಂಕರ್ತವ್ಯಮೂಢನಾಗಿ ನಿಂತುಬಿಟ್ಟೆ. ಇತಿಹಾಸ ಮರುಕಳಿಸುತ್ತದೆ ಎಂಬ ಮಾತು ನಿಜಕ್ಕೂ ಸತ್ಯ! ಎರಡನೇ ಬಾರಿಗೆ ಅವನ ಹಿಂಭಾಗಕ್ಕೆ ನನ್ನ ಸೂಜಿ ಚುಚ್ಚಿತ್ತು.

"ದರಿದ್ರದವನೇ.... ಮತ್ತೆ ಚುಚ್ಚಿದ್ಯಲ್ಲ ನೀನು" ಕುಂಡೆಯನ್ನು ಗಟ್ಟಿಯಾಗಿ ಒತ್ತಿ ಹಿಡಿದುಕೊಂಡು ತಾಳ್ಮೆ ಕಳೆದುಕೊಂಡು ಅರಚಿದ. ನನಗೆ ಹೊಡೆದೇ ಬಿಡುತ್ತಾನೇನೋ ಎಂದು ಆ ಕ್ಷಣದಲ್ಲಿ ಹೆದರಿದೆ. ಉಳಿದಿಬ್ಬರೂ ಬಿದ್ದುಬಿದ್ದು ನಗುತ್ತಿದ್ದರು. ನನ್ನ ಅವಸ್ಥೆ ನನಗೆ.

"ನಿಮ್ಮ ಆ ಮೊದಲನೇ ಇಂಜೆಕ್ಷನ್‌ನಿಂದ ಸಾಕಷ್ಟು ಸಮಸ್ಯೆಯಾಯ್ತು ನಂಗೆ. ಈ ಎರಡನೇ ಇಂಜೆಕ್ಷನ್ ಏನು ಮಾಡುತ್ತೋ? ಉರಿ ಮುಖದಿಂದ ಕೂಗಿದ ನಾಥಪ್ಪ.

ನಾನು ಸಾವರಿಸಿಕೊಂಡು, "ನಿಜವಾಗ್ಲೂ ಹೇಳ್ತೇನೆ ನಾಥಪ್ಪ ಇದು ಒಂದು ಆಂಟಿಬಯೋಟಿಕ್ ಅಷ್ಟೆ. ಖಂಡಿತವಾಗಿ ಇದ್ರಿಂದ ಏನೂ ತೊಂದರೆ ಇಲ್ಲ.... ಗ್ಯಾರಂಟಿಯಾಗಿ ಹೇಳ್ತೇನೆ".

"ಅದು ಏನಾದ್ರೂ ಆಗಿರ್ಲಿ.... ಆದ್ರೆ ಈಗಾಗ್ಲೇ ನನ್ನ ಜೀವನವನ್ನೇ ಹಾಳ್ಮಾಡಿದೀರಿ ನೀವು. ಈಗ ಇದ್ರಿಂದ ಏನಾಗುತ್ತೋ". ತನಗೆ ಇನ್ನೂ ಮಕ್ಕಳಾಗದಿದ್ದಕ್ಕೆ ಬಹಳವೇ ಹತಾಶೆಗೊಂಡಿದ್ದ. ಅಷ್ಟರ ಮೇಲೆ ಈಗ ಮತ್ತೊಂದು ಇಂಜೆಕ್ಷನ್!

ಈ ಘಟನೆಯ ನಂತರ ಬಹಳ ದಿನಗಳವರೆಗೆ ಆ ಡೈರಿ ಫಾರ್ಮಿನಲ್ಲಿ ಅಂತಹ ಸಮಸ್ಯೆಯೇನೂ ತಲೆದೋರಲಿಲ್ಲ. ಒಂದೆರಡು ಕರೆ ಬಂದರೂ ನಾನು ನನ್ನ ಬಾಸ್ ಪ್ರಜಾಪತಿಯನ್ನೇ ಅಲ್ಲಿಗೆ ಕಳಿಸಿದ್ದೆ. ಅಲ್ಲಿಗೆ ಪುನಃ ಹೋಗಲು ನಾನು ತಯಾರಿರಲಿಲ್ಲ. ಹೀಗೆ ಒಂದು ವರ್ಷವೇ ಕಳೆದಿರಬೇಕು. ಒಂದು ದಿನ ಈಶ್ವರಪ್ಪನವರ ಫಾರ್ಮ್‌ನಿಂದ ಹಸುವೊಂದಕ್ಕೆ ಮಿಲ್ಕ್ ಫೀವರ್ ಆಗಿ ಅರ್ಜೆಂಟಾಗಿ ಕರೆ ಬಂದಿದ್ದರಿಂದ ಕೂಡಲೇ ಹೋಗಬೇಕಾಯ್ತು.

ಅಲ್ಲಿ ಹೋದಾಗ ನನಗೆ ಕೊಂಚ ಆಶ್ಚರ್ಯವೇ ಆಯ್ತು. ನಾಥಪ್ಪ ತನ್ನ ಯಾವಾಗಿನ ತಿರಸ್ಕಾರದ ನೋಟ ಬೀರುತ್ತಿರಲಿಲ್ಲ. ನನ್ನನ್ನು ನೋಡುತ್ತಲೇ ಬಿಗಿದುಕೊಳ್ಳುತ್ತಿದ್ದ ಅವನ ಮುಖ ಈಗ ಪ್ರಶಾಂತವಾಗಿತ್ತು. ಆದರೂ ನಾನು ಹೆಚ್ಚೇನೂ ಮಾತಾಡದೇ ಕ್ಯಾಲ್ಸಿಯಂ ಬೋರೋಗ್ಲುಕೊನೇಟ್‌ನ್ನು ಹಸುವಿನ ರಕ್ತನಾಳದೊಳಕ್ಕೆ ಸೇರಿಸಿ ನನ್ನ ಟ್ರೀಟ್‌ಮೆಂಟ್ ಬಾಕ್ಸನ್ನು ಹಾಕಿಕೊಳ್ಳುತ್ತಿದ್ದಾಗ ರೈ ಮೆಲ್ಲನೆ ಬಾಯ್ತೆಗೆದ.

"ಡಾಕ್ಟ್ರೆ, ನಿಮಗೆ ಇನ್ನೊಂದು ವಿಷ್ಯ ಗೊತ್ತಾ? ಬಹಳ ಇಂಪಾರ್ಟೆಂಟ್ ನ್ಯೂಸು...."

"ಇಲ್ಲವಲ್ಲ.....ಏನದು?" ನಾನು ಪ್ರಶ್ನಿಸಿದೆ.

"ನಾಥಪ್ಪ ತಂದೆಯಾಗಿದ್ದಾನೆ ಡಾಕ್ಟ್ರೆ" ಗುಟ್ಟು ಹೇಳುವವನಂತೆ ಪಿಸುಗುಟ್ಟಿದ ರೈ.

ನಾನು ನಾಥಪ್ಪನೆಡೆಗೆ ತಿರುಗಿ, “ಅರೆ ಹೌದೇ? ಗ್ರೇಟ್..... ಕಂಗ್ರಾಜ್ಯುಲೇಶನ್ಸ್ ಕಣಯ್ಯಾ, ಗಂಡೋ ಹೆಣ್ಣೋ?” ಸಂಭ್ರಮದಿಂದಲೇ ಕೇಳಿದೆ.

ಆತ ಕೊಂಚ ನಾಚಿಕೆ ಪಡುತ್ತಲೇ, “ಇಬ್ರೂ, ಗಂಡು ಹೆಣ್ಣು... ಅವಳಿ ಜವಳಿ...”

“ಓಹ್, ಟೆರಿಫಿಕ್. ಒಂದೇ ಬಾರಿ ಎರಡು ಲಾಟ್ರಿ ಹೊಡೀತಲ್ಲಯ್ಯ....” ನಾನು ನಗಾಡಿದೆ.

ಆಗ ಕಪಾಲಿ ಹೇಳಿದ. “ನಾವು ಅವನಿಗೆ ಹೇಳ್ತಾನೆ ಇದ್ವಿ.... ನೀವು ಅವನಿಗೆ ಮೊದಲನೇ ಇಂಜೆಕ್ಷನ್ ಮಾಡಿ ಆ ಕೆಲ್ಸ ನಿಲ್ಲಿಸಿಬಿಟ್ಟಿದ್ದಕ್ಕೆ ಅವ ನಿಮಗೆ ಬಯ್ತಾ ಇದ್ದ.... ಆ ನಂತರ ಎರಡನೇ ಇಂಜಕ್ಷನ್ ಕೊಟ್ಟು ಆ ಸಮಸ್ಯೆಗೆ ನೀವೇ ಟ್ರೀಟ್‌ಮೆಂಟ್ ಕೊಟ್‌ಬಿಟ್ರಿ!”

ಈಗ ಅವರಿಬ್ಬರ ಅಟ್ಟಹಾಸದ ನಗುವಿಗೆ ನಾನೂ ಮೊದಲ ಬಾರಿಗೆ ದನಿಗೂಡಿಸಿದೆ.

*****

**ಲೇಖಕರು**

ಡಾ. ಗಣೇಶ ಎಂ. ನಿಲೇಸರ ಅವರು ಗ್ರಾಮೀಣ ಪ್ರದೇಶದಲ್ಲಿ ಕಳೆದ ಹನ್ನೆರಡು ವರ್ಷಗಳಿಂದ ಪಶುವೈದ್ಯ ವೃತ್ತಿಯಲ್ಲಿ ತೊಡಗಿಕೊಂಡವರು. ಇವರು ಪ್ರವೃತ್ತಿ ಓದು ಮತ್ತು ಬರವಣಿಗೆ. ಧಾರವಾಡದ ಕೃಷಿ ಮಾಧ್ಯಮ ಕೇಂದ್ರದ ಸಂಪರ್ಕ ದೊರೆತ ನಂತರ ಸಾಹಿತ್ಯ ಪ್ರಜ್ಞೆಗೆ ತಮ್ಮನ್ನು ತಾವು ತೊಡಗಿಸಿಕೊಂಡರು. ವೃತ್ತಿ ಜೀವನದಲ್ಲಿ ಪ್ರತಿದಿನ ರೈತರ ಮನೆಗೆ ಭೇಟಿ, ಅವರೊಂದಿಗೆ ಸಂವಾದ ಅವರ ಪ್ರಾಣಿಗಳು, ಅವುಗಳ ಚಿಕಿತ್ಸೆ, ಸಲಹೆ ಇತ್ಯಾದಿಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಅನೇಕ ಚಿತ್ರವಿಚಿತ್ರ ವಿದ್ಯಮಾನಗಳಿಗೆ ಇವರು ಸಾಕ್ಷಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಡೇರಿ ಡಾಕ್ಟರ್ ಹೋರಿ ಮಾಸ್ಟರ್ ಎನ್ನುವ ಕೃತಿ ಪ್ರಕಟಿಸಿದ್ದಾರೆ.

**ಆಶಯ**

ವೃತ್ತಿ ಬದುಕಿನ ಹಾಸ್ಯಗಳ ಹೆಕ್ಕಿ ಓದುಗರ ಮುಖದ ಗಂಟು ಸಡಿಲಿಸುವಲ್ಲಿ ಹಾಗೂ ಜೊತೆಗೆ ಅದರಲ್ಲಿರುವ ಸಾಮಾಜಿಕ ಪ್ರಜ್ಞೆಗಳ ಎಳೆಗಳ ದರ್ಶನವನ್ನು ಲೇಖಕರು 'ಎರಡನೇ ಅಚಾತುರ್ಯ'ದಲ್ಲಿ ಸೊಗಸಾಗಿ ಮಾಡಿದ್ದಾರೆ. ಈ ಹಾಸ್ಯ ಲೇಖನ ವೃತ್ತಿಯ ಒಳನೋಟ;ವೈದ್ಯರು ಎದುರಿಸುವ ಸಾಮಾಜಿಕ ಸಮಸ್ಯೆಗಳ ಸಂಗತಿಗಳನ್ನು ಜ್ಞಾನದ ಲೇಪನ ಮಾಡಿ ನೀಡಿದೆ.

**ಶಬ್ದಾರ್ಥಗಳು**

ಬ್ರುಸೆಲ್ಲೋಸಿಸ್ = ಕಂದು ರೋಗ ಗರ್ಭಪಾತ ರೋಗ, ಅಚಾತುರ್ಯ= ಜಾಣತನದಿಂದ ವಂಚಿತವಾದದ್ದು, ಕೌಶಲ ಕೈಕೊಟ್ಟದ್ದು, ಅಬಾರ್ಷನ್= ಗರ್ಭಪಾತ ಕಂಟ್ರೋಲು= ನಿಯಂತ್ರಣ, ಟ್ರೀಟ್‌ಮೆಂಟ್= ಚಿಕಿತ್ಸೆ

**ಮಾದರಿ ಪ್ರಶ್ನೆಗಳು**

1. ಗರ್ಭ ಧರಿಸಿದ ಹಸುಗಳಲ್ಲಿ ಅಬಾರ್ಷನ್ ಉಂಟುಮಾಡುವ 'ಬ್ರುಸೆಲ್ಲೋಸಿಸ್" ರೋಗದ ಬಗ್ಗೆ ಬರೆಯಿರಿ?
2. ಪಶುವೈದ್ಯರು ಕರುವಿನ ಬದಲು ಯಾರಿಗೆ ಇಂಜೆಕ್ಷನ್ ಮಾಡಿದರು?
3. ಪಶುವೈದ್ಯರು ಎದುರಿಸುವ ಪ್ರಸಂಗಗಳನ್ನು ಲೇಖಕರು ವಿವರಿಸಿರುವ ಬಗೆಯನ್ನು ತಿಳಿಸಿ?
4. ಪಶುವೈದ್ಯರು ಎರಡನೇ ಬಾರಿಯೂ ಎಡವಟ್ಟು ಮಾಡಿದ ಪ್ರಸಂಗವನ್ನು ವಿವರಿಸಿ?
5. ನಾಥಪ್ಪನು ಎರಡು ಬಾರಿ ಇಂಜೆಕ್ಷನ್ ತಾಗಿದ್ದರಿಂದ ಆತ ಭಾವಿಸಿದ ಬಗೆಯನ್ನು ವಿವರಿಸಿ?
6. ಎರಡನೇ ಅಚಾತುರ್ಯ ಕುರಿತ ಲೇಖಕನ ಆಶಯವೇನು?]

**ಹೆಚ್ಚಿನ ಓದು**

1. ಡೇರಿ ಡಾಕ್ಟರ್ ಹೋರಿ ಮಾಸ್ಟರ್, ಲೇ: ಡಾ. ಗಣೇಶ ಎಂ. ನಿಲೇಸರ, ಭೂಮಿ ಬುಕ್ಸ್, ಬೆಂಗಳೂರು.
2. "ಡಾ. ಟಿ.ಎಸ್. ರಮಾನಂದರ ಸ್ವಾನುಭವಗಳು", ಲೇ: ಡಾ. ಗಣೇಶ ಎಂ. ನಿಲೇಸರ
4. ಡಾ. ಹೆರಂಜಾಲರ ಆತ್ಮಕಥೆ, ಲೇ: ಡಾ. ಗಣೇಶ ಎಂ. ನಿಲೇಸರ

ಅಂಕಣ ಸಾಹಿತ್ಯ

೬

# ಆಹಾರ

**ಈಶ್ವರ ದೈತೋಟ**

## ಹೆಲ್ದಿ ಫುಡ್ ಬೇಕಾ? ಪರಿಸರ ಉಳಿಸಿ

ನಮ್ಮೂರಿನ ನಿಗಿನಿಗಿ ಕೆಂಡದಲ್ಲಿ ಬೇಯಿಸಿದ ಉಬ್ಬುರೊಟ್ಟಿ, ಹುಡಿಹೋಳಿಗೆ ಮತ್ತು ಕಾಯಿಹಾಲು, ಅಜ್ಜಿ ಉಪವಾಸದ ಫಳಾರವಾಗಿದ್ದ ಗೋದಿದೋಸೆ ಮತ್ತು ತೆಂಗಿನಕಾಯಿ, ಹಸಿಮೆಣಸಿನ ಚಟ್ಣಿ– ಇಂತವನ್ನೆಲ್ಲಾ ನೆನೆಸಿದರೆ ಚಪಲವಾಗುತ್ತದೆ. ಆದರೆ, ಅದೆಲ್ಲಾ ಎಲ್ಲಿ ಲಭ್ಯ?ಇದ್ದಿದ್ದರಲ್ಲೇ ಮ್ಯಾಗಿ ಊಟವನ್ನು ಟು ಮಿನಿಟ್ಸ್‌ನಲ್ಲಿ ಮಾಡಿ ಇಲ್ಲವೇ ಕೆಎಫ್ಸಿ ಫ್ರೈಡ್ ತಿಂದು ಹಸಿವು ನೀಗಿಸಿಕೊಳ್ಳುವ ಪರಿಪಾಠ ನಮಗೆ ಮೈಗೂಡಿತ್ತು. ಈಗ ಚೆನ್ನಾಗಿ ಬದುಕಿ, ಬಾಳಬೇಕಾದರೆ ನಮ್ಮದೇ ಆಹಾರ ಪದ್ಧತಿ ಮೇಲು ಎಂಬ ತಿಳಿವಳಿಕೆ ಬರತೊಡಗಿದೆ.

ಇನ್ನು ಮುಂದೆಯೂ ನಾವು ಪರಿಸರವನ್ನು ಕಡೆಗಣಿಸಿದರೆ ಮುಂದೊಂದು ದಿನ ಊಟಕ್ಕೆ ತರಕಾರಿಯೂ ಸಿಗಲಾರದು, ಹೊಟ್ಟೆಗೆ ಮೊಟ್ಟೆಯಾಗಲೀ, ಮೀನಾಗಲೀ ಬಂದು ಬೀಳಲಾರದು. ತರಕಾರಿಯದು ಕೂಡಾ, ಮೀನಿನ ಮಾರುಕಟ್ಟೆ ಏರಿಳಿತದ ಮಾದರಿಯಲ್ಲಿ ಬೇಕಾಬಿಟ್ಟಿ ರೇಟು ಮೇಲೇರುವ ಸಮಸ್ಯೆ ಬಗ್ಗೆ ಮಾಧ್ಯಮದವರು ಹೈಲೈಟು ಮಾಡುತ್ತಲೇ ಇರುತ್ತಾರೆ. ಮತ್ತೊಂದು ಗಮನ ಹರಿಸಬೇಕಾದ ಸಮಸ್ಯೆ ಏನೆಂದರೆ ಬೆಳೆ ತೋಟದ ಕಾಯಿಪಲ್ಲೆಗಳದಿರಲಿ, ಕೆರೆ, ನದಿ, ಹೊಳೆ, ಕಡಲುಗಳ ಬಾಳೆಕಾಯಿಯದಿರಲಿ ಪರಿಸರ ಕಡೆಗಣಿಸುವಿಕೆಯಿಂದ ಉತ್ಪಾದನೆ, ಗುಣಮಟ್ಟದ ಮೇಲಾಗುವ ದುಷ್ಪರಿಣಾಮದ ಬಗೆಗಿನದು.

ಒಮ್ಮೆ ಕೊಂಕಣಿ ಮಸಾಲೆ ಮೀನಿನ ಅಡುಗೆ ವಿಶೇಷಕ್ಕೆ ಹೆಸರಾಗಿರುವ ಸಮುದ್ರಾಹಾರ ಪ್ರಿಯರ ಹೊಟ್ಟೆ–ಹೃದಯಗಳೆರಡನ್ನೂ ಸೆಳೆದಿರುವ ಖಾನಾವಳಿಯಲ್ಲಿ ಊಟ ಮಾಡುತ್ತಿರುವಾಗ ಪಕ್ಕದ ತಟ್ಟೆಯಲ್ಲಿದ್ದ ಕಾಣೆ ಮೀನಿನ ಗಾತ್ರ ಗಮನಕ್ಕೆ ಬಂದಿತು. ಲೇಡೀಸ್ ಫಿಂಗರ್ ಎಂದೂ ಹೆಸರಿರುವ ಮೀನು ಚಿಕ್ಕ ಬೆಂಡೆಕಾಯಿಯಷ್ಟು ಸಣ್ಣಗಿತ್ತು. ತಿಂದರೆ ಮುಳ್ಳೇ ಅಧಿಕ. ಈಗ ಮೀನೇ ಬರಲ್ಲ ಸಾರ್, ಬರೋದು ಚಿಕ್ಕ

ಸೈಜೇ. ಒಮ್ಮೊಮ್ಮೆ ಇನ್ನೂ ಚಿಕ್ಕದಿರುತ್ತದೆಂದು ಸಪ್ಲಾಯರ್ ಸಮಜಾಯಿಷಿ ಹೇಳಿದ. ತಿನ್ನಲು ಎಂದಾಗ ಎಂಟ್ಟತ್ತು ಇಂಚಾದರೂ ಉದ್ದವಿರಬೇಕಾದ ಕಾಣೆಯ-ಮರಿಗಳೇ ಡೈನಿಂಗ್ ಟೇಬಲ್‌ಗಳಲ್ಲಿ ಕಾಣ ತೊಡಗಿದೆಯೆಂದರೆ, ಅದರ ಓವರ್ ಎಕ್ಸಪ್ಲಾಯಿಟೇಶನ್ ನಡೆದಿದೆ ಎಂದೇ ಅರ್ಥ. ಅದು ಹಳೆಯ ಕಥೆ. ಈಗ ಊಟದ ತಟ್ಟೆಗೆ ಪದಾರ್ಥವಾಗಿ ಬಂದು ಬೀಳುವ ಸಿಗಡಿಗಳು, ಕೆಲವು ಜಾತಿ ಮೀನುಗಳು ಸಾಕಾಣಿಕೆದಾರರು ಕೊಡುವ ರೆಡಿಮೇಡ್ ಫುಡ್ ತಿಂದು ಬೆಳೆಯುವ ಉತ್ಪನ್ನಗಳು!

ನದಿಗಳು ಸಮುದ್ರ ಸೇರುವ ಅಳಿವೆಯಲ್ಲಿ ಮಾತ್ರ ಬೆಳೆಯುವ ಮೀನು ಕಾಣೆ. ಅದಕ್ಕೆ ಸಿಹಿ-ಉಪ್ಪು ನೀರುಗಳ ಮಿಶ್ರಣ ಬೇಕು. ಸಮುದ್ರದ ಕೊಡುಗೆಯಾದ ಸೀಗಡಿಯಲ್ಲಿ ನಾಲ್ಕು ತರಹಗಳಿವೆ. ಅದನ್ನೂ ಕೃತಕವಾಗಿ ನದಿಸೆರಗಿನಲ್ಲಿ ಬೆಳೆಸಿ, ಸಾಕಿ ರಫ್ತು ಮಾಡುವ ಸಂಸ್ಕೃತಿ ಎಂದೋ ಬಂದಿದೆ. ಹಾಗೆಯೇ ಅಳಿವೆಗಳಲ್ಲಿ ಕಾಣೆಯನ್ನು ಗೊಬ್ಬರದಂತೆ ಫುಡ್ ಹಾಕಿ ದೊಡ್ಡದಾಗಿಸುವ ತಂತ್ರವೂ ಅಳವಡಿಕೆಯಾಗಿದೆಯಂತೆ. ಇಂತಹ ಮೀನುಬೆಳೆಗಳು, ಕೇವಲ ಸೀಮೆ ಗೊಬ್ಬರದಲ್ಲಿ ಬೆಳೆದ ಹೈಬ್ರಿಡ್ ತರಕಾರಿಗಳಂತೆ ನೋಡಲು ಗಾತ್ರದಲ್ಲಿ ಬಣ್ಣದಲ್ಲಿ ಆಕರ್ಷಣೀಯವಾಗಿದ್ದರೂ, ತಿನ್ನಲು ರುಚಿಕಮ್ಮಿ. ಸಮುದ್ರ ತರಕಾರಿಗಳನ್ನು ಕೊಳಚೆ ನೀರಾಶ್ರಯದಿಂದಲೂ, ರಾಸಾಯನಿಕ ಗೊಬ್ಬರದ ರಾಶಿಯಿಂದಲೂ ಬೆಳೆಯ ಹೊರಟಿರುವುದಲ್ಲದೆ, ಖುಶಿ ಕಂಡಂತೆ ಕೀಟನಾಶಕಗಳನ್ನೆರಚಿ ಸಾಕುವುದೂ ಸಾಮಾನ್ಯ. ಅದಕ್ಕೆಲ್ಲ ಕಾರಣ, ಯಾವುದರಲ್ಲೇ ಆಗಲಿ, ಸಂರಕ್ಷಿತ ಅಭಿವೃದ್ಧಿಯನ್ನು ಮರೆತು, ಅತಿಲಾಭ ಹೊಡೆಯುವ ವಾಣಿಜ್ಯೋದ್ದೇಶ ನಮ್ಮಲ್ಲಿಯೂ ಬಲವಾಗುತ್ತಿರುವುದೇ ಆಗಿದೆ.

20 ವರ್ಷಗಳ ಹಿಂದೆ ಮೀನು ಎಂದರೆ ಮೂಗು ಮುರಿದು ಮಾರು ದೂರ ಹಾರುತ್ತಿದ್ದ ಬೆಂಗಳೂರಿಗರು ಈಗ ಮೀನು ಹುರಿದು ತಿನ್ನುವುದರಲ್ಲಿ ಬಕಾಸುರರಾಗುತ್ತಿದ್ದಾರೆ. ಮಂಗ್ಳೂರು, ಮದ್ರಾಸ್‌ಗಳಿಂದ ಬರುವ ಟನ್‌ಗಟ್ಟಳೆ ಮೀನುಗಳೂ ಸಾಕಾಗದೆ ಬೆಲೆ ಸಮುದ್ರಮಟ್ಟದಿಂದ ಘಟ್ಟಕ್ಕೇರಿದೆ. ಬೆಂಗಳೂರಂತೂ ಈಗ ಮಹಾಭಾರತ ದೇಶದಲ್ಲಿಯೇ ಅತ್ಯಂತ ಹೆಚ್ಚು ಮೀನು ಬೇಡಿಕೆಯಿರುವ ನಗರವೆಂದು ಮನ್ನಣೆ ಪಡೆದಿದೆ. ಹಾಗೆಯೇ, ವಿದೇಶಗಳಿಗೆ ರಫ್ತುಗೊಂಡ ಮೀನು, ಪ್ರಾನೂ ತಿರಸ್ಕೃತವಾದರೆ, ಫಾರೈನ್ ಕ್ವಾಲಿಟಿಯೆಂಬ ಸ್ಟಿಕ್ಕರ್ ಅಂಟಿಸಿಕೊಂಡು ಬಂದಿಳಿಯುವುದೇ ಬೆಂಗಳೂರಿಗಂತೆ. ಮೂವತ್ತು ವರುಷಗಳ ಹಿಂದೆ ಮೀನೂಟದ ಹೊಟೇಲುಗಳನ್ನು ಇಲ್ಲಿ ಬೆರಳೆಣಿಕೆಯಲ್ಲಿ ಹೇಳಬಹುದಿತ್ತು. ಈಗ ಗೂಗಲ್ ಸರ್ಚಿನಲ್ಲಿ ಹೊಸಹೊಸ ಹೊಟೇಲುಗಳನ್ನು ಹುಡುಕಿಕೊಳ್ಳಬಹುದು. ಮೀನಡುಗೆ ಖಾದ್ಯಗಳ ಸವಿಯನ್ನು ಬೆಂಗ್ಳೂರಿಗರಿಗೆ ತಡೆಯಲಿಕ್ಕಾಗುವುದಿಲ್ಲ.

ಮೀನು ಎಂದರೆ ತುಳುವರು ಮಾತ್ರವಲ್ಲ, ಬೆಂಗಾಲಿಗಳು, ಮಲೆಯಾಳಿಗಳು, ಕನ್ನಡಿಗರು, ಬಿರವರು, ಬಂಟರು, ಭಟ್ಟರು, ಗೌಡ್ರು, ರೋಯ್‌ಗಳು, ಮೆನೋನ್‌ರು, ಸರ್ದಾರ್ಜಿಗಳು ಎಂದು ಜಾತಿಬೇಧ, ಪ್ರಾಂತಭೇದವಿಲ್ಲದೆ ಸರ್ವಸಮಾನರಾಗಿ ಆಕರ್ಷಿತರು.

ಫಿಶ್ ಎಂದ ಕೂಡಲೇ "ಬಾಂಗ್ಡಾ ಈಸ್ ದಿ ಬೆಸ್ಟ್" ಎನ್ನುತ್ತಿದ್ದವರೆಲ್ಲರೂ ಈಗ ಕಾಣೆ, ಬೂತಾಯಿ, ಮಾಂಜಿ, ಸುರ್ಮಾಯಿ, ಕೊಡ್ವಾಯಿ, ಕೊಳ್ಳತ್ತರು ಎಂದು ಮೀನಾವಳಿ ಪ್ರಭೇದಗಳನ್ನೆಲ್ಲಾ ಗುರುತಿಸಿ ಚಪ್ಪರಿಸುವ ಗುಣಮಟ್ಟ ಬೆಳೆದಿದೆ.

ಹಳೆಯ ತಲೆಮಾರಿನ ನಮ್ಮ ಮೀನುಗಾರ ಹಿರಿಯರಲ್ಲಿ ಸಾಂಪ್ರದಾಯಿಕ ಬುದ್ಧಿಮತ್ತೆ ಹಾಗೂ ಜ್ಞಾನ, ಎರಡೂ ಇತ್ತು. ಹೊಟ್ಟೆ, ಬದುಕಿಗೆ ಕೊಡುವ ಕಡಲತಾಯಿ ಬಗ್ಗೆ ಪೂಜ್ಯ ಭಾವನೆ ಸ್ಫುರಿಸುವ ನಂಬಿಕೆಗಳಿದ್ದವು. ಮೀನು ಸಂತತಿ ವೃದ್ಧಿಸುವ ಮಳೆಗಾಲದಲ್ಲಿ ಮೀನುಗಾರಿಕೆ ಮಾಡಿದರೆ, ಮರಿಮೀನು, ಮೊಟ್ಟೆ ಹಿಡಿದರೆ ಕಡಲಮ್ಮ ಕೋಪತಾಳಿ ಶಾಪ ಕೊಟ್ಟಾಳೆಂಬ ಭಯಭೀತಿಗಳಿದ್ದವು. ಅವೆಲ್ಲ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳು "ವೈಜ್ಞಾನಿಕವಲ್ಲ, ಮೂಢನಂಬಿಕೆಗಳು" ಎಂಬ ಭಾವನೆ ಬೆಳೆಸಿದ ಆಧುನಿಕತೆಯ ಭರದಲ್ಲಿ ಮುಳುಗಿ ಹೋಗಿವೆ. ಮುಂದೇನಾದೀತೆಂಬ ಚಿಂತೆಯಿಲ್ಲದೆ ಬಾಚಿ ತೆಗೆದು ಕಡಲ ಹೊಟ್ಟೆ ಬರಿದು ಮಾಡಿ ಸಂಪಾದಿಸುವ ವಾಣಿಜ್ಯೋದ್ಯಮದ ದಾಸರಾಗಿದ್ದೇವೆ. ಮಳೆಗಾಲದಲ್ಲಿ ಮೀನು ಮೊಟ್ಟೆಯಿಟ್ಟು ಸಂಸಾರ ಬೆಳೆಸುವ ಸಂದರ್ಭದಲ್ಲಿ ಕಳ್ಳಾಟಿಕೆ ಮೀನುಗಾರಿಕೆಯಾಗುತ್ತಿದೆಯೆಂಬ ವರದಿ ನಮ್ಮ ಕರಾವಳಿಯಿಂದಲೇ ಬರುತ್ತಿದೆ.

ಏಡಿಗಳು (ಕ್ರಾಬ್ಸ್) ನಮ್ಮ ಕಡಲತಡಿಯ ಆಹಾರ ಸರಪಳಿಗೆ ಕೊಡುವ ಕೊಡುಗೆಯ ಬಗ್ಗೆ ಎಷ್ಟು ಹೇಳಿದರೂ ಸಾಲದು. ನಮ್ಮೂರಿನಲ್ಲಿ ಅಮ್ಮನನ್ನು ಕಳೆದುಕೊಂಡ ಎಳೆ ಬೊಮ್ಮಟೆಕಾಯಿಗಳಿಗೆ ಡೆಂಜಿ (ಕ್ರಾಬ್) ಮಾಂಸವನ್ನು ತೆಳ್ಳಗಾಗಿಸಿ ಗಂಜಿಯಂತೆ ಕೊಡುವ ಕ್ರಮವಿತ್ತೆಂದು ಕೇಳಿ ತಿಳಿದಿದ್ದೇನೆ. ಮುಂದುವರಿದ ದೇಶಗಳಲ್ಲಿ ಇಂತಹ ಪ್ರಾಕೃತಿಕ ಆಹಾರ ಸಬಲೀಕರಣ ಸರಪಳಿಗಳ ಬಗ್ಗೆ ಅಧ್ಯಯನ ಮಾಡಿ, ಕಾಪಾಡುವ ಬಗ್ಗೆ ಸಾಕಷ್ಟು ಪಾಸಿಟೀವ್ ಪ್ರೋಗ್ರಾಮುಗಳು ನಡೆಯುತ್ತಿವೆ.

ನಮ್ಮೂರುಗಳಿಗೆ ಮುಂದಾಲೋಚನೆಯಿಲ್ಲದೆ ಲಾಭೋದ್ದೇಶದಿಂದ ದೂರದ ದೇಶಗಳಿಂದ ಆಮದು ಮಾಡಿಕೊಂಡ ಕಾಂಗ್ರೆಸ್ ಹುಲ್ಲು, ನೇರಳೆಬಣ್ಣದ ಹೂಬಿಡುವ ತೇಲು ಸಸ್ಯ–ವಾಟರ್ ಹೇಸಿಂತ್ ಮತ್ತು ಭಾರೀ ವೇಗದಲ್ಲಿ ಸಂತಾನವೃದ್ಧಿ ಮಾಡುತ್ತದೆಂದು ತಂದು ಕೆರೆಕಟ್ಟೆಗಳಲ್ಲಿ ತಂದು ಹಾಕಿದ ಇತರೆಲ್ಲಾ ಮೀನುಗಳನ್ನು ತಿಂದು ಮುಕ್ಕುವ ಆಫ್ರಿಕನ್ ಕಾರ್ಪ್ ಎಂಬ ಮೀನು ತಂದಿತ್ತಿರುವ ಸಂಕಟಗಳ ಸರಮಾಲೆ ಏನೆಂದು ಹೇಳುವುದು!

ಮಳೆಗಾಲದ ಮೇ ತಿಂಗಳಿನಿಂದ ಆಗಸ್ಟ್‌ವರೆಗೆ ಸಮುದ್ರ ಮೀನುಗಾರಿಕೆ ಮಾಡಿದರೆ, ಕಡಲಮ್ಮನಿಗೆ ಕೋಪ ಬರುತ್ತದೆಂದು ಫಿಶಿಂಗ್ ಬ್ಯಾನ್ ಹಾಕುವ ಸಂಸ್ಕೃತಿ ನಮ್ಮ ಮೀನುಗಾರರಿಗೆ ಹಿರಿಯರಿಂದ ಬಂದಿದೆ. ಏಕೆಂದರೆ, ಅದು ಮೀನು ಮೊಟ್ಟೆಯಿಟ್ಟು ಮರಿಮಾಡುವ ಸೀಸನ್. ಆದರೆ, ಹೊಸ ಮೆಕಾನೈಸ್ಡ್ ಬೋಟುಗಳು– ಎಂಟ್ಹತ್ತು ದಿನಗಳ ಕಾಲ ಸಾಗರದಲ್ಲಿಯೇ ಇದ್ದು ಮೀನುಗಾರಿಕೆ ಆಧುನಿಕತೆ ಬಂದ ಮೇಲೆ ಅದೆಲ್ಲಾ ಮೂಢನಂಬಿಕೆಗಳೆಂದು ಹಳೆಪದ್ಧತಿ ಮರೆಯುತ್ತಾ ಬಂದಿದೆ. ಈ ರಾಜ್ಯದವರು ಮೀನುಗಾರಿಕೆ ಮಾಡದಿದ್ದರೆ, ಆ ರಾಜ್ಯದವರು ಮಾಡಲು ಬರುತ್ತಾರೆ. ಅವರೂ ಬಾರದಿದ್ದರೆ, ಕೊರಿಯನರು, ಚೀನಿಯರು ಎಂದು ವಿದೇಶೀ ಬೋಟುಗಳೂ ಸಮುದ್ರದ

ಗಡಿದಾಟಿ ಬಂದು ಮೀನು ಹಿಡಿಯುವ ಕಾಲವಿದು. ಯಾವುದು ಸೈಯನ್ಸ್? ಯಾವುದು ಮೂಢನಂಬಿಕೆ? ಯಾವುದು ನಷ್ಟ, ಯಾವುದು ಲಾಭ? ತೂಕ ಹಾಕಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ.

## ಹಿತ್ತಿಲು, ತೋಟಗಳ ನೋಟ

ನಾವು ವಿದ್ಯಾಭ್ಯಾಸಕ್ಕೆಂದು ಮೈಸೂರಿನಲ್ಲಿದ್ದಾಗ, ನನಗೆ ಹಾಸ್ಟೆಲ್‌ನ ಡೈನಿಂಗ್ ಹಾಲ್‌ನಲ್ಲಿ ಊಟ ಮಾಡುತ್ತಿದ್ದುದು ಸರಿಯಾಗಿ ನೆನಪುಂಟು. ಸಾಂಬಾರು, ಸಾರೆಲ್ಲ ಬರೀ ನೀರು ನೀರು. ಅದರಲ್ಲಿ ತರ್ಕಾರಿಯ ಸುಳಿವೇ ಇರುತ್ತಿರಲಿಲ್ಲ. ಈ ಪ್ರಪಂಚದಲ್ಲಿ ಜನಸಂಖ್ಯೆಯಲ್ಲಿ ಚೀನಾದವರು ಮುಂದೆ. ಅವರ ಹಿಂದೆಯೇ ಸಿಲ್ವರ್ ಮೆಡಲ್ ನಮಗೆ ಭಾರತೀಯರಿಗೆ. ಇತ್ತೀಚಿನ ವರ್ಷಗಳಲ್ಲಿ ನಮ್ಮದು ಜನಸಂಖ್ಯೆ ನೂರಿಪ್ಪತ್ತೈದು ಕೋಟಿ ಮೀರಿದೆ. ಟೋಟಲ್ ಉತ್ಪಾದನಾ ಪ್ರಮಾಣ ನಮ್ಮದೀಗ ಚೀನಾವನ್ನೂ ಓವರ್ಟೇಕು ಮಾಡುವ ವೇಗದಲ್ಲಿದೆಯೆಂದೂ ಅಂದಾಜು ಹಾಕಲಾಗಿದೆ. ಅವರೆಲ್ಲರಿಗೂ ಊಟದ ಜೊತೆ ನೆಂಜಿಕೊಳ್ಳಲು ತರಕಾರಿ ಪದಾರ್ಥವೇನೇನೆಲ್ಲ ನಮ್ಮಲ್ಲಿದೆ?

ಆರನೇ ಯೋಜನೆ ಅಂತ್ಯದ ವೇಳೆಗೆ ಈ ದೇಶದಲ್ಲಿ ಸುಮಾರು 3.81 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತರ್ಕಾರಿ ಬೆಳೆಯಲಾಗುತ್ತಿತ್ತು. ಏಳನೇ ಯೋಜನಾವಧಿಯಲ್ಲಿ ಇದು 5.5 ದಶಲಕ್ಷ ಹೆಕ್ಟೇರ್‌ಗಳಿಗೆ ವೃದ್ಧಿಸಿತು ಆ ವೇಳೆಗೆ ನಮ್ಮಲ್ಲಿ 50.99 ದಶಲಕ್ಷ ಟನ್ ಕಾಯಿಪಲ್ಲೆ ಬೆಳೆಯಲಾಗುತ್ತಿತ್ತು. ಇದರಲ್ಲಿ ಗಡ್ಡೆ, ಗೆಣಸು, ಈರುಳ್ಳಿ ಬೆಳೆ ಲೆಕ್ಕ ಸೇರಿಲ್ಲ 1990ರಲ್ಲಿ ದೇಶದ ಬಟಾಟೆ ಉತ್ಪಾದನೆ 15 ದಶಲಕ್ಷ ಟನ್‌ಗಳಾದರೆ ನೀರುಳ್ಳಿ ಪ್ರಮಾಣ 3.3 ದಶಲಕ್ಷ ಟನ್‌ಗಳು. ಹಾಗೆಯೇ ಸಮುದ್ರ ಬಾಳೆಕಾಯಿ ಅಂದರೆ, ಮೀನು ಉತ್ಪಾದನೆ ಲೆಕ್ಕ ಪ್ರತ್ಯೇಕ ಇದೆ.

ಈ ದೇಶದಲ್ಲಿ ಎಲ್ಲ ನಮೂನೆಯ ನೆಟ್ಟಿಕಾಯಿ, ಹಣ್ಣು ಹಂಪಲು ಸಾಮಾನ್ಯವಾಗಿ ಬೆಳೆಯುತ್ತದೆ. ಆದರೂ, ಬಟಾಟೆ, ನೀರುಳ್ಳಿ, ಬೆಳ್ಳುಳ್ಳಿಯಂತಹ ಗಡ್ಡೆ, ಗೆಣಸುಗಳು, ಬದನೆ, ಬಟಾಣಿ, ಹುರುಳಿ, ಕೋಸು, ಅವರೆ, ಸೋರೆ, ಮೂಲಂಗಿ, ಗಜ್ಜರಿಯಂತಹ ಹಸಿರು ಕಾಯಿಗಳು ಪ್ರಧಾನ ಬೆಳೆಗಳು. ಇಲ್ಲಿರುವ ವೈವಿಧ್ಯಮಯ ಕೃಷಿ ವಾತಾವರಣ ಕಾರಣ ನಾನಾ ತರದ ಹಣ್ಣು, ತರಕಾರಿಗಳಲ್ಲದೆ, ಸಾಂಬಾರ ಪದಾರ್ಥ, ಔಷಧೀಯ ಹಾಗೂ ಸುಗಂಧ ದ್ರವ್ಯ ಸಸ್ಯಗಳು ಹಾಗೂ ಹೂವುಗಳನ್ನು ಬಿಡುವ ತೋಟಗಾರಿಕಾ ಕೃಷಿಗೆ ವಿಪುಲ ಅವಕಾಶ ಸೃಷ್ಟಿಯಾಗಿದೆ.

ದೇಶದೊಳಗಿನ ತೋಟಗಾರಿಕಾ ಬೆಳೆಗಳು ಒಟ್ಟು ಕೃಷಿಯ ಸುಮಾರು ಶೇ. 9–10 ಶೇ. ಪ್ರಮಾಣದಷ್ಟು ಪ್ರದೇಶವಾಗಿದೆ. ಎರಡು ದಶಕಗಳ ಹಿಂದೆ ರಾಷ್ಟ್ರದಲ್ಲಿ 100 ದಶಲಕ್ಷ ಟನ್ ತೋಟಗಾರಿಕಾ ಉತ್ಪನ್ನ ಆಗುತ್ತಿತ್ತಲ್ಲದೆ, ಇದು ಒಟ್ಟು ಕೃಷಿ ಉತ್ಪನ್ನದ ಶೇ. 18ರಷ್ಟಾಗಿತ್ತು. ಹಣ್ಣು ಮತ್ತು ತರ್ಕಾರಿಗಳು ದೇಹಕ್ಕೆ ಬೇಕಾದ ಸಮತೋಲನದ ಆಹಾರ ಪೂರೈಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಭಾರತದಲ್ಲಿರುವ ವೈವಿಧ್ಯಮಯ ಹವಾಮಾನ ಗುಣಲಕ್ಷಣಗಳು ತರಹಾವರಿ ಕಾಯಿಪಲ್ಲೆಗಳನ್ನು ಹಾಗು ಹಣ್ಣುಹಂಪಲುಗಳನ್ನು ಬೆಳೆಯಲು ಅತಿಯೋಗ್ಯವಾಗಿದೆ. ಸಹಜವಾಗಿಯೇ ನಮ್ಮ ನೆರೆಯ ಸ್ಪರ್ಧಿ, ಸ್ನೇಹ ಹಸ್ತ ಚಾಚಿದ್ದರೂ, ಬಗಲ್ ಮೇ ದುಶ್ಮನ್ ಆಗಿ ಬಿಡುವ ಕೆಂಪಣ್ಣ ಚೀನಾ ಬಿಟ್ಟರೆ, ಜಗತ್ತಿನಲ್ಲಿ ಇಂತಹ ಬೆಳೆಗಳನ್ನು ಸಂಪನ್ನವಾಗಿ ಕೊಡುವ ದೇಶವೆಂದರೆ ನಮ್ಮದೇ. ನ್ಯಾಶನಲ್ ಹಾರ್ಟಿಕಲ್ಚರ್ ಮಂಡಳಿಯ ಮಾಹಿತಿಯನ್ನು ಗಮನಿಸಿದರೆ ವಾರ್ಷಿಕ ಲೆಕ್ಕಾಚಾರದಲ್ಲಿ ಹೋದ ವರ್ಷದ ಅಂಕಿಅಂಶ ಹೀಗೆ ಹೇಳುತ್ತದೆ.

ನಾವು ಹಣ್ಣುಹಂಪಲು ಮರಗಿಡಗಳನ್ನು ಸುಮಾರು 70 ಲಕ್ಷಹೆಕ್ಟೇರ್ ಪ್ರದೇಶದಲ್ಲಿಯೂ, ತರಕಾರಿಗಳನ್ನು 90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿಯೂ ಬೆಳೆಯುವ ಮಟ್ಟಕ್ಕೆ ತಲುಪಿದ್ದೆವು. ಫಲ ನೀಡಿಕೆಯ ಲೆಕ್ಕಾಚಾರ ಕೊಡಬೇಕೆಂದರೆ 7.5 ಕೋಟಿ ಮೆಟ್ರಿಕ್ ಟನ್ ಫ್ರೂಟ್ಸ್ ಮತ್ತು 15.5 ಕೋಟಿ ಮೆಟ್ರಿಕ್ ಟನ್ ವೆಜಿಟೇಬಲ್ಸ್ ಉತ್ಪಾದಿಸಿದ್ದೇವೆ. ಅದೇನು ಸಣ್ಣ ಸಾಧನೆಯಲ್ಲ, ನಮ್ಮ ನೆಲದ ಗುಣ ಮತ್ತು ಹವಾಮಾನ ಪರಿಸ್ಥಿತಿ ಮತ್ತು ದುಡಿಯುವ ಕೈಗಳ ಪ್ರಾಮಾಣಿಕತೆಯನ್ನು ಗಮನಿಸಿದರೆ, ಜಗತ್ತಿನಲ್ಲಿರುವ ಎಲ್ಲಾ ತರಹದ ಫಲ ತರಕಾರಿಗಳನ್ನು ನಾವಿಲ್ಲಿ ಬೆಳೆಯಬಹುದು ಮತ್ತು ನಮ್ಮ ಉತ್ಪಾದನೆ ಇನ್ನೂ ಹೆಚ್ಚಿನ ಮಟ್ಟದಲ್ಲಿರ ಬೇಕಾಗಿತ್ತೆಂಬುದು ನಿಜವೆಂದೇ ಒಪ್ಪಿಕೊಳ್ಳೋಣವಂತೆ.

ಇತ್ತೀಚೆಗೆ ನಮ್ಮ ಕಾಡುಮೇಡುಗಳಲ್ಲೆಲ್ಲ ಮರಗಿಡ ಸವರಿ ಶುಂಠಿ ಬೆಳೆಯುವ ಪ್ರವೃತ್ತಿ ಕಂಡುಬರುತ್ತಿದೆ. ಜೊತೆಗೆ ಮೂರು ವರ್ಷ ಜಿಂಜರ್ ಬೆಳೆ ತೆಗೆದ ಮೇಲೆ ಆ ಭೂಮಿ ನಿಸ್ಸಾರಗೊಂಡು ಹಡಿಲು ಬೀಳಬೇಕಾಗುತ್ತದೆ ಎಂಬುದೂ ಸತ್ಯ ಮಾತು. ಆದರೆ, ಅದು ದುಡ್ಡು ಹರಿಸುವ ಬೆಳೆಯಾಗಿದೆ. ಸಹಜವಾಗಿಯೇ ನಾವು ಜಗತ್ತಿನಲ್ಲಿಯೇ ಅತಿ ದೊಡ್ಡ ಪ್ರಮಾಣದಲ್ಲಿ ಶುಂಠಿ, ಹಾಗೆಯೇ ಓಕ್ರ ಬೆಳೆಯುವ ಜನರಾಗಿ ಬಿಟ್ಟಿದ್ದೇವೆ. ಆಲೂಗೆಡ್ಡೆ, ನೀರುಳ್ಳಿ, ಹೂಕೋಸು, ಬದನೆ, ಎಲೆಕೋಸು ಬೆಳೆಹಾಕಿ ಫಲ ತೆಗೆಯುವಲ್ಲಿ ನಮಗೆ ಎರಡನೆಯ ಮರ್ಯಾದೆ ಇದೆ.

ಹಣ್ಣುಗಳ ರಾಜನಾಗಿ ಮೆರೆಯಬೇಕಾದ ಅತಿಯೋಗ್ಯ, ಆರೋಗ್ಯ ಸಂರಕ್ಷಣೆಯ ಹಣ್ಣು ಎನಿಸಿರುವ ಬಾಳೆಹಣ್ಣು, ಪಪ್ಪಾಯಿ, ಮಾವಿನಹಣ್ಣು, ಮತ್ತು ಪೇರಳೆಯನ್ನು ಬೆಳೆಯುವುದರಲ್ಲಿ ನಾವು ದ್ವಿತೀಯರು. ಅಂದರೆ, ಅನುಕ್ರಮವಾಗಿ ಜಗತ್ತಿನ ಶೇ. 27.25 ಬಾಳೆ, ಶೇ. 35.31 ಪಪ್ಪಾಯಿ, ಮ್ಯಾಂಗೋಸ್ಟಿನ್, ಸೀಬೇಕಾಯಿ, ಮಾವು ಉತ್ಪಾದನೆಯ ಶೇ. 40 ನಮ್ಮ ಕೊಡುಗೆಯೆಂದರೆ ಖುಶಿಯಾಗದಿರುತ್ತದೆಯೇ?

ಇವೆಲ್ಲಾ ಕಾರಣಗಳಿಂದಾಗಿ ನಮಗೆ ಅಗಾಧ ಪ್ರಮಾಣದ ರಫ್ತು ಅವಕಾಶ ಸೃಷ್ಟಿಯಾಗಿದೆ. ಹೋದ ವರ್ಷ ನಾವು ಹಣ್ಣು, ತರಕಾರಿಗಳಿಂದು ಒಟ್ಟು ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ ರಫ್ತು ಆದಾಯ ಗಳಿಸಿದ್ದೆವು ಅದರಲ್ಲಿ ತರಕಾರಿಯದು ಮೂರೂವರೆ ಸಾವಿರ ಕೋಟಿಯಾದರೆ, ಹಣ್ಣುಹಂಪಲುಗಳದು ಎರಡೂವರೆ ಸಾವಿರ ಕೋಟಿ ಸಂಪಾದನೆ. ವಾಲ್ನಟ್, ದ್ರಾಕ್ಷಿ, ದಾಳಿಂಬೆ, ಹಸಿಮೆಣಸು

ಹಾಗಲ, ಓಕ್ರ, ಮಶ್ರೂಮ್ ಇತ್ಯಾದಿಗಳು ಕೂಡಾ ರಫ್ತು ಬುಟ್ಟಿಯೊಳಗೆ ದೊಡ್ಡ ಪ್ರಮಾಣದಲ್ಲಿ ನಮ್ಮಿಂದ ಹೊರಹೋಗುತ್ತವೆ.

ಯಾವ್ಯಾವ ದೇಶಗಳಿಗೆ ಹೋಗುತ್ತವೆ ಎನ್ನುತ್ತೀರಾ–ಮುಖ್ಯವಾಗಿ ನಮ್ಮ ನೆರೆಕರೆಯವರಿಗೆ. ಬಾಂಗ್ಲಾ, ಪಾಕಿಸ್ತಾನ, ಶ್ರೀಲಂಕಾ, ನೇಪಾಳವಲ್ಲದೆ, ಮಧ್ಯಪ್ರಾಚ್ಯ, ಸೌದಿ ಅರೇಬಿಯಾ, ನೆದರ್‌ಲ್ಯಾಂಡ್, ಮಲೇಶ್ಯಾ, ಯುನೈಟೆಡ್ ಕಿಂಗ್‌ಡಂಗೂ ರವಾನೆಯಾಗುತ್ತದೆ. ಆದರೆ, ಇದೆಲ್ಲಾ ಸಾಧನೆಯ ಹೊರತಾಗಿಯೂ ಜಾಗತಿಕ ಹಣ್ಣು–ತರಕಾರಿ ವ್ಯವಹಾರದಲ್ಲಿ ನಮ್ಮದಿನ್ನೂ ಕೇವಲ ನೂರಕ್ಕೊಂದು ಪಾಲು ಮಾತ್ರ ಎಂದು ತಿಳಿದಾಗ ಅಯ್ಯೋ ಎನಿಸದಿರುತ್ತದೆಯೇ! ನಾವು ಸುಧಾರಣೆಗೆ ಬಹಳ ಕಾರ್ಯಕ್ರಮಗಳನ್ನೂ, ಹೆಜ್ಜೆಗಳನ್ನೂ ತೆಗೆದುಕೊಂಡಿದ್ದೇವೆ, ತೆಗೆದುಕೊಳ್ಳುತ್ತಿದ್ದೇವೆ ಎಂದು ಸರಕಾರ ಮಾತ್ರ ಬಂಬ್ಡಿ ಹೊಡೆಯುತ್ತಲೇ ಇದೆ.

## ಹಾಲಿನ ಹೊಳೆ

ಜಗತ್ತಿನಲ್ಲೇ ಹಾಲುತ್ಪಾದನೆಯಲ್ಲಿ ಭಾರತಕ್ಕೆ ಥರ್ಡ್ ಪ್ಲೇಸ್ ಇದೆ. 1970ರಲ್ಲಿ 2 ಕೋಟಿ ಟನ್ ಉತ್ಪಾದನೆ ಇದ್ದುದು, ಈಗ 18–20 ಕೋಟಿ ಟನ್‌ಗಳಿಗೇರಿದೆ ಎಂದು ಅಂದಾಜು. ಈ ರೀತಿ ಕ್ಷೀರಕ್ರಾಂತಿಗೆ ಕಾರಣ, 1991ರಲ್ಲಿ ಭಾರತ ಸರ್ಕಾರ ಆಪರೇಷನ್ ಫ್ಲಡ್ ಪ್ರೋಗ್ರಾಮ್ ಅಡಿಯಲ್ಲಿ ಕ್ಷೀರೋದ್ಯಮವನ್ನು ಲೈಸೆನ್ಸ್ ರಾಜ್‌ನ ಮುಷ್ಟಿಯಿಂದ ಬಿಡುಗಡೆ ಮಾಡಿದ್ದು ಎನ್ನಲಾಗುತ್ತದೆ. ಕ್ಷೀರಸಾಗರ ಭಟ್ಟರ ಮನೆಯಲ್ಲಿ ಮಜ್ಜಿಗೆಗೆ ತತ್ವಾರವಂತೆ.

ಇಷ್ಟೆಲ್ಲ ಕೋಟಿ ಟನ್ ಹಾಲು ಉತ್ಪಾದನೆಯಾಗಿ ಕ್ಷೀರಕೇಂದ್ರಗಳ ಉದ್ಘಾಟನೆ ಜೋರಾಗಿ ನಡೆದರೂ, ಈ ದೇಶದ ಪ್ರಜೆಗಳ ತಲಾ ಹಾಲಿನ ಬಳಕೆ ದಿನಕ್ಕೆ ಗ್ರಾಂ ಲೆಕ್ಕದಲ್ಲಿಯೇ ಇದೆ. ಅಂದರೆ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಸೂಚಿಸಿರುವ ಪರ್ ಡೇ ಪರ್ ಪರ್ಸನ್ ಮಿನಿಮಮ್ ರಿಕ್ವಾಯರ್‌ಮೆಂಟ್‌ಗಿಂತ ಪರಿಮಾಣ ಕಮ್ಮಿಯೇ ಇದೆ.

ಬಹುತೇಕ ಮಂದಿಯ ಜೇಬಿನಲ್ಲಿ ಕೊಳ್ಳಲು ಕಾಸಿಲ್ಲದಿದ್ದರೂ, ದೇಶದಲ್ಲೀಗ ಹಾಲಿನ ಹೊಳೆ ಹರಿಯುತ್ತಿದೆ. ಹಾಲು, ಬೆಣ್ಣೆ, ತುಪ್ಪ, ಗಿಣ್ಣು, ಖೋವಾ, ಕೆನೆ ತೆಗೆದ ಹಾಲು, ಹಾಲಿನ ಪುಡಿ, ಕಾಫಿ–ಚಾ ಶ್ವೇತಕಾರಕ ಎಂದು ಕ್ಷೀರೋದ್ಯಮದ ಉತ್ಪನ್ನಗಳು ಹಲವಾರು. ಮೊದಲೆಲ್ಲಾ ಗೌಳಿಗರ ಮನೆ ಮುಂದೆ ಹಸುಗಳನ್ನು ತಂದು ಹಾಲು ಕರೆದು ಕೊಟ್ಟು ಕಾಸು ಇಸ್ಕೊಂಡು ಹೋಗುವ ಕೊಡು–ಕೊಳ್ಳುವ ವ್ಯವಹಾರವಿತ್ತು. ಜೊತೆಗೆ ಮನೆಮನೆಯಲ್ಲೂ ಗೋಮಾತೆಗೆ ಮರ್ಯಾದೆ ಇದೆಯಲ್ಲ.

ಕ್ರಮೇಣ ಸರಕಾರಿ ಹಾಲು ಸಂಗ್ರಹಣೆ ಮತ್ತು ವಿತರಣೆ ಡೈರಿಗಳು ತಲೆಯೆತ್ತ ತೊಡಗಿದವು. ಗುಜರಾತದ ಅಮುಲ್ ಕ್ಷೀರ ಕ್ರಾಂತಿಯನ್ನೇ ಉದಯಿಸಿತು. ಲಾಭ ಬರುತ್ತದೆ ಎಂದು ಖಂಡಿತವಾದ ಖಾಸಗಿ ದುಡ್ಡು ವ್ಯವಹಾರವೂ ಬೆಳೆದು ಪ್ರಬಲವಾಗಲು ಶುರು ಹತ್ತಿತು. ಇವುಗಳಲ್ಲೆಲ್ಲಾ ಸಾಂಪ್ರದಾಯಿಕ ದ್ರವ ಹಾಲಿನ ವ್ಯಾಪಾರದಲ್ಲೇ ಲಾಭ

ಭರ್ಜರಿ ಇದೆಯೆಂಬುದು ಅನುಭವಿಗಳ ಅಂದಾಜು. ಹಾಲಿನ–ನೀರಿನ ವ್ಯವಹಾರದಲ್ಲಿಯೇ ಲಾಭ ಇರುವುದೆಂದು, ಹಣದಿಂದ ಹಣದ ಬೆಳೆ ತೆಗೆಯುವ ಮಂದಿಗೆ ಅರ್ಥವಾಗಿದೆ. ದೇಶದ ಹಾಲಿನ ಉದ್ಯಮಕ್ಕೆ ಸಂಘಟಿತ ಉದ್ಯಮದ ಪೂರೈಕೆ ಕಾಲಂಶ ಮಾತ್ರ. ಉಳಿದದ್ದೆಲ್ಲಾ ಸಣ್ಣ ಸಣ್ಣ ಹಾಲು ಉತ್ಪಾದಕರ ಬಕೆಟ್‌ನಿಂದಲೇ ಬರುತ್ತಲಿತ್ತು.

ದಿವಂಗತ ಕುರಿಯನ್ ಗುಜರಾತಿನಲ್ಲಿ ಮಾಡಿದ ಅಗಾಧ ಕೆಲಸವನ್ನು ಈ ದೇಶದ ಮಿಲ್ಕ್ ರೆವಲ್ಯೂಶನ್ ಆಗಿ ಗುರುತಿಸಲ್ಪಟ್ಟಿದೆ. ಉದಾರೀಕರಣ ಬಂದ ಮೇಲೆ ಬಂಡವಾಳ ಹೂಡುಗರಿಂದಾಗಿ ಹಾಲೋದ್ಯಮದಲ್ಲಿ ಸಂಘಟಿತರ ಪಾಲುದಾರಿಕೆ ಏರುತ್ತಲಿದೆ. ಹಾಲುತ್ಪಾದನೆಯಲ್ಲಿ ಶೇ. 46 ಮಾತ್ರ ದ್ರವ ಹಾಲಾಗಿ ವಹಿವಾಟು ನಡೆದರೆ, ಉಳಿದ ಶೇ. 54 ಪರಿಷ್ಕರಣಗೊಂಡು ಇತರ ರೂಪಗಳಲ್ಲಿ ಮಾರುಕಟ್ಟೆಗೆ ಬರುತ್ತದೆ. ಅದರಲ್ಲಿಯೂ ದೊಡ್ಡ ಪಾಲು ತುಪ್ಪದ್ದು, ಮೊಸರಿನದು. ಬೆಣ್ಣೆ ಹಾಗೂ ಹಾಲಿನ ಹುಡಿಯದ್ದು ಎಂದು ಅಂಕಿ–ಅಂಶ ಬಿಡಿಸಿ ಹೇಳುತ್ತದೆ.

ಹಸು, ಎಮ್ಮೆಗಳ ಕೆಚ್ಚಲಿನಿಂದ ನೇರ ಅಡುಗೆ ಮನೆ ಬಾಗಿಲಿಗೆ ಹಾಲು ಬರುವುದೀಗ ಕಮ್ಮಿಯಾಗುತ್ತಿದೆ. ಪ್ರೋಸೆಸ್ಡ್ ಪಾಶ್ಚರೈಸ್ಡ್ ಅಂಡ್ ಪೋಚ್ಡ್ ಎಂದು ದ್ರಾವಿಡ ಪ್ರಾಣಾಯಾಮದ ಹಾಲು ಬೇಡಿಕೆ ನಗರಗಳಲ್ಲಿನ ಬಹುಮಹಡಿ ಕಟ್ಟಡಗಳಿಂದಲೇ ಮೇಲೆ ಮೇಲೆ ಹೋಗುತ್ತಲಿದೆ. ಸಗಣಿ ತಾಗದೆ ತೊಟ್ಟೆಯೊಳ ಸೇರಿ ರೆಫ್ರಿಜರೇಟರ್‌ಗಳಲ್ಲಿ ಕಾಪಿಡಲ್ಪಡುವ ಟೆಟ್ರಾ ಪ್ಯಾಕ್‌ನಿಂದ ಹಾಲು ಸುರಿದು ಚಾ–ಕಾಫಿ ಮಾಡಿ ಕುಡಿಯುವ ಗಮ್ಮತ್ತು ಯಾರಿಗೆ ಬೇಡ!

ಇನ್ನು, ಕೆನೆ ಹಾಲಿನಿಂದ ಹುಡಿಯಲ್ಲದೆ ಬಿಸ್ಕೆಟ್, ಬ್ರೆಡ್, ಐಸ್‌ಕ್ರೀಂ ಇತ್ಯಾದಿತ್ಯಾದಿಗಳ ತಯಾರಿಕೆಗೆ ಮೂಲವಸ್ತು ದೊರಕುತ್ತದೆ. ಲಕ್ಷ, ಲಕ್ಷ ಟನ್ ಸ್ಕಿಮ್ಡ್ ಮಿಲ್ಕ್ ಬೇಡಿಕೆಯುಂಟು. ನಾಲ್ಕು ದಶಕಗಳ ಹಿಂದೆ ಮತ್ತೂರಿನ ಫಿಲೋಮಿನಾ ಶಾಲೆಯಲ್ಲಿ ಶಿಕ್ಷಣಾರ್ಥಿಯಾಗಿದ್ದಾಗ ವಿಜ್ಞಾನ ಮಾಸ್ತ್ರು ಪದ್ಮನಾಭ ನಾಯಕ್‌ರೊಮ್ಮೆ ಹಾಲಿಗೆ ನೀರು ಸೇರಿಸಿದರೆ ಕಂಡುಹಿಡಿಯುವ, ಹಾಲಿನ ಸಾಂದ್ರತೆ ಅಳೆಯುವ ಮೀಟರ್‌ನ ಬಗ್ಗೆ ವಿವರಿಸುತ್ತಿದ್ದರು. ಆಗ ಸಹಪಾಠಿ, ಸೂಕ್ಷ್ಮ ಲೆಕ್ಕಾಚಾರದ ಕಿಣಿ, 'ಹಾಲಿಗೆ ಕಡ್ಲೆಹಿಟ್ಟು ಕರಗಿಸಿ ನೀರು ಸೇರಿಸಿದರೆ ಹೇಗೆ ಗೊತ್ತಾಗುವುದು ಸರ್' ಎಂದು ಕುತೂಹಲಿಸಿದ್ದ. ಇಂತಹ ಅತಿ ಬುದ್ಧಿವಂತಿಕೆ ಪ್ರಶ್ನೆಗಳಿಗೆ ಉತ್ತರಿಸುವುದು ಸಾಧ್ಯ ಇಲ್ಲವೆಂದು ಬಾಯಿ ಮುಚ್ಚಿಸಿದ್ದರು ನಾಯಕ್‌ರು.

ಬಿಳಿ, ಹಸಿರು ಕ್ರಾಂತಿಯಾಗಿರುವ ಭಾರತದಲ್ಲಿ ಡೂಪ್ಲಿಕೇಟ್ ಯುಗ ಎಲ್ಲಾ ರಂಗಗಳಲ್ಲಿಯೂ ಬೇರು ಬಿಟ್ಟಿದೆ. ಮಥುರಾ, ಆಗ್ರಾ ಮುಂತಾಗಿ ವಿಂಧ್ಯ ಪರ್ವತದಾಚೆಗಿನ ಗ್ರಾಮಾಂತರ ಪ್ರದೇಶ, ಪಟ್ಟಣಗಳಿಗೆ ತೆರಳಿದರೆ ಬಿಸಿ ಬಿಸಿ ನೊರೆ ಮೊರೆಯುವ ಉದ್ದನೆಯ ಗ್ಲಾಸು ತುಂಬಾ ಸಕ್ಕರೆ ಮಿಶ್ರಿತ ಹಾಲು ಕೊಡುವುದು ಸಂಪ್ರದಾಯ. ಆದರೆ, ಎರಡೂವರೆ ದಶಕಗಳ ಹಿಂದೆಯೇ ಅಲ್ಲಿ ಹಾಲು ಕುಡಿಯುವ ಮುನ್ನ

'ನೀನೇ ಕಾಪಾಡಬೇಕಪ್ಪಾ' ಎಂದು ಕೈ ಮುಗಿಯುವುದು ಅನಿವಾರ್ಯವಾಗಿತ್ತು. ಯಾಕೆಂದರೆ ಕುಡಿಯಲು ಸಿಕ್ಕಿದ್ದು ಹಾಲೋ, ಹಾಲಾಹಲವೋ ಎಂದು ಗೊತ್ತಾಗದಂತಿರುತ್ತಿತ್ತು.

ಅನಿಲ್ ಅಗರ್‌ವಾಲ್‌ರು ಮೂರೂವರೆ ದಶಕಗಳ ಹಿಂದೆ ದಿಲ್ಲಿಯಲ್ಲಿ ಸ್ಥಾಪನೆ ಮಾಡಿದ ಸೆಂಟರ್ ಫಾರ್ ಸಯನ್ಸ್ ಅಂಡ್ ಎನ್‌ವಯರ್ನ್‌ಮೆಂಟ್ ಜಗತ್ತಿನಲ್ಲೇ ಇಂದು ಪ್ರಸಿದ್ಧವಾಗಿದೆ. ಎರಡು ದಶಕಗಳ ಹಿಂದೆ ಪರಿಸರದ ಜೊತೆಗೆ ಕಲಬೆರಕೆ ಆಹಾರದ ಬಗ್ಗೆಯೂ ಅವರ ಪ್ರಕಟಣೆಗಳಲ್ಲಿ ಎಚ್ಚರ ನೀಡಲಾಗುತ್ತಿತ್ತು. ಲಾಭಕ್ಕೋಸ್ಕರ ಸೃಷ್ಟಿಯಾಗುವ ಇಂತಹ ಹಾಲನ್ನು ಕುಡಿದರೆ ದೇಹ ಪೋಷಣೆಯಾಗುವ ಬದಲು ಶೋಷಣೆಯಾದೀತು. ಮಕ್ಕಳು, ಗರ್ಭಿಣಿಯರು, ಇಳಿವಯಸ್ಸಿನವರು ಸೇವಿಸಿದರೆ ಅನಾಹುತವಾದೀತು, ಹೃದಯ ರೋಗಿಗಳು, ಮೂತ್ರಪಿಂಡ ದೋಷ ಉಳ್ಳವರು ಕುಡಿದರೆ ಕಥೆ ಕೈಲಾಸವಾದೀತು" ಎಂದೆಲ್ಲಾ ಅವರು ತಮ್ಮ ಡೌನ್ ಟು ಅರ್ತ್ ಫೋರ್ಟ್‌ನೈಟ್ಲಿ ಮ್ಯಾಗಝೀನ್‌ನಲ್ಲಿ ಪ್ರಕಟಣೆಗಳನ್ನೂ ಮಾಡಿ, ಸರಕಾರಗಳ ಹಾಗೂ ಸಮಾಜದ ಗಮನ ಸೆಳೆಯಲು ಹರಸಾಹಸ ಮಾಡಿದ್ದರು.

ಹರ್ಯಾಣದಲ್ಲಿ ರಿಫೈನ್ಡ್ ಆಯಿಲ್, ಕಾಸ್ಟಿಕ್ ಸೋಡಾ, ಯುರಿಯಾ ಹಾಗೂ ಡಿಟರ್ಜೆಂಟ್‌ಗಳ ಸೂಕ್ಷ್ಮ ಸಮ್ಮಿಶ್ರಣ ಪಾಕವನ್ನೇ ಹಾಲು ಎಂದು ಮಾರಾಟ ಮಾಡಲಾಗುತ್ತಿದೆ. ಕರ್ನಾಲ್‌ನ ರಾಷ್ಟ್ರೀಯ ಹಾಲುತ್ಪನ್ನ ಸಂಶೋಧನಾ ಸಂಸ್ಥೆ ವಿಜ್ಞಾನಿಗಳು ಈ ಲಾಭಕೋರ ಖದೀಮ ವ್ಯಾಪಾರಿಗಳ ಸಿಂಥೆಟಿಕ್ ಮಿಲ್ಕ್ ಆದಾಯದ ಮೇಲೆ ಹಿಂದೆಯೇ ಗಂಭೀರ ಎಚ್ಚರಿಕೆ ನೀಡಿದ್ದರು.

ಹಾಲು ಮಾರಾಟಗಾರರು. ಈ ಫ್ರಾಡ್ ಟೆಕ್ನಾಲಜಿಯನ್ನು ಕಂಪ್ಯೂಟರ್ ಏಡೆಡ್ ಟೆಕ್ನಾಲಜಿಯೇನೋ ಎಂಬಷ್ಟರ ಮಟ್ಟಿಗೆ ಪರ್ಫೆಕ್ಟ್ ಆಗಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ಅಗ್ಗದ ಖಾದ್ಯತೈಲ ತಂದು ಅದಕ್ಕೆ ಮಾರ್ಜಕಗಳನ್ನು ಸೇರಿಸಿ ಹಾಲಿನ ರೂಪಕ್ಕೆ ಪರಿವರ್ತಿಸಿ ಯೂರಿಯಾವನ್ನು ಮೇಳೈಸಿದರೆ ಬುರುಬುರು ನೊರೆಯೇಳುವ ದಪ್ಪನೆಯ ನಕಲಿ ಹಾಲು ತಯಾರು. ರುಚಿ, ಪೋಷಕಾಂಶಗಳನ್ನು ಬಿಟ್ಟರೆ ಉಳಿದೆಲ್ಲಾ ಬಾಹ್ಯ ಗುಣಗಳಲ್ಲಿಯೂ ಅದು ಕ್ಷೀರವೆಂದೇ ಮೋಸ ಮಾಡಲಾಗುತ್ತಿದೆ. ಒಂದು ಲೀಟರ್ ಅಸಲಿ ಹಾಲಿನ ಐದನೇ ಒಂದಂಶದಷ್ಟು ಮಾತ್ರ ಈ ತರಹದ ನಕಲಿ ಹಾಲಿಗೆ ತಗಲುವ ಖರ್ಚು. ಉತ್ತರ ಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶಗಳಲ್ಲೂ ಈ ರಾಸಾಯನಿಕ ಹಾಲು ಹರಿಯುತ್ತಲಿತ್ತು. "ರಾಜಕೀಯದವರ ಬೆರಕೆ ಬುದ್ಧಿ ಯಾದವರ ಕುಲವೃತ್ತಿಗೂ ಬಂತಲ್ಲ. ಕೃಷ್ಣನೇ ಕಾಪಾಡಬೇಕು." ಎಂದೆಲ್ಲ ಆಗ ಅಲ್ಲಿ ಜನ ಬೇಸತ್ತಿದ್ದರು.

ಗಂಧದ ಬೀಡು ಕರ್ನಾಟಕದಲ್ಲಿಯೂ ಯೂರಿಯಾ ಹಾಲು, ಮೊಸರಿನ ಹೊಳೆ ನೆರೆಕರೆಯ ರಾಜ್ಯಗಳಿಂದ ಹರಿಯತೊಡಗಿ ಹಲವಾರು ವರ್ಷಗಳಾದವು. ಸ್ಥಳೀಯವಾಗಿಯೇ ಕೆಲವು ಗೃಹ ಕೈಗಾರಿಕೆಗಳೂ ಇರಬಹುದು. ಕೃಷ್ಣ, ಕೃಷ್ಣಾ, ನೀನೇ ಬಂದು ಕಾಪಾಡಪ್ಪಾ ಎಂದು ಬಳಕೆದಾರರ ಕಳಕಳಿಯ ಪ್ರಾರ್ಥನೆ ನಡೆದೇ ಇದೆ. ಏಂಟಿ ಎಡಲ್ಟರೇಶನ್ ರೈಡ್‌ಗಳ ಹೆಸರಿನಲ್ಲಿ ಧಾಳಿಗಳೂ ನಡೆಯುತ್ತವೆ, ಕೃತಕ ಹಾಲು

ಪ್ಯಾಕೇಟ್‌ಗಳನ್ನು ಜಪ್ತಿ ಮಾಡಿ ಒಡೆದು ಚರಂಡಿಗೆ ಚೆಲ್ಲಲಾಗುತ್ತದೆ. ಒಂದಷ್ಟು ದಿನ ಕೂಲ್ ಆಗಿ, ಸಮಾಧಾನವಾಗಿದ್ದು ಮತ್ತೆ ದಂಧೆ ಮುಂದುವರಿಯುತ್ತದೆ.

ಕಾಫಿಗಾದರೆ, ಕ್ರೀಮ್, ಐಸ್ಕ್ರೀಮು, ಚಾಕಲೇಟು ಇತ್ಯಾದಿ ಸೇರಿಸಿದರೆ ಅದೇನೋ, ಹೊಸಹುಡುಗ ಹುಡುಗಿಯರು ಇಷ್ಟ ಪಡುತ್ತಾರೆ. ಆದರೆ, ಹಾಲಿಗೆ ವಿಷ ಬೆರೆಸಿದರೆ!!! ಹಾಲಾಹಲವನ್ನೇ ದಿನವೂ ಕುಡಿಯುವಂತಾದರೇನು ಗತಿ ಎಂಬುದೇ ನಮ್ಮ ಭಯಾತಂಕಗಳು.

**ಮಾಯಿಲಕೋಟೆ ಸಂಸ್ಕೃತಿ**

ನಾನು ಹುಟ್ಟಿ ಬೆಳೆದ ದೈತೋಟದ ಮನೆ ನಮ್ಮೂರಿನ ಪ್ರಸಿದ್ಧ ಮಾಯಿಲಕೋಟೆ ಮಡಿಲಲ್ಲಿದೆ. ಹುಟ್ಟುವಾಗ ಮದ್ರಾಸ್ ಪ್ರಾಂತದಲ್ಲಿದ್ದ ಪಾಣಾಜೆ ಗ್ರಾಮದ ಈ ಪ್ರದೇಶ ನಾನು ಶಾಲೆಗೆ ತೆರಳುವಾಗ ಮೈಸೂರು ಪ್ರಾಂತಕ್ಕೆ ಸೇರಿತ್ತು. ನನ್ನ ಆಕ್ಕ, ಅಣ್ಣಂದಿರೆಲ್ಲ ಕಲಿತ  ಪಕ್ಕದ ಪಡ್ರೆ ತೋಟದ ಬಯಲಿನ ಶಾಲೆ ನಾನು ಸರಸ್ವತಿವಂದನ ಮುಗಿಸಿ ಸೇರುವಾಗ ಕೇರಳದ ಪಾಲಾಗಿತ್ತು. ಇವೆಲ್ಲದರ ನಡುವೆ ಊರಿನ ಹೆಮ್ಮೆ- ಪ್ರಕೃತಿ ಮತ್ತು ಸಂಸ್ಕತಿಯೇ ಮೈವೆತ್ತಂತೆ ಮಾಯಿಲಕೋಟೆ ಬೆಟ್ಟ ಮೂರು ಗ್ರಾಮಗಳ ಮಧ್ಯೆ ಮೆರೆಯುತ್ತ ಎರಡು ರಾಜ್ಯಗಳನ್ನು ಹಾಗು ಆರೇಳು ಭಾಷೆಗಳನ್ನು ಹಿಡಿದಿಟ್ಟಿತ್ತೆಂದರೇ ಸರಿ!

ನಮಗೆ ಸವಿಯಲು ಸಿಗುತ್ತಿದ್ದ ನೆಲ್ಲಿಕಾಯಿ, ಕುಂಟಾಂಗಿಲ, ಚಪ್ಪಳಿಕ, ಮಾವು, ಹಲಸು ಮರಗಳೆಲ್ಲ ಈ ಕಾಡಲ್ಲಿತ್ತು. ಕುಡಿಯುವ ನೀರಂತೂ ಅದರ ಉದರದಿಂದಲೇ ಬರುತ್ತಲಿತ್ತು. ಅಜ್ಜ, ನಮ್ಮಪ್ಪ, ಅಣ್ಣ ಎಂದು ಕುಟುಂಬದವರು ಊರಿನವರ ಆರೋಗ್ಯ ರಕ್ಷಣೆ, ಸುಧಾರಣೆಗೆಂದು ನಿರ್ವಹಿಸುತ್ತಿದ್ದ ಆಯುರ್ವೇದ ಮತ್ತು ಗಿಡಮೂಲಿಕೆ ಆಧಾರದ ಅಜ್ಜಿಮದ್ದಿನ ಹಣ್ಣು, ಕಾಯಿ, ಸೊಪ್ಪು, ಕೆತ್ತೆ, ಬೇರು, ನಾರು, ಬೀಜಗಳೆಲ್ಲವನ್ನೂ ಬೆಳೆಸಿ ಸಲಹುವ ಪ್ರಕೃತಿಯ ಮಡಿಲು ಈ ಹಸಿರು ಗುಡ್ಡವಾಗಿತ್ತು.

ಅಂದ ಕಾಲತ್ತಿಲಿ, ಪರವೂರಿನವರು ಯಾರಾದರೂ ನಮ್ಮೂರಿಗೆ ಬಂದರೆ ಸಾಕು."ನಮ್ಮೂರಿನಲ್ಲಿ ಮಾಯಿಲಕೋಟೆ ಇದೆ. ಅದನ್ನು ಹತ್ತಿದರೆ  ಪೂರ್ವದ ಜಂಗ್ಲಿ ಕಾಡಿನೆಡೆಯಿಂದ ಸೂರ್ಯ ಉದಯಿಸಿ ಮೇಲೇರುವುದನ್ನು ನೋಡಬಹುದು. ಪಶ್ಚಿಮದ ಅರಬ್ಬೀ ಸಮುದ್ರದಲ್ಲಿ ಹಡಗು ಸಾಗುವುದು ಕಾಣುತ್ತದೆ. ಗುಡ್ಡದ ಕೊಡಿಯಲ್ಲಿ ಹುಲಿ ಬಾಂಡೆಲು ಇದೆ, ಪತ್ರಡೆ ಮಾಡಲು ರುಚಿರುಚಿ ಮರಕೆಸುವು ಬೇಕಾಷ್ಟು  ಸಿಗುತ್ತದೆ. ಬಲಿಯೇಂದ್ರ ಪೂಜೆ ಅಲಂಕಾರಕ್ಕೆ ಪಾದೆ ಹೂವು ಉಂಟು." ಎಂದೆಲ್ಲಾ ಜಂಭದಿಂದ ಹೇಳುತ್ತಿದ್ದುದು ನೆನಪಿದೆ.

ತೋಟದ ಬೈಲಿನ ಶಾಲೆಗೆ ಮನೆಯಿಂದ ಐದಾರು ಮಕ್ಕಳು ಹೋಗುತ್ತಿದ್ದೆವು. ಜೊತೆಗೆ ನಮಗಿಂತ ಹಿರಿಯಳಾದ ಧೂಮಾಲು ಎಂಬ ಬಾಲಕಿಯೊಬ್ಬಳಿದ್ದಳು. ತನ್ನ ತಲೆಗೆ 'ಶಾಲೆ ಬರವು' ಹತ್ತುವುದಿಲ್ಲವೆಂದು ಅವಳು ಬರಲೊಪ್ಪುತ್ತಿರಲಿಲ್ಲ. ಒತ್ತಾಯಕ್ಕೆ ಹಿಂಬಾಲಿಸುತ್ತಿದ್ದಳು. ದಾರಿಯಲ್ಲಿ ಕುಡುಕನೊಬ್ಬ ರಸ್ತೆಬದಿಯ ಸರಕಾರೀ ಜಾಗದಿಂದ

ಮರಕಡಿದು ಗಡಂಗಿಗೆ ಮಾರಿ ಕಳ್ಳು ಕುಡಿದು ಯಾರನ್ನಾದರೂ ಬೈಯುತ್ತಲೇ ದಿನವೂ ಬರುತ್ತಿದ್ದ. ನಮಗೆ ಅವನನ್ನು ಕಂಡರೆ ಕೈಕಾಲು ನಡುಕ. ದೊಡ್ಡವರೂ ಆತನಿಗೆ ಏನೂ ಹೇಳುತ್ತಿರಲಿಲ್ಲ.

ಶಾಲೆ ಪುಸ್ತಕದಲ್ಲಿ ಮರ ಎಂಬ ಪಾಠವೊಂದಿತ್ತು. ಯಾರೂ ಮರ ಕಡಿಯಬಾರದು. ಅದರಿಂದ ಉಸಿರಾಟಕ್ಕೆ ಬೇಕಾದ ಆಮ್ಲಜನಕ ಬರುತ್ತದೆ ಎಂದೆಲ್ಲ ಮೇಷ್ಟ್ರು ಮನದಟ್ಟು ಮಾಡಿದ್ದರು. ಧೂಮಾಳು ನಿಂತು "ಸಾರೆ, ದಾರಿಯಲ್ಲಿ ಯಾರೋ ಒಬ್ಬ ದಿನಾಲೂ ಮರ ಕಡಿಯುತ್ತಾನೆ, ತಪ್ಪಲ್ವಾ ಸಾರೆ" ಎಂದು ಕೇಳಿಯೇ ಬಿಟ್ಟಳು. ಹೌದು, ಮರಗಿಡಗಳು ನಮಗೆ ಉಸಿರಾಡಲು ಬೇಕಾದ ಆಮ್ಲಜನಕವೆಂಬ ಗಾಳಿಯನ್ನು ಉತ್ಪಾದಿಸುತ್ತವೆ. ಆ ಗಾಳಿಯಿಲ್ಲದಿದ್ದರೆ ನಾವೆಲ್ಲರೂ ಸತ್ತು ಹೋಗಬಹುದು ಎಂದು ವಿವರಿಸಿದ್ದರು.

ಶಾಲೆಯಿಂದ ವಾಪಾಸಾಗುತ್ತಿರುವಾಗ ಕುಡುಕನ ಮರಕಡಿಯುವಿಕೆ ನಡೆದಿತ್ತು. ಆಕೆ ಸೊಂಟದ ಮೇಲೆ ಕೈಗಳನ್ನು ಇಟ್ಟುಕೊಂಡು– ಯಾಕೋ ನೀನು ಮರ ಕಡಿಯುತ್ತೀಯಾ, ಮರ ಕಡೀಬೇಡ ಎಂದು ಅಬ್ಬರಿಸಿ ಬಿಟ್ಟಳು. ಕುಡುಕ ಕತ್ತಿ ಹಿಡಿದು ನಮ್ಮೆಲ್ಲರ ತಲೆಕಡಿಯುತ್ತಾನೆ ಎಂಬ ಭಯದಲ್ಲಿ ನಾವೆಲ್ಲ ತತ್ತರಿಸಿದೆವು. ನಾನು ಮರಾ ಕಡೀತೀನಿ ನಿನಗೇನು ಸಂಕಟ ಅದ್ರಿಂದ ಎಂದು ಕುಡುಕ ಧಮ್ಕಿ ಹಾಕಿದ. ಮರ ಕಡಿದ್ರೆ ನಮಗೆಲ್ಲಾ ಗಾಳಿ ಬರಲ್ಲಾ, ನಾವೆಲ್ಲ ಸತ್ತೋಗಿ ಬಿಡುತ್ತೀವಿ. ಕಡೀಬೇಡ, ಎಂದು ದಬಾಯಿಸಿ ಬಿಟ್ಟಳು. ನಾನು ಕಡೀತೀನಿ ನೀನೇನು ಮಾಡ್ತೀಯಾ? ಎಂದು ಆತ ಮರು ಅಬ್ಬರಿಸಿದ.

ನಾನು ಹೋಗಿ ಮೇಷ್ಟ್ರಿಗೆ ಹೇಳ್ತೀನಿ ಎಂದು ಈ ಹುಡುಗಿ ಪ್ರತ್ಯುತ್ತರಿಸಿದಳು. ಕುಡುಕನಿಗೆ ಅದೇನಾಯಿತೋ ಕತ್ತಿ ಬಿಸಾಕಿ ಓಡಿಹೋದವನು ಮತ್ತೆಂದೂ ಅಲ್ಲಿ ಮರ ಕಡಿಯುವುದು ಕಾಣಿಸಲಿಲ್ಲ (ಬಹುಶಃ ತನ್ನನ್ನೆಲ್ಲಾದರೂ ಶಾಲೆಗೆ ಸೇರಿಸಿಯಾರೆಂಬ ಭಯ ಹುಟ್ಟಿರಬೇಕು!).

ಈಗ ನಮ್ಮೂರಿನಲ್ಲಿ ರಾತ್ರೋರಾತ್ರಿ ಮರ ಕಡಿದು ಕಳ್ಳಸಾಗಾಣಿಕೆ ಆಗುತ್ತದೆ. ಅವರನ್ನು ನಿಲ್ಲಿಸಲು ಯಾರೂ ಧೈರ್ಯ ಮಾಡುವುದಿಲ್ಲ. ಒಬ್ಬ ಅನಕ್ಷರಸ್ಥ ಪುಟ್ಟ ಬಾಲಕಿಗಿದ್ದ ಪ್ರಾಮಾಣಿಕ ಧೈರ್ಯವಿಂದು ಯಾರಿಗೂ ಇಲ್ಲ.

ಇನ್ನೊಬ್ಬ ಹುಡುಗನಿದ್ದ. ನನಗಿಂತ 3 ವರ್ಷ ಚಿಕ್ಕವ ರಾಮನೂ ಶಾಲೆಯೆಂದರೆ, ಕಾಡಿನತ್ತ ಓಡಿ ಮರೆಯಾಗುವ ಹುಡುಗ. ಹೊರಗಡೆ ಮಾಡುವ ಕೆಲಸ ಬೇಕಾದಷ್ಟಿರುವಾಗ ಶಾಲೆಯಲ್ಲಿ 'ಗೊಡ್ಡು ಮೇಸ್ಟರು'ಗಳ ಪುರಾಣ ಕೇಳುವುದೇಕೆಂದು ಅವನ ನಿಲುವಾಗಿತ್ತು. ಸಣ್ಣಪುಟ್ಟ ಕೆಲಸ ಹೇಳಿದರೆ ಅವನ್ನೆಲ್ಲ ಚಕಚಕನೆ ಆತ ಮಾಡಿ ಮುಗಿಸುತ್ತಿದ್ದ ರೀತಿಯಿಂದ ನನಗೆ ಹೊಟ್ಟೆಯುರಿ ಆಗುತ್ತಲಿತ್ತು. ದೋಸೆ ಆಸೆಯಿಂದ ಆತ ನಮ್ಮ ಮನೆಗೆ ರಜಾ ದಿನಗಳಲ್ಲಿ ಬರುತ್ತಲಿದ್ದ. ನಮ್ಮ ಕೈಗೆ ಸಿಗಹಾಕ್ಕೊತ್ತಿದ್ದ. ಗುಡ್ಡ ಕಾಡು ಸುತ್ತುವುದು, ದೊಡ್ಡಕೆರೆಯಲ್ಲಿ ಸೊಕ್ಕುವುದು ನಮ್ಮ ಅಭ್ಯಾಸವಾಗಿ ಬಿಟ್ಟಿತ್ತು.

ಶಾಲೆಯೆಂದರೆ ನರಕವೆಂದು ಪರಿಗಣಿಸಿದ್ದ ರಾಮ ಬಯಲಾಟ ಪ್ರಿಯ. ಶಾಲೆಯಲ್ಲಿ ಹೇಳಿಕೊಡದ ಪುರಾಣ ಕಥೆಗಳು, ಹಾಸ್ಯಕಾರನ ಕುಣಿತದ ತಮಾಶೆಯ ಹೆಜ್ಜೆಗಳು ಮತ್ತು ಸಮಕಾಲೀನ ತುಳು ಜೋಕುಗಳನ್ನೆಲ್ಲ ನನಗೆ ಕಂಠಪಾಠ ಮಾಡಿಸಿದವನೂ ಈ ಮಹಾರಾಯನೇ. ಮಧ್ಯಾಹ್ನ ಮೇಲೆ ತರಗತಿಯಲ್ಲಿ ಕೂತರೆ ತಾನೆ? ಆತ ಕಾಡುಮೇಡು ಸುತ್ತಬೇಕಲ್ಲ! ಕರಂಡೆಕಾಯಿ, ಕುಂಟಲ, ಚಪ್ಪಳಿಕ ಜಂಬುನೇರಳೆ, ತುಳುವ ಪೆಲಕ್ಕಾಯಿ ಕದ್ದು ಸವಿಯಬೇಕಲ್ಲ! ಜೇನು ಒಕ್ಕಲುಗಳನ್ನು ಶೋಧಿಸಿ, ನಮ್ಮ ಮನೆಗೆ ಬಂದು ದೊಡ್ಡಣ್ಣನಿಗೆ ಹೇಳಬೇಕಲ್ಲ.

ಮರದ ಗೆಲ್ಲು, ಕಾಂಡ ಮತ್ತು ಮಣ್ಣ ಗೋಳೆಯೊಳಗಣ ಜೇನುಗೂಡುಗಳನ್ನು, ಸೊಸೈಟಿಯಿಂದ ತಂದ ಮರದ ಪೆಟ್ಟಿಗೆಯೊಳಗೆ ಹಿಡಿದು ಹಾಕುವುದಕ್ಕಿಂತಲೂ, ಆತನ ಸಂಭ್ರಮವಿದ್ದುದು ಜೇನುಗೂಡಿನೊಳಗಿರುವ ಮೊಟ್ಟೆಯೆರಿಯನ್ನು ಮುಕ್ಕುವುದರಲ್ಲಿ ಮತ್ತು ವ್ಯರ್ಥವಾಗಿ ಹೋಗುವ ಜೇನುತುಪ್ಪ ನೆಕ್ಕುವುದರಲ್ಲಿ. ಕೊನೆಗೆ ಆತನ ಕೈಗೊಂದಷ್ಟು ಚಿಲ್ಲರೆ ಕಾಸೂ ಸಿಗುತ್ತಲಿತ್ತು. ಅವನಾಗ ತಿನ್ನುತ್ತಲಿದ್ದ ಹುಳಹುಪ್ಪಟೆಗಳನ್ನೆಲ್ಲ ಮಾನವರ ಭವಿಷ್ಯದ ಫೂಡ್ ಎಂದು, 4 ವರ್ಷಗಳಿಂದ ವಿಶ್ವಸಂಸ್ಥೆ ಪ್ರಚಾರ ಮಾಡತೊಡಗಿದೆ.

ನನಗಂತೂ ಜೇನುಹುಳಗಳ ಜಾಡು, ವಾಸನೆ ಹಿಡಿಯುತ್ತಾ ಅವು ಎಲ್ಲಿ ಗೂಡು ಕಟ್ಟಿವೆಯೆಂದು ಹುಡುಕುವುದನ್ನು ಹೇಳಿಕೊಟ್ಟವ – ಕಾಡುಕಾಯಿ, ಹಣ್ಣುಗಳ ರುಚಿಯನ್ನು ನನ್ನ ನಾಲಗೆಗೆ ಅಂಟಿಸಿದವನು ಅವನೇ. ಮಮ್ಮದೆ ಬ್ಯಾರಿಯ ಮಗ ವಾರಕ್ಕೊಮ್ಮೆ ಪೇಟೆಯಿಂದ ಊರಿಗರಿಗೆ ಮಾರಾಟಕ್ಕೆಂದು ತರುತ್ತಲಿದ್ದ ಮೀನು ಬುಟ್ಟಿಯಲ್ಲಿರುತ್ತಿದ್ದ ಮೀನುಗಳ ಆಕಾರ, ಹೆಸರುಗಳನ್ನು ತಾಳೆ ಹಾಕಿ, ತೋರಿಸಿದವನೂ ಇನ್ನಾರೂ ಅಲ್ಲ. ಮುಂದಿನ ಶಿಕ್ಷಣಕ್ಕೆಂದು ಪೇಟೆ ಸೇರಿ, ಅವನನ್ನು ಮರೆತೇ ಬಿಟ್ಟೆ. ಆದರೆ, ಆತ ಕಲಿಸಿದ ಪ್ರಕೃತಿ ಪಾಠಗಳೆಲ್ಲವನ್ನು ವಿಜ್ಞಾನ ಒಪ್ಪಿಕೊಂಡಿರುವ ಬಗ್ಗೆ ತಿಳಿಯುತ್ತಾ ಚಕಿತನಾಗತೊಡಗಿದೆ.

*****

## ಲೇಖಕರು

ಈಶ್ವರ ದೈತೋಟ ಅವರು ಮುದ್ರಣ ಮಾಧ್ಯಮ, ಟಿವಿ, ರೇಡಿಯೋದಲ್ಲಿ ಮೂರೂವರೆ ದಶಕಗಳಿಗೂ ಹೆಚ್ಚು ಅನುಭವ ಹೊಂದಿದ್ದಾರೆ. ಪತ್ರಿಕೋದ್ಯಮ ಶಿಕ್ಷಣ, ಅಭ್ಯುದಯ ಪತ್ರಿಕೋದ್ಯಮ ಮತ್ತು ಮೀಡಿಯಾ ಮ್ಯಾನೇಜ್‌ಮೆಂಟ್‌ನಲ್ಲಿಯೂ ಅಪಾರ ಸಾಧನೆಗಳನ್ನು ದಾಖಲಿಸಿರುವ ವಿಶಿಷ್ಟ ಪತ್ರಕರ್ತ. ಈಶ್ವರದೈತೋಟ ಅವರು ಯು.ಜಿ.ಸಿ ಮತ್ತು ಯೂನಿಸೆಫ್ ತರಬೇತಿ ಯೋಜನೆಗೆ ಡೆವಲಪ್‌ಮೆಂಟ್ ಕನ್ಸಲ್ಟೆಂಟ್ ಎಂದು ಮನ್ನಣೆ ಪಡೆದಿದ್ದಾರೆ.

ಇವರಿಗೆ ಪ್ರತಿಷ್ಠಿತ ಟಿಎಸ್‌ಆರ್ ಪತ್ರಿಕೋದ್ಯಮ ಪ್ರಶಸ್ತಿಯನ್ನು ನೀಡಿ ಕರ್ನಾಟಕ ಸರ್ಕಾರ ಗೌರವಿಸಿದೆ. ಪತ್ರಿಕೋದ್ಯಮ ಮತ್ತಿತರ ವಿಷಯಗಳ ಬಗ್ಗೆ ಬರೆದಿರುವ, ಅನುವಾದಿಸಿರುವ ಪುಸ್ತಕಗಳ ಸಂಖ್ಯೆ 70ಕ್ಕೂ ಹೆಚ್ಚು. ದಿ ಎಯ್ಟೀಂತ್ ಎಲಿಫೆಂಟ್,

(ಇಂಗ್ಲಿಷ್), ಮಾಧ್ಯಮ ಬ್ರಹ್ಮಾಂಡ, ವಿಧಾನಮಂಡಲ ವರದಿಗಾರಿಕೆ, ಅಭ್ಯುದಯ ಪತ್ರಿಕೋದ್ಯಮ, ನಾಡು ನುಡಿ, ಸಂಸ್ಕೃತಿ ಮತ್ತು ಫ್ಯಾಶನ್, ಪ್ರೆಸ್ ಅಂಡ್ ಪೊಲೀಸ್, ಡೆವೆಲಪ್‌ಮೆಂಟ್ ಆಫ್ ಜರ್ನಲಿಸಂ ಇನ್ ಸೌತ್‌ಕೆನರಾ (ಇಂಗ್ಲಿಷ್–ಮೈಸೂರು ವಿವಿ) ಹಾಗೂ ಅಂತರದೃಷ್ಟಿ ಕೃತಿಗಳು ಪ್ರಮುಖವಾದವು.

**ಆಶಯ**

ಆಹಾರ ಕುರಿತು ಅಂತರ ದೃಷ್ಟಿ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಇಲ್ಲಿ ಲೇಖಕರು ಆಹಾರವನ್ನು ಕೇಂದ್ರವಾಗಿ ಇರಿಸಿಕೊಂಡು ಸಿದ್ಧಪಡಿಸಿದ 4 ಬರಹಗಳನ್ನು ಆಯ್ದು ನೀಡಲಾಗಿದೆ. ಹೇಳಬೇಕಾದ ವಿಚಾರವನ್ನ ಓದುಗರಿಗೆ ಓದಿಸಿಕೊಂಡು ಹೋಗುವ ರೀತಿ ಹಾಗೂ ಅವುಗಳಿಗೆ ಪೂರಕ ಜ್ಞಾನ ಮತ್ತು ಸಮಾಜಮುಖಿ ಚಿಂತನೆಗಳನ್ನು ಕಟ್ಟಿಕೊಟ್ಟಿರುವ ರೀತಿ ತುಂಬಾ ವಿಶಿಷ್ಟವಾದದ್ದು.

**ಶಬ್ದಾರ್ಥಗಳು**

ಫಳಾರ = ಫಲಾಹಾರ, ಖಾನಾವಳಿ = ಹೋಟೆಲು, ಕಳ್ಳಾಟಿಕೆ = ಕಳ್ಳಸಾಗಣೆ, ಫಿಶಿಂಗ್ ಬ್ಯಾನ್ = ಮೀನುಗಾರಿಕೆ ನಿಷೇಧ, ಎರಿ = ಜೇನುಗೂಡು, ಅನುದಿನ = ಪ್ರತಿದಿನ, ಓಕ್ರ =ಬೆಂಡೆಕಾಯಿ, ವಾಲ್ನಟ್= ಅಕ್ರೋಟ ಹಣ್ಣು, ಮ್ಯಾಂಗೋಸ್ಟಿನ್ = ಮ್ಯಾಂಗೋಸ್ಟಿನ್ ಹಣ್ಣು, ಮಶ್ರೂಮ್ = ಅಣಬೆ, ಪೇರಳೆ= ಪೇರಲೆ ಸೀಬೆಹಣ್ಣು, ಸಮುದ್ರ ಬಾಳೆಕಾಯಿ = ಮೀನು, ಅಂದಕಾಲತ್ತಿಲಿ = ಆ ಕಾಲದಲ್ಲಿ

**ಮಾದರಿ ಪ್ರಶ್ನೆಗಳು**

1. ಮಳೆಗಾಲದಲ್ಲಿ ಮೀನುಗಾರಿಕೆ ಏಕೆ ಮಾಡುವುದಿಲ್ಲ?
2. ಜಗತ್ತಿನಾದ್ಯಂತ ಇರುವ ಭಾರತದ ಪ್ರಮುಖ ಖಾನಾವಳಿಗಳನ್ನು ಹೆಸರಿಸಿ?
3. ವಿದೇಶಗಳಲ್ಲಿ ಭಾರತೀಯ ತಿನಿಸುಗಳ ಕುರಿತು ಯಾವ ಕಾರಣಕ್ಕೆ ಇಷ್ಟವಾಗುತ್ತವೆ ವಿವರಿಸಿ?
4. ದೇಶದಲ್ಲಿ ತೋಟಗಾರಿಕೆ ಮತ್ತು ತರಕಾರಿ ಬೆಳೆಗಳ ಕುರಿತು ಲೇಖಕರು ವಿವರಿಸಿರುವ ಬಗೆಯನ್ನು ತಿಳಿಸಿ?
5. ಕ್ಷೀರ ಕ್ರಾಂತಿ ಕುರಿತು ಲೇಖಕರು ಹೇಳುವ ವಿವರವನ್ನು ತಿಳಿಸಿ?
6. ಲೇಖಕರ ಬಾಲ್ಯದ ನೆನಪನ್ನು ವಿವರಿಸಿ?

**ಹೆಚ್ಚಿನ ಓದು**

1. ಆಹಾರ ಮತ್ತು ಆರೋಗ್ಯ, ಲೇ: ಡಾ. ವಸುಂಧರಾ ಭೂಪತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ವಚನ ಸಾಹಿತ್ಯ

೭

# ವಚನ ಸಾಹಿತ್ಯದಲ್ಲಿ ಕೃಷಿ

**ವಚನಕಾರರು**

ಸವಳ ಭೂಮಿಯ ಉಳ್ಳಿ ಮೂಲಂಗಿ ಬಳ್ಳೊಳ್ಳಿ
ಸಬ್ಬಸಗಿ ನಾರುಗಡ್ಡೆಯ ತಿಂದವರಿಗೆ
ರೋಗ ಪ್ರಾಪ್ತಿಯಾಗುವುದು
ಕೆಂಪು ಭೂಮಿಯ ಉಳ್ಳಿ ಮೂಲಂಗಿ ಬಳ್ಳೊಳ್ಳಿ
ಸಬ್ಬಸಗಿ ನಾರುಗಡ್ಡೆಯ ತಿಂಬವರಿಗೆ
ರೋಗ ಪರಿಹಾವಾಗುವುದು ನೋಡೆಂದನಯ್ಯಾ
ಕಾಡನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ

**–ಕಾಡಸಿದ್ದೇಶ್ವರ**

ಬನ್ನಿ ಕರಣಿಕರು, ನೀವು ಲೆಕ್ಕವ ಹೇಳಿ, ಧಾನ್ಯ ಧಾನ್ಯಂಗಳ ಸಂಚವನು
ಹೊಸ ಜೋಳ ಅರವತ್ತು ಲಕ್ಷ ಖಂಡುಗ,
ಶಾಲಿಧಾನ್ಯ ಮೂವತ್ತು ಲಕ್ಷ ಖಂಡುಗ,
ಗೋಧಿ ಹನ್ನೆರಡು ಲಕ್ಷ ಖಂಡುಗ, ಕಡಲೆ ಬತ್ತೀಸ ಖಂಡುಗ,
ಹೆಸರು ಮೂವತ್ತಾರು ಲಕ್ಷ ಖಂಡುಗ,
ನವಣೆ ಹಾರಕ ಬರಗು ಸಾವೆ ದೂಸಿಗಳೆಂಬ ಧಾನ್ಯ ಐವತ್ತು ಲಕ್ಷ ಖಂಡುಗ
ಹೊಸ ಸುಗ್ಗಿಯ ವೇಳೆ ಬಹ ಭತ್ತ ಅಗಣಿತ
ಮಹಾದಾನಿ ಸೊಡ್ಡಳನ ಆರೋಗಣೆಯ ಅವಸರಕ್ಕೆ

ಅಳವಟ್ಟ ಸಯದಾನ ಇನಿತವಧರಿಸಯ್ಯಾ, ಸಂಗನಬಸವಣ್ಣಾ

**ಸೊಡ್ಡಳ ಬಾಚರಸ;** ವಚನ ಸಂಪುಟ–9;
ವಚನ ಸಂಖ್ಯೆ–785

ಅಯ್ಯಾ ಕೈಯೊಡ್ಡಿ ಬೇಡುವುದು ಸ್ಥಲವಲ್ಲ; ಕೈಯೆತ್ತಿಕ್ಕುವುದು ಸ್ಥಲವಲ್ಲ
ಮತ್ತೆಂತೆದೊಡೆ, ಗೋಧಿ ತೊಗರಿ ಬರಗು ಅಗಸೆ ಚೆನ್ನಂಗಿಬೇಳೆ ಕಡ್ಲೆಬೇಳೆ
ಬೆಲ್ಲ ಹುಣಿಸಿಹಣ್ಣು ಮಧು–ಇಂತು ಇವಂ ನಿರ್ಮಳವಾಗಿ ಪಾಕವಮಾಡಿ
ಗುರುವನರಿದಿತ್ತುಕೊಂಬುದೇ ಶುದ್ಧಪ್ರಸಾದ.
ಅಕ್ಕಿ ಕುಸುಬೆ ಬಿಳಿಯೆಳ್ಳು, ಬೀಳಿಜೋಳ
ಸಾಸಿವೆ ಹಾಲು ಮೊಸರು ಲವಣ ಹೆತ್ತುಪ್ಪ ಶುಂಠಿ
ಇಂತು ಇವಂ ನಿರ್ಮಳವಾಗಿ ಪಾಕವ ಮಾಡಿ
ಲಿಂಗವನರಿದಿತ್ತುಕೊಂಬುದೇ ಸಿದ್ಧಪ್ರಸಾದ.
ಉದ್ದು ಸಾವೆ ವಟಾಣೆ ಸಜ್ಜೆ ಕರಿಕಡ್ಲೆ ತೈಲ ಮೆಣಸು ಲಾವಂಗ
ಇಂತು ಇವಂ ನಿರ್ಮಳವಾಗಿ ಪಾಕವಮಾಡಿ
ಜಂಗಮವನರಿದಿತ್ತುಕೊಂಬುದೇ ಪ್ರಸಿದ್ಧಪ್ರಸಾದ.
ಈ ಸೈದಾನದೊಳಗಿಪ್ಪ ಸಕಲವನರಿದು ನಿರ್ಮಲ ಪಾಕವಮಾಡಿ
ನಿಜಗುರುನಿರಂಜನ ಚನ್ನಬಸವಲಿಂಗವನರಿದಿತ್ತುಕೊಂಬ
ಮಹಾಪ್ರಸಾದಿಯೇ ಶರಣ ಕಾಣಾ

**ದೇಶಿಕೇಂದ್ರ ಸಂಗನಬಸವಯ್ಯ:** ಸಮಗ್ರ ವಚನ ಸಂಪುಟ–12:
ವಚನ ಸಂಖ್ಯೆ– 728

ಹಸಿಹುಲ್ಲು ಮೆಯ್ದ ಪಶುವಿಗೆ
ಹಾಲುಂಟು, ಬೆಣ್ಣೆಯಿಲ್ಲ.
ಒಣಹುಲ್ಲು ಮೆಯ್ದ ಪಶುವಿಗೆ
ಹಾಲಿಲ್ಲ, ಬೆಣ್ಣೆಯುಂಟು.
ಸರ್ವರು ಪಶುವಿಂಗೆ ರಸದ ಹುಲ್ಲು ಮೆಯ್ಸಿ
ಹಾಲ ಕರೆದುಂಬರು.
ಅದರಳೊಬ್ಬ ಅಧಮ
ಕರಡವ ಪಶುವಿಗೆ ಮೆಯ್ಸಿ
ಹಾಲು ಕರೆದುಂಬನು.

ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ.

**ಕಾಡಸಿದ್ಧೇಶ್ವರ:** ಸಮಗ್ರ ವಚನ ಸಂಪುಟ–10;
ವಚನ ಸಂಖ್ಯೆ–483

ಕೆರೆಯ ಕಟ್ಟಿಸುವವನೆ ಕರ್ಮಿ?
ಅಗ್ರವನೆತ್ತಿಸುವವನೆ ಪಾತಕಿ?
ಶಿವಾಲಯವ ಕಟ್ಟಿಸುವವನೆ ದ್ರೋಹಿ?
ಗುರುಹಿರಿಯರ ಕಂಡರೆ ನಮಿಸಿದಾತನೆ ಚಾಂಡಾಲ?
ಸತ್ರಿಯಿಂದ ಶಿವಾರ್ಚನೆಯ ಮಾಡದಾತನೆ ಅನಾಚಾರಿ
ಇಂತೀ ಐವರನೊಳಗೊಂಬನೆ?
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನ

**ಸಿದ್ಧರಾಮೇಶ್ವರ:** ಸಮಗ್ರ ವಚನ ಸಂಪುಟ–4;
ವಚನ ಸಂಖ್ಯೆ–473

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರಿದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರನೊಳಗೊಂಡ ಫಲದಂತೆ,
ಅರಿವು ಆಚರಣೆಯೆಲ್ಲ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮಭೀಮ ಜೀವಧನನೊಡೆಯನೆಂಬುದ ಭಾವಿಸಲಿಲ್ಲ.

**ಒಕ್ಕಲಿಗ ಮುದ್ದಣ್ಣ;** ಸಮಗ್ರ ವಚನ ಸಂಪುಟ– 6;
ವಚನ ಸಂಖ್ಯೆ–1740

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ

ಸಿಹಿ ನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ ನೆಲನು ಒಂದೆ ಆಕಾಶವು ಒಂದೆ–
ಜಲವು ಹಲವು ದ್ರವ್ಯಂಗಳ ಕೂಡಿ,
ತನ್ನ ಪರಿ ಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು

**–ಅಕ್ಕಮಹಾದೇವಿ**

ಹಸುವಿಂಗೆ ಆರು ಬಾಯಿ, ಎತ್ತಿಂಗೆ ಮೂರು ಬಾಯಿ
ಕರುವಿಂಗೆ ಒಂದು ಬಾಯಲ್ಲಿ ನಾನಾವರ್ಣದ ಹುಲ್ಲ ಮೇದು
ನೀರಡಸಿ ನೆಟ್ಟಾಲೆ ನಿಂದುವು ಕಣ್ಣು
ಕರು ಸತ್ತ ಮತ್ತೆ ಹಸುವಿನ ಹಂಗಿಲ್ಲ.
ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ
ಕರುವಿನ ಹರಣ ಹೋಹುದಕ್ಕೆ ಮುನ್ನವೆ
ಒಡಗೂಡಿ ಶುದ್ಧಿಯನೊಪ್ಪಿಸಬೇಕು

**–ತುರುಗಾಹಿ ರಾಮಣ್ಣ :**(ಸಮಗ್ರ ವಚನ ಸಂಪುಟ: 7
ವಚನ ಸಂಖ್ಯೆ 1038)

ತನುವ ತೋಟವ ಮಾಡಿ
ಮನವ ಗುದ್ದಲಿ ಮಾಡಿ,
ಅಗೆದು ಕೆಳೆದನಯ್ಯ ಭ್ರಾಂತಿಯ ಬೇರೊಡೆದು
ಸಂಸಾದರ ಹೆಂಟೆಯ ಬಗಿದು
ಬಿತ್ತಿದೆನಯ್ಯ ಬ್ರಹ್ಮಜೀವವ !
ಅಖಂಡ ಮಂಡಲವೆಂಬ ಭಾವಿ
ಪವನವೇ ರಾಟಾಳ !
ಸುಷುಮ್ನ ನಾಳದಿಂದವೆ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು,

ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಆ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರ !

**–ಅಲ್ಲಮ ಪ್ರಭು**

*****

**ವಚನಕಾರರು**

ಜನಸಾಮಾನ್ಯರ ಮಧ್ಯದಿಂದ ಬೆಳೆದು ಬಂದ ವಿಶೇಷ ವಿದ್ಯಾಭ್ಯಾಸವಿಲ್ಲದ ವಚನಕಾರರು ಅಂದಿನ ಸಾಮಾಜಿಕ ಮೌಲ್ಯಗಳ ಜೊತೆಯಲ್ಲಿ ವೈಚಾರಿಕತೆಯನ್ನು ಬೆರೆಸಿಕೊಂಡು ಜನಸಾಮಾನ್ಯರ ನಿತ್ಯಜೀವನದಲ್ಲಿ ಪ್ರಗತಿಪರ ಸುಧಾರಣೆಗಳನ್ನು ತರುವ ಪ್ರಯತ್ನಗಳನ್ನು ಮಾಡಿದರು. ತಮ್ಮ ವಿಚಾರಗಳನ್ನು ಅನುಭವ ಮಂಟಪದಲ್ಲಿ ಮಥಿಸಿ ಹೊರಬಂದ ಸಾರವನ್ನು ಮೌಖಿಕವಾಗಿ ಜನಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಜಗತ್ತಿನಲ್ಲಿಯೇ ಅತಿ ಅಪರೂಪವಾದ ವಚನ ಸಾಹಿತ್ಯವನ್ನು ಹುಟ್ಟು ಹಾಕಿದವರಲ್ಲಿ ವಚನಕಾರರು ಪ್ರಮುಖರಾಗಿದ್ದಾರೆ.

**ಆಶಯ**

ಜೀವನಾನುಭವಕ್ಕೆ ಅತಿ ಹತ್ತಿರವಾದ ವಚನ ಸಾಹಿತ್ಯದಲ್ಲಿ ಜನಸಾಮಾನ್ಯರ ಮುಖ್ಯ ಜೀವನಮಾರ್ಗವಾದ ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರಗಳು ಗಂಭೀರ ಚಿಂತನೆಗೆ ಒಳಪಟ್ಟಿರುವುದನ್ನು ಗುರುತಿಸಬಹುದು. ವಚನ ಸಾಹಿತ್ಯದ ಈ ಹಿನ್ನೆಲೆ ಇಟ್ಟುಕೊಂಡು ಹಲವಾರು ಅಧ್ಯಯನ, ಸಂಶೋಧನೆಗಳು ನಡೆದಿವೆ. ವಚನಗಳು ವ್ಯವಸಾಯದ ಬದುಕು, ಬವಣೆ, ಒಕ್ಕಲಿಗರ ಚಿತ್ರಣಗಳನ್ನಷ್ಟೇ ಕಟ್ಟಿಕೊಡದೆ ಕೃಷಿ ಅರಿವನ್ನು ಹಂಚುವುದು, ವೈಜ್ಞಾನಿಕ ವಿಶ್ಲೇಷಣೆಗಳನ್ನು ಸರಳವಾಗಿ ತಿಳಿ ಹೇಳುವುದು ಮತ್ತು ತಂತ್ರಜ್ಞಾನ ವರ್ಗಾವಣೆ ಮಾಡುವ ಉದಾತ್ತ ಕೆಲಸಗಳನ್ನೂ ನಿರ್ವಹಿಸಿವೆ.

**ಶಬ್ದಾರ್ಥಗಳು**

ಉಳ್ಳಿ = ಈರುಳ್ಳಿ, ಬಳ್ಳೊಳ್ಳಿ = ಬೆಳ್ಳುಳ್ಳಿ, ಕರಣಿಕ = ಗುಮಾಸ್ತ, ಅಗ್ರ = ತುದಿ ಮೇಲು, ಕರಡ =ಒಣ ಹುಲ್ಲು, ತನು=ದೇಹ, ಸುಷುಮ್ನ= ಬೆನ್ನುಹುರಿಯಲ್ಲಿರುವ ನಾಡಿ.

**ಮಾದರಿ ಪ್ರಶ್ನೆಗಳು**

1. ಸವಳ ಭೂಮಿಯ ಉಳ್ಳಿ ಮೂಲಂಗಿ ಬಳ್ಳೊಳ್ಳಿ ಸಬ್ಬಸಗಿ ನಾರುಗಡ್ಡೆಯ ತಿಂದವರಿಗೆ ಎನ್ನುವ ವಚನವನ್ನು ವೈಜ್ಞಾನಿಕ ವಿಶ್ಲೇಷಿಸಿ?
2. ನವಣೆ ಹಾರಕ ಬರಗು ಸಾವೆ ದೂಸಿಗಳೆಂಬ ಧಾನ್ಯಗಳ ಕುರಿತು ವಚನಕಾರ ನೀಡುವ ವಿವರವನ್ನು ವಿಶ್ಲೇಷಿಸಿ?

3. ಬನ್ನಿ ಕರಣಿಕರು, ನೀವು ಲೆಕ್ಕವ ಹೇಳಿ ಎಂದು ಹೇಳುವ ವಚನ ಆಶಯವನ್ನು ತಿಳಿಸಿ?
4. ಹಸಿಹುಲ್ಲು ಮೆಯ್ದ ಪಶುವಿಗೆ ಎಂಬ ವಚನವು ಯಾವ ಆಶಯವನ್ನು ವ್ಯಕ್ತಪಡಿಸುತ್ತದೆ?
5. ಕೆರೆಯ ಕಟ್ಟಿಸುವವನೆ ಕರ್ಮಿ? ಎಂಬ ವಚನವು ಏನನ್ನು ಸೂಚಿಸುತ್ತದೆ?
6. ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು ಎಂಬುದು ಅಂದಿನ ಆಶಯವನ್ನು ವಿಶ್ಲೇಷಿಸಿ?
7. ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರನೆರೆದವರಾರಯ್ಯ? ಈ ವಚನದ ವಚನದ ಆಶಯವನ್ನು ತಿಳಿಸಿ?
9. ಹಸುವಿಂಗೆ ಆರು ಬಾಯಿ, ಎತ್ತಿಂಗೆ ಮೂರು ಬಾಯಿ ಎಂಬುದು ಆಹಾರ ಪ್ರಮಾಣ ಕುರಿತಂತೆ ವಿಶ್ಲೇಷಿಸಿ?
10. ತನುವ ತೋಟವ ಮಾಡಿ ಮನವ ಗುದ್ದಲಿ ಮಾಡಿ ಎಂಬ ಈ ವಚನವು ಯಾವ ಕಲ್ಪನೆಯನ್ನು ಮೂಡಿಸುತ್ತದೆ?

**ಹೆಚ್ಚಿನ ಓದು**

1. ವಚನ ಸಂಪುಟಗಳು, 1ರಿಂದ 12, ಪ್ರ: ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೮

# ಸರ್ವಜ್ಞ ಸಾಹಿತ್ಯದಲ್ಲಿ ಕೃಷಿ

ಡಾ. ಕೆ.ಸಿ. ಶಶಿಧರ

ವಚನಗಳ ಮೂಲಕ ಜ್ಞಾನ ದಾಖಲೆಗೆ ಸರ್ವಜ್ಞನು ಕಂಡುಕೊಂಡ ವಿಧಾನ, ಅತ್ಯಂತ ವೈಜ್ಞಾನಿಕವಾದುದಾಗಿದೆ. ಇಂದು ನಾವು ಪೀಠಿಕೆ ಎಂದು ಸಂಗ್ರಹಿಸುತ್ತಿರುವ ಜ್ಞಾನ ಸಂಗ್ರಹಣ ವಿಧಾನಕ್ಕೆ ಸರ್ವಜ್ಞನೇ ಪಿತಾಮಹ. ಈ ಹಿನ್ನೆಲೆಯಲ್ಲಿ ಸರ್ವಜ್ಞರ ವಚನಗಳ ಹೊಸ ಓದು ಅತಿ ಅಗತ್ಯ. ಸರ್ವಜ್ಞನ ವಚನಗಳಿಂದ ಚಿಂತನೆಗಳನ್ನು ಹೆಕ್ಕಿ ತೆಗೆದು ನಮ್ಮ ಅರಿವಿನ ಆಳತೆಯಲ್ಲಿ ವಿಶ್ಲೇಷಿಸಲಾಗಿದೆ.

ಹೊಲದಿಂದ ಹೊಟ್ಟೆಯವರೆಗಿನ ಆಹಾರ ಸಾಗುವ ಹಾದಿಯಲ್ಲಿ ಬರುವ ಎಲ್ಲಾ ಜ್ಞಾನವನ್ನು ತನ್ನ ತ್ರಿಪದಿಗಳಲ್ಲಿ ಕಟ್ಟಿಕೊಟ್ಟ ಅಪರೂಪದ ವ್ಯಕ್ತಿ ಸರ್ವಜ್ಞ.

ತಂದೆ ಕುಂಬಾರ ಮಲ್ಲ ತಾಯಿ ಮಳಲಾದೇವಿ
ಇಂದು ಶೇಖರನ ವರಪುತ್ರ ಧರಣಿಗೆ
ಬಂದು ಜನಿಸಿದ ಸರ್ವಜ್ಞ

ಕುಂಬಾರ ವೃತ್ತಿಯ ಮಲ್ಲ ಹಾಗೂ ಮಳಲಾದೇವಿ ಇವನ ತಂದೆ ತಾಯಿಯರು. ವೀರಶೈವ ಸಂಸ್ಕೃತಿಯಲ್ಲಿ ಬೆಳೆದ ಕುಟುಂಬ. ಕರಕುಶಲ ಕೆಲಸಗಳ ಪರಿಣಿತಿ ಸಾಧಿಸಲು ಚುರುಕು ಬುದ್ಧಿ ಕುಂಬಾರಿಗೆ ವರದಾನ. ಇಂತಹ ವರದಾನವಿರುವ ದಂಪತಿಗಳ ಸುಪುತ್ರನಾಗಿ ಶಿವನ ಭಕ್ತನಾಗಿ, ಹನ್ನೆರಡನೇ ಶತಮಾನದ ಐತಿಹಾಸಿಕ ಹಾಗೂ ಧಾರ್ಮಿಕ ಕ್ರಾಂತಿಯ ಕೇಂದ್ರವಾದ ಅಂಬಲೂರಿನಲ್ಲಿ ಅಂಬೆಗಾಲಿಟ್ಟ ಸರ್ವಜ್ಞ ಸಹಜವಾಗಿಯೇ ತಂದೆ ತಾಯಿಯ ಕೌಶಲ್ಯ ಪೂರ್ಣ ಚಿಂತನೆಗಳು, ಶಿವನ ಆರಾಧನೆಯಿಂದ ನೀತಿನಿಯತ್ತನ್ನು ತನ್ನ ಪರಿಸರದಿಂದ ಸ್ವತಂತ್ರ ಹಾಗೂ ತತ್ವ ಪ್ರಚಾರವನ್ನು ಮೈಗೂಡಿಸಿಕೊಂಡು ಬೆಳೆದನು. ತಿರುಗು ಮಾರುವ ಕಾಯಕ. ಹಸಿದವರಿಗೆ ಆಹಾರ ಬೇಯಿಸುವ ಆಧಾರ ಒದಗಿಸುವ ಕಾಯಕವಾಗಿತ್ತು. ಇಂತಹ ಕಾಯಕ ಪ್ರಾರಂಭಿಸಿದ ಸರ್ವಜ್ಞ ತನ್ನ ಕಾಯಕದ ಜೊತೆಜೊತೆ ಹೋದಲ್ಲಿ ಬಂದಲ್ಲಿ ಅವಲೋಕನ ಮಾಡಿದ್ದು,

ನೋಡಿದ್ದನ್ನು ಹಾಗೂ ಕೇಳಿದ್ದನ್ನು ಅರ್ಥೈಸಿ ಸಾರ ತೆಗೆದು ಪ್ರಾಸಬದ್ಧ ಪದಗಳುಳ್ಳ ವಚನದಲ್ಲಿ ಹೇಳಿದ್ದು ಸರ್ವಜ್ಞನಾಗಲು ಕಾರಣವಾಯಿತು. ಇದನ್ನು ಸ್ವತಃ ಸರ್ವಜ್ಞ ತನ್ನ ತ್ರಿಪದಿಯಲ್ಲಿ ತಿಳಿಸಿ ಹೇಳಿದ್ದಾರೆ.

ಸರ್ವಜ್ಞನೆಂಬುವನು ಗರ್ವದಿಂದಾದವನೆ?
ಸರ್ವರೊಳೊಂದೊಂದು ನುಡಿಗಲಿತು ವಿದ್ಯೆಯ
ಪರ್ವತವೇ ಆದ ಸರ್ವಜ್ಞ||

ಇಂತಹ ಅಹಂ ರಹಿತ ವಿರಾಗಿಸರ್ವಜ್ಞ ಜಂಗಮವನ್ನ ಆಚರಿಸಿದವನು. ಹಕ್ಕಿಯಂತ ಸ್ವತಂತ್ರ ಜೀವನ ಅರಸಿ, ಹಕ್ಕಿಯಂತೆ ನಾಡಿನ ಉದ್ದಗಲಕ್ಕೂ ಚಲಿಸಿ ತನ್ನ ಸಂಚಾರದಲ್ಲಿ ಅನಂತ ಅನುಭವವನ್ನು ಪಡೆದು ತನ್ನ ಅನುಭವವನ್ನು ವಚನದಲ್ಲಿ ಕಟ್ಟಿ ಹಂಚಿದನು.

ಕಳ್ಳಿಯೊಳು ಹಾಲು ಮುಳ್ಳು। ಗಳ್ಳೆಯೊಳು ಹೆಜ್ಜೇನು।
ಎಳ್ಳಿನೊಳಗೆಣ್ಣೆ ಹನಿದಿರಲು, ಶಿವಲೀಲೆ
ಸುಳ್ಳೆನ್ನಬಹುದೇ ಸರ್ವಜ್ಞ||

ಶಿವಲೀಲೆಯ ಮಹತ್ವ ಸಾರಲು ಬಳಸಿದ ಪದಗಳು, ಉದಾಹರಣೆಗಳು ಇಲ್ಲಿ ಬಹು ಮುಖ್ಯ ಎನ್ನುವುದು ನನ್ನ ಅನಿಸಿಕೆ. ಕಾರಣ ಎಳ್ಳಿನಲ್ಲಿರುವ ಎಣ್ಣೆ ಅಂಶ, ಕಳ್ಳಿಯಲ್ಲಿ ಹಾಲಿರುವುದು, ಮುಳ್ಳು ಕಳ್ಳಿಯೊಳು ಜೇನು ಕಟ್ಟುವುದು ಇತ್ಯಾದಿ ಪದ ಹಾಗೂ ಜ್ಞಾನವನ್ನು ಸಾಮಾನ್ಯರಿಗೆ ತಲುಪಿಸುವ ಆಶಯವೂ ಈ ಸಾಹಿತ್ಯದಲ್ಲಿ ಕಾಣುತ್ತೇವೆ.

ಕೃಷಿ ಪದ ಅರ್ಥಗಳನ್ನು ಸಾಮಾಜಿಕ ಮೌಲ್ಯ ಧಾರ್ಮಿಕ ನೀತಿ ಸಾರುವಲ್ಲಿ ಹೆಣೆದಿರುವುದು. ಸರ್ವಜ್ಞನ ಹಾಗೂ ವಚನಕಾರರ ವಿಶೇಷತೆ. ಇದನ್ನು ವಿಶೇಷ ಎಂದು ಹೇಳಲು ಕಾರಣವಿದೆ. ಹಿಂದಿನಂತೆ ಇಂದು ಕೃಷಿ ಪದ, ಕಾಯಕದ ರೀತಿ ನೀತಿಗಳನ್ನು ನಿತ್ಯದ ಆಡುನುಡಿಗಳಲ್ಲಿ ಮನೋರಂಜನೆಯಲ್ಲಿ ಅಳವಡಿಸುತ್ತಿಲ್ಲ. ಇದು ಇಂದಿನ ಮಕ್ಕಳ ಸಾಮಾನ್ಯ ತಿಳುವಳಿಕೆಯ ಮಟ್ಟವನ್ನು ಕಡಿಮೆ ಮಾಡಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಕಾರಣ ಇಂದು ಪಿಯುಸಿ ಶಿಕ್ಷಣ ಮುಗಿಸಿ ಬರುವ ನಗರದ ಮಕ್ಕಳಿಗೆ ಅಷ್ಟೇ ಏಕೆ ಹಳ್ಳಿ ಮಕ್ಕಳಿಗೂ ಹಲವಾರು ಕೃಷಿ ಪದಗಳು ಜ್ಞಾನದ ಕೊರತೆಯನ್ನು ಗಮನಿಸಿದ್ದೇನೆ. ಕೃಷಿ ಪದವಿಗೆ ಕೃಷಿ ಕುಟುಂಬದ ಮಕ್ಕಳಿಗೆ ಮೀಸಲಾತಿ ಇದೆ ಈ ಮೀಸಲಾತಿ ಪಡೆಯಲು ಸಾಮಾನ್ಯ ಕೃಷಿ ಜ್ಞಾನದ ಪರೀಕ್ಷೆ ಮಾಡಲಾಗುವುದು. ಇಂತಹ ಪರೀಕ್ಷೆಯಲ್ಲಿ ಮಕ್ಕಳು ಕೊಡುವ ಉತ್ತರ ಅರಿವಿನ ಕೊರತೆಗೆ ಸಾಕ್ಷಿ.

ರಾಗಿ ಮರದಲ್ಲಿ ಬಿಡುವುದಂತೆ, ಹಾಲು ಹಸುವಿನಿಂದ ದೊರೆಯುವ ಬದಲಿಗೆ ನಂದಿನಿ ಪ್ಯಾಕೆಟ್‌ನಿಂದ ಬರುವುದಂತೆ ಇತ್ಯಾದಿ ಹಲವು ಈ ರೀತಿಯ ಅಜ್ಞಾನ ಪ್ರದರ್ಶನ ನಡೆಯುತ್ತದೆ. ಈ ಕಾರಣಗಳಿಂದಾಗಿಯೇ ನಿತ್ಯ ಜೀವನದ ಎಲ್ಲಾ ಒಡನಾಟ, ಉದಾಹರಣೆ ನೀತಿಗಳಲ್ಲಿ ಕೃಷಿ ಪದ, ಜ್ಞಾನ ಮೇಳೈಸುವುದು ಇಂದಿನ ಅಗತ್ಯ. ಈ

ಹಿನ್ನೆಲೆಯಲ್ಲಿ ಸರ್ವಜ್ಞನ ಸಾಹಿತ್ಯ ಮತ್ತೆ ಪ್ರಸ್ತುತವಾಗುವುದೆಂಬುದು ನನ್ನ ಅನಿಸಿಕೆ. ಇದಕ್ಕೆ ಉದಾಹರಣೆಯಾಗಿ ಈ ತ್ರಿಪದಿಗಳನ್ನು ಗಮನಿಸಬಹುದು.

ಕ್ಷೀರದೊಳು ಘೃತವಿರಲು। ನೀರಿನಲ್ಲಿ ಸಿಲ್ಕಿಹುದು।
ಅರಿಗೇ ತೋರದಂತೆ ತನ್ನೊಳಗೆ।
ಸಾರಿಹನು ಶಿವನು ಸರ್ವಜ್ಞ॥

ದೇವರು ಮನುಷ್ಯ ಶರೀರದಲ್ಲಿದ್ದರೂ ಅವನಿಗೆ ತಿಳಿಯದು ಎನ್ನುವುದನ್ನು ತಿಳಿಹೇಳಲು ಹಾಲಿನಲ್ಲಿ ತುಪ್ಪ ಇದ್ದರೂ ಬರೀ ಕಣ್ಣಿಗೆ ಕಾಣದು ನೀರಿನಲ್ಲಿ ಕಲ್ಮಶವಿದ್ದರೂ ಬರೀ ಕಣ್ಣಿಗೆ ಕಾಣದು ಹಾಗೆ ನಮ್ಮಲ್ಲಿರುವ ದೇವರು ನಮಗೆ ಕಾಣದು ಎಂಬ ಹೋಲಿಕೆ ನೀಡಿದ್ದಾರೆ.

ಸತ್ತು ಹುಟ್ಟುವರೆಂಬ । ಮಿಥ್ಯವಾ ನುಡಿಯೇಕೆ ।
ಬಿತ್ತಿದರೆ ಬೀಜ ಬೆಳವಂತೆ ವೃಕ್ಷವಾ ।
ಸತ್ತು ಹುಟ್ಟುವುದೇ ಸರ್ವಜ್ಞ ॥

ಪುನರ್ಜನ್ಮ ಸುಳ್ಳು ಎಂಬುದನ್ನು ಬೀಜದಿಂದ ವೃಕ್ಷ, ಸತ್ತ ವೃಕ್ಷ ಮತ್ತೆ ಹುಟ್ಟದು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಬಾಳೆವನ ಲೇಸು । ಮಾಳಿಗೆಯ ಮನೆ ಲೇಸು ।
ಬಾಳುವರೆ ಕೆಂಚ ಸತಿ ಲೇಸು, ಮೆಲ್ಲಕ್ಕೆ ।
ಹೋಳಿಗೆಯು ಲೇಸು ಸರ್ವಜ್ಞ ॥

ಕರಿಕೆ ಕುದುರೆಗೆ ಲೇಸು । ಮರುಕ ಹೆಣ್ಣಿಗೆ ಲೇಸು ।
ಅರಿಕೆಯುಳ್ಳವನ ಕೆಳೆ ಲೇಸು, ಸೇವಿಗೆಯ ।
ಸುರುಕ ಲೇಸೆಂದ ಸರ್ವಜ್ಞ ॥

ಇಲ್ಲಿ ಬಾಳೆವನ ಇದ್ದು ಗದ್ದೆಯಂತಲ್ಲ ಹಾಗೂ ಉತ್ತಮ ಆದಾಯ ತರಬಲ್ಲದು ಎನ್ನುವುದನ್ನೂ ಉದಾಹರಿಸಲಾಗಿದೆ. ಕರಿಕೆ ಎಂಬುದು ಹುಲು ಎಂಬುದು ಸಹ ಇನ್ನೊಂದು ವಚನದಲ್ಲಿ ತಿಳಿಸಲಾಗಿದೆ.

ವಚನಗಳಲ್ಲಿ ಸಾಧ್ಯವಿರುವಲ್ಲೆಲ್ಲಾ ಕೃಷಿ, ಬೆಳೆ, ಬೆಳೆಯ ಒಂದು ಭಾಗಗಳನ್ನು ಜೋಡಿಸಿ ಅದಕ್ಕೆ ಹೊಂದುವಂಹ ತತ್ವನೀತಿ, ಮಾಹಿತಿ ಕಟ್ಟಿ ಕೊಟ್ಟಿರುವುದು ಸರ್ವಜ್ಞ ವಚನಗಳ ವಿಶಿಷ್ಠತೆ. ಇಂತಹ ಪ್ರಯೋಗ ಇಂದು ಪುನಃ ನಾವು ಮಾಡಿದಲ್ಲಿ ನಮ್ಮ ಆಹಾರ ಹೊಲದಿಂದ ಹೊಟ್ಟೆಯವರೆಗೆ ತಲುಪುವ ಜ್ಞಾನವನ್ನು ಮುಂದಿನವರಿಗೆ ಕಟ್ಟಿಕೊಡಬಹುದು.

ಬೆಕ್ಕು ಮನೆಯೊಳು ಲೇಸು। ಮುಕ್ಕು ಕಲ್ಲಿಗೆ ಲೇಸು
ನಕ್ಕು ನಗಿಸುವ ನುಡಿ ಲೇಸು, ಊರಿಂಗೆ।
ಒಕ್ಕಲಿಗ ಲೇಸು ಸರ್ವಜ್ಞ

ಒಕ್ಕಲಿಲ್ಲದ ಊರು। ಮಕ್ಕಳಿಲ್ಲದ ಮನೆಯು ।
ಲೆಕ್ಕವಿಲ್ಲದನ ಬೇಹಾರ, ಇವು ಮೂರು।
ದಕ್ಕು ಕಾಣಯ್ಯ ಸರ್ವಜ್ಞ॥

ಉತ್ತಮ ಜೀವನ ನಡೆಸಿ ನಮ್ಮ ಪರಿಸರ ಸುಂದರವಾಗಿರಲು ನಗಿಸುವ ನುಡಿ ಅಗತ್ಯ. ಇದನ್ನ ಅರಿತೇ ಇಂದು ಹಲವಾರು ನಗು ಕೂಟಗಳು ಹುಟ್ಟಿಕೊಂಡಿವೆ. ಅದೇ ರೀತಿ ಒಂದು ಊರು ಚೆನ್ನಾಗಿ ಅಭಿವೃದ್ಧಿಯಾಗಲು ಒಕ್ಕಲಿಗ ಬೇಕು. ಊರಿನಲ್ಲಿ ಕೃಷಿ ಮತ್ತು ಕೃಷಿಕನು ಇದ್ದಾಗ ಆ ಊರಿನಲ್ಲಿ ಆಹಾರ ಸಮಸ್ಯೆ ಇರದು. ಹಸುಗಳ ಗೋಧೂಳಿ ನೋಟ ಸುತ್ತಮುತ್ತಲ ಹಸಿರು ಮನಕೆ ಆನಂದವನ್ನು ನೀಡುತ್ತದೆ ಎಂಬುದನ್ನು ಸರ್ವಜ್ಞ ತಿಳಿಸಿದ್ದಾರೆ. ಊರಲ್ಲಿ ಕೃಷಿ ಚಟುವಟಿಕೆ ಇರದಿದ್ದಲ್ಲಿ ಹೇಗಿರಬಹುದು ಎಂಬುದನ್ನು ಊಹಿಸಿಕೊಳ್ಳುವುದು ಕಷ್ಟ. ಹಾಗೇ ಒಂದು ದೇಶ ಸುಭೀಕ್ಷವಾಗಿರಲು ಒಕ್ಕಲಿಗರನ್ನು ಒಕ್ಕಲುತನವನ್ನು ಕೊಂಡಾಡಬೇಕು. ಹಾಗೂ ದೇಶ ನಡೆಸುವವರು ಒಕ್ಕಲಿಗೆ ಆಶ್ರಯ ನೀಡಬೇಕು. ಆಗ ಮಾತ್ರ ದೇಶ ಸುಭೀಕ್ಷ, ಹಾಗೆ ಖಜಾನೆಯೂ ತುಂಬಿರುತ್ತದೆ ಎನ್ನುವುದನ್ನು ಸರ್ವಜ್ಞನು ತನ್ನ ವಚನದಲ್ಲಿ ಈ ರೀತಿ ಹೇಳಿದ್ದಾನೆ.

ಭಂಡಾರ ತುಂಬಿ ನೀ । ಭಂಡಿಯಲಿ ಹೇರುವರೆ ।
ಮಂಡಲವನಾಳಿ ಮರೆಯುವರೆ ಒಕ್ಕಲನು
ಕೊಂಡಾಡಬೇಕು ಸರ್ವಜ್ಞ॥

ಇಂದು ಸಮಾಜದಲ್ಲಿ ಒಕ್ಕಲಿಗ ಹಾಗೂ ಒಕ್ಕಲುತನ ಅಂದರೆ ಕೃಷಿ ಇವರೆಡನ್ನೂ ತುಚ್ಚೀಕರಿಸಲಾಗುತ್ತಿದೆ. ರೈತನಿಗೆ ಹೆಣ್ಣು ಕೊಡುವುದಿಲ್ಲ, ಕೃಷಿ ಮಾಡಲು ಎಲ್ಲೂ ಸಲ್ಲದವರೇ ಇಲ್ಲಿರುತ್ತಾರೆ. ಇಂತಹ ಹೇಳಿಕೆ ನುಡಿಗಳು ಕೃಷಿ ವ್ಯವಸ್ಥೆಯ ಸ್ಥೈರ್ಯವನ್ನು ಹಾಳು ಮಾಡಿವೆ. ಆದ್ದರಿಂದಲೇ ಸರ್ವಜ್ಞನು ಹೇಳುತ್ತಾನೆ ಒಕ್ಕಲನು ಕೊಂಡಾಡಬೇಕು ಅಂದರೆ ಒಕ್ಕಲಿಗನಿಗೆ/ರೈತನಿಗೆ ಪ್ರೀತಿ ಆದರ ಗೌರವಗಳು ಬೇಕು ಅದನ್ನು ನಾವು ಕೊಟ್ಟಾಗ ಮಾತ್ರ ದೇಶ ಸುಭೀಕ್ಷವಾಗಿರುತ್ತದೆ. ಅಂದು ಸರ್ವಜ್ಞನು ಹೇಳಿದ ಒಕ್ಕಲಿಗನ ಕೊಂಡಾಡಬೇಕು, ಇಂದಿಗೂ ಪ್ರಸ್ತುತ ಡಾಕ್ಟರ್, ಇಂಜಿನಿಯರ್, ಡ್ರೈವರ್ ಅಷ್ಟೇ ಏಕೆ ಹೋಟೆಲ್‌ನಲ್ಲಿ ಸರ್ವರ್ ಬಾಯ್‌ಗೂ ನಾವು ಅವರ ಸೇವೆಗೆ ಥ್ಯಾಂಕ್ಸ್ ಹೇಳುತ್ತೇವೆ. ಒಳ್ಳೆಯದು, ಆದರೆ ನಮಗೆ ಅನ್ನವನ್ನು ಕೊಡುವ ರೈತನಿಗೆ ನಾವು ಥ್ಯಾಂಕ್ಸ್ ಹೇಳುತ್ತೇವೆಯೇ? ಇಲ್ಲ. ಸರ್ವಜ್ಞ ಒಕ್ಕಲಿಗನ ಕೊಂಡಾಡಬೇಕು ಎಂದಿರುವುದು ಈ ನಿಟ್ಟಿನಲ್ಲಿಯೇ ಎಂದು ಅರಿಯಬೇಕು.

ಹೀಗೆ ಕೃಷಿ ಅಗತ್ಯವನ್ನು ಸರ್ವಜ್ಞ ವಿವಿಧ ರೀತಿಯಲ್ಲಿ ವಿವಿಧ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಎಲ್ಲಾ ಜ್ಞಾನಗಳಲ್ಲಿ ಕೃಷಿ ಜ್ಞಾನ ಶ್ರೇಷ್ಠ ಕಾರಣ ದೇಶದ ಅರ್ಥವ್ಯವಸ್ಥೆಗೆ ಇದು ತಳಹದಿಯನ್ನು ಒದಗಿಸುತ್ತದೆ. ಕೈಗಾರಿಕೆಗಳು ಕೃಷಿಯನ್ನೇ ಅವಲಂಬಿಸಿವೆ. ಯಾವೊಂದು ಕೈಗಾರಿಕೆ ಕೃಷಿ ಇರದೆ ನಡೆಯದು.

ಕೈಗಾರಿಕೆಗೆ ಕಚ್ಚಾವಸ್ತು ಒದಗಿಸುವುದು ಕೃಷಿಯೇ. ಕೃಷಿ ಅವಲಂಬಿತವಿಲ್ಲದ ಕೈಗಾರಿಕೆ ಇರಲು ಸಾಧ್ಯವಿಲ್ಲ ಕಾರಣ ಕಾರ್ಮಿಕನ ಹೊಟ್ಟೆಗಾದರೂ ಆಹಾರ ಬೇಕು. ಇತ್ತೀಚಿನ ಸಂಶೋಧನೆಗಳು ಈ ಅಂಶ ಪ್ರತಿಪಾದಿಸಿವೆ. ಆದ್ದರಿಂದ ಕೃಷಿ ಇಲ್ಲದಿದ್ದರೆ ದೇಶವೇ ನಾಶವಾಗುವುದೆಂದು ಸರ್ವಜ್ಞ ಹೇಳಿದ್ದಾನೆ.

ಕೋಟಿ ವಿದ್ಯೆಗಳಲ್ಲಿ। ಮೇಟಿ ವಿದ್ಯಯೇ ಮೇಲು।
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ।
ದಾಟವೇ ಕೆಡುಕು ಸರ್ವಜ್ಞ

ಹೀಗೆ ತಮ್ಮ ಹಲವು ವಚನಗಳಲ್ಲಿ ಸರ್ವಜ್ಞ ಕೃಷಿ ಅಗತ್ಯ ಹಾಗೂ ಅದನ್ನು ಪ್ರೋತ್ಸಾಹಿಸಬೇಕಾದುದ್ದು ರಾಜಧರ್ಮ ಅಂದರೆ ಆಡಳಿತ ಚುಕ್ಕಾಣಿ ಹಿಡಿದವರ ಆದ್ಯ ಕರ್ತವ್ಯ ಎಂಬುದನ್ನು ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಕೃಷಿ ಚಟುವಟಿಕೆಗಳನ್ನು ಯಾವ ಕ್ರಮದಲ್ಲಿ ಮಾಡಬೇಕು, ಮಾಡದಿದ್ದರೆ ಕೃಷಿ ನಿರೀಕ್ಷಿತ ಫಲ ನೀಡದು ಎಂದಿದ್ದಾರೆ. ಉದಾಹರಣೆಗೆ

ಎತ್ತೊಮ್ಮೆ ಹೂಡುವದು। ಉತ್ತೊಮ್ಮೆ ಹರಗುವದು।
ಬಿತ್ತೊಮ್ಮೆ ಹರಗಿ ಕಳೆದೆಗೆದರಾ ಬೆಳೆಯು।
ಎತ್ತಗೈಯುದ್ದ ಸರ್ವಜ್ಞ॥

ಉತ್ತೊಮ್ಮೆ ಹರಗದಲೆ । ಬಿತ್ತೊಮ್ಮೆ ನೋಡದಲೆ ।
ಹೊತ್ತೇರಿ ಹೊಲಕೆ ಹೋದರೆ ಅವ ತನ್ನ ।
ನೆತ್ತರವ ಸುಡುವ ಸರ್ವಜ್ಞ॥

ನಲ್ಲೆತ್ತು ಬಂಡಿ ಬಲ । ವಿಲ್ಲದ ಆರಂಬ ।
ಕಲ್ಲು ಕಸಗಳನು ಬಿಟ್ಟಾತ ಹೊಲದೊಳಗೆ ।
ಹುಲ್ಲನೇ ಬೆಳೆದ ಸರ್ವಜ್ಞ॥

ಕೃಷಿ ಮತ್ತು ಕೈಗಾರಿಕೆ ಯಾವುದೇ ಒಂದು ದೇಶದ ಆರ್ಥಿಕ ಅಭಿವೃದ್ಧಿಯ ಜೀವನಾಡಿ (1) ಕೈಗಾರಿಕೆಗೆ ಮೂಲ ಪರಿಕರಗಳು ಕೃಷಿ ಮೂಲದಿಂದಲೇ ಆಗಮಿಸುತ್ತವೆ. ಆದ್ದರಿಂದ ಒಂದಕ್ಕೊಂದು ಪೂರಕ ಅವಲಂಬನೆ ಕಾಣಬರುತ್ತದೆ. ವರದಿ (2)ರ ಪ್ರಕಾರ ಕೃಷಿಗಿಂತ ಸೇವೆ ಹಾಗೂ ಮಾಹಿತಿ ವಲಯದೊಂದಿಗೆ ಅವಿನಾಭಾವ ಹೆಚ್ಚಾಗುತ್ತಿರುವುದು ಕಾಣಬರುತ್ತದೆ ಎಂದು ಹೇಳಲಾಗಿದೆ. ಇಲ್ಲಿ ಕೃಷಿಯಿಂದ ಕೈಗಾರಿಕೆಗೆ ಮೂಲಸಾಮಗ್ರಿಗಳ ಹರಿವು ತೋರಲಾಗಿದೆ.




ಅಂದರೆ ಕೈಗಾರಿಕೆಗಳು ಕೃಷಿಯ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಲಾಗಿದೆ.

ಇಂದು ಕೃಷಿಯ ಶಿಫಾರಸ್ಸುಗಳಲ್ಲಿ ಪ್ರಾಥಮಿಕ ಉಳುಮೆ (Primary Tillage) ಎರಡನೇ ಉಳುಮೆ (Secondary Tillage) ಮತ್ತು ಅಂತರ ಬೇಸಾಯ ಅತೀ ಅಗತ್ಯ ಎಂದಿದೆ. ಅದನ್ನೇ ಸರ್ವಜ್ಞ ಎತ್ತು ಹೂಡುವುದು ಅಂದರೆ ಉಳುಮೆ ಮಾಡಲು ಬೇಕಾದ ಶಕ್ತಿಯ ಸಂಕೇತ ಇದನ್ನು ಮಾಡಿ ಉಳುಮೆ ಮಾಡಬೇಕು ಅಂದರೆ ಪ್ರಾಥಮಿಕ ಉಳುಮೆ ನಂತರ ಹರಗಬೇಕು. ಇದು ಎರಡನೇ ಉಳುಮೆ. ಪ್ರಾಥಮಿಕ ಉಳುಮೆಯ ನಂತರ ಹೆಂಟೆಗಳು ಜಾಸ್ತಿ. ಇದು ಬಿತ್ತನೆಗೆ ಉತ್ತಮವಲ್ಲ ಆದ್ದರಿಂದ ಹರಗಬೇಕು. ಅಂದರೆ ಈ ಎಲ್ಲಾ ಹೆಂಟೆ ಒಡೆದು ಜಮೀನು ಬಿತ್ತನೆ ಯೋಗ್ಯವಾಗುತ್ತದೆ. ನಂತರ ಬಿತ್ತಬೇಕು, ಬಿತ್ತಿದ ಮೇಲೆ ಮತ್ತೆ ಹರಗಬೇಕು ಇದು ಮಣ್ಣು ಮತ್ತು ಬೀಜದ ಉತ್ತಮ ಸಂಪರ್ಕ ಹಾಗೂ ಬೀಜದ ಮೇಲೆ ಮಣ್ಣಿನ ಪದರ ಬೀಳಲು ನೆರವಾಗುತ್ತದೆ. ಇದು ಬೀಜ ಉತ್ತಮವಾಗಿ ಮೊಳಕೆ ಒಡೆಯಲು ಸಹಕಾರಿ. ಈ ಚಟುವಟಿಕೆಗಳ ನಂತರ ಬೆಳೆ ಸ್ವಲ್ಪ ಬೆಳೆದಾಗ ಅದರ ಮಧ್ಯವಿರುವ ಕಳೆಗಳನ್ನು ಹೆಕ್ಕಿ ತೆಗೆದರೆ, ಬೆಳೆ ಉತ್ತಮವಾಗಿ ಬರುತ್ತದೆ. ಇವುಗಳನ್ನು ಕಾಲಕಾಲಕ್ಕೆ ಮಾಡದೆ, ಸೂರ್ಯ ಮೇಲೆ ಬಂದಾಗ ಹೊಲಕ್ಕೆ ಹೋಗುವಂತಹ ಸೋಮಾರಿತನ ಮಾಡಿದಲ್ಲಿ ಕೃಷಿಕ ಹಾಳಾಗುತ್ತಾನೆ ಎಂದು ಎಚ್ಚರಿಕೆಯನ್ನು ಸರ್ವಜ್ಞ ನೀಡಿದ್ದಾನೆ. ಕೃಷಿಯನ್ನು ಕೊಂಡಾಡದಿರುವುದು ಇಂದಿನ ಕೃಷಿಯ ಈ ಪರಿಸ್ಥಿತಿಗೆ ಒಂದು ಕಾರಣವಾದರೆ ಕೃಷಿಕ ಮಾಡಬೇಕಾದ ಕಾರ್ಯ ವಿಧಿವತ್ತಾಗಿ ಮಾಡದೆ ಇರುವುದು ಇನ್ನೊಂದು ಕಾರಣ ಈ ಎರಡೂ ಕಾರಣಗಳಿಂದ ಕೃಷಿ ಹಾಳಾಗುತ್ತದೆ ಎಂದು ಸರ್ವಜ್ಞ ಸಾರಿದ್ದಾನೆ. ಇವೆರೆಡನ್ನೂ ಸರಿಪಡಿಸಬೇಕಿದೆ. ಜೊತೆಗೆ ಕೃಷಿಜ್ಞಾನದ ಅರಿವು ಹಾಗೂ ಅರಿತದನ್ನು ಕಾರ್ಯರೂಪಕ್ಕೆ ತರುವುದು ಅಗತ್ಯ. ಅದಿಲ್ಲದಿದ್ದರೆ ನಮ್ಮ ತಪ್ಪುಗಳಿಗೆ ಬೇರೆಯವರನ್ನು ದೋಷಿಸುತ್ತಿರಬೇಕಾಗುತ್ತದೆ. ಇದಕ್ಕೆ ಒಂದು ಸರ್ವಜ್ಞನ ಉತ್ತಮ ಉದಾಹರಣೆಯೆಂದರೆ

ಹದಬೆದೆಯಲಾರಂಬ । ಕದನದಲಿ ಕೂರಂಬ
ನದಿಯ ಹಾಯುವಲಿ ಹರಗೋಲ ಮರೆದಾತ ।
ವಿಧಿಯ ಬೈದೇನು ? ಸರ್ವಜ್ಞ

1990ರಿಂದ 1994ರವರೆಗೆ ನಾನು ಒಣಭೂಮಿ ಸಂಶೋಧನಾ ಕೇಂದ್ರದಲ್ಲಿ ಸಹಸಂಶೋಧಕನಾಗಿ ಕಾರ್ಯನಿರ್ವಹಿಸುತ್ತಿದ್ದೆ. ಆಗ ಒಮ್ಮೆ ವಿಜ್ಞಾನಿ ಡಾ. ಬಿ.ಆರ್.ಹೆಗ್ಗಡೆಯವರು ಹದ ಇದ್ದಾಗ ನಾವು ಮೈಮರೆತರೆ ಕೃಷಿ ಆಗೊಲ್ಲ ಇವತ್ತು ಯಾರೂ ಇರಲಿ ಬಿಡಲಿ ಬಿತ್ತಬೇಕು, ಹದವಿದೆ ಎಂದು ಹೇಳಿದರು. ಅಂದು ಆಗಸ್ಟ್ 15ರಂದು ಉತ್ತಮ ಮಳೆಯಾಗಿ ಹದವಿತ್ತು. ಆಗಸ್ಟ್ 15 ರಜೆ ಡಾ.ಬಿ.ಆರ್.ಹೆಗ್ಗಡೆ ವಿಜ್ಞಾನಿ ಮತ್ತು ನಾನು ನನ್ನ ಸಹೋದ್ಯೋಗಿ ಅಶೋಕ್ ಮತ್ತು ಒಬ್ಬ ಕಾರ್ಮಿಕ ಕಛೇರಿಗೆ ಬಂದಿದ್ದೆವು. ಹೆಗ್ಗಡೆಯವರು ಕೂರಿಗೆ ಕಟ್ಟಿ ಎತ್ತು ಹೊಡೆಯುತ್ತಿದ್ದರು, ನಾನು ನನ್ನ ಸಹೋದ್ಯೋಗಿ ಬಿತ್ತಿದೆವು. ನಂತರ ಆ ವರ್ಷ ಅಂತಹ ಹದ ಮಳೆ ಆಗಲೇಇಲ್ಲ. ಅದೊಂದು ಬರಗಾಲದ ವರ್ಷ ಅಂತಹ ವರ್ಷದಲ್ಲೂ ಇಡೀ ಜಿಲ್ಲೆಯಲ್ಲಿಯೇ ಅತ್ಯುತ್ತಮ ಬೆಳೆ ಒಣಭೂಮಿ ಸಂಶೋಧನಾ ಕೇಂದ್ರದಲ್ಲಿ ಇತ್ತು. ಹದ

ಇದ್ದಾಗ ಬಿತ್ತುವುದನ್ನು ಬಿಟ್ಟು ಅಯ್ಯೋ ಈ ಬಾರಿ ಬರಗಾಲ ಎಂದು ಬವಣೆ ಪಟ್ಟವರು ಸರ್ವಜ್ಞನ ವಚನದಲ್ಲಿ ತಿಳಿಸಿದಂತೆ ಹದಬೆದೆಯಲ್ಲಿ ಆರಂಭ ಮಾಡದೆ ವಿಧಿಯ ಬಯ್ಯುವ ಗುಂಪಿಗೆ ಸೇರಿದ್ದರು. ಇಂದು ಬರಿ ಬರಗಾಲಕ್ಕೆ ಮಾತ್ರ ಸೀಮಿತವಲ್ಲ.

ನಮಗೆ ಅನಗತ್ಯವಾದವು ಹೊಲದಲ್ಲಿ ಬೆಳೆದು ನಿಲ್ಲುತ್ತವೆ. ಕೃಷಿಗೆ ಕೃಷಿ ಉಪಕರಣಗಳು ಅತಿ ಅಗತ್ಯ ಇವುಗಳನ್ನು ಇಟ್ಟಿರದವ ಶಿರವೇ ಇಲ್ಲದ ಮುಂಡದಂತೆ, ಸೇವೆಯೇ ಇಲ್ಲದ ಅರಸನಿದ್ದಂತೆ ಎಂಬ ಹೋಲಿಕೆ ನೀಡುತ್ತಾರೆ. ಬಂಡಿ ಎನ್ನುವುದು ಕೃಷಿ ಉಪಕರಣಗಳ ಸಾಂಕೇತಿಕ ಸೂಚಿ ಹಾಗೂ ಕೃಷಿಗೆ ಅಂದು ಬಂಡಿಯು ಮೂಲ ಆಧಾರವಾಗಿತ್ತು. ಕೃಷಿ ಉಪಕರಣ, ಪರಿಕರ ಸಾಗಿಸಲು ಬೆಳೆದ ಬೆಳೆ ಸಾಗಿಸಲು ಅಗತ್ಯವಿತ್ತು. ಇಂತಹ ಬಂಡಿ ಇಲ್ಲದಿದ್ದಾಗ ಈ ಕೆಲಸಗಳಿಗೆ ಕೂಲಿ ಆಳಿನ ಮೇಲೆ ಅವಲಂಬಿತವಾಗಿ ಲಾಭ ಕಡಿಮೆಯಾಗುತ್ತದೆ ಎಂಬುದು ಇದರ ಒಳಮರ್ಮ. ಕೃಷಿ ಉಪಕರಣಗಳ ಮಹತ್ವ ತಿಳಿಹೇಳಿದವರಲ್ಲಿ ಸರ್ವಜ್ಞನೇ ಮೊದಲು ಎನ್ನಬಹುದು.

ವೀಳೆಯಿಲ್ಲದ ಬಾಯಿ । ಕೂಳು ಕಾಣದ ನಾಯಿ ।
ಬಾಳೆಗಳು ಇಲ್ಲದೆಲೆದೋಟ, ಪಾತರದ ।
ಮೇಳ ಮುರಿದಂತೆ ಸರ್ವಜ್ಞ॥

ತೋಟವೆಂದರೆ ಅಂತರಬೆಳೆಗಳು ಅಗತ್ಯ, ಯಾವುದೇ ತೆರನಾದ ತೋಟವಿರಲಿ ಬಾಳೆ ಬೆಳೆ ಇರುವುದು ಅಗತ್ಯ ಎಂದು ಪ್ರತಿಪಾದಿಸಿದ್ದಾರೆ. ಅಡಿಕೆ ತೆಂಗು ಇತ್ಯಾದಿ ಬೆಳೆಗಳಲ್ಲಿ ಬಾಳೆ ಬೆಳೆದರೆ ಬಾಳೆಯ ಉತ್ತಮ ಫಸಲಿನ ಜೊತೆ ಮುಖ್ಯ ಬೆಳೆಗಳ ಇಳುವರಿ ಸುಧಾರಿಸುವ ಜೊತೆ ಮಣ್ಣಿನ ಆರೋಗ್ಯ ವೃದ್ಧಿಸುತ್ತದೆ ಎಂದು ಇಂದು ಸಂಶೋಧನಾ ವರದಿಗಳು ತಿಳಿಸಿವೆ. ಇದನ್ನು ಹೇಳಲು ಬಳಸಿರುವ ಹೋಲಿಕೆಯು ಇಲ್ಲಿ ಮಹತ್ವದ ವೀಳೆಯದೆಲೆ ತಿನ್ನುವುದು ಸಹ ಅತ್ಯಂತ ಉತ್ತಮ ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಹೀಗೆ ಕೃಷಿಗೆ ಬೇಕಾದ ಸಂಪನ್ಮೂಲಗಳನ್ನು ಸಮಯಕ್ಕೆ ಸರಿಯಾಗಿ ಹೊಂದಿಸಿಕೊಳ್ಳಬೇಕೆಂದು ಪ್ರತಿಪಾದಿಸಿ ವೇಳೆಗಿಲ್ಲದ ಆಳು ಹಾಳು ಎಂಬುದನ್ನು ಪ್ರತಿಪಾದಿಸುತ್ತಾರೆ.

ಕೂಳು ಇಲ್ಲದ ಬಾಳು। ವೇಳೆಗಿಲ್ಲದ ಆಳು।
ಕಾಳರಸುಗೆಯ್ವದೊರೆತನವು, ಇವು ಮೂರು।
ಹಾಳು ಕಾಣಯ್ಯ ಸರ್ವಜ್ಞ॥

ಉತ್ತರಕರ್ನಾಟಕದಲ್ಲಿ ಒಂದು ಆಡು ಮಾತಿದೆ. "ಎರಿ ಇದ್ದವ ದೊರೆ" ಇಂತಹ ಆಡುಮಾತು ಮತ್ತು ಅದರಲ್ಲಿರುವ ಸತ್ಯವನರಿತ ಸರ್ವಜ್ಞ ಸಹ ಈ ಬಗ್ಗೆ ತಿಳಿಸಿದ್ದಾರೆ.

ಎರೆಪಿಯನ್ನು ಉಳುವಂಗೆ । ದೊರೆಯನು ಪಿಡದಂಗೆ ।
ಉರಗಭೂಷಣನ ನೆನೆವಂಗೆ ಭಾಗ್ಯವು ।
ಅರಿದಲ್ಲವೆಂದ ಸರ್ವಜ್ಞ॥

ಎರೆ ಭೂಮಿಯನ್ನು ಕೃಷಿ ಮಾಡುವವನಿಗೆ, ಒಡೆಯನನ್ನು ನಂಬಿಕೊಂಡು ನಡೆಯುವವನಿಗೆ ಮತ್ತು ಸರ್ಪಭೂಷಣನಾದ ಶಿವನನ್ನು ನೆನೆಸುವವನಿಗೆ ಐಶ್ವರ್ಯವು ದೊರೆಯುವುದು ಆಶ್ಚರ್ಯವಲ್ಲ ಇದೊಂದು ಸಹಜ ಕ್ರಿಯೆ ಎಂದು ಹೇಳಿದ್ದಾನೆ.

ಹೀಗೆ ಕೃಷಿಯ ಬಗ್ಗೆ ಸಾಕಷ್ಟು ದೇಸಿ ತಂತ್ರಜ್ಞಾನಗಳನ್ನು ಸರ್ವಜ್ಞ ಕಲೆಹಾಕಿದ್ದಾನೆ. ಅವುಗಳ ಸದುಪಯೋಗಪಡಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.

*****

## ಲೇಖಕರು

ಡಾ. ಕೆ.ಸಿ. ಶಶಿಧರ ಪ್ರಸ್ತುತ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಇಂಜನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಖುಷ್ಕಿ ಬೇಸಾಯ, ಹನಿ ನೀರಾವರಿ, ಜಲಾನಯನ ಅಭಿವೃದ್ಧಿಯಂತಹ ಹಲವಾರು ಕೃತಿಗಳನ್ನು ಬರೆದಿದ್ದಾರೆ, 'ನೀರೆತ್ತೋಣ ಬನ್ನಿ' ಕೃತಿಗೆ ಕರ್ನಾಟಕ ರಾಜ್ಯ ವಿಜ್ಞಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ರೈತರಿಗೆ, ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಆಶಯ

ಸಾಹಿತ್ಯದಲ್ಲಿರುವ ಸಾಂಪ್ರದಾಯಿಕ ಜ್ಞಾನ ಹಾಗೂ ಆ ಕುರಿತ ವೈಜ್ಞಾನಿಕ ಚಿಂತನೆ ಕುರಿತ ವಿಶಿಷ್ಠ ಲೇಖನ ವಿದ್ಯಾರ್ಥಿಗಳಿಗೆ ಸಾಹಿತ್ಯ ಓದುವ ವಿಭಿನ್ನ ದೃಷ್ಟಿಕೋನವನ್ನು ಕಟ್ಟಿಕೊಡುತ್ತದೆ.

## ಶಬ್ದಾರ್ಥಗಳು

ಘೃತ = ತುಪ್ಪ, ಮರುಕ =ಬೇಗುದಿ ಅಳಲು ಅಕ್ಕರೆ ಕರುಣೆ, ಕೆಳೆ= ಸ್ನೇಹ ಗೆಳೆತನ ಮಿತ್ರ, ಎರಪಿ= ಎರೆಭೂಮಿ

## ಪ್ರಶ್ನೆಗಳು

1. ಕಳ್ಳಿಯೊಳು ಹಾಲು ಮುಳ್ಳು। ಗಳ್ಳಿಯೊಳು ಹೆಜ್ಜೇನು। ಎಳ್ಳಿನೊಳಗೆಣ್ಣೆ ಹನಿದಿರಲು, ಎನ್ನುವ ವಚನವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ?
2. ಕ್ಷೀರದೊಳು ಘೃತವಿರಲು। ನೀರಿನಲ್ಲಿ ಸಿಲ್ಕಿಹುದು। ಎಂಬ ವಚನದ ತಾತ್ವಿಕ ಆಶಯ ತಿಳಿಸಿ?
3. ಬಿತ್ತಿದರೆ ಬೀಜ ಬೆಳವಂತೆ ವೃಕ್ಷವಾ । ಸತ್ತು ಹುಟ್ಟುವುದೇ ಎಂಬ ವಚನದ ಕೃಷಿ ಪೂರಕ ಅಂಶಗಳನ್ನು ಗುರುತಿಸಿ?
4. ಬಾಳೆವನ ಲೇಸು । ಮಾಳಿಗೆಯ ಮನೆ ಲೇಸು ಎನ್ನುವ ವಚನದ ಆಶಯ ತಿಳಿಸಿ?

5. ಒಕ್ಕಲಿಲ್ಲದ ಊರು। ಮಕ್ಕಳಿಲ್ಲದ ಮನೆಯು ಎಂಬ ವಚನವನ್ನು ವಿಶ್ಲೇಷಿಸಿ?

6. ಎತ್ತೊಮ್ಮೆ ಹೂಡುವದು। ಉತ್ತೊಮ್ಮೆ ಹರಗುವದು। ಈ ವಚನದಲ್ಲಿ ಬೇಸಾಯದ ವಿಧಾನವನ್ನು ವಿಶ್ಲೇಷಿಸಿ?

7. ಉತ್ತೊಮ್ಮೆ ಹರಗದಲೆ । ಬಿತ್ತೊಮ್ಮೆ ನೋಡದಲೆ । ಈ ವಚನದಲ್ಲಿ ಬೇಸಾಯದ ಪದ್ಧತಿಯನ್ನು ಪರಾಮರ್ಶಿಸಿ?

8. ಹದಬೆದೆಯಲಾರಂಬ । ಕದನದಲಿ ಕೂರಂಬ ಎಂಬ ವಚನದಲ್ಲಿ ಬಿತ್ತನೆ ವಿಧಾನ ಕುರಿತಂತೆ ವಿವರಿಸಿ?

9. ಕೂಳು ಇಲ್ಲದ ಬಾಳು। ವೇಳೆಗಿಲ್ಲದ ಆಳು। ಈ ವಚನವು ಏನನ್ನೂ ಸೂಚಿಸುತ್ತದೆ.?

10. ಎರೆಪಿಯನ್ನು ಉಳುವಂಗೆ । ದೊರೆಯನು ಪಿಡದಂಗೆ । ಈ ವಚನದ ಆಶಯವನ್ನು ತಿಳಿಸಿ?

**ಹೆಚ್ಚಿನ ಓದು**

1) ಸರ್ವಜ್ಞನ ವಚನಗಳು, (ಸಂಪಾದಿತ)ಚನ್ನಂಗಿ ಉತ್ತಪ್ಪ

ಕವನ

೬

# ಅವ್ವ

ಪಿ. ಲಂಕೇಶ್

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ.

ಪಲ್ಲ ಜೋಳವ ಎತ್ತಿ ಅಪ್ಪನ್ನ ಮೆಚ್ಚಿಸಿ ತೋಳಬಂದಿಯ ಗೆದ್ದು,
ಹೆಂಟೆಗೊಂದು ಮೊಗೆ ನೀರು ಹಿಗ್ಗಿ;
ಮೆಣಸು, ಅವರೆ, ಜೋಳ, ತೊಗರಿಯ ಹೊಲವ ಕೈಯಲ್ಲಿ ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಹೆಸರು ಗದ್ದೆಯ ನೋಡಿಕೊಂಡು,
ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.

ಸತ್ತಳು ಈಕೆ:
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ?
ಎಷ್ಟು ಗಾದಿಯ ಚಂದ್ರ, ಒಲೆಯೆದುರು ಹೋಳಿಗೆಯ ಸಂಭ್ರಮ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ;
ಎಷ್ಟು ಸಲ ಹುಡುಕುತ್ತ ಊರೂರು ಅಲೆದಳು

ತಪ್ಪಿಸಿಕೊಂಡ ಮುದಿಯ ಎಮ್ಮೆಗೆ?
ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ, ಶ್ವೇತ, ಗಂಭೀರೆಯಲ್ಲ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ;
ದೇವರ ಪೂಜಿಸಲಿಲ್ಲ; ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.

ಬನದ ಕರಡಿಯ ಹಾಗೆ
ಚಿಕ್ಕಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು;

ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ;
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ,
ಈಕೆ ಉರೆದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ.

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ;
ನನ್ನವ್ವ ಬದುಕಿದ್ದು
ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;
ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ;
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ

ಇವಳಿಗೆ ಮೆಚ್ಚುಗೆ, ಕೃತಜ್ಞತೆಯ ಕಣ್ಣೀರು;
ಹೆತ್ತದ್ದಕ್ಕೆ, ಸಾಕಿದ್ದಕ್ಕೆ; ಮಣ್ಣಲ್ಲಿ ಬದುಕಿ
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೇ ಹೊರಟುಹೋದದ್ದಕ್ಕೆ

## ಅವ್ವ–2

ಈ ಅವ್ವನ ಹೂತು ಈಕೆಯ ಮೇಲೆ ಕವನ ಕಟ್ಟಿ
ಇವತ್ತಿಗೆ ಇಪ್ಪತ್ತೈದು ವರ್ಷವಾಯಿತು.
ಕವನಕ್ಕೆ ಪಡೆದ ಸಂಭಾವನೆ ಕೂಡ ಖರ್ಚಾಗಿದೆ.

ನಭದಲ್ಲಿ ಅಸಂಖ್ಯ ಹಕ್ಕಿಗಳು ಹಾರಿವೆ.
ಕನಿಷ್ಠ ನಾಲ್ಕು ಕ್ಷಾಮಗಳು ಬಂದುಹೋಗಿವೆ.
ಊರು ಅರಣ್ಯ ಕಳೆದುಕೊಂಡು ಬೆತ್ತಲೆ ನಿಂತಿದೆ.
ಈ ಅವ್ವ ನನ್ನಲ್ಲಿ ಎಷ್ಟು ಉಳಿದಿದ್ದಾಳೆ
ಎಂದು ನೋಡಿಕೊಳ್ಳುತ್ತೇನೆ.

ದೂರದ ಜಿಲ್ಲೆಯ ಹಸಿದ ಜೀವಕ್ಕೆ ನಾನು
ತುತ್ತು ನೀಡಿದ್ದು ಅವ್ವನಂತಲ್ಲ; ನನ್ನ ಅಪ್ಪನಂತೆ,
ಆತ ಕೊಡುವುದರಲ್ಲಿ ಸುಖ ಕಾಣುತ್ತಿದ್ದ ಮನುಷ್ಯ
ಪೂರ್ತಿ ಕೊಟ್ಟುಬಿಡುವ ಮುನ್ನ ಮುಂದಿನ ಚಳಿಗಾಲಕ್ಕೆ
ಕಂಬಳಿಗೆಂದು ಕಾಸು ಇಟ್ಟುಕೊಂಡೆ; ಅದು ಅವ್ವನಂತೆ.

ನನ್ನ ಮನೆಯಂತೆಯೇ ನಾನು ಬಲ್ಲ ನಾಲ್ಕು ಹಿತ್ತಿಲಲ್ಲಿ
ನಾಲ್ಕು ಬಾಳೆ ಗಿಡಗಳು ಬೆಳೆಯಲು ಕಾರಣನಾದೆ;
ಆಗ ಈಕೆ ನೆನಪಾದಳು

ಯಾರದೋ ಮಾರ್ಗದರ್ಶನದಲ್ಲಿ ಮೂಢನಂಬಿಕೆಗಳ ವಿರುದ್ಧ
ಪ್ರತಿಭಟಿಸಿ ಬೀಗಿದ ವೇಳೆ,
ಈ ಅವ್ವ ನನಗೆ ಓಕುಳಿ ತೆಗೆದು ವೀಳ್ಯದೆಲೆ ನಿವಾಳಿಸಿ
ಜ್ವರ ಬಿಡಿಸಿದ್ದು ನೆನಪಾಗಿ
ಈಕೆಯ ಅವಾಂತರದಲ್ಲಿ ನಾನು ಉಳಿದದ್ದೇ
ಹೆಚ್ಚೆನ್ನಿಸಿತು.

ಆದರೆ ಅದೇಕೋ ಗೊಂದಲ ಕೂಡ.
ಈ ಗೊಂದಲ ಮುಂದುವರಿಯುತ್ತಲೇ ಇದೆ.

ಈಕೆಯ ತೊಡೆಯ ಮೇಲೆ ನಾನಿಟ್ಟ ತಲೆ,
ಹಳೆಯ ಸೀರೆಯ ಕಮ್ಮನೆಯ ವಾಸನೆ
ಈಕೆ ನನ್ನ ಬಾಯಿಗಿಟ್ಟ ಎಲೆ, ಭಜೆ, ಚಕ್ಕೆ ಲವಂಗ,
ಎಲ್ಲ ಕಾಮಿನಿಯರ ಕಾಮಕ್ಕೆ
ತಾಯ್ತನದ ಸುಗಂಧದ ಪೂಸುವಿಕೆ,
ಎಲ್ಲ ಬೌದ್ಧಿಕ ಆರ್ಭಟಗಳಿಗೆ
ಕಡಿವಾಣ ಹಾಕುವ ಹೆಣ್ಣಿನ ಮಮತೆ,
ಸಾಧನೆಯ ಅಹಂಕಾರದ ನಡುವೆ
ಈಕೆ ಕದ್ದು ನೀಡಿದ ಕೊಬ್ಬರಿ ಉತ್ತುತ್ತೆ.

ಸ್ಪಷ್ಟತೆ, ವೈಚಾರಿಕತೆಯೇ ಆಧುನಿಕ ಮನುಷ್ಯನ
ನಿರ್ದಿಷ್ಟ ಲಕ್ಷಣ ಎಂದು ಹೇಳುವ ನನಗೆ
ಕೊಂಚ ತಾಯ್ತನದ ವಿನಯ ಮತ್ತು ಮೌನ.
ಕಾಲು ಶತಮಾನದ ಬಳಿಕ;
ಜಗಳಗಂಟಿಯಾಗಿದ್ದ ಈ ಅವ್ವ ಈ ನನ್ನಲ್ಲಿ
ವಿನಯ ಮತ್ತು ಮೌನ.

*****

**ಕವಿ**

ಪಿ.ಲಂಕೇಶ್, ಕನ್ನಡದ ಖ್ಯಾತ ಸಾಹಿತಿಗಳಲ್ಲೊಬ್ಬರು ಹಾಗೂ ಲಂಕೇಶ್ ಪತ್ರಿಕೆಯ ಸ್ಥಾಪಕ ಸಂಪಾದಕರು. ಕವಿ, ಕಥೆಗಾರ, ಕಾದಂಬರಿಕಾರ, ಅಂಕಣಕಾರ, ನಾಟಕಕಾರ, ನಟ, ನಿರ್ದೇಶಕ –ಹೀಗೆ ಬಹುಮುಖ ವ್ಯಕ್ತಿತ್ವವನ್ನು ಹೊಂದಿದವರು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಆಂಗ್ಲ ಭಾಷೆಯ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿ, 1962ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದರು. 1979ರ ಸುಮಾರಿಗೆ ಲಂಕೇಶರು ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ತಮ್ಮದೆ ಆದ ಲಂಕೇಶ್ ಪತ್ರಿಕೆ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಇವರ ಎಂಟು ನಾಟಕಗಳು, ಆರು ಕಥಾಸಂಕಲನಗಳು, ಮೂರು ಕಾದಂಬರಿಗಳು, ಟೀಕೆ ಟಿಪ್ಪಣಿ ಮೂರು ಸಂಪುಟ, ಮರೆಯುವ ಮುನ್ನ ಮೂರು ಸಂಪುಟ ಹಲವು ಅಂಕಣ ಬರಹಗಳ ಪುಸ್ತಕಗಳು ಪ್ರಕಟವಾಗಿವೆ.

## ಆಶಯ

ಹೆತ್ತವ್ವನ ಕರುಳ ಕನಸು ಕನವರಿಕೆ, ಕಷ್ಟಗಳ ಧ್ವನಿಗಳನ್ನು ಗುರುತಿಸಿ ಅವುಗಳಿಗೆ ಪರಿಸರದ ಸಮಾಜದ ಓರೆಕೋರೆಗಳ ಬೆಸೆದು ನೊಂದವರ ಬಾಳನ್ನೆ ಅನಾವರಣ ಮಾಡಿದ ಅವ್ವ, ಮನಸ್ಸಿರುವ ಎಲ್ಲರ ಕಣ್ಣಂಚಲ್ಲಿ ಹನಿಗಟ್ಟಿ ಹನಿಯದೆ ನಿಂದು ಸದಾ ಚಿಂತನೆಗೆ ಹಚ್ಚುವ ಕವನ.

## ಶಬ್ದಾರ್ಥಗಳು

ಕಸುವು=ಸತ್ವವುಳ್ಳ, ಮೊಗೆ=ವ್ಯಕ್ತಪಡಿಸು ತೋಡು ಅಗೆ ಹಳ್ಳಮಾಡು, ಗಾದಿ=ಗದ್ದುಗೆ ಅಧಿಕಾರ ಸ್ಥಾನ ಹಾಸಿಗೆ, ಸತಿಸಾವಿತ್ರಿ=ಸತ್ಯವಾನ್ ಅವರ ಪತ್ನಿ ತನ್ನ ಪತಿಯ ಪ್ರಾಣವನ್ನು ಯಮನಿಂದ ಹಿಂದಕ್ಕೆ ಪಡೆದವಳು, ಜಾನಕಿ=ಜನಕನ ಮಗಳು ಸೀತೆ, ಊರ್ಮಿಳೆ=ಲಕ್ಷ್ಮಣನ ಹೆಂಡತಿ, ಬನದ=ಕಾಡಿನ ಅರಣ್ಯ, ಹಚಡ=ಹೊದಿಕೆ, ಸರೀಕರ=ನೆರೆಯವರ, ಕಮ್ಮನೆ=ಸುಗಂಧಸೂಸುವ ಸುವಾಸನೆಯ,ಪೂಸುವಿಕೆ=ಸಿಂಪಡಿಸು ಸವರು

## ಪ್ರಶ್ನೆಗಳು

1. ಕವಿ ತನ್ನ ತಾಯಿಗೆ ಕೃತಜ್ಞತೆಯನ್ನು ಸಲ್ಲಿಸುವ ಬಗೆಯನ್ನು ತಿಳಿಸಿ?
2. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ ?
3. ಅವ್ವ ಕವನದ ಆಶಯವೇನು ?
4. ಕವಿ ಇಲ್ಲಿ ತಾಳುವ ನಿಲುವನ್ನು ಸೂಚಿಸಿ?

## ಹೆಚ್ಚಿನ ಓದು

1. ಅಕ್ಷರ ಹೊಸ ಕಾವ್ಯ, ನೀಲು ಕಾವ್ಯ,. ಪಾಪದ ಹೂಗಳು, ಕವಿ: ಪಿ.ಲಂಕೇಶ್

ಕವನ

# ೧೦

# ತೆಂಗು

ಡಾ. ಜಿ.ಎಸ್. ಶಿವರುದ್ರಪ್ಪ

ಮನೆಗಳಲ್ಲಿ ಮಹಡಿಮನೆ ಹೇಗೋ ಹಾಗೆ
ಮರಗಳಲ್ಲಿ ಇದು ಮಹಡಿಮರ,
ಇದರುಪ್ಪರಿಗೆಯಲ್ಲೇ ಎಲ್ಲ ಸಂಸಾರ.

ನೆಲಕೂ ಇದಕ್ಕು ವ್ಯವಹಾರ
ಬಲು ದೂರ
ಬೇರೂ ಒಳಗೊಳಗೇ ಹತ್ತು ದಿಕ್ಕಿಗೆ ಹೊರಟ ರಾಯಭಾರ.
ಆದರೂ, ಉದ್ದನೆಯ ಮೊರಡು ದಿಂಡಿನ ಒಳಗೆ
ಮೇಲಕ್ಕೆ ನೀರೇರಿಸುವ ಪಂಪು ಕಾಣದು ನಮಗೆ,
ನೆಲವೆ ಬೆರಗಾಗುವುದು ಎಲ್ಲರದಲ್ಲಿ ಸುತ್ತಲೂ
ತುಂಬಿ ತೂಗುವ ಗೊನೆಗೆ

ಇದಕಿಲ್ಲ ಮಾಗಿ ಬಂದಾಗ ಎಲೆ ಕಳಚಿ ವಸಂತ–
ನಾರೈಕೆಯಲ್ಲಿ ಚಿಗುರುವ ಹಂಗು.
ಇದು ಸರ್ವತಂತ್ರ ಸ್ವತಂತ್ರ;
ನೆಟ್ಟನೆಯ ಮೇಲೆದ್ದು ಎತ್ತರದಲ್ಲಿ ಎಲ್ಲೋ ಥಟ್ಟನೆಯ ಗರಿಬಿಚ್ಚಿ
ನಿಲ್ಲುವ ವಿಚಿತ್ರ.

ಸಂಜೆ ಮುಂಜಾನೆಯಲಿ ಬಾನ ಹಿನ್ನೆಲೆಯಲ್ಲಿ
ಯಾರೋ ಹಾಕಿರುವ ಕಸೂತಿಯ ನೆನಪು.
ಇದರ ಗರಿಗಳ ಮೇಲೆ ಬಿಸಿಲು ಬೆಳುದಿಂಗಳಿನ
ಹೊಳಪು–ಝಳಪು.
ಸದಾ ಗರಿಗೆದರಿ ನಿಂತ ನವಿಲಿನ ಒನಪು.

ಇದ್ದಕ್ಕಿದ್ದಂತೆ ಗರಿಗಳ ಕಳಚಿ ಧಡಾರನೆ ಎಸೆದು
ನೀಲಿಯಲಿ ನಸುನಕ್ಕು ನಿಲ್ಲುವ
ಭಂಗಿಯೇ ಭಂಗಿ.
ಸಂಗದೊಳಗಿದ್ದೂ ಸದಾ ನಿಸ್ಸಂಗಿ–
ಯಾವ ಕ್ಷಣವಾದರೂ ಕಟ್ಟಿಕೊಂಡದ್ದೆಲ್ಲ
ಬಿಟ್ಟು ನಿಲ್ಲಲು ಸಿದ್ಧ
ನೆನಪಾಗುವರು ಕ್ರಿಸ್ತ–ಬುದ್ಧ.

*****

**ಕವಿ**

ಜಿ. ಎಸ್. ಶಿವರುದ್ರಪ್ಪ – (ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ) ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರು. ಜೊತೆಗೆ ವಿಮರ್ಶಕ, ಸಂಶೋಧಕ, ನಾಟಕಕಾರ, ಉತ್ತಮ ಪ್ರಾಧ್ಯಾಪಕ, ಒಳ್ಳೆಯ ಆಡಳಿತಗಾರ. ಕುವೆಂಪು ಅವರ ಮೆಚ್ಚಿನ ಶಿಷ್ಯ. ಗೋವಿಂದ ಪೈ, ಕುವೆಂಪು ನಂತರ ಮೂರನೆಯ ರಾಷ್ಟ್ರಕವಿಯಾದವರು. ಡಾ. ಜಿ.ಎಸ್. ಶಿವರುದ್ರಪ್ಪನವರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕವನ ಸಂಕಲನಗಳು, ವಿಮರ್ಶೆ/ಗದ್ಯ, ಪ್ರವಾಸ ಕಥನ, ಜೀವನ ಚರಿತ್ರೆ, ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರು.

**ಆಶಯ**

ಒಂದು ಬೆಳೆಯ ವೈಶಿಷ್ಟ್ಯಗಳನ್ನು ಕವನದಲ್ಲಿ ಹೇಗೆ ಬಂಧಿಸಬಹುದೆನ್ನುವುದಕ್ಕೆ ಒಂದು ಉದಾಹರಣೆ. ಎತ್ತರದ ವಿಶೇಷತೆಗಳು, ಸದಾಹಸಿರು ಸಾರುವ ಗುಣ, ಗರಿ ಕಳಚಿ ಗರಿಗೆದರಿ ಸದಾ ಮೇಲೇರಿ ಸ್ವತಂತ್ರ ಚಿಂತನೆಗಳನ್ನು ಚಿತ್ರಿಸುವಂತೆ ಮೂಡಿರುವ ತೆಂಗು ಕವನವನ್ನು ಅಕ್ಷರ ಹೊಸಕಾವ್ಯ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಶಬ್ದಾರ್ಥಗಳು**

ಉಪ್ಪರಿಗೆ = ಮಹಡಿ ಸೌಧ, ಮೊರಡು=ಗಟ್ಟಿಮುಟ್ಟಾದ ಒರಟು ಕೊರಕಲು, ಬೆರಗು=ಆಶ್ಚರ್ಯ ಸೋಜಿಗ, ಝಳಪು=ಹೊಳಪು ಮಿಂಚುಬೆಳಕು, ಒನಪು=ವಯ್ಯಾರ, ನಿಸ್ಸಂಗಿ=ಏಕಾಂತವಾಸಿ ತಪಸ್ವಿ ಸಂನ್ಯಾಸಿ

**ಪ್ರಶ್ನೆಗಳು**

1. ತೆಂಗು ಕವಿತೆ ವಿಸ್ತಾರಗೊಳ್ಳುವ ಬಗೆಯನ್ನು ವಿವರಿಸಿ?

2. ತೆಂಗು ಕವನದ ಆಶಯವೇನು?

**ಹೆಚ್ಚಿನ ಓದು**

1. ಚೆಲುವು–ಒಲವು, ತೆರೆದ ಬಾಗಿಲು, ದೀಪದ ಹೆಜ್ಜೆ,  ಕವಿ: ಡಾ. ಜಿ.ಎಸ್. ಶಿವರುದ್ರಪ್ಪ

೧೧

# ಅಲ್ಲೆ ಕುಂತವರೆ

ಡಾ. ಸಿದ್ಧಲಿಂಗಯ್ಯ

ಪದ: ಒಂದಾನೊಂದು ಊರು
ಊರಿಗೆ ಮಳೆಯಿಲ್ಲಾ
ಬೂಟಿನ ಸದ್ದು ಗುಂಡಿನ ಸದ್ದು
ಕತ್ತಿಯ ತಿವಿತ ಕೂಗಾಟ
ಊರಿಗೆ ಬೆಳೆಯಿಲ್ಲಾ

ಮಳೆರಾಯ ಕ್ವಾಪದಲಿ ದೇಸಂತರಾ ಹೋಗಿ
ಅಂದಾವೆ ಹೋಯಿತಲ್ಲೋ
ನಗುತ್ತಿದ್ದ ಮಲ್ಲಿಗೆಯ ಮಕದಲ್ಲಿ ಕಳೆಗುಂದಿ
ಚಂದಾವೆ ಹೋಯಿತಲ್ಲೋ

ಬಡವನ ದನವೊಂದು ಸಗಣಿಯ ಇಕ್ಕದೇ
ನೆಲವ ತಾರಿಸಲಿಲ್ಲ
ಮದುವೆಯ ಮನೆಯಲ್ಲಿ ವಡವೇಯ ಮಾತೇರಿ
ಹಸೆಗೆ ಕೂರಿಸಲಿಲ್ಲ

ಅನ್ನ ನೀಡದೆ ಹೋದ ನೂರಾರು ದೇವರು
ಹೋದಾವು ಬಿದ್ದಾವು ಪಾಳುಬಾವಿ
ಅನ್ನ ನೀಡದ ದೊರೆಯ ದರಬಾರು ನಿರುವಾದು

ಬಡಜನ ಬುಡುತಾರೆ ಬಾಯಿ ಬಾಯಿ

ವಟ್ಟೆಗಿಲ್ಲದ ಜನರ ವಣನೆತ್ತಿ ಮ್ಯಾಲೇರಿ
ಕುಣಿಯುತ್ತ ಬರುತಾವೆ ಕರೆಬಾಣ
ಯಾರಾನ ಕದ್ದಾರೆ ಮರುಮಾತು ಕೊಟ್ಟಾರೆ
ಬಯಲಲ್ಲಿ ನ್ಯಡಸವರೆ ಕತ್ತಿವರಸೆ

ಸುತ್ತಮುತ್ತ ಹಸಿರು ಮಳೆ
ಬೆಳೆಯುತಾರೆ ಬೆಂಕಿ ಬೆಳೆ
ಕಪ್ಪು ಜನರ ತಲೆಯಮ್ಯಾಲೆ
ಬಿಳಿಬಿಳಿ ಮಡಕೆ
ಪಾತಾಳದ ಆಳದಲ್ಲಿ
ಭರವಸೆಗಳ ಕೋಳದಲ್ಲಿ
ನರಳುತಾದೆ ಉರುಳುತಾದೆ
ಜನರ ಜಂಗುಳಿ

ಈ ಬಾಳಿನ ಗೋಳನೆಲ್ಲ
ಗುಡಿಸು ಬಾರೋ ಮಳೆರಾಯ
ಆಕಾಸವ ಬಗೆದು ಬಾರೊ
ಸುಕ ಪ್ರೀತಿಯ ಬೆಳಕ ತೋರೊ
ಸುತ್ತ ಬಿಗಿದ ಬೇಲಿಯನ್ನು
ಬಿಳಿಸು ಬಾರೋ ಮಳೆರಾಯ
ಹುಯ್ಯೊ ಹುಯ್ಯೊ ಮಳೆರಾಯ
ಎದೆಗಳ ಕಡಲು ಬತ್ತೋದೊ
ಬಡವರ ಕಣ್ಣಲ್ಲಿ ನೀರಿಲ್ಲ
ಹುಯ್ಯೊ ಹುಯ್ಯೊ ಮಳೆರಾಯ

ಮಾತು: ಜನ ಸುತ್ತ ಮುತ್ತ ನೋಡ್ತಾರೆ
ಆಕಾಸ ನೋಡ್ತರೆ
ಬಡವರ ಮನೆ ಗುಂಡಿ ಬಿಂದ್ಗೆ

ಹಂಡೆ ಕಡಾಯಿಕಡ್ಗ ಎಲ್ಲ
ಯಜಮಾನ್ರ ಮನೆ ಸೇರ್ಕಂಡೊ
ರಾತ್ರಿ ಹಗ್ಲು ಅನ್ನಂಗಿಲ್ಲ
ಜೀವುಕ್ಕೆ ಗ್ಯಾರಂಟಿ ಇಲ್ಲ
ಮೋಸಗಾರ್ರ ಮನೆ ಸುತ್ತ
ಜಮೀನ್ದಾರ್ರ ಮನೆ ಸುತ್ತ
ಗವ್ ಅನ್ನೋ ರಾತ್ರೆವಳೆ
ಎಲ್ಲೆಲ್ಲೂ ಕಪ್ಪುಜನ
ಡೋಲ್ ಬಡ್ಕಂಡು ಪದ ಯೇಳ್ತಾ ಅವ್ರೆ
ಮಳೇ ಬರ್ದೇ ಇದ್ರೇನೆ ಚಂದಾ
ಅನ್ನಂಗೆ ಕುಣೀತಾ ಅವ್ರೆ

ಪದ: ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತ್ವಾಟಕೆ ನೀರಿಲ್ಲ
ಚಂಡೂವಿನ ತ್ವಾಟಕೆ ನೀರಿಲ್ಲ
ಬೀದಿಯ ನಲ್ಲೀಲಿ ನೀರಿಲ್ಲ
ನಲ್ಲೀಗ್ ಕುಡಿಯಾಕ್ ನೀರಿಲ್ಲ
ಬಾರಪ್ಪೋ ಮಳೆರಾಯ
ನೀ ಬಂದುಯ್ಯೋ ಮಳೆರಾಯ

ಮಾತು: ಜನ ಕಾಲಿಗಡ್ಗೆ ತಪ್ಲೆ ಯಿಡಕಂಡು
ಅನ್ನ ನೀರು ವುಡಿ ಕಂಡು
ಬೀದ್ ಬೀದಿ ಸುತ್ತಾ ಅವ್ರೆ
ಯಾರಾನ ಯಾವದಾನ ಗ್ವಾಡೆ ಕ್ಯಳಗೆ ಕುಂತಿದ್ರೆ
ಗಲ್ಲೀಲಿ ನಿಂತಿದ್ರೆ
ಓಡ್ ಬಂದು ಅವುರನ್ನ ಗದುರ್ಸಿ
ಗ್ವಾಮಾಳೆ ಯಿಡ್ದು
ಯಂಗುಸ್ರಾದ್ರೆ ಮಡ್ಲು ಕಾಯ್ ತಡ್ಕಿ
ಗಂಡುಸ್ರಾದ್ರೆ ಚಡ್ಡಿ ಜೋಬ್ ತಡ್ಕಿ

ಆಮ್ಯಾಲ್ ಬಾಡೋರು ಒಂದಷ್ಟು ಜನ
ಎಲ್ಲೆಲ್ಲೂ ಅವ್ರೆ ಅವ್ರ ಮಕವೆ

–2–

ಒಂದಿನ ಭರ್ರೋ ಅಂತ ಮಳೆ ಹುಯ್ತದೆ
ಕದ ಅಂಚಿನ ತೂತ್ನಿಂದ ಮಿಂಚು ಕುಕ್ತದೆ
ಗುಡ್ಗು ಸಿಡ್ಲು ವಡಿತದೆ
ವಬ್ಬರ ಮಾತು ವಬ್ಬುರ್ಗೆ ಕೇಳ್ಸಲ್ಲ
ಮಳೆ ಜ್ಯೋರಾಗಿ ಬೀದಿ ಗಲ್ಲೀಲೆಲ್ಲ ಆಳೆತ್ರ ಹರೀತಿದ್ದಂಗೆ
ಮನೆ ಮ್ಯಾಲೂ ನುಗ್ ಬುಡ್ತು
ನಾನಂತೂ ಬಟ್ಟೆ ತರಾ ನ್ಯಂದೋದೆ
ಮನೆ ಮ್ಯಾಗಳ ನೀರು ರವ ರವಷ್ಟೆ ಇಂಗ್ತಿದ್ದಂಗೆ
ಕದಾನೆ ಯಾರೋ ಬಡಬಡ ಬಡಿಯಾಕ್ ಸುರುಮಾಡುದ್ರು
ಅದ್ರ ಜತ್ಗೆ ಕಿಟ್ಗೆ ಸೂರಿನ ಅಂಚು
ಮನೇಲಿ ಇದ್ದ ಬದ್ದ ಕಂಚು
ದಡದಡ ಅನ್ನಾಕ್ ತಿರಿಕಂಡೋ
ಕಬ್ಬುಣದ ಬೂಟುನ್ ಸದ್ದು
ಫಳಾರ್ ಅನ್ನೋ ಗುದ್ದು
ಮಳೆನೀರು ನನ್ ನೀರು
ನಾನು ನ್ಯಲುಕ್ ಕಚ್ಚಂಡ್ ಬುಟ್ಟೆ
ನತ್ತೀ ಮ್ಯಾಗಳ ಅಂಚು ಕದ ಕಿಟ್ಗೆ ಕಡೀಂದ
ನಾಲ್‌ಜನ ನ್ಯಂದೋಗಿರೋ ಮನೇವಳೀಕೆ
ಪುದೀರ್ನೆ ತೂರ್ ಬಂದ್ರು
ವಬ್ಬೊಬ್ಬರ್ಗು ಮೂರು ಮೂರ್ ಕಣ್ಣು
ಕೆಂಪು ಬಿಳೆ ಹಸ್ರು ರವರವ ಉರಿತವೆ
ಬಂದೋರೆ ಕುಂತಿದ್ದೋನ್ ಮುಂಗೈಯಿಡ್ಕಂಡು
ಕೈ ಉಳ್ಕಂಗ್ ನುಲ್ಚಿ ತಾಂಕ್ಸೂ ಅಂದ್ರು
ಗುರ್ತು ಕೂನು ಇಲ್ದೋರು
ನಂಗೊಂದು ಗೊತ್ತಾಗ್ದೆ ಈಕ್ ಮೆಟ್ಟಂಗಾದೆ

ಪದ: ಐದು ವರ್ಷದ ಹಿಂದೆ ಓಟಿಗೆ ಬಂದೋರು
ನೋಟನ್ನು ಕೊಟ್ಟೋರು ಅಲ್ಲವೇನೋ
ಕೊಟ್ಟ ಸಾಲವ ಜನರು ಯಿಂದಕ್ಕೆ ಕೊಡದಿರಲು
ಕೈಕಾಲು ಮುರಿಯೋರು ಅಲ್ಲವೇನೋ
ಮಾತು ಕೇಳದ ಜನರ ನೇತು ಹಾಕಲು ಮರಕೆ
ಹಾವಿನ ಹಗ್ಗವ ತಂದವರು
ಮಂತ್ರಿ ಮಾನ್ಯರ ಜೊತೆಗೆ ತಂತ್ರವ ಮಾಡೋರು
ಚೂರಿಯ ಗೆಳೆಯರು ಅಲ್ಲವೇನೋ

ಗಾಂಧಿ ಮಹತ್ಮನ ವಾರಸುದಾರರು
ರಾಮ ನಾಮವ ಜಪಿಸಿ ಬಂದರಲ್ಲೊ
ಕಚ್ಚೆ ಟೋಪಿಯ ಒಳಗೆ ಹೆಗಲ ಜೋಳಿಗೆ ತುಂಬ
ಬಡವರ ತಲೆಗಳ ತಂದರಲ್ಲೊ

ಮಾತು: ವಂಡು ಅಂತ ಕೈ ಸನ್ನೆ ಮಾಡದ್ರು
ನಾ ಏಳ್ಳಿಲ್ಲ ತಲೆ ಅಳ್ಳಾಡುಸ್ದೆ
ಅವ್ರು ರುದ್ದರಗ್ವಾಪಾ ತಾಳಿ
"ನಡ್ ನಡಿಯಲೇ" ಅಂತ
ಕಿವಿ ಪೊಟೋಗಂಗೆ ಭೂಮಿ ವೋಳಾಗಂಗೆ
ಕಿರುಚದ್ರು
ಯಲ್ಲ ರೇಡಿ ಮೈಕು ಪಿಚರ್‍ರೆಲ್ಲ ಮಳಗ್ದಂಗಾಯ್ತು
ಬಿಳೇಕರೇ ಪೇಪ್ರೆಲ್ಲ
ಇದೇನ್ ದಪ್ಪಕ್ಷರ್‌ದಲ್ ಕಂಡಂಗಾಯ್ತು
ನಾನು ಗಡಗಡ್ನೆ ನಡಿಕಂಡು ಕೈಳಿಕ್ ವೊತೋದೆ
ಹಚ್ಚಿರೋ ಸಿಗರೇಟ್ನ ಚುಚ್ಚಿ ಚುಚ್ಚಿ
ನನ್ ಮೈಲಿ ಸಿಡುಬಿನ ಗುರ್ತ್ ಮಾಡುದ್ರು
ಕಾಲುನ ಬೂಟ್ನ ಬಾಯಿಗ್ ತುರ್ಕಿ
"ನೆಕ್ಕೋದ್ ಕಲ್ತ್‌ಕೋ" ಅಂತಾ ಅವ್ರೆ
ನಿಮ್ಮುನ್ನ ಮುಂದ್ವರ್‍ಸಕೇನೆ ನಾವ್ ಹುಟ್ಟಿರೋದು

ಅಂತ ಯಗರ್ಸಿ ನನ್ ಮುಂದಲೆಗೆ ವದ್ರು
ನಾನು ಅವ್ರ ಕಾಲ್ನ ಪಟ್ಟಾಗಿ ಯಿಡ್ಡಿದ್ದೋನು
ಅವರ್ನೆ ದುರ್ಗುಟ್ಕಂಡ್ ನೋಡ್ದೆ
ಅವ್ರು ನನ್ನ ಅತ್ತಿಂದಿತ್ತ ಇತ್ತಿಂದತ್ತಾ
ವದ್ಕಂಡು ಚಂಡಾಟ ಆಡ್ತಾರೆ
ಈ ನನ್ ಮಕ್ಳು ಯಿಂಗಾದ್ರೆ ದಾರಿಗ್ ಬರಲ್ಲ
ಅಂತ ವಳಗಿಂದ ಬೀದಿಗ್ ತಂದ್ರು
ಅಲ್ಲಿ ನಾಗ್ರಾವು ಹಸ್ರಾವು ಯಬ್ಬಾವುಂತರ
ನೀರು ನುಲ್‌ಕಂಡು ಹರೀತದೆ
ನನ್ ಮಯ್ಯಿಂದ ರಕ್ತ ಯಿಂಕಿಂಕ್ರಾನೆ
ತೊಟ್ಟಿಕ್ಕಿ ಹರ್‍ಯೋ ನೀರು
ಬಣ್ಣಾ ಏರ್ತಾ ಅದೆ
ಆದಿ ಬೀದೀಲಿ ಆಡೋ ಹುಡುಗರ ಪದ ಕೇಳುಸ್ತಾ ಅದೆ

ಪದ: ಬನ್ನಿರಿ ಆಯನ ಆನೇಕಲ್ಲ
ಬನ್ನಿರಿ ಆಡಾನ ನೀರಾಟ
ಗೆಳೆಯರೆಲ್ಲಾ ಕೂಡಾನ
ಕಪ್ಪೆ ಚಿಪ್ಪು ಆಡಾನ
ಕೈಲೇ ಬಾವಿ ತೋಡಾನ
ನೀರು ಬಂದಾವ ನೋಡಾನ
ಬನ್ನಿರಿ ಆಯನ ಆನೇಕಲ್ಲ
ಬನ್ನಿರಿ ಆಡಾನ ನೀರಾಟ
ಏನಿದೇನು ಚೀರಾಟ
ಏನೀದೇನು ಹೋರಾಟ

ಮಾತು: ಅಂಗನ್ಕಂಡು ವುಡುಗ್ರೆಲ್ಲ
ಬೆದ್ದಂಬೀಳ ವಾಟವಡುದ್ಬುಟ್ರು
ಆಡ್ರು ಮಾಡೋ ಯಜಮಾನ್ರಂಗೆ
ನನ್ ತಗಂಡು ವೋಯ್ತಿದ್ದೋರು

ಮಂತ್ರ ಯೇಳೋ ಬ್ರಾಮುಂಡ್ರಂಗೆ
ಏನೇನೋ ವಟಗುಟ್ತಾ ಅವ್ರೆ
"ರಗುಪತಿ ರಾಗವ ರಾಜಾರಾಮ್ ಪತೀತ ಪಾವನ ಸೀತಾರಾಮ್
ಸಬಕೋ ಸನ್ಮತಿ ದೇಬಗವಾನ್ ಈಶ್ವರ ಅಲ್ಲ ತೇರೆನಾಮ್"
ಅಂತಾ ಭಕ್ತಿ ಯಚ್ಚಾಗಿರೋರ್ ತರಾ ಯೇಳ್ತಾ ಅವ್ರೆ
ನಾನು ಧೆರ್ಯ ಮಾಡಿ
ಸ್ವಾಮಿ ಬಡವರ್ ಮೇಲ್ ದಯಾ ದೆವ್ರುರ್ ಮ್ಯಾಲ್ ಭಕ್ತಿ
ಎಳ್ಡೂ ಇರೋ ನಿಮಂತೋರು ಈ ತರ ಕ್ವಲೆ
ಮಾಡ್ಬ್ಯಾಡಿ ನನ್ ಬುಟ್ಬುಟಿ" ಅಂದೆ
ಅವ್ರುಕ್ವಾಪ ನತ್ತಿಗೇರಿ

"ಲೋಪರ್ದೇಸ್ ನನ್‌ಮಕ್ಳ ವಟ್ಟಿಗಿಟ್ಟಿಲ್ಲ
ತಿಕ್  ಬಟ್ಟಿಲ್ಲ ಎಷ್ಟಲೇ ಕೊಬ್ಬು
ನಾವು ಯಿಂಜಿನ್ನು ನೀವ್ ಪೆಟ್ಟಿಕಳ್ಳೆ
ನಿಮ್ಮುಂದೆ ನಾವ್ ನಮ್ಮಿಂದೆ ನೀವ್"
ಅಂತ ಜಾಡಿಸಿ ವದ್ರು
ಬೂಟ್ ಬಾಯ್ಗಿಕ್ಕುದ್ರು
ನನ್ನಿವ್ರು ಕುಯ್ದು ಪಾಲ್ ಆಕ್ತಾ ಅವ್ರೆ ಅನ್ನುಸ್ತು
ನನ್ ಎಳ್ಡ್‌ಕಯ್ಯಿ ಎಳ್ಡ್ ಕಾಲು
ಇಪ್ಪತ್ ಬೆಳ್ಳು ಸಾವ್‌ರಾರು ಕೂದ್ಲು
ಮೂಗು ಬಾಯಿ ಮೂವತ್ತೆಳ್ಡ್ ಹಲ್ಲುಗೊಳೆಲ್ಲ
ಗಾಳೀಲಿ ಆಕಾಸದ್ ತುಂಬಾ ಹಾರ್ತಾ ಅವೆ

ನನ್ ಮೂಳೇನ ಇವ್ರ ಬೂಟ್ಗುಳು
ತುಳ್ದು ಪುಡ್‌ಪುಡಿ ಮಾಡ್ತಾ ಅವೆ
ನನ್ಗೆ ರೋಸೋಯ್ತು
ಕಲ್ತಿದ್ದು ಕೇಳಿದ್ದು ಯಲ್ಲಾ ಮರ್ತೋಗಿ
ಉಳ್ಕಿಂಡಿತ್ತೊಂದೋ ಮಾತು
"ಧಿಕ್ಕಾರ ಧಿಕ್ಕಾರ"

ಅಂತ ಅವ್ರು ಯದ್ರಿ ಪದ್ರಗುಟ್ಟಂಗೆ ಕಿರುಚ್‌ಬುಟ್ಟೆ
ಅವ್ರು "ಎಲಾ ಇವ್ನ," ಅನ್ಕಂಡು
ಒಂದು ಉದ್ದಾಗಿರೋ ದಬ್ಬ ಟೈನಾದಾರ ತಗಂಡು
ಎಳ್ಡ್ ತುಟೀನು ಸೇರ್ಸಿ ವಲದ್ಬುಟ್ರು
ಬಾಯ್ ಬೀಗಾ ಹಾಕ್ಬುಟ್ರು

ಪದ: ಗ್ವಾಮಾಳೆ ಹಿಂಡುತಾರೆ
ತಲೆ ಬುಳ್ಡೆ ಜಜ್ಜುತಾರೆ
ಮಾತಿಲ್ಲದ ಗಂಟಲಿಗೆ
ವಲೆದು ಕೊಂಡ ತುಟಿಗಳಿಗೆ
ಅದುಮಿ ಅದುಮಿ ತುರುಕುತಾರೆ
ಅನ್ನದ ಮಿದಿಕೆ
ಹುಟ್ಟಿದ ನಿರ್ವಾಣಕ್ಕೆ
ಸೆಣಬಿನೆಂಬ ಸುತ್ತಿ ಬಿಗಿದು
ದರದರನೆ ಎಳೆಯುತಾರೆ
ಕತ್ತಲೇಲಿ ಕೊಳ್ಳಿದೆವ್ವ
ಕೈಗಳಲ್ಲಿ ಬೆಳ್ಳಿ ಕತ್ತಿ
ಸುತ್ತ ನಿಂತು ಕುಣಿಯುತಾರೆ

ಮಾತು: ಕಾಡು ಕಲ್ಲು ಗಿಡ ಗುಡ್ಡು ಯಲ್ಲಾ ದಾಟುವ ಮ್ಯಾಲೆ
ಒಂದು ಬಟ್ಟಬಯಲಿಗೆ ಯಳಕಂಬಂದ್ರು
ಆ ಬಯ್ಲಿನ ಸುತ್ತಮುತ್ತ ತರತರದ ತ್ವಾಟಗಳು
ತಗ್ಗಿ ಬಗ್ಗಿ ನಗ್ತ ನ್ಯಗೀತ ನಿಂತವೆ

ಪದ: ಅವ್ರು ಕತ್ತೀ ತ್ವಾಟಕೆ ಹೋದಾರು
ಅಲ್ಲಿ ಚಿನ್ನದ ಕತ್ರಿ ತಂದಾರು
ಬಾಕಿನ ತ್ವಾಟಕೆ ಹೋದಾರು
ಬೆಳ್ಳಿ ಬಾಕ ತಂದಾರು
ಸೀಮೆಣ್ಣೆ ಬಾವಿಗಾಳು ಅಲ್ಲಿ

ಬಂದೂಕ ಬೆಳೆದವರೆ
ದತ್ತೂರಿ ಗಿಡಗಾಳು ಅಲ್ಲಿ
ಮದ್ದುಗುಂಡು ಉದುರುತಾವೆ

ಮಾತು: ಬಂದೋರೆ ಚಿನ್ನದ ಕತ್ತೀಲಿ ನನ್ ತಲೇನ
ನುಣ್‌ಗೆ ಬೋಳುಸ್ತಾರೆ
ರಕ್ತಾ ತೊಟ್ಟಿಕ್ತಿರೋ ಹಣೆಗೆ ಮಂತ್ರ ಯೇಳ್ಕಂಡು
ಮೂರ್‌ನಾಮಾ ಇಕ್ತಾ ಅವ್ರೆ

ನೇಣಾಕೋರಂಗೆ ಬಿಳೆ ಉರೀನ
ಜನ್ವಾರ ಅಂತ ಕುತ್ಗೇಗೆನ್ಯಾತಾಕ್ತಾ ಅವ್ರೆ
ನನ್ನ ಅಂತರ್ ಮಕನಾಗಿ ಮಲುಗ್ಸಿ
ಅನ್ನದ ಕತ್ತೀಲಿ ನನ್ನೆದೆ ಮ್ಯಾಗಳ
ಕೂದಲ್ನ ಬೋಳ್ಸಿ
ಬೆಳ್ಳಿ ಬಾಕೇಲಿ ಯದೇನ
ತೂತ್ ಮಾಡುದ್ರು
ರಕ್ತ ಬುಳ ಬುಳನೇ ಬತ್ತಿದಂಗೆ ವೋಡೋಗಿ
ಒಂದು ಸಸಿ ತಂದು ಅಲ್ಲಿ ನೆಟ್ ಬುಟ್ರು

ಆ ಸಸಿ ನನ್ ಮೈತುಂಬ ಬೇರ್ಬುಟ್ಟು ಅರಳ್ತಾ ಅದೆ
ಅದು ಬಲ್ತು ಕ್ವಂಬೆ ಅಣ್ಣುಕಾಯಿ ವೂವ
ಬುಡ್ತಿದ್ದಗೆ ನನ್ ಉಸ್ರು ವಂಟೋಯ್ತು

ಪದ: ತೂಕ ತುಂಬಿದ ಟಗರು
ಕಾಲು ಯಿಂದಗಡೆ
ತೂಕವಿಲ್ಲದ ಟಗರು ನಾನು
ಕಣ್ಣು ನೆತ್ತೀಲಿ
ಕತ್ತಲೇಲಿ ಬತ್ತಲೇಲಿ
ನನ್ನ ಸಂಚಾರ

ಗುರು ಸಿಕ್ಕತಿಲ್ಲವಲ್ಲೊ
ನನ್ನ ಸವಕಾರ

ಮಾತು: ಒಂದಿನ ನಾನು ಸುಳ್ದಾಡ್ತಿದ್ದೆ
ಕಣ್ಣಿಲ್ಲ ಕಾಲಿಲ್ಲ ಮೈಯಿಲ್ಲ ಉಸ್ರಿಲ್ಲ
ಅದೇ ಜನ ಗಿಟುಕಾಸ್ಕೊಂಬುಟ್ಟವ್ರೆ
ನಡ್ವೆದ್ವಡ್ದಾಗೊಂದು ಸ್ಟೇಜ್ ಹಾಕವ್ರೆ
ಅದ್ರ ಮ್ಯಾಲೆ ದ್ವಡ್ ದ್ವಡ್ಡೋರು
ನಗ್‌ನಗ್ತಾ ಕುಂತವ್ರೆ
ಸುತ್ತಮುತ್ತ ಜನವೆಲ್ಲ ಮೂಳೆ ಚಕ್ಳ ಬುಟ್ಕಂಡು
ಕಚ್ಚರುಬೆ ಕಟ್ಕಂಡು
ತಾಳಾ ಮೇಳ ಹಾಕ್ಕಂಡು
ಕಣ್ದು ಕುಪ್ಪಳುಸ್ತಾ ಅವ್ರೆ

ಪದ: ಇವ್ರ ಸೇವೆ ದೊಡ್ಡಾದು
ಯಸ್ಸಯೆತ್ತಿ ಕೊಂಡಾಡಿ
ಇವ್ರ ತ್ಯಾಗ ದೊಡ್ಡಾದು
ಸ್ಟೇಜಿನ ಮ್ಯಾಲಕೆ ಕರೆತನ್ನಿ
ಇವರ ಕಾರು ಬಂಗಾರ
ಗಂಧದ ಹಾರಾ ಹಾಕೀರಿ
ಇವರ ಬಂಗಾಲೆ ದೊಡ್ಡಾದು
ಸೀಟಿನ ದೂಳಾ ವರಸೀರಿ
ಇವರ ಜೇಬು ಅಗಾಲ
ಭಕ್ತಿ ಭಜನೆ ಮಾಡೀರಿ
ಇವುರ ಮಗಳು ದೊಡ್ಡೋಳು
ಮಾವ ದೇವ ಅನ್ನೀರಿ
ಇವ್ರ ಮೈಯಿ ದಪ್ಪಾದು
ಹೊತ್ತುಕೊಂಡು ಕುಣಿಯೀರಿ
ಮ್ಯಾಲ್ ಕುಂತಿರೋ ನಮ್ಮಪ್ಪದಿರ ಪಾದಕೆ ಗೋವಿಂದಾ

ಅವ್ರ ಯೆಂಡರ್  ಪಾದಕೆ ಗೋವಿಂದ
ಮಕ್ಕಳ ಪಾದಕೆ ಗೋವಿಂದ
ಅವ್ರ ತಾತನ ಪಾದಕೆ ಗೋವಿಂದ
ಮುತ್ತಾತನ ಪಾದಕೆ ಗೋವಿಂದ

ಮಾತು: ಈತರ ಇವ್ರು ಕುಣೀತಿದ್ರೆ
ಮ್ಯಾಲಿರೋರು ಇವುರನ್ನು ನೋಡಿ
ಆನಂದ ಪಟ್ಕಂಡು ತಲೆದೂಗ್ತಾ ಅವ್ರೆ
ಇವ್ರ ಭಯಾ ಭಕ್ತೀನ
ಮನಸಾರೆ ಮೆಚ್ಚುತ್ತಾ ಅವ್ರೆ
ನಾನು "ಎಲಾ ಇವ್ನಾ!" ಅನ್ಕಂಡು
ಸ್ಟೇಜಿನತಕಾ ಹೋದೆ
ಅಲ್ಲಿ ದ್ವಡ್ ಮನಸ್ರಯಿಂದ್ಗಡೆ
ಮರೇಲಿ ಯಾರೋ ಕುಂತಿದ್ರು
ಅವುರನ್ನ ನೋಡ್ದೇಟ್ಗೆ ನನ್ಗೆ
ಭೀತಿ ಬಡೀತು ಮಂಕು ಕವೀತು
ಅಲ್ಲೆ ದ್ವಡ್ಡ ಮನಷ್ರಿಂದೆ

ಪದ:  ಅಲ್ಲೆ ಕುಂತವರೆ ಅವರು
ಅಲ್ಲೇ ಕುಂತವರೆ
ಬೇವಿನ ಸೊಪ್ಪು ಹಾಸವರೆ
ಬೇವಿನಸೊಪ್ಪು ಹೊದ್ದವರೆ
ಹಳೆ ಕ್ಯರವ ಕಾಯೀಸಿ
ಮಯ್ಯಿಗೆ ಬರೆದು ಎಳೆಯೋರು
ಸೈಜುಗಲ್ಲು ಹೊರುಸೋರು
ಹುಣಸೆ ಮರಕೆ ಕಟ್ಟೋರು
ಅಲ್ಲೆ ಕುಂತವರೆ ಅವರು
ಅಲ್ಲೇ ಕುಂತವರೆ

ನಿಂಬೇ ಹಣ್ಣು ಮಡಗವರೆ
ಬಸುರೀ ಕಯ್ಯ ಮಡಗವರೆ
ಮೂಳೇ ಜೋಳಿಗೆ ಹಾಕವರೆ
ಮೀಸೆ ಮರೆಯಲಿ ನಗುತಾರೆ
ದೊಡ್ಡ ಮನುಷರ ಹಿಂದವರೆ
ಅಲ್ಲೇ ಕುಂತವರೆ ಅವರು

*****

**ಕವಿ**

ಸಿದ್ಧಲಿಂಗಯ್ಯ ದಲಿತ ಸಾಹಿತ್ಯದ ಮಹತ್ವದ ಕವಿಯಾಗಿದ್ದು ಕನ್ನಡ ಸಾಹಿತ್ಯ ಲೋಕದಲ್ಲಿ ದಲಿತ ಸಾಹಿತ್ಯ ಕುರಿತಂತೆ ಅಪಾರವಾದ ಕೃಷಿ ನಡೆಸಿದ್ದಾರೆ. ಕವನ ಸಂಕಲನಗಳು, ನಾಟಕಗಳು, ವಿಮರ್ಶಾ ಗ್ರಂಥಗಳು, ಜೀವನ ಚರಿತ್ರೆ, ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. 2001–2003ರ ಅವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಯೋಜನಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದಾರೆ.

**ಆಶಯ**

ಅಲ್ಲೇ ಕುಂತವರೆ ಕವನವನ್ನು 'ಅಕ್ಷರ ಹೊಸಕಾವ್ಯ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ತುಳಿತಕ್ಕೆ ಒಳಗಾದವರ ಮೇಲೆ ಏಳಲಾಗದಂತೆ, ಮುಂದೆ ಸಾಗಲಾರದಂತೆ ಬಂಧಿಸುವ ನಿತ್ಯ ಸತ್ಯಗಳಲ್ಲಿ ದಲಿತರು, ಅನುಭವಿಸುವ ನೋವುಗಳನ್ನು ಕವನ ಚಿತ್ರಿಸುತ್ತದೆ.

**ಶಬ್ದಾರ್ಥಗಳು**

ಕ್ವಾಪದಲಿ=ಕೋಪದಲ್ಲಿ, ಮುಕ=ಮುಖ, ವಡವೇಯ= ಒಡವೆ, ರವಷ್ಟು=ಅಲ್ಪಪ್ರಮಾಣ, ಗ್ವಾಮಾಳೆ=ಕುತ್ತಿಗೆ

**ಪ್ರಶ್ನೆಗಳು**

1. ಅಲ್ಲೇ ಕುಂತವರೇ ಕವನದ ಆಶಯವೇನು?
2. ತುಳಿತಕ್ಕೊಳಗಾದವರ ಕುರಿತು ಕವಿ ಎಚ್ಚರಿಸುವ ಕ್ರಮವನ್ನು ವಿವರಿಸಿ?
3. ದಲಿತರ ಸ್ಥಿತಿಗತಿ ಕುರಿತಂತೆ ಕವಿಯ ಆಕ್ರೋಶವೆಂತಹದು?
4. ತುಳಿತಕ್ಕೊಳಗಾದವರ ತಣ್ಣನೆಯ ಆಕ್ರೋಶವನ್ನು ಕವಿ ಹಿಡಿದಿಡುವ ಬಗೆಯನ್ನು ವಿವರಿಸಿ?

### ಹೆಚ್ಚಿನ ಓದು

1. ಹೊಲೆಮಾದಿಗರ ಹಾಡು, ಡಾ. ಸಿದ್ದಲಿಂಗಯ್ಯ, ಕ್ರಾಂತಿಸಿರಿ ಪ್ರಕಾಶನ–2005
2. ಬಾಬಾಸಾಹೇಬ ಅಂಬೇಡ್ಕರ್ ಕವಿತೆಗಳು, ಡಾ.ಎಲ್.ಹನುಮಂತಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ–1992, ಬೆಂಗಳೂರು.
3. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ಅಂಕಿತ ಪುಸ್ತಕ–2000 ಬೆಂಗಳೂರು.

ಕವನ

## ೧೨

# ಮಿಶ್ರ ತಳಿಗಳು

**ಡಾ. ಎಂ. ಮಹಾದೇವಪ್ಪ**

ಮಿಶ್ರ ತಳಿಗಳನ್ನು ತಪ್ಪಾಗಿ ಅರ್ಥೈಸುವುದು ಬೇಡಣ್ಣ
ಮಾವನರೆಲ್ಲ ಮಿಶ್ರ ತಳಿ ಎಂಬುದನ್ನು ಅರಿಯಬೇಕಣ್ಣ
ಮಿಶ್ರ ತಳಿಯೆಂದರೆ ಒಳ್ಳೆಯ ಗುಣಗಳ ಏಕೀಕರಣವಣ್ಣ
ಇದರ ಇನ್ನೊಂದು ನಾಮಾಂಕಿತ "ಸಂಕರಣ" ತಳಿಯೆಂಬುದು ತಿಳಿಯಿರಣ್ಣ

ಸೃಷ್ಟಿಯತ್ತ ನೋಡಿದರೆ ಒಂದು ಕ್ಷಣ
ವೈವಿಧ್ಯತೆಯ ಉಗಮಕ್ಕೆ ಮೂಲ ಈ ಸಂಕರಣ
ಹಿಂದೆಯೂ ಇತ್ತು ಮುಂದೆಯೂ ಸಾಗುವುದು ಇಂತಹ ಮಿಶ್ರಣ
ನಿಸರ್ಗ ವಿರೋಧಿಸದು ಮಿಶ್ರ ತಳಿಯ ಶಕ್ತಿಮಾನ ಗುಣ

ಶ್ರೇಷ್ಠ ಗುಣಗಳ ಜೋಡಣೆ ಸಂಕರಣದ ಧೋರಣೆ
ರೋಗ ರುಜಿನಗಳಿಗೆ ಹಾಕದೆ ಮಣೆ
ಹೇಳುವುದು ಸಾಕು ಸಾಕೆಂದು ಒಂದೆರಡೇ ಸಿಂಪರಣೆ
ಅನುವು ಮಾಡಿ ಫಸಲಿನ ಸುರಕ್ಷಿತ ಒಕ್ಕಣೆ

ಮಾಡಿದರೆ ಮನೆ ಬೀಜ ಬೆಳೆವ ಪ್ರಯೋಗ
ಮಿಶ್ರ ತಳಿ ನೀಡುವುದು ಅನಂತ ಉದ್ಯೋಗ
ಬೀಜ ಸಮಸ್ಯೆ ಪರಿಹಾರಕ್ಕೆ ಇದೊಂದೇ ಸರಳ ಮಾರ್ಗ
ಇದು ತರುವುದು ರೈತರಿಗೆ "ಸುಯೋಗ"

*****

## ಕವಿ

ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದ ಏಕೈಕ ಕೃಷಿ ವಿಜ್ಞಾನಿ ಹಾಗೂ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾದ ಡಾ.ಮಹದೇವಪ್ಪನವರು ಭತ್ತದ ಮಹದೇವಪ್ಪ ಎಂದೇ ಪ್ರಸಿದ್ಧರು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಭತ್ತದಲ್ಲಿ ಹಲವಾರು ತಳಿಗಳನ್ನು ಅಭಿವೃದ್ಧಿಪಡಿಸಿ, ರೈತ ಸಮುದಾಯಕ್ಕೆ ನೀಡಿದ್ದಾರೆ. ಇವರ ಪ್ರತಿಭೆ ಹಾಗೂ ಕೀರ್ತಿ ನಮ್ಮ ದೇಶಕ್ಕೆ ಸೀಮಿತವಾಗದೆ ಹೊರದೇಶಗಳಲ್ಲೂ ವ್ಯಾಪಿಸಿದೆ.

ಇವರ ಸಾಧನೆಗೆ ಕೆ.ಕೆ.ಮೂರ್ತಿ ಪ್ರಶಸ್ತಿ, ಹೂಕರ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ, ಶ್ರೀ ಚೋಟುರಾಮ್ ರಾಷ್ಟ್ರೀಯ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಇತ್ತೀಚೆಗೆ ಪದ್ಮಭೂಷಣ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಪ್ರಮುಖ ದಿನಪತ್ರಿಕೆಗಳಲ್ಲಿ 50ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಗೊಂಡಿವೆ. ಸುಮಾರು 30ಕ್ಕೂ ಹೆಚ್ಚೂ ಪುಸ್ತಕಗಳನ್ನು ರಚಿಸಿದ್ದಾರೆ.

## ಆಶಯ

ರೈತ ಗೀತೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಕವಿ ತಮ್ಮ ಸಹಜ ಕವನ ಕಲೆಯಲ್ಲಿ ಕೃಷಿ ಕಾಯಕಕ್ಕೆ ಸಂಬಂಧಿಸಿದಂತೆ, ನೆಲದ ಉಳುಮೆಯಿಂದ ಹಿಡಿದು ಹೊಲದ ಬೆಳೆಯವರೆಗೆ ರೈತರು ಪಡುವ ಶ್ರಮ, ಅವರ ಬದುಕಿನ ಬವಣೆ, ಪರಿಹಾರದ ದಾರಿ ಇತ್ಯಾದಿ ಚಿತ್ರಗಳನ್ನು ಕೊಡುವುದರ ಜೊತೆಗೆ, ರೈತರು ಹೀಗೆ ಇರುವ ಅನುಕೂಲಗಳಲ್ಲೇ ನೆಮ್ಮದಿಯ ಬದುಕನ್ನು ಸಾಗಿಸಲು ಸಾಧ್ಯ, ಎನ್ನುವುದನ್ನು ಸಾಮಾನ್ಯ ರೈತರ ಮನಕ್ಕೂ ಮುಟ್ಟುವಂತೆ ತಿಳಿಸಿದ್ದಾರೆ. ಮಿಶ್ರತಳಿಗಳು ಕವನವು ವೈಜ್ಞಾನಿಕ ಚಿಂತನೆಗಳನ್ನ ತಪ್ಪಾಗಿ ಅರ್ಥೈಸಿಕೊಂಡಿದ್ದರ ಮೇಲೆ ಬೆಳಕು ಚೆಲ್ಲುವ ಪ್ರಯತ್ನವಾಗಿದೆ.

## ಶಬ್ದಾರ್ಥಗಳು

ಉಗಮ=ಹುಟ್ಟು ಉತ್ಪತ್ತಿ ಸ್ಥಾನ, ಒಕ್ಕಣೆ=ಕಣದಲ್ಲಿ ಕಾಳುಗಳನ್ನು ಪ್ರತ್ಯೇಕಿಸುವಿಕೆ, ಅನಂತ=ಕೊನೆಯಿಲ್ಲದ, ಸುಯೋಗ=ಸಂಪತ್ತು, ಐಶ್ವರ್ಯ, ಅದೃಷ್ಟ

## ಪ್ರಶ್ನೆಗಳು

1. ಮಿಶ್ರ ತಳಿಯನ್ನು ಅರಿಯಲು ಏಕೆ ಪ್ರಯತ್ನಿಸಬೇಕು ಎಂದು ಕವಿ ಸೂಚಿಸುತ್ತಾರೆ?
2. ಮಿಶ್ರ ತಳಿಯ ಫಲಾಪೇಕ್ಷೆಗಳೇನು?
3. ಮಿಶ್ರ ತಳಿಯ ಗುಣಗಳ ವೈಶಿಷ್ಟ್ಯತೆಯನ್ನು ಕವಿ ಸೂಚಿಸುವ ಬಗೆ ತಿಳಿಸಿ?
4. ಮಿಶ್ರ ತಳಿಗಳು ಕವನದ ಆಶಯವೇನು ?

## ಹೆಚ್ಚಿನ ಓದು

1. ರೈತ ಗೀತೆ, ಕವಿ: ಡಾ. ಎಂ. ಮಹಾದೇವಪ್ಪ, ಸಂವಹನ ಪ್ರಕಾಶನ, ಮೈಸೂರು–2009

ನುಡಿ ಚಿತ್ರ

೧೩

# ಕೃಷಿ–ಋಷಿ ಶಂಕರ ಲಂಗಟಿ

ಡಾ. ತೇಜಸ್ವಿನಿ ಬಿ. ಯಕ್ಕುಂಡಿ ಮಠ

ಈ ಭೂಮಿ ನಮ್ಮ ಪೂರ್ವಜರಿಂದ ಬಂದ ಬಳುವಳಿಯಲ್ಲ, ಮಕ್ಕಳು–ಮೊಮ್ಮಕ್ಕಳಿಂದ ಎರವಲಾಗಿ ಪಡೆದದ್ದು, ಅದನ್ನು ಸುಭದ್ರವಾಗಿ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ ಎಂಬ ಸಾರ್ವಕಾಲಿಕ ಸತ್ಯವನ್ನು ಅರಿತು ಪರಿಸರಕ್ಕೆ ಮಾರಕವಾದ ಆಧುನಿಕ ಕೃಷಿ ಪದ್ಧತಿಯನ್ನನುಸರಿಸದೇ, ನಿಸರ್ಗ ಸ್ನೇಹಿಯಾದ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಅಳಿವಿನಂಚಿನಲ್ಲಿರುವ ದೇಶೀ(ನಾಟಿ) ಏಕದಳ, ದ್ವಿದಳ ಧಾನ್ಯಗಳ, ತರಕಾರಿಗಳು ಮತ್ತು ಎಣ್ಣೆಕಾಳುಗಳ ಬೀಜ ಸಂಗ್ರಹಣೆ, ಸಂರಕ್ಷಣೆಯಲ್ಲಿ ತೊಡಗಿರುವ ರೈತ ಶ್ರೀ ಶಂಕರ ಹನುಮಂತ ಲಂಗಟಿಯವರ ಕುರಿತಾದ ಪರಿಚಯಾತ್ಮಕ ಲೇಖನ ಇದಾಗಿದೆ.

ಬೆಳಗಾವಿ ಜಿಲ್ಲೆಯ, ಖಾನಾಪೂರ ತಾಲ್ಲೂಕಿನ ಗುಂಡೇನಟ್ಟಿ ಗ್ರಾಮದ ಬಡ ರೈತ ಕುಟುಂಬವೊಂದರಲ್ಲಿ ಜನಿಸಿದ ಇವರದು ಹೋರಾಟದ ಬದುಕು. ಶಂಕರವರು ಕೇವಲ 14 ವರ್ಷದ ಬಾಲಕರಾಗಿದ್ದಾಗ ಅವರ ತಂದೆ ಸಾಲದ ಭಾದೆ ತಾಳಲಾರದೇ ಆತ್ಮಹತ್ಯೆಗೆ ಶರಣಾದರು. ಬಡತನದ ಕಾರಣದಿಂದ ಕೇವಲ 3ನೇ ತರಗತಿಯವರಿಗೆ ಮಾತ್ರ ಶಿಕ್ಷಣ ಪಡೆದಿದ್ದ ಶಂಕರವರು ತಮ್ಮ ಹಾಗೂ ಕುಟುಂಬದ ಉದರ ಪೋಷಣೆಗಾಗಿ ದನಕಾಯುವ ಕಾಯಕಕ್ಕಿಳಿದರು. ದಿನವೊಂದಕ್ಕೆ, ದನವೊಂದನ್ನು ಮೇಯಿಸುವುದರಿಂದ ಅವರಿಗೆ ದೊರೆಯುತ್ತಿದ್ದುದು ರೂ. 1 ಮಾತ್ರ. ಹೀಗೆ ಊರವರ ದನ ಮೇಯಿಸಲು ಹೋಗುವಾಗ ಅವರಿಗೆ ಸಂಗಾತಿಯಾಗುತ್ತಿದ್ದುದು ಒಂದು ಟ್ರಾನ್ಸಿಸ್ಟರ್. ಆಕಾಶವಾಣಿಯಲ್ಲಿ ಬಿತ್ತರವಾಗುತ್ತಿದ್ದ ಕೃಷಿರಂಗ ಇವೇ ಮೊದಲಾದ ಕಾರ್ಯಕ್ರಮಗಳನ್ನು ಕೇಳುತ್ತಾ–ಕೇಳುತ್ತಾ ತಾವೂ ಸ್ವಾವಲಂಬಿ ರೈತರಾಗಬೇಕು ಎಂಬ ಆಸೆ ಅವರಲ್ಲಿ ಅಂಕುರಿಸಿತು. ಕೃಷಿ ಸಂಬಂಧಿತ ತರಬೇತಿಗಳಿಗೆ ಉಪನ್ಯಾಸಗಳಿಗೆ ಹಾಜರಾಗಿ ವಿನೂತನ ವಿಚಾರಗಳನ್ನು ಅರಿತುಕೊಂಡು ಅದನ್ನು ತಮಗಿರುವ ನಾಲ್ಕು ಎಕರೆ ಜಮೀನಿನಲ್ಲಿ ಪ್ರಾತ್ಯಕ್ಷಿಕರಣ ಮಾಡುವ ಛಲತೊಟ್ಟರು.

ಜಾಗೃತಿ ಎಂಬ ಮಹಿಳಾ ಸ್ವಸಹಾಯ ಸಂಘದ ಶ್ರೀಮತಿ ಶಾರದಾ ದಾಬಡೆಯವರ ಪ್ರೇರೇಪಣೆಯಿಂದ ಗ್ರೀನ್ ಫೌಂಡೇಶನ್‌ರವರು 2006ರಲ್ಲಿ ಧರ್ಮಸ್ಥಳದಲ್ಲಿ ಆಯೋಜಿಸಿದ ದೇಶೀಯ ಬೀಜ ಸಂರಕ್ಷಕರ ಮೇಳದಲ್ಲಿ ಶಂಕರ ಲಂಗಟಿಯವರು ಭಾಗವಹಿಸಿದರು. ಆ ಮೇಲೆ ಇವರ ಬದುಕಿಗೆ ಹೊಸ ದಿಸೆ ತೋರಿತು. ಅಲ್ಲಿಂದ ಸುಮಾರು 25 ದೇಶೀ ತಳಿಯ ಬೀಜಗಳನ್ನು ತಂದು ಹೊಲದಲ್ಲಿ ಬಿತ್ತಿದರು. ಫಸಲು ಬಂದಾಗ ಊರಿನ ಹಿರಿಯರಿಗೆ ಅವುಗಳನ್ನು ತೋರಿಸಿದಾಗ ಅವು ಈ ಹಿಂದೆ ತಮ್ಮ ಪೂರ್ವಿಕರು ಬೆಳೆಯುತ್ತಿದ್ದ ಬೀಜ ತಳಿಗಳೆಂದು ದೃಢಪಡಿಸಿಕೊಂಡರು.

ಶ್ರೀ ನಾಗೇಶ ಹೆಗಡೆಯವರು ಬರೆದ 'ಅನ್ನವನ್ನೇ ತಿನ್ನು, ಅನ್ನವೇ ಬ್ರಹ್ಮ' ಎಂಬ ಪುಸ್ತಕವನ್ನೋದಿ, ಪ್ರಭಾವಿತರಾಗಿ ವಿಶೇಷವಾಗಿ ಭತ್ತದ ತಳಿಗಳನ್ನು ಹುಡುಕಿ ಅವುಗಳ ಬೀಜ ಸಂಗ್ರಹಣೆಗಾಗಿ ಪರಿಶ್ರಮಿಸಿದರು. ಲಂಗಟಿಯವರ ಆಸಕ್ತಿಯನ್ನು ಗಮನಿಸಿದ ಮುಗಧ ಭತ್ತ ಸಂಶೋಧನಾ ಕೇಂದ್ರದವರು 24 ನಾಟಿ ತಳಿಗಳನ್ನು ನೀಡಿ ಅವರ ಆಸ್ಥೆಗೆ ನೀರೆರೆದರು. ವಿವಿಧ ಭತ್ತದ ತಳಿಗಳ ಹೆಸರು ಅವುಗಳಲ್ಲಿರುವ ಔಷಧೀಯ ಗುಣವೆ ಮೊದಲಾದ ವಿಶೇಷತೆಗಳು ಇವರ ನಾಲಿಗೆಯ ತುದಿಯ ಮೇಲಿವೆ. ಸ್ಥಳೀಯ ಭತ್ತದ ತಳಿಗಳ ಕ್ಷೇತ್ರೋತ್ಸವವನ್ನು ಪ್ರತಿವರ್ಷ ಆಯೋಜಿಸುವಲ್ಲಿ ಮುಂದಾಳತ್ವವನ್ನು ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಜನರು ಬಾಗಿಲಿಗೆ ಮಾವಿನೆಲೆಯ ತೋರಣದ ಬದಲಾಗಿ ದೇಶೀ ಭತ್ತದ ತಳಿಗಳ ತೆನೆಗಳಿಂದ ಮಾಡಿದ ತೋರಣವನ್ನು ಸಿದ್ಧಪಡಿಸಿ, ಅವುಗಳಿಗೆ ಭತ್ತದ ತಳಿಯ ಹೆಸರಿರುವ ಪಟ್ಟಿಯನ್ನು ಅಂಟಿಸುವ ಅಪರೂಪದ ರೂಢಿಯನ್ನು ಜಾರಿಗೆ ತಂದು ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಭತ್ತವಲ್ಲದೇ ಇತರೆ ಏಕದಳ ಧಾನ್ಯ ಅದರಲ್ಲೂ ವಿಶೇಷವಾಗಿ ಆರೋಗ್ಯಕ್ಕೆ ಅವಶ್ಯಕವಾದ ಪೋಷಕಾಂಶಗಳಿರುವ ಸಿರಿಧಾನ್ಯಗಳು, ದ್ವಿದಳ ಧಾನ್ಯಗಳು, ತರಕಾರಿಗಳು ಮತ್ತು ಎಣ್ಣೆಕಾಳುಗಳ ದೇಶೀ ತಳಿಗಳ ರಕ್ಷಣೆಗೂ ಶ್ರಮಿಸುತ್ತಾ ಇತರೇ ರೈತರಿಗೆ ಮಾದರಿಯಾಗಿದ್ದಾರೆ.

"ಇತರರನ್ನು ನೆಚ್ಚಿ ಕುಳಿತುಕೊಳ್ಳುವುದಕ್ಕಿಂತ ತನ್ನನ್ನು ತಾನು ನಂಬಿ ಬದುಕಿನಲ್ಲಿ ಹೋರಾಡುವವನು ಇತಿಹಾಸ ನಿರ್ಮಿಸುತ್ತಾನೆ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅಂತೆಯೇ ಕೃಷಿಕರೂ ಸರ್ಕಾರ ಬೀಜ, ಗೊಬ್ಬರಗಳಿಗಾಗಿ ನೀಡುವ ಸಬ್ಸಿಡಿಗಾಗಿ, ವಿದೇಶೀ ಕಂಪನಿಗಳ ಯಂತ್ರೋಪಕರಣಗಳು, ಬೀಜಗಳನ್ನು ನೆಚ್ಚಿಕೊಂಡು ಬದುಕುವುದಕ್ಕಿಂತ ನಿಸರ್ಗದತ್ತವಾಗಿ ದೊರೆತಿರುವ ನಾಟಿ ಬೀಜಗಳನ್ನು ಬಿತ್ತಿ ಬೆಳೆಯುತ್ತಾ, ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿದರೆ ಸ್ವಾವಲಂಬಿಗಳಾಗಬೇಕಾಗುತ್ತದೆ. ಅಷ್ಟೇ ಅಲ್ಲ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಉಪ್ಪಿಗಾಗಿ ಮಹಾತ್ಮಾ ಗಾಂಧೀಜಿಯವರು 'ದಂಡಿ ಸತ್ಯಾಗ್ರಹ' ಮಾಡಿದಂತೆ ಮುಂಬರುವ ದಿನಗಳಲ್ಲಿ ರೈತರು ಬೀಜದ ಸ್ವಾಯತ್ತತೆಗಾಗಿ ಹೋರಾಡ ಬೇಕಾಗಬಹುದು. ಅಂತೆಯೇ ಇತ್ತೀಚೆಗೆ ಕರ್ನಾಟಕ ಕುಲಾಂತರಿ ತಳಿ ವಿರೋಧಿ ಆಂದೋಲನವನ್ನು ಬೆಂಗಳೂರಿನಲ್ಲಿ ಆಯೋಜಿಸಿದಾಗ

ಸಕ್ರಿಯವಾಗಿ ಲಂಗಟಿಯವರು ಭಾಗವಹಿಸಿ ಭಾಷಣವಿತ್ತಿದ್ದರು. ಏಕೆಂದರೆ ಕುಲಾಂತರಿ ತಳಿಗಳಲ್ಲಿ ವಂಶವಾಹಿನಿ ಗುಣವಿಲ್ಲದೇ ಇರುವುದರಿಂದ ಪ್ರತಿವರ್ಷ ರೈತರು ಬೀಜಗಳನ್ನು ಮಾರುಕಟ್ಟೆಯಿಂದ ಕೊಳ್ಳಬೇಕಾಗುತ್ತದೆ. ಹೊರತಾಗಿ ನಾಟಿ ಬೀಜಗಳಲ್ಲಿ ವಂಶವಾಹಿನಿ ಗುಣವಿಲ್ಲದೇ ಇರುವುದರಿಂದ ಬೀಜದ ಹಕ್ಕು ರೈತರ ಬಳಿಯಲ್ಲೇ ಉಳಿದಿರುತ್ತದೆ ಎಂಬುದು ಲಂಗಟಿಯವರ ಅಭಿಪ್ರಾಯ.

ಹಸಿರು ಕ್ರಾಂತಿಯ ಸಂದರ್ಭದಲ್ಲಿ ಹೆಚ್ಚು ಇಳುವರಿ ನೀಡುವ ಹೈಬ್ರಿಡ್ ಬೀಜಗಳು, ರಾಸಾಯನಿಕ ಗೊಬ್ಬರಗಳು, ಕ್ರಿಮಿ–ಕೀಟನಾಶಕಗಳು, ಕೃಷಿ ಯಂತ್ರೋಪಕರಣಗಳು ಬಹಳಷ್ಟು ಪ್ರಾಮುಖ್ಯತೆ ಪಡೆದವು. ತಾತ್ಕಾಲಿಕವಾಗಿ ಇದರಿಂದ ಇಳುವರಿ ಹೆಚ್ಚಿಗೆ ಬಂದುದರಿಂದ ರೈತರು ಸಾಲ ಮಾಡಿ ಇವುಗಳನ್ನು ಕೊಂಡು ಬಳಸಿದರು. ವಿವೇಚನೆ ಇಲ್ಲದೇ ಮಿತಿಮೀರಿದ ಬಳಕೆಯಿಂದ ಭೂಮಿಯ ದುಷ್ಪರಿಣಾಮಗಳಾದವು. ಭಾರತದಲ್ಲಿ ಕೃಷಿ ಮಾನ್ಸೂನಿನೊಂದಿಗಿನ ಜೂಜಾಟವಾಗಿದ್ದು, ಬರಗಾಲವಾದಾಗ ಸಾಲದ ಬಾಧೆಯಿಂದ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಲಾರಂಭಿಸಿದವು. ಟನ್ನುಗಟ್ಟಲೆ ಭಾರದ ಟ್ರಾಕ್ಟರ್‌ಗಳಿಂದ ಭೂಮಿಯನ್ನು ಉಳುವಾಗ ಅನೇಕ ಸೂಕ್ಷ್ಮಾಣು ಜೀವಿಗಳು ನಾಶವಾಗಲಾರಂಭಿಸಿದವು. ಆದ್ದರಿಂದಲೇ ಅನುಭಾವಿಗಳು, ಮನುಷ್ಯ ಸತ್ತರೆ ಮಣ್ಣಿಗೆ. ಮಣ್ಣು ಸತ್ತರೆ ಎಲ್ಲಿಗೆ? ಎಂದು ಬಹು ಮಾರ್ಮಿಕವಾಗಿ ಕೇಳಿದ್ದಾರೆ.

ಆದರೆ ಮೇಲಿನ ಎಲ್ಲಾ ಸಮಸ್ಯೆಗಳಿಗೆ ಉತ್ತರ ಸಾವಯವ ಕೃಷಿ ಪದ್ಧತಿಯಲ್ಲಿದೆ ಎಂಬುದನ್ನು ಅರಿತು ಲಂಗಟಿಯವರು ಮಣ್ಣಿನ ಸಾರ ಸಂರಕ್ಷಣೆಗೆ ನವಧಾನ್ಯಗಳನ್ನು ಒಳಗೊಂಡಂತೆ ಅಗತ್ಯ ವಸ್ತುಗಳನ್ನುಪಯೋಗಿಸಿ ತಯಾರಿಸಿದ ಹಸಿರೆಲೆ ಗೊಬ್ಬರವನ್ನು ಮಾತ್ರ ಭೂಮಿಗೆ ನೀಡುತ್ತಾರೆ.

ಬೇರಿಗೆ ಬಲ ತುಂಬಲು ಗೋಮೂತ್ರ, ಸೆಗಣಿ, ಬೆಲ್ಲ, ದ್ವಿದಳ ಧಾನ್ಯದ ಹಿಟ್ಟು, ಫಲವತ್ತಾದ ಮಣ್ಣು ಇವೇ ಮೊದಲಾದವುಗಳನ್ನುಪಯೋಗಿಸಿ ಜೀವಾಮೃತವನ್ನು ಸಿದ್ಧಪಡಿಸಿ ಬೆಳೆಗುಣಿಸುತ್ತಾರೆ. ರಾಸಾಯನಿಕಗಳಿಂದ ಮಾಡಿದ ಕೀಟನಾಶಕ, ಕ್ರಿಮಿನಾಶಕಗಳು ಕೇವಲ ಕ್ರಿಮಿ–ಕೀಟಗಳೆನ್ನದೇ ಮನುಷ್ಯನನ್ನು ಪರಿಸರವನ್ನು ಆಹುತಿ ತೆಗೆದುಕೊಳ್ಳುತ್ತಿವೆ. ತತ್‌ಕಾರಣ ಬೇವು, ಕಳ್ಳಿ ಎಕ್ಕ, ಹಸಿಮೆಣಸಿನಕಾಯಿ, ಶುಂಠಿ, ಬೆಳ್ಳುಳ್ಳಿ ಇವೇ ಮುಂತಾದವುಗಳಿಂದ ಅತ್ಯಂತ ಪರಿಣಾಮಕಾರಿಯಾದ ಕ್ರಿಮಿಕೀಟನಾಶಕ ಸಿದ್ಧಪಡಿಸುತ್ತಾರೆ–ಸಿಂಪಡಿಸುತ್ತಾರೆ.

ತಮ್ಮ ಹೊಲದಲ್ಲಿ ಅಂತರ್ಜಲವನ್ನು ಪುನಶ್ಚೇತನಗೊಳಿಸಲು, ಮಳೆಯ ನೀರು ಹರಿದುಹೋಗಿ ವ್ಯರ್ಥವಾಗದಂತೆ ತಡೆಯಲು ಅಗತ್ಯ ಕ್ರಮ ಕೈಗೊಂಡಿದ್ದಾರೆ. 40 x 40 ಅಡಿ ಉದ್ದಗಲದ ಹಾಗು 10 ಅಡಿ ಆಳದ ಗುಂಡಿ ತೋಡಿ ಅದರಲ್ಲಿ ಮಳೆ ನೀರನ್ನು ಸಂಗ್ರಹಿಸುತ್ತಿದ್ದಾರೆ. ತನ್ಮೂಲಕ ಮಳೆಗಾಲೇತರ ಕಾಲದಲ್ಲೂ ಬೆಳೆಗಳಿಗೆ ನೀರಿನ ಕೊರತೆಯಾಗುವುದನ್ನು ತಡೆಗಟ್ಟುವ ಪ್ರಯತ್ನ ಮಾಡಲಾಗಿದೆ. ಈ ಹೊಂಡದಲ್ಲಿ ಮೀನುಗಳನ್ನು ಸಾಕಿ, ಹೊಂಡದ ಸುತ್ತಲೂ ಮಾವು, ಚಿಕ್ಕು, ನುಗ್ಗೆ ಇವೇ

ಮೊದಲಾದವುಗಳನ್ನು ನೆಟ್ಟು ಉಪ ಆದಾಯ ಪಡೆಯುತ್ತಿದ್ದಾರೆ. ದನಗಳನ್ನು ಸಾಕಿ ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ. ಕೋಳಿ ಸಾಕಾಣಿಕೆಯೂ ಚಾಲ್ತಿಯಲ್ಲಿದೆ. ಮುಂಬರುವ ದಿನಗಳಲ್ಲಿ ಜೇನು ಸಾಕಾಣಿಕೆ ಮಾಡುವ ಯೋಜನೆಯನ್ನಿಟ್ಟುಕೊಂಡಿದ್ದಾರೆ. ಒಟ್ಟಿನಲ್ಲಿ ಸಮಗ್ರ ಕೃಷಿಯತ್ತ ದಾಪುಗಾಲು ಹಾಕುತ್ತಿರುವ ಲಂಗಟಿಯವರಿಗೆ ಬೆಂಬಲವಾಗಿರುವವರು ಅವರ ಪತ್ನಿ ಶ್ರೀಮತಿ ಮಹಾದೇವಿ ಮತ್ತು ಮಕ್ಕಳಾದ ಚಿ.ಹನುಮಂತ ಹಾಗೂ ಚಿ.ಶಿವಾನಂದರವರು.

ಗುಂಡೇನಟ್ಟಿ ಗ್ರಾಮದಲ್ಲಿ 'ಸಿದ್ಧಾರೂಢ ಸಾವಯವ ಬಳಗ ಮತ್ತು ದೇಶೀ ಬೀಜ ತಳಿಗಳ ಬ್ಯಾಂಕ್' 2011ರಲ್ಲಿ ಪ್ರಾರಂಭವಾಗಿದ್ದು, ಸುಮಾರು 40 ಜನ ರೈತರು ಇದರ ಸದಸ್ಯರಾಗಿದ್ದಾರೆ. 80 ಬಗೆಯ ದೇಶೀ ಭತ್ತದ ತಳಿಗಳು, 15 ಬಗೆಯ ದ್ವಿದಳ ಧಾನ್ಯಗಳು, ಎರಡು ಬಗೆಯ ಜೋಳ, 11ತರಹದ ಸಿರಿಧಾನ್ಯ, 4 ಬಗೆಯ ಎಣ್ಣೆಕಾಳುಗಳೂ, 45 ಬಗೆಯ ತರಕಾರಿಗಳ ನಾಟಿ ತಳಿಗಳ ಬೀಜಗಳು ಈ ಬೀಜ ಬ್ಯಾಂಕ್‌ನಲ್ಲಿ ಲಭ್ಯವಿವೆ. ಬೀಜ ಬ್ಯಾಂಕಿನಲ್ಲಿ ಬೀಜದ ಸಂಗ್ರಹಣೆಯನ್ನು ಕಾಪಾಡಲು ಹಾಗೂ ಹೆಚ್ಚಿಸಲು ರೈತರು ಪಡೆದುಕೊಳ್ಳುವ ಬೀಜಕ್ಕೆ ಪ್ರತಿಯಾಗಿ ಬೆಳೆ ಬಂದ ನಂತರ ಅದರ ದುಪ್ಪಟ್ಟು ಬೀಜವನ್ನು ಬೀಜ ಬ್ಯಾಂಕಿಗೆ ಹಿಂದಿರುಗಿಸುವ ಕರಾರನ್ನು ಹಾಕಲಾಗುತ್ತದೆ. ಶ್ರೀ ಶಂಕರ ಲಂಗಟಿಯವರನ್ನೊಳಗೊಂಡಂತೆ ಇತರೆ ಸದಸ್ಯ ರೈತರು ಸಕ್ರಿಯವಾಗಿ ಬ್ಯಾಂಕಿನ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇವರು ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದಾರೆ. ಆದ್ದರಿಂದ ಕೃಷಿ ಇಲಾಖೆಯು ಗುಂಡೇನಟ್ಟಿಯನ್ನು ಸಾವಯವ ಗ್ರಾಮವಾಗಿ ಘೋಷಿಸಿದೆ. ಇಂದು ರೈತರು ಕೂಲಿಯಾಳುಗಳ ಸಮಸ್ಯೆಯನ್ನು ಎದುರಿಸುತ್ತಿರುವುದು ಸಾಮಾನ್ಯ ಅಷ್ಟೇ ಅಲ್ಲ ಕೂಲಿಯ ದರವೂ ವರ್ಷದಿಂದ ವರ್ಷಕ್ಕೆ ದುಬಾರಿಯಾಗುತ್ತಿದೆ. ಆದರೆ ಗುಂಡೇನಟ್ಟಿ ಗ್ರಾಮವು ಈ ಸಮಸ್ಯೆಯಿಂದ ಹೊರಬರಲು ದಿಟ್ಟ ಹೆಜ್ಜೆ ಹಾಕಿದೆ. ಹಳ್ಳಿಯ ಜನರು ಅಗತ್ಯವಿದ್ದಾಗ ಒಬ್ಬರ ಹೊಲಕ್ಕೆ ಇನ್ನೊಬ್ಬರು ಹೋಗಿ ಕೆಲಸ ಮಾಡುವ ಮುರಿಯಾಳು ಪದ್ಧತಿಯನ್ನು ಪಾಲಿಸುತ್ತಿದ್ದಾರೆ. ಹಣಕ್ಕೆ ಬದಲಾಗಿ ಕಡಪಾಲು ಹಂಚಿಕೊಳ್ಳುವ ವ್ಯವಸ್ಥೆ ಆಚರಣೆಯಲ್ಲಿದೆ.

ತಾವು ಹಾಗೂ ಇತರೆ ರೈತರು ಬೆಳೆದ ಧಾನ್ಯಗಳನ್ನು ಪ್ರತಿ ಗುರುವಾರ ಶ್ರೀ ಲಂಗಟಿಯವರು ಧಾರವಾಡದ ಪ್ರತಿಷ್ಠಿತ ಗಾಂಧಿ ಶಾಂತಿ ಪ್ರತಿಷ್ಠಾನದ ಎದುರು ಮಾರಾಟ ಮಾಡುತ್ತಾರೆ. ಸಾವಯವ ಕೃಷಿ ಪದ್ಧತಿಯ ಮೂಲಕ ಬೆಳೆದ ಆ ಪದಾರ್ಥಗಳಿಗೆ ಧಾರವಾಡದ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆಯಿದೆ.

ಶ್ರೀ ಶಂಕರ ಲಂಗಟಿಯವರು ಆಧ್ಯಾತ್ಮದಲ್ಲೂ ವಿಶೇಷ ಆಸಕ್ತಿಯನ್ನು ಹೊಂದಿದ್ದಾರೆ. ತತ್ವಾನ್ವೇಷಣ ಮಂದಿರವೇ ಮೊದಲಾದ ಸ್ಥಳಗಳಲ್ಲಿ ಆಯೋಜಿಸಲ್ಪಡುವ ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಶ್ರದ್ಧೆಯಿಂದ ಭಾಗವಹಿಸುತ್ತಾರೆ. "ಅಂಬಲಿ ಕಂಬಳಿ ರಾಸ್ತಿ ಮಿಕ್ಕಿದೆಲ್ಲಾ ಜಾಸ್ತಿ" ಎಂದು ನಂಬಿ ನಡೆಯುತ್ತಿರುವ ಶ್ರೀ ಎಸ್.ಎಸ್. ಕುರುಬರ ಗುರುಗಳ ಆದರ್ಶವನ್ನು ವಿಶೇಷವಾಗಿ ಗೌರವಿಸುತ್ತಾರೆ. ಅಲ್ಲದೇ ದೇಶೀ ತಳಿಗಳನ್ನು

ಬೆಳೆಯಲು, ಬೆಳೆದದ್ದನ್ನು ಮಾರಾಟ ಮಾಡಲು ಅಗತ್ಯ ನೆರವು–ಮಾರ್ಗದರ್ಶನ ನೀಡುತ್ತಿರುವ ಶ್ರೀ ಶಿವರಾಜ ಹುನಗುಂದರವರನ್ನು ಹೃದಯಪೂರ್ವಕವಾಗಿ ಸ್ಮರಿಸುತ್ತಾರೆ.

ಶ್ರೀ ಶಂಕರ ಲಂಗಟಿಯವರ ಈ ಎಲ್ಲಾ ಸಾಧನೆಗಳನ್ನು ಗುರುತಿಸಿ ವಿವಿಧ ಸಂಘ ಸಂಸ್ಥೆಗಳವರು ಅವರನ್ನು ಸನ್ಮಾನಿಸಿದ್ದಾರೆ. ಆರ್ಟ್ ಆಫ್ ಲೀವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿಯವರು ವಿಷಮುಕ್ತ(ರಾಸಾಯನಿಕ ರಹಿತ) ಕೃಷಿಯಲ್ಲಿ ನಿರತರಾದ ಇವರಿಗೆ 'ಕೃಷಿ ಋಷಿ' ಎಂಬ ಬಿರುದಿನಿಂದ ಸನ್ಮಾನಿಸಿದ್ದಾರೆ. ಬೆಂಗಳೂರು, ಧಾರವಾಡದ ಕೃಷಿ ವಿಶ್ವವಿದ್ಯಾಲಯಗಳು, ಬೆಳಗಾವಿ, ಖಾನಾಪೂರಗಳ ತೋಟಗಾರಿಕಾ ಇಲಾಖೆಗಳು, ಆರ್ಗ್ಯಾನಿಕ್ ಫುಡ್ ಕ್ಲಬ್ ಯಮಕನಮರಡಿ ಇವೇ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳು ಇವರನ್ನು ಗೌರವಿಸಿವೆ. ಈ ಪ್ರಶಸ್ತಿಗಳ ಪಟ್ಟಿಗೆ ಮತ್ತೊಂದು ಸೇರ್ಪಡೆ ಭಾರತ ಸರ್ಕಾರದ ಕೃಷಿ ಸಚಿವಾಲಯದ 'ಸಸ್ಯ ತಳಿಗಳ ಸಂರಕ್ಷಣೆಗೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ'ದಿಂದ ದೇಶೀ ತಳಿಗಳ ಸಂರಕ್ಷಣೆಗಾಗಿ ನೀಡುವ ಪ್ರಶಸ್ತಿಯಾಗಿದೆ.

'ತನ್ನನ್ನು ಕೆಳಗೆ ಒತ್ತುತ್ತಿರುವ ಪರಿಸರ ಹಾಗೂ ಪರಿಸ್ಥಿತಿಗಳಲ್ಲಿ ಒಂದು ಜೀವಿಯ ವಿಕಸನ ಮತ್ತು ಮುನ್ನಡೆಯೇ ಜೀವನ' ಎಂಬ ಸ್ವಾಮಿ ವಿವೇಕಾನಂದರ ಉಕ್ತಿಗೆ ವ್ಯಾಖ್ಯಾನವೀಯುವ ಜೀವನವನ್ನು ಶ್ರೀ ಶಂಕರ ಲಂಗಟಿಯವರು ಸಾಗಿಸುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ಕಡುಬಡತನದ ಬೇನೆಯುಂಡರೂ ಛಲದಿಂದ, ಸತತ ಪ್ರಯತ್ನದಿಂದ ಸಾಧನೆಯ ಮೆಟ್ಟಿಲುಗಳನ್ನೇರುತ್ತಿದ್ದಾರೆ. ಅಲ್ಲದೇ ಕೇವಲ ಜೀವನೋಪಾಯಕ್ಕಾಗಿ ಕೃಷಿಯನ್ನವಲಂಬಿಸದೇ, ದೇಶೀ ತಳಿಗಳ ಸಂರಕ್ಷಣೆಗಾಗಿ ಪರಿಸರದ ಉಳಿವಿಗಾಗಿ ಪರಿಶ್ರಮಿಸುತ್ತಿರುವ ಶ್ರೀ ಶಂಕರ ಲಂಗಟಿಯವರ ದಾರಿಯನ್ನು ನಮ್ಮೆಲ್ಲಾ ಅನ್ನದಾತರು ತುಳಿಯಲಿ ಎಂಬುದೇ ನಮ್ಮ ಸದಾಶಯ.

*****

**ಲೇಖಕರು**

ಡಾ. ತೇಜಸ್ವಿನಿ ಬಿ.ಯಕ್ಕುಂಡಿ ಮಠ ಅವರು ಬರೆದಿರುವ 'ಅರ್ಥಾಯಣ–ವೃಕ್ಷಾಯಣ' ಪುಸ್ತಕದಿಂದ ಈ ಲೇಖನವನ್ನು ಆಯ್ದುಕೊಳ್ಳಲಾಗಿದೆ. ಓದುಗರ ಮನಸ್ಸಿನ ಅಂಗಳದಲ್ಲಿ ಅರ್ಥಶಾಸ್ತ್ರದ ಚುಕ್ಕಿಗಳನ್ನಿಟ್ಟು, ಆಧ್ಯಾತ್ಮ ಚಿಂತನೆಯ ಎಳೆಗಳನ್ನೆಳೆಯುತ್ತ ಲೋಕಹಿತ ಚಿಂತನೆಯ ಬಣ್ಣಗಳನ್ನು ತುಂಬಿದ ಅದ್ಭುತ ರಂಗೋಲಿ ಈ ಹೊತ್ತಿಗೆ. ಬೆಲೆ, ಬೇಡಿಕೆ, ಹೂಡಿಕೆ ಇಂತಹ ಸಂಗತಿಳನ್ನಷ್ಟನ್ನೇ ಚರ್ಚಿಸುವ ಅರ್ಥಶಾಸ್ತ್ರವೆಂದರೆ ಜನಸಾಮಾನ್ಯರಿಗೆ ಅರ್ಥವಾಗಲು ಕಠಿಣವೆನಿಸುವ ವಿಷಯವೆಂಬ ಜನಜನಿತವಾದ ಅಭಿಪ್ರಾಯವನ್ನು ಸಂಪೂರ್ಣವಾಗಿ ಬದಲಿಸಬೇಕಾದರೆ ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ ಅವರ ಬರಹವನ್ನು ಓದಬೇಕು.

**ಆಶಯ**

ರೈತರ ಯಶೋಗಾಥೆಯನ್ನು ರಚಿಸುವಲ್ಲಿನ ಎಲ್ಲಾ ಸೂಕ್ಷ್ಮತೆಯನ್ನು ಈ ಲೇಖನ ಒಳಗೊಂಡಿದೆ. ರೈತನೊಬ್ಬನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಾಜ ಸೇವೆ ಹೀಗೆ ಎಲ್ಲ ಬಗೆಗಿನ ಆಯಾಮಗಳನ್ನು ಲೇಖನ ಚಿತ್ರಿಸುತ್ತದೆ. ಇದೊಂದು ರೀತಿಯಲ್ಲಿ ಕೃಷಿ ವಿಜ್ಞಾನದ ವಿದ್ಯಾರ್ಥಿಗಳಿಗೆ ಮಾದರಿ ಯಶೋಗಾಥೆಯ ಚಿತ್ರಣವಾಗಿದೆ.

**ಶಬ್ದಾರ್ಥಗಳು**

ಟ್ರಾನ್ಸಿಸ್ಟರ್ = ರೇಡಿಯೋ, ನವಧಾನ್ಯ= ಒಂಭತ್ತು ಬಗೆಯ ಧಾನ್ಯಗಳು, ದೇಶೀ ತಳಿ= ಸ್ಥಳೀಯ ತಳಿ

**ಮಾದರಿ ಪ್ರಶ್ನೆಗಳು**

1. ಕೃಷಿ ಋಷಿ ಶಂಕರ ಲಂಗಟಿಯವರ ಗ್ರಾಮ ಯಾವುದು?
2. ಲಂಗಟಿಯವರು ಕೃಷಿಗೆ ತೊಡಗಿಕೊಳ್ಳುವ ಮುನ್ನ ಯಾವ ಸ್ಥಿತಿಯಲ್ಲಿದ್ದರು?
3. ಲಂಗಟಿಯವರು ಪ್ರಗತಿಪರ ಕೃಷಿಕರಾಗಲು ಯಾವುದರಿಂದ ಉತ್ತೇಜಿತರಾಗಿದ್ದರು?
4. ಲಂಗಟಿಯವರು ಬೀಜ ಬ್ಯಾಂಕಿನಲ್ಲಿ ಯಾವ ತಳಿಗಳ ಸಂರಕ್ಷಣೆಗೆ ಮಾಡಿದ್ದರು ತಿಳಿಸಿ?
5. ತನ್ನ ಊರಿನಲ್ಲಿ ತಳಿಗಳ ರಕ್ಷಣೆಗಾಗಿ ಲಂಗಟಿಯವರು ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದ್ದರು?
6. ಲಂಗಟಿಯವರೇ ಸ್ವತಃ ಕೀಟನಾಶಕಗಳನ್ನು ಹೇಗೆ ಸಿದ್ಧಪಡಿಸಿಕೊಳ್ಳುತ್ತಿದ್ದರು?
7. ಲಂಗಟಿಯವರಿಗೆ ಯಾವ ಸಾಧನೆಗಾಗಿ 'ಕೃಷಿ ಋಷಿ' ಬಿರುದನ್ನು ನೀಡಲಾಯಿತು?

**ಹೆಚ್ಚಿನ ಓದು**

1. 'ಅರ್ಥಾಯಣ–ವೃಕ್ಷಾಯಣ', ಡಾ. ತೇಜಸ್ವಿನಿ ಯಕ್ಕುಂಡಿ ಮಠ, ಸ್ಪರ್ಧಾಸ್ಫೂರ್ತಿ ಪ್ರಕಾಶನ, ಧಾರವಾಡ–2014

ಕಥೆ

೧೪

# ನೀರು

**ಬಸವರಾಜು ಕುಕ್ಕರಹಳ್ಳಿ**

'ಏನಪ್ಪ ಈ ದಗೆ ಈ ಉಬ್ಬ ಉಸ್ಸಪ್ಪಾ. ಈ ಆಳಾದ ಮಳೆಗಳೂ ಉಯ್ಯಲ್ಲೊ. ಅಸುನಿ ಬತ್ತು ವೊಯ್ತು. ರೇವತಿ, ಭರಣಿ, ಉಬ್ಬೆ ಎಲ್ಲಾ ಮಳೆಗಳೂ ಬಂದೊ ವೋದೊ. ಒಂದೂ ಕಣ್ ಬುಟ್ಟು ನೋಡ್ಲಿಲ್ವಲ್ಲ? ದಗೆ ಕತ್ತಗೆ ಬೇಯತದೆಲ್ಲೊ ಪರಮಾತ್ಮ. ನಮಗೇ ಇಂಗಾದ್ರೆ ಇನ್ನು ಮುದುಕರು, ಮೋಟ್ರು ಎಂಗೆ ತಡಕಂಡರಪ್ಪ? ಊರಾದ ಊರೆ ಬ್ಯಾಸಗೆ ಜಳಕ್ಕೂ ಅದಕೂ ಜಿಗುಟದ್ರೆ ಜೀಂವ ಮೋಗಂಗದೆ. ಜನಗಳು ಎಂಗೋ ಅಂಗೇ ಮಳೆಗಳೂ ಅದೂ ತಕೊ. ಇನ್ನೊಂದದೆ ಕೆರೆ ಕಟ್ಟೆ ಒಂದ್ ಮಾಡೊ ರೋಣಿ ಮಳೆ. ಅದೂ ಕದ್ರೆ ಜನಾದನಾ ಎಲ್ಲಾ ಒಟ್ಟಿಗೆ ಊರು ಕೇರಿ ಬುಡದೇ' ಎಂದು ಸೆಕೆ ತಾಳಲಾರದೆ ಹನುಮಣ್ಣ ತನ್ನ ಮೈ ಮೇಲಿದ್ದ ಶರಟನ್ನು ತೆಗೆದು ಒಂದು ಮೂಲೆಗೆ ಎಸೆದು ತನ್ನ ಮನೆಯೊಳಗೆ ಆತುಕೊಂಡು ಬಿದ್ದಿದ್ದ.

ಸುತ್ತಮುತ್ತಲಿನ ಹಳ್ಳಿಗಳು ಅಲ್ಲಿಯ ಜನರು ಮಳೆ ಇಲ್ಲದೆ ಬೆಳಸು ಕಾಣದೆ ಊರಿಗೆ ಕವುಚಿಕೊಂಡಿರುವ ಬರದ ಬವಣೆಯಲ್ಲಿ ಬಳಲುತ್ತಿದ್ದರು. ಅನ್ಯಮಾರ್ಗ ಕಾಣದ ಜನರು ಮಳೆ ತರುವ ಸಿಳ್ಳಪ್ಪನ ನೆನೆಯುತ್ತಿದ್ದರು. ಅವನ ಜಾತ್ರೆಯನ್ನು ಮಾಡಬೇಕೆಂದು ಊರೂರಿಗೆ ಪತ್ರ ಬಿಟ್ಟಿದ್ದರು. ಇದು ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಚಾರವಾಯಿತು. ಜನ ಹೌದು ಹೌದು ಮಾಡಬೇಕೆಂದರು. ಮೂರಕ್ಷರ ಕಂಡಿರುವ ಹುಡುಗರು ಮಾತ್ರ ಈ ಹಬ್ಬದ ಹಿಂದಿರುವ ಮೂಢನಂಬಿಕೆಯನ್ನು ಹೀಗಳೆದರು. ಇವಕ್ಕೆಲ್ಲಾ ಮಳೆ ಬರುವಂತಿದ್ದರೆ ಕತ್ತೆ ಮೆರವಣಿಗೆ ಮಾಡಿದ ಊರುಗಳಲ್ಲೆಲ್ಲಾ ಮಳೆ ಬರಬೇಕಿತ್ತೆಂದು ಗೇಲಿ ಮಾಡುತ್ತಿದ್ದರು.

ಊರ ಹಿರಿಯರು ಮುಖಂಡರು ಇದು ಊರು ಹಾಳುಮಾಡುವ ಕೂಳೆ ಹುಡುಗರ ಬುದ್ಧಿ ಎಂದು ಲೆಕ್ಕಿಸದೆ, ಹಬ್ಬದ ದಿನವನ್ನು ನಿಗದಿಪಡಿಸಿದರು. ಅಕ್ಕಪಕ್ಕದ ಊರುಗಳಿಂದೆಲ್ಲಾ ಹಬ್ಬದ ಬಗ್ಗೆ ಸಮ್ಮತಿ ಸೂಚಿಸಿ, ಊರಿನ ಮುಖ್ಯಸ್ಥರು ಖುದ್ದಾಗಿ ಬಂದು ಸುದ್ಧಿ ಮುಟ್ಟಿಸಿ, ಜಾತ್ರೆಯ ರೂಪರೇಖೆ ಚರ್ಚಿಸಿ ತೀರ್ಮಾನ ಕೈಕೊಳ್ಳುವಂತೆ

ಹೇಳಿಹೋದರು. ಅಂದುಕೊಂಡಂತೆ ಸಿಳ್ಳಪ್ಪನ ಜಾತ್ರೆ ಬಂತು. ಸುತ್ತೆಲ್ಲಾ ಊರುಗಳ ಜನ ಜಾತ್ರೆಗೆ ಸೇರಿದರು. ಅಂದು ದೂಪದೀಪ ಹೆಚ್ಚಾಗಿ ನಡೆಯುತ್ತಿತ್ತು. ಜಾತ್ರೆ ಮುಗಿದು ಮಂಗಳಾರತಿ ಎತ್ತುವ ಸಮಯ. ಇನ್ನೇನು ಮುಗಿಯಿತು ಎನ್ನುತ್ತಿದ್ದಂತೆ ಆಕಾಶದಲ್ಲಿ ಮೋಡ ಆಡುವುದಕ್ಕೆ ಸುರುವಾಯಿತು. ಇಸಾನಿ ಮೂಲೆಯಲ್ಲಿ ತಳಾರ್ನೆ ಮಿಂಚೇರಿತು. ಸಿಳ್ಳೊಡೆದು ಗುಡುಗುತ್ತಾ ಮಳೆ ಬಂತು. ಜನ ಬಾಯಿಯ ಮೇಲೆ ಬೆರಳು ಇಟ್ಟುಕೊಂಡರು. 'ನೋಡದ್ರ್ಯ ಸಿಳ್ಳಪ್ಪನ ಮಹಿಮೆ, ಕಣ್‌ಕಾಣದ ಜನ ಅಂತದಲ್ಲ'! ಎಂದು ಅವನ ಮಹಿಮೆಯ ಹೊತ್ತುಕೊಂಡು ಮೆರೆಯುತ್ತಿದ್ದರು. ಬಂದ ಮಳೆ ಬಿಡದೆ ಸುರಿಯುತ್ತಿತ್ತು. ಬಂದಿದ್ದ ಜನ ಎಲ್ಲೆಲ್ಲಿದ್ದರೋ ಅಲ್ಲಲ್ಲೆ ತಂಗಿದರು. ಊರಾದ ಊರೆ ಎಷ್ಟೊತ್ತಿಗೆ ಮಳೆ ನಿಂತರೂ ಸರಿಯೆ. ಬೇಕಾದರೆ ನೇಗಲಿಗೆ ಲಾಟೀನ ಕಟ್ಟಿಕೊಂಡು ಹೊಲ ಉಳುವುದಾಗಲಿ ಎಂದು ತಣ್ಣಗೆ ಯೋಚಿಸುತ್ತಿದ್ದರು. ಮಳೆ ಬಿಡದೆ ಸುರಿಯುತ್ತಿತ್ತು.

ಊರಿನ ಕೆರೆ ಸುತ್ತೆಲ್ಲಾ ಊರಿಗೂ ದಾತನಾಗಿದ್ದ ದೊಡ್ಡಕೆರೆ. ಇದರ ಸುತ್ತಾ ಎದೆಯ ಸೀಳಿಕೊಂಡು ಮಲಗಿದ್ದ ಹಳ್ಳದಲ್ಲಿ ಹರಿಯುವುದು ಪನ್ನೀರು. ಅದು ಕೋಡಿ ಬಿದ್ದು ಹೊರಳಿದರೆ ಮರಳುತ್ತಿದ್ದವು. ಮರಳಿ ಮೀನುಗಳು. ಅವ ಆತುಕೊಳ್ಳಲು ಸಾಲಾಗಿರುವ ಹೊಂಗೆ ಮರಗಳ ಮೇಲೆ ಕುಳಿತಿರುತಿದ್ದವು ಕೊಕ್ಕರೆಗಳು. ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ಸುತ್ತೆಂಟು ತಿಟ್ಟುಗಳಿಂದ ನೂರೆಂಟು ಹೊಳ್ಳಗಳಾಗಿ ಸದು ಸಿಕ್ಕಿದ ಕಡೆಯಲೆಲ್ಲಾ ಹರಿದು ನೀರು ನುಗ್ಗಿ ಬಂದು ಕೆರೆಯ ಸೇರುತ್ತಿತ್ತು.

ನೀರು ಸೇರಿದಂತೆ ಕೆರೆಯ ಹಿಗ್ಗುತ್ತಿತ್ತು. ಕೆರೆ ಹಿಗ್ಗಿ ಹಿಗ್ಗಿ ವಜನ್ ತಡೆಯಲಾರದೆ ಕೆರೆಯ ಏರಿಯು ಕಿತ್ತು ಗಾಢವಾದ ಕತ್ತಲೆಯ ಮೌನವ ಸೀಳಿ ಕೆರೆಯು ಬಯಲಾಯ್ತು. ಮೌನವಾಗಿದ್ದ ಈ ರಾತ್ರಿಯಲ್ಲಿ ನುಗ್ಗಿದ ನೀರಿನಿಂದ ಎದ್ದ ಸದ್ದಿಗೆ ಸಕಲ ಪ್ರಾಣಿ ಪಕ್ಷಿಗಳಿಗೆ ನಿದ್ರಾಭಂಗವಾಯ್ತು. ದನಕರುಗಳು ಎದ್ದು ಮೈ ಬದಲಿಸಿದವು. ಜನ ನಿದ್ರೆ ಕಳೆದುಕೊಂಡು ಜಾತ್ರೆಗೆ ಹೋಗಿದ್ದ ತಮ್ಮ ಮನೆಯ ಜನರ ನೆನೆಯುತ್ತಿದ್ದರು. ತುಂಬಿ ತುಳುಕುತ್ತಿದ್ದ ಕೆರೆ ಬೆಳಕು ಹರಿಯುವುದರಲ್ಲಿ ಇದ್ದು ಇಲ್ಲದಂತಾಯ್ತು. ಅದು ಎಬ್ಬಿಸಿ ಹೋದ ಸದ್ದು ಜನರ ಕಿವಿಗಳಲ್ಲಿ ಮೊರಗರಿಯುತ್ತಿತ್ತು.

ಈ ಗುಡಿಸಲು ಗಿಡಗಳ ಮೇಲೆ ಗೂಡು ಕಟ್ಟಿ ಗೌಜಲಕ್ಕಿಗೆ ಗೆಜ್ಜಲಾಗಿತ್ತು. ಈ ಗುಡಿಸಿಲಿನಲ್ಲಿ ಸೂಲು ಎರಡಾಗಿ ಎರಡು ನಾಕಾಗಿ ಸೂಲಾಡುತ್ತಿದ್ದವು. ಈ ಅಗಾದ ಶಕ್ತಿಯ ಗಂಗವ್ವ ಕರುಣೆ ತೋರದೆ ಭೋರ್ಗರೆಯುತ್ತಾ ಬಂದವಳೆ ತನಗೆ ಸರಿಸಾಟಿಯಿಲ್ಲದ ಈ ಗುಡಿಸಿಲನ್ನು ಸೆಳೆದು ಚಿಂದಿ ಚಿಂದಿಯ ಮಾಡಿದಳು. ಅದು ಸೆತ್ತೆ ಸಿದಕಲುಗಳಲ್ಲಿ ತರಗೆಲೆಯ ಚೂರು ಚೂರುಗಳಂತೆ ಸಿಕ್ಕಿಕೊಂಡಿತು. ಏಕಾಂಗಿಯಾಗಿ ಮಲಗಿ ಸೂಲಾಡುತ್ತಿದ್ದ ಜವರಣ್ಣನ ಜೀವವು ಇದರ ರಭಸಕ್ಕೆ ಕೊಚ್ಚಿಕೊಂಡು ಹೋಗಿ ಗೊಬ್ಬಳಿ ಮರದಲ್ಲಿ ಸಿಕ್ಕಿಯಾಕಿಕೊಂಡು ನರಳಾಡುತ್ತಿತ್ತು. ಇವನ ಮುಂದೆಯೇ ಕಾಡೆಣಗಳಿಗೆ ಆಶ್ರಯವಾಗಿದ್ದ ದೈತ್ಯಾಕಾರದ ಆಲದಮರ ಕೈಬೀಸಿ ಕರೆವಂತೆ ಸುಂಯ್ಯೆಂದು ಗಾಳಿ ಬೀಸಿತು. ಅದರ ಪಕ್ಕವೇ ಸುಂಟರಗಾಳಿ ಎದ್ದು ಗಿರಿಯಮ್ಮನನ್ನು ಹೊತ್ತು ಒಯ್ಯುತ್ತಿದ್ದಾಗ

ತಡೆದಿಟ್ಟುಕೊಂಡು ಮನೆಯವರಿಗೆ ಒಪ್ಪಿಸಿದ್ದ ಸೀಗೆ ಬೇಲಿ ಅಡ್ಡಗಟ್ಟಿತ್ತು. ಅದು ಹುಣಸೆ ಮರಗಳ ಒತ್ತಾಸೆಯಿಂದ ಗೀ ಎನ್ನುತ್ತಿದ್ದ ದಿವಾನರ ಮಾವಿನ ತೋಪಿನಲ್ಲಿ ಲೀನವಾಗಿತ್ತು. ಇದಕ್ಕೆ ತಗುಲಿಕೊಂಡಂತೆ ತಂಪಿನ ದೊಡ್ಡಮ್ಮ, ಸಿದ್ರಾಶ್ಯಾಮೆಯ ಸಿದ್ಧಪ್ಪಾಜಿ, ಸಿಡಿ ಮಾರಮ್ಮನವರು, ಸಿಳ್ಳೊಡೆವ ಸಿಳ್ಳಪ್ಪನವರು ಈ ದೇವಮಾನವರು ಇದನ್ನು ನೋಡುತ್ತಾ ಹಟ ತೊಟ್ಟಂತೆ ಜಾಗ ಬದಲಿಸದೆ ದೃಷ್ಟಿ ನೆಟ್ಟು ನಿಂತೇ ಇದ್ದರು.

ಬೆಳಕು ಕಂಡ ಜನರು ಎದ್ದು ಬಿದ್ದು ಓಡುತ್ತಾ ಜಾತ್ರೆಗೋಗಿದ್ದ ಜನರ ಎದುರುಗೊಂಡರು. ಗುಂಪಲ್ಲಿ ತನ್ನ ಮನೆಯ ಜನಗಳ ಹುಡುಕಾಡಿದರು. ಜಾತ್ರೆಯಿಂದ ಬರುತ್ತಿದ್ದ ಜನ ಗಾಬರಿಯಾಗಿ ಏನೋ ಅಚಾತುರ್ಯ ನಡೆದಿರಬಹುದೆಂದು ತಿಳಿದು ಗಾಬರಿಯಾಯ್ತು. ದೊಡ್ಡಕೆರೆ ಒಡೆದು, ಸಿಕ್ಕಿದ ಜನ ದನಗಳ ಹೊತ್ತುಕೊಂಡು ಹೋಗಿದೆ ಎಂದಾಗ, ಇತ್ತಕಡೆಯಿಂದ ಇವರು ತಮ್ಮ ಮನೆಯ ಜನಗಳ ನೆನೆದು ಓಡಲು ಸುರುಮಾಡಿದರು. ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಜನ ಓಡಾಡುತ್ತಿದ್ದರು.

ಕೆರೆ ರಾತ್ರಿಯಲ್ಲದೆ ಬೆಳಿಗ್ಗೆ ಹೊಡೆದಿದ್ದರೆ ಇನ್ನಷ್ಟು ಜನ ಜಾನುವಾರುಗಳು ಹೋಗುತ್ತಿದ್ದವು ಎಂದು ಜನ ನೆನೆದು ಕಂಪಿಸುತ್ತಿದ್ದರು. ಅವರು ತಮ್ಮ ಹೊಲಗಳ ಕಾಣದಾದರು. ಹೊಲಗಳಲ್ಲಿದ್ದ ಮರಗಳ ಕಾಣರಾದರು. ಹೊಲಗಳಲ್ಲಿದ್ದ ಮೆದೆಗಳ ಕಾಣದಾದರು. ಅವುಗಳ ನೆನಪೂ ಅಳಿಸುವಂತೆ ನೀರು ಎಲ್ಲವನ್ನು ಕೊರೆದು ಗೋರಿ ತೆಗೆದುಕೊಂಡು ಹೊರಟೋಗಿತ್ತು. ಜನರು ಮೂಕಸ್ಮಿತರಾಗಿ ಬಾಯಿಂದ ಮಾತು ಕಡೆಸದೆ ಗಂಭೀರವಾಗಿದ್ದರು. ಮೂಡಳ್ಳಿ ಸಾಹುಕಾರ ಹೊಲದಲ್ಲಿ ಕಾವಲುಗಾರನಾಗಿದ್ದ ಜವರಣ್ಣನ ಗುಡಿಸಲೂ ನಾಪತ್ತೆಯಾಗಿರುವುದ ಕಂಡು ಚಲಿಸತೊಡಗಿದರು. ದಿಕ್ಕಿಗೂ ಕಣ್ಣಾಡಿಸಿ ನೋಡಿದರು ಜವರಣ್ಣನ ಗುಡಿಸಲೂ ಚಿಂದಿಚಿಂದಿಯಾಗಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪವೇ ಸಿಕ್ಕಿ ಕೊಂಡಿದ್ದು ಅದರ ಕುರುಹು ದೊರೆಯಿತು. ಜವರಣ್ಣನನ್ನು ಎತ್ತುಕೊಂಡು ಹೋಗಿ ಗೊಬ್ಬಳಿ ಮರಕ್ಕೆ ತುರುಕಿದ್ದುದ ಕಂಡರು.

ಇವನ ಜೊತೆಯಲ್ಲಿ ಹೆಂಡತಿ ಮಕ್ಕಳೂ ಇದ್ದಿದ್ದರೆ ಅವರಿಗೂ ಇದೇ ಗತಿಯಾಗುತ್ತಿತ್ತು. ಆದರೆ ಜವರಣ್ಣ ಅವರನ್ನು ನೆನ್ನೆಯೆ ಸಿಳ್ಳಪ್ಪನ ಜಾತ್ರೆಗೆ ಕಳುಹಿಸಿದ್ದ. ಅಂಗಾಗಿ ಅವರನ್ನು ಸಿಳ್ಳಪ್ಪನೇ ಕಾಪಾಡಿದ್ದ. ಆದರೂ ಜಾತ್ರೆ ಮುಗಿಸಿ ಅಂದು ಸಂಜೆಯೆ ಬರುವವಳಿದ್ದಳು ಹೆಂಡತಿ. ಆದರೆ ಮಕ್ಕಳು ಅನ್ನವನ್ನು ಕಂಡಾಗ 'ಅನ್ನ ಉಣಬೇಕು' ಎಂದು ಹಟ ಹಿಡಿದವು. ಆಗ ಇವಳು 'ತಾಡು ಬರವಳು ಬಂದಿವ್ನಿ ಐಕಳು ಅನ್ನ ಅನ್ನ ಅಂತ ಅಗರಿತವೆ ಉಣಕಳ್ಳಿ' ಎಂದು ಜಾತ್ರೆಯಲ್ಲಿ ನಡೆಯುತ್ತಿದ್ದ ಅನ್ನ ಸಂತರ್ಪಣೆಗಾಗಿ ಕಾದಿದ್ದಳು. ಅಲ್ಲದೆ ಮಳೆಯೂ ಸಂಜೆಗೆ ಸುರುವಾದಾಗ ಮಕ್ಕಳನ್ನು ಎಳೆದುಕೊಂಡು ಬರಲಾರದೆ ಅಲ್ಲೇ ತಂಗಿದ್ದಳು.

ಮರದಲ್ಲಿ ಸಿಕ್ಕಿಕೊಂಡಿದ್ದ ಜವರಣ್ಣನನ್ನು ಜ್ವಾಪಾನವಾಗಿ ಇಳಿಸುತ್ತಾ; ಅವನ ಚರ್ಮಕ್ಕೆ; ಮತ್ತೆ ಕೆಲವು ಅವನ ಮಾಂಸಖಂಡಗಳಿಗೆ ನುಗ್ಗಿದ ಗೊಬ್ಬಳಿ ಮುಳ್ಳನ್ನು

ಹಿಂದಾಕುತ್ತಿದ್ದರು. ನಂತರ ಅವನನ್ನು ತಂದು ಮಾಳದಲ್ಲಿ ಮಲಗಿಸಿದರು. ಅವನ ಮೈಯಲ್ಲಿ ಗೊಬ್ಬಳಿ ಮುಳ್ಳಾಡಿದುದರಿಂದಲೂ ರಾತ್ರಿ ಇಡೀ ದೇಹ ನೀರಿನಲ್ಲಿ ನೆನೆದುದರಿಂದಲೂ ಜವರಣ್ಣನ ಸ್ಥಿತಿ ಚಿಂತಾಜನಕವಾಗಿತ್ತು. ಅವನು ಕಣ್ಣು ಕಾಲು ತೇಲಿಸುತ್ತಾ ಮೇಲಿನ ಉಸಿರನ್ನು ಆಡಿಸುತ್ತಿದ್ದ. ಇವನ ಸ್ಥಿತಿಯನ್ನು ಕಂಡು ಗೋಳಾಡುತ್ತಿದ್ದ ಹೆಂಡತಿಯನ್ನು ನೋಡಲಾರದ ಜನ ತನ್ನ ಊರಿಗೆ ಕರೆದುಕೊಂಡು ಬಂತು. ಜವರಣ್ಣನನ್ನು ಮೈಸೂರಿಗೆ ಕರೆದುಕೊಂಡು ಹೋಗದೆ ಅವನನ್ನು ಬದುಕಿಸಲು ಸಾಧ್ಯವಿಲ್ಲ ಎಂದು ಜನ ತೀರ್ಮಾನಿಸಿ ಅವನ ದೇಹವನ್ನು ಬಸ್ಸು ನಿಲ್ಲುವ ಬುಗುರಿ ಮರದ ಕೆಳಗೆ ಮಲಗಿಸಿಕೊಂಡು ಬಸ್ಸಿಗಾಗಿ ಕಾಯುತ್ತಿದ್ದರು.

ಈ ಊರು ಹುಟ್ಟಿದಾಗಿನಿಂದಲೂ ಬಸ್ಸಿನ ಮುಖವನ್ನೆ ಕಾಣದಿದ್ದ ಈ ಊರಿನ ಜನಕ್ಕೆ ಒಳ್ಳೆಯದಕ್ಕು ಕೆಟ್ಟದಕ್ಕು ಕಾಲು, ಕಾಲುದಾರಿ ಎರಡೇ ನೆನಪು. ಮಂಡಲಪಂಚಾಯತಿ ಪ್ರಧಾನರು, ಸೆಕೆಟ್ರಿ, ಅವರು ಇವರು ಎಂದು ಎದ್ದುಕೊಂಡ ಮೇಲೆ ಅದೂ ಒಂದು ವಾರದಿಂದ ಊರಿಗೆ ಸಿಟಿ ಬಸ್ ಹಾಕಿದ್ದರು. ಅದೋ ಬರ್ ಎಂದು ಬಂದರೆ ಒಂದು ಬಾರಿ ಉಸಿರಾಡುವುದೋ ಇಲ್ಲವೋ ಕುಂತು ನಿಂತದ್ದವರೆಲ್ಲರನ್ನು ಏರಿಸಿಕೊಂಡು ಬರ್ರನೆ ಹೊರಟು ಬಿಡುತ್ತಿತ್ತು. ಅದು ಯಾಕೊ ಇಂದು ಹೊತ್ತು ಮೂಡಿ ಮಾರುದ್ದ ಬಂದಿದ್ದರೂ ಇನ್ನೂ ಬಂದಿರಲಿಲ್ಲ.

ಜವರಣ್ಣನ ಘಟ ಗೊಟಕ ಗೊಟಕ ಎನ್ನುತ್ತಿತ್ತು. ಹಳ್ಳಿಯಲ್ಲಿ ಜನ ಸೀರಿಯಸ್ ಆಗಿದ್ದರು. ಇವನು ಸಾಯುವುದು ಗ್ಯಾರಂಟಿ ಎಂದರು. ಊರಲ್ಲಿ ಹೆಣ ಬಿದ್ದರೆ ಮನೆಗೆ ನೀರು ತರುವುದು ಹ್ಯಾಗೆಂದು ಹೆಂಗಸರು ಮೊದಲೇ ಬಾವಿಗೂ ಮನೆಗೂ ಓಡಾಡುತ್ತಿದ್ದರು. ಜಾತ್ರೆಗೆ ಹೋಗಿದ್ದ ಎಷ್ಟೋ ಹುಡುಗರು ಇನ್ನೂ ಬಾರದಿರುವುದರಿಂದ ಇನ್ನೂ ಸಂಜೆಯ ತನಕ ಎಷ್ಟು ಹೆಣ ಬರುತ್ತವೋ ಎಂದು ಗಾಬರಿಯಾಗಿದ್ದರು. ಮೈಸೂರಿಗೆ ಜವರಣ್ಣನನ್ನು ತೆಗೆದುಕೊಂಡು ಹೋಗಿದ್ದರೆ ಬದುಕುತ್ತಿದ್ದ ಎಂದ ಕಂಡ ಕಂಡ ವಸ್ತುಗಳ ಮೇಲೆಲ್ಲಾ ಕಿಡಿ ಕಾರುತ್ತಿದ್ದರು. ಈ ಹಾಳಾದ ಬಸ್‌ಗೆ ಮೂರು ದಿಸಕೆ ಸಾಕಾಯ್ತೇನೋ? ಕಷ್ಟ ಸುಖಕ್ಕೆ ಇಲ್ದೆ ವೋದ್ದು ಆಮೇಲೆ ಬಂದರೆಷ್ಟು ಬರದೆ ಇದ್ದರೆಷ್ಟು ತಕೊ? ಇಷ್ಟೊತ್ತಾಗಾಗಲೆ ತಿರ್‍ಯಾಕತಿರ್ನಿಲ್ವ? ಎಂದು ಮಾತನಾಡಿಕೊಳ್ಳುತ್ತಿದ್ದರು.

ಕಾದು ಕೆಂಡವಾಗಿದ್ದ ಗಂಡಸರು ರಸ್ತೆ ಮಾಡಿಸಿದವನನ್ನು ತೆಗಳುತ್ತಾ; "ಆ ಪುಣ್ಯಾತ್ಮ ಪಕ್ಕದ ಊರನವರು ತೆಂಡ್ರ ತಕಂಡು ರಸ್ತೆ ಮಾಡಸ್ತಿನಿ ಅಂತ ಮಾಡಸದ, ಕಲ್‌ಗಳ ಮೇಲೆ ಮಣ್ಣಿಟ್ಟು ಬುಟ್ಟು ಹೋದ. ಒಂದು ಸರ್ತಿ ಮಳೆ ಹುಯ್ತು. ರಸ್ತಿಯಾದ ರಸ್ತೆಯೆಲ್ಲಾ ಹಲ್ ಕಿರಕತ್ತು. ಆ ಪಿಕಪ್ಪನ ತಾವು ಅದೇನು ರಸ್ತೆ ಕುಲವಯ್ಯಾ? ಈಸಿಪಾಟಿ ಹಿಟ್ಗಲ್‌ಗಳು ಮೆಡರಕ ನಿಂತಿವೆ. ಬಸ್ಸು ಹೊಯ್ತಿದ್ರೆ ದಡಗುಡತವೆ. ಒಳಗೆ ಕುಂತಿರವರ ಎತ್ತೆತ್ತಿ ಎಸಿತದೆ. ಇಂಥಾ ದಾರೀಲಿ ಎಂಥಾ ಬಸ್ಸಾದ್ರು ಕೆಟ್ಹೋಗದೆ ಪುರುವಾರವಾದ್ದ ತಕಳಿ" ಎಂದು ತಮ್ಮ ಕೈಗಳನ್ನು ಹೊಸೆಯುತ್ತಿದ್ದರು.

ಊರಿನ ಉಸ್ತುವಾರಿ ಸಿದ್ದಣ್ಣ ಊರಿನಲ್ಲೆಲ್ಲಾ ಸುತ್ತಾಡಿ ಮಕ್ಕಳು ಬಾರದೆ ಚಿಂತೆಯಲ್ಲಿದ್ದ ಜನಗಳಿಗೆ ಸಮಾಧಾನ ಹೇಳಿ ಬುಗುರಿ ಮರದ ಹತ್ತಿರಕ್ಕೆ ಬಂದ. ಇವನು ಪ್ಯಾಟೆ ಕಂಡಿರುವ ಮನುಷ್ಯ. ಅಲ್ಲದೆ ಗಿಲೀಟಿನ ಪಾರ್ಟಿ ಊರಿನಲ್ಲಿ ಜನಕ್ಕೆ ಪಿಂಚಣಿ ಕೊಡಿಸುವುದು, ಹಸು, ಕುರಿ, ಸಾಲ ತರಿಸುವುದು ಜನತಾ ಮನೆ, ಈಗೆ ಓಡಾಡಿಕೊಂಡಿದ್ದ ಅಸಾಮಿ.

ಬಂದವನೆ; 'ಐ ಇದ್ಯಾಕ್ರಯ್ಯ ಇನ್ನೂ ಅಂಗೆ ಕುಂತಿದಿರಿ; ಇವತ್ತು ಬಸ್ಸೆಲ್ಲಿ ಬಂದವು, ಬೇರೆ ಏನಾರು ಏರ್ಪಾಟು ಮಾಡಂವ ಹೆ ಗಾಡಿನಾದ್ರು ಕಟ್ಟಿ' ಎಂದ.

'ಇತ್ತಿಂದ ಗಾಡೀಲಿ ತಕವೋದರೆ ಅತ್ತಿಂದ ಗಾಡೀಲಿ ಹೆಣ ತರಬೇಕಾಯ್ತೆ ಅಷ್ಟೆ' ಎಂದ ಅದಕೊಬ್ಬ.

'ಮಂತೆ ಬಸ್ ಬರಲ್ವಲ್ಲ ಏನ್ ಮಾಡಿರಿ'

'ಬಸ್ ಬರದೆ ಎಲ್‌ಗೋದ್ದು; ವಸಿ ಹಿಂದು ಮುಂದು ಬತ್ತದೆ' ಎಂದು ಅದಕೊಬ್ಬ.

ಐ ಇವತ್ತು ಬಸ್‌ಗಳು ಬಸ್ ಸ್ಯಾಂಡ್‌ನಿಂದ ಒಂದು ಯಜ್ಜೆ ಕಿತ್ತರೆ ವುಳಕಳಂಗಿದ್ದದ್ರಯ್ಯಾ ಆತರವಾಗಿ ಆಡ್ರ ಮಾಡಿ ಮೈಸೂರಾದ ಮೈಸೂರೆ ಕೂಗತಾ ಕುಂತದೆ'!

'ಅದ್ಯಾಕ್ಲ ಸಿದ್ದ'?

'ಐ ಕಟ್ಟೆ ನೀರಗೆ ತಗರಾಲಾಗಿ ಕುಂತಿಲ್ಲವಾ'?

'ಅಂಗಂದರೆ'?

ಅಂಗಂದರೆ, 'ಕನ್ನಂಬಾಡಿ ಕಟ್ಟೆ ನೀರ ನಮಗೂ ಬುಟ್ಟುಕೊಡಿ ನಮ್ಮ ಹೊಲಗದ್ದೆಗಳೂ ನೀರಿಲ್ದೆ ಒಣಹೋಗಿ ನಿಂತವೆ ಅಂತ ತಮಿಳ್ನಾಡನವರು ಕೊಯ್ರಿ ಆಕಂಡು ಕುಂತಿಲ್ವ?' ಸಾಲದದಕೆ ಡಿಲ್ಲಿಯಿಂದಲೇ ಆಡ್ರ ಮಾಡ್ಸವ್ರೆ?

'ಅದಕೆ?'

'ಅದಕೇ ನಮ್ಮ ಮಿನಿಷ್ಟ್ರು, ಎಂಲ್ಲೆ, ಎಂಪಿಗಳು ನಮಗೆ ತಿಕ ತೊಳಕಳಕ್ಕೆ ನೀರಿದ್ರೆ ಮೊಖ ತೊಳಕಳಕ್ಕಿಲ್ಲ. ಮೊಖ ತೊಳಕಂಡ್ರೆ ತಿಕ ತೊಳಕೊಳಕ್ಕಿಲ್ಲ ಇನ್ನೂ...... ನೀವು ವಲಕ್ಕೋದ್ರಿ! ಇರದ್ನು ಏನಾರು ನಿಮಗೆ ಕೊಟ್ಟರೆ ನಮ್ಮ ಬಾಯಿಗೆ ಮಣ್ಣೇ. ಸಾಲದದಕೆ ಜನ ನಮ್ಮನ ಸುಮ್ಮನೆ ಬುಟ್ಟದಾ? ಅಂತ ತಗರಾಲ್‌ಗಿಳ್ದು ಏಡ್ ಕಡೆಯವರೂ ಕುಣಿತಾ ಕುಂತವ್ರೆ.'

'ಅದಕೆ?'

'ಅದಕೇ ಇವತ್ತು ಅತ್ತಲ ಗುಲಬರ್ಗಾ ಧಾರವಾಡದಿಂದ ಇಡದೂ ಇಡೀ ಸ್ಯೆಟನಲ್ಲೆ (ಸ್ಟೇಟ್) ಎಲ್ಲೂ ಒಂದು ಬಸ್ಸು ರೈಲು ತಿರುಗಾಡದಂಗೆ ಅಂಗಡಿ

ಮುಂಗಟ್ಟುಗಳು ಸುದಾ ಬಾಗಲ ಬಿಚ್ಚಿದಂಗೆ ಬಂದ್ ಮಾಡಿ ನಮ್ಮ ನೀರು ನಮಗೆ ಬ್ಯಾರಿಯವರಿಗೆ ಒಂದು ಅನಿ ಮುಕ್ಕಾ ಕೊಡಕ್ಕಾಗಲ್ಲ ಅಂತಿಲ್ವ?'

'ತಗಿಯಯ್ಯ ಇದ್ಯಾವ ಮಾತು ಅಂತ ಆಡಯಿ. ಚಿನ್ವಲ್ಲ, ಚಿಗ್ರಲ್ಲ ಕುಡಿಯ ನೀರ್ಗೆ ತಗ್ರಾಲ!?'

'ಚಿನ್ನಾದ್ರೂ ಮಡಿಕಕೆ ಆದ್ದಯ್ಯ? ಅದೂವೆ ಸರಕಾರದ ಲೆಕ್ಕಕ್ಕೆ ಸೇರದದಲ್ವ? ಈ ಚಿನ್ನ, ಬೆಳ್ಳಿ, ಕಬ್ಬಿಣ ನೀರು ಇವು ಯಾರೊಬ್ಬರ ಸ್ವತ್ತಲ್ಲ'

ಅಂಗಾದ್ರ ದಾವಾರದವ್ರು ಮನೆ ಬಾಗ್ಲಗೆ ಬಂದು ಒಂದು ಗಳಾಸ್ ನೀರ್ ಕೊಡಿ ಅಂದರೆ ಅದ್ಯಾವ ಜಲ್ಮವಯ್ಯ ಇಲ್ಲ ಅನ್ನದು.

'ಕುಡಿಯಕ್ಕೆ ಒಂದು ಗಳಾಸ್ ಇಲ್‌ದಿದ್ರೆ ಒಂದು ಚೊಂಬನೆ ಕೊಡಂವ ಅದಕಲ್ಲ? ಆದರೆ ನಮ್ಮ ತಾವು ಇರದು ಒಂದು ಮಡಕೆ ನೀರು. ನೀನು ಬಂದು ಒಂದು ಆಳಗೆ ನೀರ್ ಕೊಡು ಅಂದ್ರೆ ಎಂಗ್ಯಪ್ಪ

ಕ್ಯಾಣವಾದ ಜನ 'ನಮ್ಮ ನೀರ ನಾವು ಇಷ್ಟ ಬಂದಂಗೆ ಬಳಸ್ಗಳಕ್ಕೆ ಅದೆಂತಾ ಕೊಯ್ತಿಲಾ ಸಿದ್ಧ. ನಮಗೇ ಕುಡಿಯ ನೀರ್ಗೆ ಎಷ್ಟು ಕಷ್ಟ. ನಮ್ಮ ಬಾವಿಗಳೆಲ್ಲಾ ಸುಂಡೋಗಿ ನೀರಿಲ್ದೆ ನೀ ಕಂಡಂಗೆ ಎಷ್ಟು ಅನವಾಸ ಪಡತಾ ಇವಿ. ಮೂರು ಗಂಟೆ ರಾತ್ರಿಗೇ ಹೋಗಿ ಬಾಂವಿಗಿಳಿದು ಜಲ ಬಂದಿದಾ ನೋಡಕಂಡು ಇದ್ದ ನೀರ ಬಟ್ಟೇಲಿ ವಂಟಗ ಬಂದು ಸೋಸ್ಗ ಕುಡಿತೀವಲ್ಲ ಅದ್ನ ಯಾರೂ ಕೇಳಕ್ಕಾಗಲ್ವ?'

'ಛೆ...ಛೆ... ಅಂಗಲ್ಲ ಕಣಣ್ಣ ಇದು. ಇದರ ಯವಾರನೇ ಬ್ಯಾರೆ. ನಿಮ್ಮನೇಲಿ ನೀವು ನೆಲಬಾವಿ ತೋಡಸ್ಗಂಡು ನೀರ ಕುಡದ್ರೆ ನೀ ಹೇಳತರದಲ್ಲಿ ಅದು ಸರಿ. ಅದು ನಿನ್ನ ಇಚ್ಚೆ ನಿನ ಸ್ವತಂತ್ರ. ಆದರೆ ಅದೇ ಸರಕಾರದವರು ಬಂದು ಬೋರಿಂಗ್ ಹಾಕಸ್ದರೆ; ಅದು ನಿನ್ನೊಬನಿಗ್ಯೊ ಅಥವಾ ಸರ್ವೆಂಟು ಜನಕ್ಕೊ?'

ವರಸೆಗೆ ವರಸೆ ಕೊಡಲು ಇಡೀ ಅಂಗಾಂಗಳನ್ನು ರೆಡಿಮಾಡಿ ಕೊಂಡವನೊಬ್ಬ ಪಾತಾಳದಿಂದ ಮಾತೊಂದು ಎಳೆದು ವಗೆದ.

'ಅಲ್ಲಪ್ಪ ಸಿದ್ಧ; ಸರಿ ಕಣಯ್ಯ ನಿನ್ನ ಮಾತು ನಿನ್ನ ಮಾತನಂತೆ ಆ ಬೋರಿಂಗು ಸರ್ವೆಂಟು ಜನಕ್ಕೂ ಸೇರಬೇಕು! ದೂರಕ್ಕೆ ಹೋಗದು ಬ್ಯಾಡ. ನಮ್ಮೂರ್ಲೆ ನಡಿಯ ಇಷಯನೆ ತಕಳಂವೆ. ಇದೇ ಗೌರ್ಮೆಂಟನವರು ಬಂದು ಇದು ಇಡೀ ಊರವರಿಗೆ ಅಂತ ಒಂದು ಬೋರಿಂಗ್ ಹಾಕಸ್ದ್ರು. ಅದು ಲಿಂಗಾಯಿತರ ಕೇರಿ ಸೇರಕತ್ತು. ನಿನ್ನ ಮಾತನ ಸರಕಾರ, ಅದು ಸರ್ವೆಂಟು ಜನಕ್ಕೂ ಅಂದ ಮೇಲೆ ನಮ್ಮ ಕೇರಿಯವರನ್ನ ಯಾಕೆ ನೀರ್ ತಕಳಕ್ಕೆ ಸೇರಗೊಡಲ್ವಲ್ಲ?'

ಸಿದ್ಧ 'ಅದು ಬ್ಯಾರೆ' ಎಂದ.

'ಅದೆಂಗ್ಲ ಅದು ಬ್ಯಾರಿಯಾದದು. ನಮ್ದು ಚಿಕ್ಕದು, ನಮ್ಮ ನಮ್ಮಲ್ಲೆ ಅದೆ. ಈಗ ನಡಿತಾ ಇರದು ದೊಡ್ಡದು ಅಷ್ಟೆ. ಅದಕಾಗಿ ನಮ್ಮೂರಲ್ಲಿ ಜಗಳ ಕಲಿಯಾಗಿ

ಎಷ್ಟು ಜನರ ಬುಂಡೆ ಹೊಡೆದೋಗಿ ಹೆಣಗಳೂ ಬಿದ್ದೊ. ಇದನ ನೀನು ಯಾಕಯ್ಯ ಕೇಳಬಾರದು. ಇವತ್ತೂ ಈಗ ಮುಕ್ಷ ನಾವು ಏಡು ಪರ್ಲಾಂಗು ದೂರದಿಂದಲೇ ನೀರೊರತಾವಿಯಲ್ಲ?'

'ಅಂಗಾರೆ ನೀನು ಹೇಳದು ಇದನಾ ಇನ್ನೂ ದೊಡ್ಡದು ಮಾಡಬೇಕು ಅನ್ನಪ್ಪ?' ಛೆ.... ಛೆ.... ನಾ ಹೇಳದು ಅಂಗಲ್ಲ ಕಣಯ್ಯ. ನಮ್ಮ ಇವ್ನು ಹೇಳದಂಗೆ ದಾವಾರದವರು ಬಾಗ್ಲಲ್ಲಿ ನಿಂತು ಒಂದು ಗಳಾಸ್ ನೀರ್ ಕೊಡ್ರಯ್ಯ ಅಂದರೆ ಎಂಥಾ ಜಲ್ಮನೂ ಇಲ್ಲ ಅನ್ನಲ್ಲ. ಕೊಟ್ಟೇ ಕೊಡತದೆ. ಆದರೆ ಈ ನೀರಿನ ತಗರಾಲು ಒಳಗೂ ಅದೆ. ಹೊರಗೂ ಅದೆ. ಇದು ಅಮೃತ. ಸರ್ವೆಂಟು ಕೆಲಸಕ್ಕೆ ಬೇಕಾದ್ದು. ಇದನ ಎಲ್ಲ ಜನವೂ ಕೂತಗಂಡು ಒಳ್ಳೆ ತರದಲ್ಲಿ ಧರ್ಮ, ಕರ್ಮ ತೂಕ ಮಾಡಿ, ನಾವು ನಾವೇ ಸರವೋಗಸ್ಗಂಡು ಅಂಚಗ ಕುಡಿಬೇಕು ಅನ್ನದಷ್ಟೆ.

ಜನ ಅವರಿಗೆ ತಿಳಿದಂತೆ ಔಷಧಿ ಮಾಡುತ್ತಾ ಜವರಣ್ಣನ ಸುದರಾಯಿಸಲು ಪ್ರಯತ್ನ ಮಾಡುತ್ತಿದ್ದರು. ಮೈಗೆಲ್ಲಾ ಉಪ್ಪಿನ ಶಾಖ ಕೊಡುತ್ತಿದ್ದರು. ಕೆಲವು ಬಿಸಿನೀರಿನ ಶಾಖ ಕೊಡುತ್ತಿದ್ದರು. ನಡುವೆ ಯಾಕೊ ಹೊಟ್ಟೆ ಉಬ್ರಾನಿಗೆ ಎಂದು ಹೆಗ್ಗಣದ ಪಿಕ್ಕೆ ಕಲಸಿ ಹೊಟ್ಟೆಗೆ ಬೆಜ್ಜರ ಹಾಕುತ್ತಿದ್ದರು. ಅಷ್ಟರಲ್ಲಿ ಕೆಲವು ಜನ ಬಂದ್ರೂ, ಬಂದ್ರೂ ಎಂದು ಕೂಗಿದರು. ಆ ಕಡೆಯಿಂದ ಕತ್ತಿನಲ್ಲಿದ್ದ ಚೌಕಗಳನ್ನು ಕುಣಿಸುತ್ತಾ ಒಂದೇ ಬೀಸಿನಲ್ಲಿ ಜಾತ್ರೆಗೆ ಹೋಗಿದ್ದ ಹುಡುಗರು ಬರುತ್ತಿದ್ದರು. 'ಥೂ ನಿಮ್ಮ ಬಾಯಿಗೆ ಮಣ್ಣಾಕ ನಮ್ಮ ಕೈ ಕಾಲ ಬುಡಸಿದ್ರೆಲ್ಲೋ' ಎಂದು ಹುಡುಗರ ಜೊತೆ ಹೋಗಿದ್ದ ದೊಡ್ಡವನೊಬ್ಬನಿಗೆ ಜನವೆಲ್ಲಾ ತಗುಳಕೊಂಡರು. 'ಅಲ್ಲ ಕಣಯ್ಯ ನೆನ್ನೆಯ ಜಾತ್ರೆ ಬುಟ್ಟಂತಲ್ಲ, "ಅರಿದ ಐಕಳ ಕಟಗಂಡು ಎಲಗೋಗಿದ್ದೆ" ಎಂದರು.

ಅವನು 'ಕಟ್ಟೆಗೆ ನೀರು ಬಂದದೆ ಅಂದ್ರು. ನಡಿರ್ಲ ಅಲ್ಲೂ ನೊಡಕ ಬರಂವಾ ಅಂತ ನಡಕಾ ಹೊಂಟೋದ್ದೋ ಎಂದ.' ಜನ ಬಯ್ಯುವುದನ್ನ ನಿಲ್ಲಿಸಿ 'ಸದ್ಯ ಬಂದ್ರಲ್ಲ' ಎಂದು ನಿಟ್ಟುಸಿರಿಟ್ಟರು. ಅದೇ ಗುಂಪಿಗೆ ಸೇರಬೇಕಾಗಿದ್ದವನು ಬೆರಳ ಕಡಿಯುತ್ತಾ 'ಅಂಗಾರೆ ಕಟ್ಟೆಗೆ ನೀರು ಬಂದಿದಾ' ಎಂದ.

ಬೊಡ್ಡಡ್ಡೆ 'ನೀರು ಬಂದಿದ್ದು!' ಈ ನಮ್ಮ ಸಣ್ಣ ಕೆರೆಗೇ ಇಷ್ಟು ನೀರು ಬಂದು ತಡಕನಾರದೆ ಕಿತ್ತಗ ಹೋಗಿರಾಗ ಕಟ್ಟೆಗೆ ಬಂದಿಲ್ವಾ? ಬಂದು ತುಂಬಿ ಮದನಾಡಿದಂತೆ.

ಕೆಲವರು 'ನಾವು ಹೋಗಿ ನೋಡಬೇಕು ಕಣ್ರಲಾ' ಎನ್ನುತ್ತಿದ್ದರು.

ಈ ಸಂಭಾಷಣೆಯ ಮಧ್ಯದಲ್ಲಿ ಜವರಣ್ಣ ನಳ್ಳಾಡತಾ 'ನೀರು' ಎಂದ. ಹೆಂಡತಿ ಮಕ್ಕಳ ಕಣ್ಣೀರು ಜನರು ತಂದು ಹುಯ್ದು ತಣ್ಣೀರು, ಜವರಣ್ಣನ ಬಾಯಿನಿಂದ ಮಾತು ತಂದವು.

ಜನ "ಜೀಂವ ವುಳಿಸದೂ ನೀರೆ; ಕಳಿಯದೂ ನೀರೆ ಬಡ್ಡೀ ಮಗನ ದೇವರು ಎರಡನೂ ಅದರಲ್ಲೆ ಇಟ್ಟವನಲ್ಲ? ತಿಳಿದ ಬಡ್ಡೆತ್ತವು ಇದ ಕಾಣದ ಕತ್ತಗೆ ಉರಿತವೆ" ಎಂದರು.

*****

## ಲೇಖಕರು

ಬಸವರಾಜು ಕುಕ್ಕರಹಳ್ಳಿ (1955) ಅವರು ಮರಿಮಲ್ಲಪ್ಪ ಕಿರಿಯ ಕಾಲೇಜಿನಲ್ಲಿ ಗ್ರಂಥಪಾಲಕರಾಗಿ ನಿವೃತ್ತರಾಗಿದ್ದಾರೆ. ದಲಿತ ಲೋಕವನ್ನು ತಮ್ಮ ಕತೆಗಳಲ್ಲಿ ದೇವನೂರ ಮಹದೇವ, ಅರವಿಂದ ಮಾಲಗತ್ತಿ, ಮೊಗಳ್ಳಿ ಗಣೇಶ, ಮನ ಜವರಯ್ಯ ಮುಂತಾದವರು ಪ್ರಕಟಿಸುತ್ತಿರುವವರು. ಈ ಸಾಲಿನಲ್ಲಿ ಕುಕ್ಕರಹಳ್ಳಿ ಅವರು ಕೂಡ ಸೇರುತ್ತಾರೆ. ಅವರ ಈಚಿನ ಕಥಾ ಸಂಕಲನದ ಹೆಸರು ಪುನುಗ.

## ಆಶಯ

ಪ್ರಸ್ತುತ ಕತೆಯನ್ನು ಕುಕ್ಕರಹಳ್ಳಿಯವರ 'ಮೊಕಾರ' ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಈ ಕತೆಯು ಮಾನವ ಬದುಕಿಗೆ ನೀರಿನ ಮಹತ್ವವನ್ನು ತಿಳಿಸಿಕೊಡುತ್ತದೆ. ನೀರು ಹೇಗೆ ಜೀವನಕ್ಕೆ ಕಾರಣವಾಗುತ್ತದೆಯೋ ಹಾಗೆಯೇ ಅದು ಸಾವಿಗೂ ಕಾರಣವಾಗುತ್ತದೆ. ಅದನ್ನು ಹಂಚಿಕೊಂಡು ಬಳಸದಿದ್ದರೆ, ಮನುಷ್ಯರ ನಡುವಿನ ಕಲಹಗಳಿಗೂ ಕಾರಣವಾಗುತ್ತದೆ ಎಂಬುದನ್ನು ಕತೆ ಸೂಚ್ಯವಾಗಿ ಹೇಳುತ್ತದೆ. ಕತೆಯು ನದಿನೀರಿನ ಹಂಚಿಕೆ ವಿಷಯದಲ್ಲಿ ಎರಡು ರಾಜ್ಯಗಳು ಮನಸ್ತಾಪದ ವಾತಾವರಣ ಮಾಡಿಕೊಳ್ಳುವುದನ್ನು ವಿಡಂಬಿಸುತ್ತದೆ.

## ಶಬ್ದಾರ್ಥಗಳು

ಆಳಾದ=ಹಾಳಾದ, ಮೋಟ್ರು=ವಯಸ್ಸಾದವರು, ಮೋಗಂಗದೆ=ಹೋಗುವ ಹಾಗಿದೆ, ರೋಣಿ=ರೋಹಿಣಿ, ಕದ್ರೆ=ಕೈಕೊಟ್ಟರೆ, ಇಸಾನಿ= ಈಶಾನ್ಯ, ತಳಾರ್ನೆ= ಫಳಾರನೆ, ತಿಟ್ಟು =ದಿಬ್ಬ, ಸದು=ಜಾಗ, ವಜನ್=ಒತ್ತಡ, ಕೊತ್ತಿ =ಬೆಕ್ಕು, ಮೊರಗರಿ=ಪ್ರತಿಧ್ವನಿಸು, ಸತ್ತೆ ಸೆದಕಲು=ಕಸಕಡ್ಡಿ, ಗೋರಿ=ಬಾಚಿಕೊಂಡು, ಗೊಬ್ಬಳಿಮರ=ಜಾಲಿಮರ, ತಾಡು=ತಾಳು, ಐಕಳು=ಮಕ್ಕಳು, ಅಗರಿತವೆ=ಗೋಗರಿಯುತ್ತವೆ, ಮಾಳ=ಮೈದಾನ, ಘಟ=ದೇಹ, ತೆಂಡ್ರ=ಕಂಟ್ರ್ಯಾಕ್ಟು, ಕಿರಕತ್ತು= ಕಿರಿದುಕೊಂಡಿತು, ಪಿಕಪ್ಪನತಾವು=ಪಿಕ್‌ಅಪ್ ಮಾಡುವ ಜಾಗ, ಈಪಿಪಾಟಿ = ಇಷ್ಟಿಷ್ಟು ಗಾತ್ರದ, ಮೆಡರಕ=ನಿಗುರಿ, ಕಟ್ಟೆ =ಅಣೆಕಟ್ಟು, ತಗ್ರಾಲ=ತಕರಾರು, ಕೊಯ್ರಿ=ವಿಚಾರಣೆ, ಏಡ್=ಎರಡೂ, ದಾವಾರ =ಬಾಯಾರಿಕೆ, ಅಳಗೆ=ಮಣ್ಣಿನ ಗುಡಾಣ, ಕ್ಯಾಣ=ಕೋಪ, ಸಂಡೋಗಿ=ಒಣಗಿಕೊಂಡು ಹೋಗಿ, ಅನವಾಸ=ಕಷ್ಟ, ಇವಿ=ಇದ್ದೀವಿ, ಬುಂಡೆ=ಬುರುಡೆ, ಪಿಕ್ಕೆ=ಹಕ್ಕೆ, ಬೆಜ್ಜರ=ಲೇಪನ, ಅರಿದ=ಅರಿಯದ, ಜಿಂವ=ಜೀವ, ಕತ್ತಗ=ಹತ್ತಿಕೊಂಡು, ಅಂಚಗ=ಹಂಚಿಕೊಂಡು

## ಪ್ರಶ್ನೆಗಳು

1. ಊರಿನ ಜನರು ಯಾವ ಜಾತ್ರೆಗೆ ಹೊರಟಿದ್ದರು?
2. ಊರಿನ ಜನರಿಗೆ ಮಳೆಯ ಬಗೆಗಿನ ನಂಬಿಕೆ ಎಂತಹದು?
3. ಮಳೆ ಬಿದ್ದ ಪರಿಣಾಮದಿಂದ ಯಾವ ರೀತಿಯ ಅನಾಹುತಗಳಾದವು?
4. ಜವರಣ್ಣನನ್ನು ಬದುಕಿಸಲು ಮಾಡುವ ಯತ್ನ ಏಕೆ ವಿಫಲವಾಯಿತು?

5. ಊರಿಗೆ ಬಸ್ ಬರದಿರಲು ಕಾರಣವೇನು?

6. ಈ ಕತೆಯಲ್ಲಿ ಕುಡಿಯುವ ನೀರಿನ ಬಗ್ಗೆ ನಡೆಸುವ ಚರ್ಚೆಗಳಾವವು?

7. ಜವರಣ್ಣನ ಬಾಯಿಯಲ್ಲಿ ಬರುವ ಕೊನೆಯ ಉದ್ಗಾರವೇನು?

8. ನೀರು ಕತೆಯ ಆಶವೇನು?

**ಹೆಚ್ಚಿನ ಓದು**

1. 'ನೀರು ತಂದವರು' ಕತೆ, ಲೇ: ಅಮರೇಶ ನುಗಡೋಣಿ

2. 'ಹೇಮಾವತಿ ನದಿಯ ತೀರದಲ್ಲಿ' ಪ್ರಬಂಧ ಲೇ: ಗೂರೂರು ರಾಮಸ್ವಾಮಿ ಅಯ್ಯಂಗಾರ್

3. 'ಅಕ್ಕಿ ಹೆಬ್ಬಾಳು' ಪ್ರಬಂಧ, ಲೇ: ಎ.ಎನ್. ಮೂರ್ತಿರಾವ್

೧೫

# ಕಾಡಿನಲ್ಲಿ ಕಳೆದ ಒಂದಿರುಳು

**ಕುವೆಂಪು**

ಸಂಜೆಗೆ ಮುನ್ನವೆ ಊಟ ಮಾಡಿದೆವು. ಒಬ್ಬೊಬ್ಬರು ಎರಡೆರಡು ಹೆಗ್ಗಂಬಳಿಗಳನ್ನು ಹೆಗಲ ಮೇಲೆ ಹಾಕಿಕೊಂಡು, ತೋಟಾಕೋವಿಗಳನ್ನು ಹಿಡಿದುಕೊಂಡು ಮನೆಯಿಂದ ಹೊರಟು ಕಾಡಿನ ಕಡೆಗೆ ನಡೆದೆವು. ನಮ್ಮ ಹಣ್ಣಿನ ಮರದ ಅಟ್ಟಣೆ ಮನೆಯಿಂದ ದೂರ ಅರಣ್ಯದ ನಡುವೆಯಿತ್ತು. ಕತ್ತಲಾದ ಮೇಲೆ ಕಾಡಿನಲ್ಲಿ ದಾರಿ ಹುಡುಕುವುದು ಕಷ್ಟವೆಂದು ತಿಳಿದು ಸ್ವಲ್ಪ ಮುಂಚಿತವಾಗಿಯೆ ಹೊರಟಿದ್ದೆವು!

ಸಾಯಂಕಾಲವಾಗಿದ್ದರೂ ನೇಸರು ಇನ್ನೂ ಮುಳುಗಿರಲಿಲ್ಲ. ನಾವು ಬೆಟ್ಟವೇರಿದೆವು ಮೊದಲು ಆಗ್ನೇಯಮುಖವಾಗಿ, ತರುವಾಯ ಈಶಾನ್ಯದ ಕಡೆಗೆ, ಬನಗಳೆಲ್ಲ ಬೈಗುಗೆಂಪಿನಿಂದ ತೊಯ್ದು ಹೋಗಿದ್ದವು. ಮುಕ್ಕಾಲು ಮೂರುವೀಸ ಪಾಲು ಹಕ್ಕಿಗಳೆಲ್ಲ ಗೊತ್ತು ಸೇರಿದ್ದುವು. ಎಲ್ಲಿಯೋ ಒಂದೆರಡು 'ಕಾಜಾಣ'ಗಳು ಆಲಾಪನೆ ಮಾಡುತ್ತಿದ್ದವು. ಪಡುವಣ ದೆಸೆಯ ಕೆಮ್ಮುಗಿಲು ನೋಡುವುದಕ್ಕೆ ಮನೋಹರವಾಗಿದ್ದರೂ ಕಾಲವಿಳಂಬವಾದರೆ ಕಷ್ಟಕ್ಕೆ ಈಡಾಗುವೆವೆಂದು ತಿಳಿದು ಬೇಗಬೇಗನೆ ಮುಂನಡೆದೆವು. ನಾವು ಮುಂಬರಿದಂತೆಲ್ಲ ಕಾಂತಿಹೀನವಾಗುತ್ತ ಕಡೆಗೆ ಮುಚ್ಚಂಜೆಯ ಮಬ್ಬು ಕವಿಯಿತು. ಸೂರ್ಯನೂ ಮಲೆನಾಡಿನ ಉನ್ನತ ಗಿರಿವನಶ್ರೇಣಿಗಳ ಶಿಖರ ಪ್ರಾಂತದಿಂದ ಪಡುಗಡಲಿಗೆ ಉರುಳಿಬಿಟ್ಟನು. ಎಲ್ಲ ನಸುಗಪ್ಪಾಯಿತು.

ಬೇಗಬೇಗನೆ ನಡೆದೆವು. ಅರಣ್ಯ ನಿಬಿಡತರವಾದಂತೆಲ್ಲ ಮೆಲ್ಲ ಮೆಲ್ಲನೆ ಮಾತಾಡತೊಡಗಿದೆವು. ಹೊದರುಗಳು ನಡುವೆ, ಇಲ್ಲದ ಹಾದಿಯನ್ನು ಊಹಿಸಿ ಧಾವಿಸಿದೆವು. ಬನಗತ್ತಲು ಹೆಚ್ಚುತ್ತಿತ್ತು. ಮುಡಿಗೆದರಿ ನಿಂತ ಎತ್ತರವಾದ ಹೆಮ್ಮರಗಳ ನಡುನಡುವೆ ತಾರಕಿತ ನೀಲಾಕಾಶ ಅಲ್ಲಲ್ಲಿ ಗೋಚರವಾಗುತ್ತಿತ್ತು. ದಾರಿಗೆ ಅಡ್ಡವಾಗಿ ಬೆಳೆದ ಮುಳ್ಳುಬಳ್ಳಿಗಳನ್ನು ಎಡುವುತ್ತ ಗುಡ್ಡವೇರಿದವು. ಕಾಡಿನೊಳಗೆ ಹೋದಂತೆಲ್ಲ ತಿಮಿರದೊಡನೆ ಮೌನವೂ ಇಮ್ಮಡಿಯಾಯಿತು. ಜೊತೆಗೆ ಒಂದು ವಿಧವಾದ ಭಯವೂ ಪ್ರೇತದಂತೆ ನಮ್ಮ ಸುತ್ತಲೂ ಸುಳಿದಾಡಿತು.

ನಾವು–ನಾನು, ತಿಮ್ಮು, ಓಬು–ನಮ್ಮ ಗೊತ್ತುಗಳನ್ನು ಸೇರಿದಾಗ ಎಲ್ಲ ಕಪ್ಪಾಗಿ ಹೋಗಿತ್ತು. ಪಿಸುಮಾತುಗಳಿಂದ ಒಬ್ಬರನ್ನೊಬ್ಬರು ಬೀಳ್ಕೊಂಡೆವು. ಒಬ್ಬರಿಗೊಬ್ಬರು ಎಚ್ಚರಿಕೆ ಹೇಳಿದೆವು. ಒಬ್ಬರಿಗೊಬ್ಬರು ಧೈರ್ಯ ಹೇಳಿದೆವು. ಆದರೆ ನಿಜವಾಗಿ ಒಬ್ಬರಿಗೆ ಇನ್ನೊಬ್ಬರ ಧೈರ್ಯವಾಗಿತ್ತೆ ಹೊರತು ಧೈರ್ಯ ಒಬ್ಬರಲ್ಲಿಯೂ ಇರಲಿಲ್ಲವೆಂದೇ ತೋರುತ್ತದೆ.

ನಮ್ಮ ಹಣ್ಣಿನ ಮರ ಒಂದು ದೊಡ್ಡ ಕಾಡುಮಾವಿನ ಮರವಾಗಿತ್ತು. ಅದರ ಸುತ್ತಮುತ್ತಲಿದ್ದ ಮರಗಳಲ್ಲಿ ಅಟ್ಟಣೆಗಳನ್ನು ಕಟ್ಟಿದ್ದೆವು. ನನಗೂ ತಿಮ್ಮುಗೂ ಸುಮಾರು ಇಪ್ಪತ್ತು ಗಜ ದೂರ; ನನಗೂ ಓಬುಗೂ ಸುಮಾರು ಹದಿನೈದು ಗಜ ದೂರ. ಆದರೂ ಆ ಮಾರಿಕಾಡಿನಲ್ಲಿ ಜೊತೆಯವರು ಒಂದು ಮಾರು ದೂರವಿದ್ದರೂ ಹರಿದಾರಿ ದೂರವಿದ್ದಂತೆಯೆ ಭಾಸವಾಗವುದು. ನಾನು ನನ್ನ ಅಟ್ಟಣೆಯಿಂದ ಮೇಲೇರಿ ಅಟ್ಟಣೆಯಲ್ಲಿಟ್ಟು ಮರಳಿ ಕೆಳಗಿಳಿದೆ. ಕೋವಿಯಲ್ಲಿದ್ದ ತೋಟಾಗಳನ್ನು ತೆಗೆದು ಜೇಬಿಗೆ ಹಾಕಿಕೊಂಡು, ಬಂದೂಕನ್ನು ಕುತ್ತಿಗೆ ಕಂಕುಳುಗಳ ಸಹಾಯದಿಂದ ಭದ್ರವಾಗಿ ಹಿಡಿದುಕೊಂಡು, ಮರವನ್ನೂ ಜೀವವನ್ನೂ ಕೈಯಲ್ಲಿ ಹಿಡಿದುಕೊಂಡು ಅಟ್ಟಣೆಗೇರಿದೆ! ಅಲ್ಲಿ ಸ್ವಲ್ಪ ಹೊತ್ತು ನಿಟ್ಟುಸಿರೆಳೆದು ಎದೆಯ ಬಡಿತ ಸ್ವಲ್ಪ ಕಡಿಮೆಯಾದ ಮೇಲೆ ಒಂದು ಕಂಬಳಿಯನ್ನು ಹಾಸಿದೆ. ಇನ್ನೊಂದನ್ನು ಹೊದೆಯಲು ಇಟ್ಟೆ. ಜೇಬಿನಲ್ಲಿದ್ದ ಒಂದು ಚಿಕ್ಕ ಕಾಫಿಯ ಸೀಸೆಯನ್ನು ತೆಗೆದು ಒಂದು ಮೂಲೆಯಲ್ಲಿಟ್ಟೆ. ಇಟ್ಟವನು ಹಾಗೆಯೆ ಎತ್ತಿಕೊಂಡು ಸ್ವಲ್ಪ ಕಾಫಿಯನ್ನು ಬಾಯಿಗೆ ಸುರಿದುಕೊಂಡೆ. ಆ ಕತ್ತಲಲ್ಲಿ ಗುರಿ ತಪ್ಪಿ ಮೂಗಿಗಷ್ಟು ಹೋಯಿತು. ಕಾಡಿನಲ್ಲಿ ಬೇಟೆಗೆ ಹೋದಾಗ, ಅದರಲ್ಲಿಯೂ 'ಮರಸಿ' ಗೆ ಹೋದಾಗ ಸ್ವಲ್ಪವೂ ಸದ್ದು ಮಾಡಬಾರದರು. ಪ್ರಾಣಿಗಳಿಗೆ ಮನುಷ್ಯರಿರುವ ಸೂಚನೆ ಹೋದರೆ ಸಾಕು ಆ ಎಡೆಗೆ ಕಾಲಿಡುವುದೇ ಇಲ್ಲ. ಈ ವಿಚಾರವನ್ನು ಹಿರಿಯರಿಂದ ಕೇಳಿಯೂ ಇದ್ದೆ. ಹಿಂದೆ ಅನುಭವದಿಂದ ಅರಿತೂ ಇದ್ದೆ. ಆದರೇನು ಮಾಡುವುದು? ಹಾದಿ ತಪ್ಪಿದ ಕಾಫಿ ಶ್ವಾಸಕೋಶದ ಮಾರ್ಗವನ್ನು ಹಿಡಿದುಬಿಟ್ಟದ್ದರಿಂದ, ಸೀನು ಕೆಮ್ಮು ಎಲ್ಲ ಒಟ್ಟಿಗೆ ಬಂದುವು. ನಾನೂ ತಡೆದೆ, ತಡೆದೆ; ಕಡಗೆ ತಡೆದಷ್ಟೂ ಪ್ರಬಲವಾಗಿ ಟಗರಿನಂತೆ ಸೀನಿ, ಕೆಮ್ಮಿಯೂ ಬಿಟ್ಟೆ! ಕಾಡಿನಲ್ಲಿ ಕಡ್ಡಿ ಮುರಿದರೂ ದೊಡ್ಡ ಸದ್ದಾಗುತ್ತದೆ. ಮೌನ ಸರೋವರಕ್ಕೆ ಸ್ವನಮಹಿಷವು ಧುಮ್ಮಿಕ್ಕಿದಂತಾಗಿ ಒಂದು ಸಾರಿ ಕಾಡೆಲ್ಲ ಅಲ್ಲೋಲ ಕಲ್ಲೋಲವಾದಂತಾಯಿತು. ನಾನು ಮಾಡಿದ ತಪ್ಪಿನ ಮಹತ್ತು ನನಗಾಗ ಗೊತ್ತಾಗಲಿಲ್ಲ. ಬೆಳಿಗ್ಗೆ ಗೊತ್ತಾಯಿತು. ಓಬು ಕುಳಿತು ಎರಡು ನಿಮಿಷವಾಗುವುದರೊಳಗೆ ಒಂದು ಕಣೆಹಂದಿಯ ಹಿಂಡು ಹಣ್ಣಿನ ಮರಕ್ಕಾಗಿ ಬರುವುದನ್ನು ಕಂಡು ಆ ಕತ್ತಲಲ್ಲಿ ಬಹಳ ಶ್ರಮದಿಂದ ಗುರಿಯಿಡುತ್ತಿದ್ದನಂತೆ. ನಾನು ಸೀನಿದ ಹೊಡೆತಕ್ಕೆ ಅವುಗಳೆಲ್ಲ ಕಾಲಿಗೆ ಬುದ್ಧಿ ಹೇಳಿಬಿಟ್ಟುವಂತೆ. ಅವನಿಗೆ ನನ್ನ ಮೇಲೆ ಬಹಳ ಸಿಟ್ಟಾಗಿ ಶಪಿಸಿಬಿಟ್ಟನಂತೆ, ಮನದಲ್ಲಿಯೆ.

ಹುಣ್ಣಿಮೆಯಾಗಿ ಆಗಲೆ ಎರಡು ದಿನಗಳಾಗಿದ್ದವು. ಅದರಲ್ಲಿಯೂ ಚಂದ್ರನು ಪರ್ವತಗಳನ್ನು ಏರಿ ಮೇಲೆ ಬರುವುದು ಸ್ವಲ್ಪ ಹೊತ್ತು. ಆ ರಾತ್ರಿ ಸುಮಾರು ಹನ್ನೊಂದು ಗಂಟೆಯಾಯಿತೆಂದು ತೋರುತ್ತದೆ, ಅವನು ಕಾಣಿಸಿಕೊಳ್ಳಲು. ಅಂತೂ

ಕಗ್ಗತ್ತಲೆ ಕವಿದಿತ್ತು. ಕಾಡಿನಲ್ಲಿ ಕಗ್ಗತ್ತಲೆ ಎಂದರೆ ಹೇಗಿರುವುದೆಂಬುದನ್ನು ಅನುಭವದಿಂದ ತಿಳಿಯಬೇಕಲ್ಲದೆ ಬಣ್ಣಿಸಿದರೆ ಸಾಲದು. ಗಿಡಮರಗಳೆಲ್ಲ ಕತ್ತಲಲ್ಲಿ ಕರಗಿಹೋಗಿದ್ದುವು. ಸಮಸ್ತ ವಿಶ್ವವೂ ತಿಮಿರಬ್ರಹ್ಮಸಮಾಧಿಯಲ್ಲಿ ಲೀನವಾದಂತಿತ್ತು. ದೇಹದ ಅನುಭವ ಕೂಡ ಇರಲಿಲ್ಲ. 'ನಾನು' ಎಂಬ ಅಹಂಕಾರಭಾವವೊಂದೇ ಉಳಿದಿತ್ತು. ಆ ಮೌನವೂ ಕೂಡ ಕತ್ತಲೆಗೆ ಸರಿಸಮವಾಗಿಯೆ ಇತ್ತು. ಮುಟ್ಟಿ ಅನುಭವಿಸಬಹುದು ಎಂಬಂತಿತ್ತು. ಕ್ರಿಮಿಕೀಟಗಳ ವಿಷಣ್ಣ ಗಂಭೀರ ಧ್ವನಿಯೂ ಕೂಡ ಮೌನವನ್ನು ಮತ್ತಿನಿತು ಕೆಣಕಿ ರೇಗಿಸುವಂತಿತ್ತು. ಬಹುದೂರ ಕೆಳಗಡೆ ನಮ್ಮ ಮನೆಯಲ್ಲಿ ಬಗುಳುವ ನಾಯಿಯ ಕೂಗಿನಿಂದ ಮೌನ ಮಿಂಚಿದಂತಾಗುತಿತ್ತು. ದೂರ ಬಯಲಿನಲ್ಲಿ ಇರುಳ್ವಕ್ಕಿಯೊಂದರ ವಿಕಟಘೋಷ ಕರ್ಕಶವಾಗಿ ಕೇಳಿಬಂದು ಭಯವನ್ನು ಭಯಂಕರವನ್ನಾಗಿ ಮಾಡುತ್ತಿತ್ತು. ಒಂದೊಂದು ಸಾರಿ ಕಣ್ಣಿಗೆ ಏನೇನೋ ವಿಕಾರ ರೂಪಗಳು ಕಾಣಿಸಿದಂತಾಗಿ ಪುನಃ ಕತ್ತಲಲ್ಲಿ ಕರಗುತ್ತಿದ್ದವು. ಕೋವಿಗೆ ಪುನಃ ತೋಟಾಗಳನ್ನು ಹಾಕಿ ತುಸುಹೊತ್ತು ಕುಳಿತುಕೊಂಡೆ. ಆ ಕತ್ತಲಲ್ಲಿ ಆ ಮೌನದಲ್ಲಿ ಮೂರ್ಛೆ ಹೋಗಿದ್ದ ವನಪ್ರದೇಶವನ್ನು ಶೂನ್ಯದೃಷ್ಟಿಯಿಂದ ನೋಡಿನೋಡಿ ನನಗೂ ಬೇಸರವಾಯಿತು; ತಲೆ ಚಿಟ್ಟುಹಿಡಿಯಿತು; ತುಂಬಾ ರೇಜಿಗೆಯಾಯಿತು. ಚಂದ್ರ ಮೂಡುವವರೆಗೆ ಸ್ವಲ್ಪ ಮಲಗುವೆನೆಂದು ಬಗೆದು, ಕೋವಿಯನ್ನೆ ತಲೆದಿಂಬನ್ನಾಗಿ ಮಾಡಿಕೊಂಡು ಕಂಬಳಿಯನ್ನು ಮೈಮೇಲೆ ಎಳೆದುಕೊಂಡು ಮಲಗಿದೆ. ಹಾಗೆಯೆ ಜೊಂಪು ಹತ್ತಿತು.

ತುಸುಹೊತ್ತಿನಲ್ಲಿಯೆ ಯಾವುದೊ ಒಂದು ಸದ್ದಿನಿಂದ ಎಚ್ಚರವಾಯಿತು. ಮಲಗಿದ್ದ ಹಾಗೆಯೆ ಕಣ್ದೆರೆದೆ. ಅದೇ ಕಗ್ಗತ್ತಲೆ; ಕಣ್ಣಿರಿಯುವಂತಿತ್ತು. ಅದೇ ಮೌನ; ಮೂರ್ಛೆಗೊಳಿಸುವಂತಿತ್ತು. ಕಿವಿಗೊಟ್ಟು ಆಲಿಸಿದೆ. ನಾನು ಕುಳಿತಿದ್ದ ಮರದ ಬುಡದಲ್ಲಿ ಏನೋ ಸರಸರ ಸದ್ದಾದಂತಾಯಿತು. ಒಡನೆಯೆ ಭಯಂಕರವಾದ ಹೂಂಕೃತಿಗಳು ಕತ್ತಲೆಯ ಕಡಲಿನಲ್ಲಿ ತರಂಗತರಂಗವಾಗೆದ್ದುವು. ಮೊದಲು ನನಗೆ ಪ್ರಾಣಿ ಯಾವುದೆಂದು ಬಗೆಹರಿಯಲಿಲ್ಲ. ರಕ್ತನಾಳಗಳಲ್ಲಿ ಉದ್ವೇಗದ ಪ್ರವಾಹ ಸಂಚರಿಸಿತು. ಮೆಲ್ಲನೆ, ಬಹಳ ಜಾಗರೂಕತೆಯಿಂದ ಸ್ವಲ್ಪವೂ ಸದ್ದುಮಾಡದೆ ಅಟ್ಟಣೆಯಲ್ಲಿ ಎದ್ದು ಕುಳಿತುಕೊಂಡೆ. ಹಾಗೆಯೆ ಬಂದೂಕನ್ನು ಕೈಗೆ ತೆಗೆದುಕೊಂಡೆ. ಪ್ರಾಣಿ ಮಾವಿನ ಹಣ್ಣನ್ನು ಅಗಿಯುವ ಸದ್ದಾಯಿತು. ನೆಲವನ್ನು ಮೂತಿಯಿಂದ ಉಳುವ ಸದ್ದಾಯಿತು. ಜಂತು ವನವರಾಹವೆಂದು ನಿರ್ಧರಿಸಿದೆ. ಅದರ ಆಟೋಪದಿಂದ ಅದು ಬಹುದೊಡ್ಡ ಪ್ರಾಣಿಯಾಗಿರಬೇಕೆಂದೂ ಊಹಿಸಿದೆ. ನನಗೂ ಅದಕ್ಕೂ ಇಪ್ಪತ್ತು ಅಡಿಗಳ ದೂರವಿರಬೇಕೆಂದು ನಿರ್ಣಯಿಸಿದೆ. ಏಕೆಂದರೆ, ನಾನು ಕುಳಿತ ಅಟ್ಟಣೆ ಸುಮಾರು ಮೂವತ್ತು ಮೂವತ್ತೈದು ಅಡಿಗಳಷ್ಟು ಎತ್ತರವಿದ್ದರೂ ಬೆಟ್ಟ ಇಳಿಜಾರಾಗಿದ್ದುದರಿಂದ ಓರೆಯಲ್ಲಿ ಮೇಯುತ್ತಿದ್ದ ಸೂಕರ ನಿಕಟಸ್ಥವಾಗಿಯೆ ಇತ್ತು. ನನಗಿದ್ದ ನಯನೇಂದ್ರಿಯ ಶಕ್ತಿಯನ್ನೆಲ್ಲ ಉಪಯೋಗಿಸಿ ಸದ್ದಾಗುತ್ತಿದ್ದ ಕಡೆಗೆ ನೋಡಿದೆ. ಘನೀಭೂತವಾದ ಘೋರಾಂಧಕಾರ ಕಾಳಪಾಷಾಣಭಿತ್ತಿಯೋಪಾದಿಯಲ್ಲಿ ನನ್ನೆದುರು ನಿಂತಿತ್ತು. ವಸ್ತುಮಾತ್ರವಾದರೂ ಗೋಚರಿಸಲಿಲ್ಲ.

ಮುಂದೇನು ಮಾಡುವುದೆಂದು ಯೋಚಿಸಿದೆ. ತಿಲಮಾತ್ರವಾದರೂ ಬೆಳಕಿದ್ದರೆ ಅನಾಯಾಸವಾಗಿ ಪ್ರಾಣಿಯನ್ನು ಸುಟ್ಟುಬಿಡಬಹುದಾಗಿತ್ತು. ಎಲ್ಲಿಯಾದರೂ ಏನಾದರೊಂದು ಸೂಚನೆ ಸಿಗಬಹುದೆಂದು ಹಾರೈಸಿ ಕಣ್ಣು ದಣಿಯುವಂತೆ ಈಕ್ಷಿಸಿದೆ. ಏನೂ ಪ್ರಯೋಜನವಾಗಲಿಲ್ಲ. ಹತಾಶನಾಗಿ ಕುಳಿತುಬಿಟ್ಟೆ. ಮನಸ್ಸಿನಲ್ಲಿಯೆ ಅಯ್ಯೋ ಎಂದುಕೊಂಡೆ. ತರುವಾಯ ಈ ರೀತಿ ಸಮಾಧಾನ ಮಾಡಿಕೊಂಡೆ: ಪ್ರಾಣಿ ಹಣ್ಣು ತಿನ್ನುತ್ತ ಇದ್ದರೆ ಸ್ವಲ್ಪ ಹೊತ್ತಿನಲ್ಲಿಯೆ ಚಂದ್ರೋದಯವಾಗುತ್ತದೆ. ಆಗ ಸುಲಭವಾಗಿ ಸುಡಬಹುದು, ಎಂದು ತುಸುಹೊತ್ತು ಕಾದೆ. ಮನಸ್ಸು ತಾಳ್ಮೆಯಿಂದಿರಲಿಲ್ಲ. ಇದರರ್ಥವನ್ನು ಬೇಟೆಗಾರರು ಚೆನ್ನಾಗಿ ತಿಳಿಯಬಹುದು. ಕೈಯಲ್ಲಿ ಬಂದೂಕಿರುವಾಗ, ಜಂತು ಸಮೀಪದಲ್ಲಿರುವಾಗ, ಇಂದ್ರಿಯಗಳನ್ನೆಲ್ಲ ನಿಗ್ರಹಿಸಿದ ಎಂತಹ ತತ್ವಜ್ಞಾನಿಯಾದ ಬೇಟೆಗಾರನಾದರೂ ಕುದಿಯದಿರುವುದಿಲ್ಲ. ರಜೋಗುಣ ಉದ್ದೀಪನವಾಗಿ ವಿಲಯ ರುದ್ರಸ್ವಭಾವ ತಲೆದೋರುತ್ತದೆ. ಸಂಹಾರಲೋಲುಪತೆಯುಂಟಾಗುತ್ತದೆ. ಕಾರ್ಯಶಕ್ತಿ ಇಮ್ಮಡಿಸುತ್ತದೆ. ಧಮನಿಗಳಲ್ಲಿ ಭೈರವರಕ್ತ ಧುನಿ ಬೆದೆಗಾಲದ ಹೆಬ್ಬುಲಿಯಂತೆ ತಾಂಡವವಾಡುತ್ತದೆ. ಮನುಷ್ಯ ಶ್ಮಶಾನದ ಕಾಪಾಲಿಕನಾಗುತ್ತಾನೆ. ಅಂತೂ ನನಗೆ ತಾಳ್ಮೆ ತಪ್ಪಿತು. ಸದ್ದು ಬರುವ ತಾವನ್ನು ಊಹಿಸಿ ಗುರಿಯಿಟ್ಟು ಈಡು ಹಾರಿಸುವೆನೆಂದು ನಿರ್ಣಯಿಸಿದೆ. ಮತ್ತೆ ಸ್ವಲ್ಪ ಅಳುಕಿದೆ. ಏಕೆಂದರೆ ಸರಿಯಾಗಿ ಪರೀಕ್ಷಿಸದೆ ಗುಂಡು ಹೊಡೆದು ಎಷ್ಟೋ ಜನ ಬೇಟೆಗಾರರು ಕೊಲ್ಲಬಾರದ ಜಂತುಗಳನ್ನೂ, ಗೋವುಗಳನ್ನೂ ಕೂಡ, ಹೊಡೆದುಬಿಟ್ಟಿದ್ದಾರೆ. ಅದನ್ನು ಯೋಚಿಸಿಕೊಂಡು ಸ್ವಲ್ಪ ಸುಮ್ಮನಾದೆ. ತಿಂಗಳು ಮೂಡುವ ಚಿಹ್ನೆಯಾದರೂ ಇದೆಯೋ ಎಂದು ಗಗನ ಪರ್ಯಂತವಾಗಿ ಮೇಲೇರಿದ ಗಿರಿಯನ್ನು ನೋಡಿದೆ. ಎಲ್ಲ ತಿಮಿರತಲ್ಲೀನವಾಗಿ ಹೋಗಿತ್ತು. ಅಷ್ಟರಲ್ಲಿ ಹಂದಿ ಗಾಳಿ ಹಿಡಿಯುವ ಸದ್ದು ಕೇಳಿಸಿತು. ನಿಶ್ವಾಸೋಚ್ಛ್ವಾಸಗಳು ತಿದಿಯೊತ್ತಿದಂತೆ ಕೇಳಿದುವು. ಮನುಷ್ಯರ ವಾಸನೆ ಅದಕ್ಕೆ ಗೊತ್ತಾಯಿತೆಂದು ತೋರುತ್ತದೆ. ಒಂದೇ ಸಾರಿ ಹೂಂಕಾರಮಾಡುತ್ತ, ಗಿಡಮರಗಳನ್ನು ಮುರಿಮುರಿದು ಬೆಟ್ಟದ ನೆತ್ತಿಯಿಂದ ತಪ್ಪಲಿಗುರುಳುವ ಹೆಬ್ಬಂಡೆಯಂತೆ, ಆ ವನಸೂಕರವು ಧಡಧಡ ಎಂದು ಧಾವಿಸಿಬಿಟ್ಟಿತ್ತು. ಅದು ಅಡಿಯಿಟ್ಟ ರಭಸಕ್ಕೆ ಕಾಡುಗುಡ್ಡವೆಲ್ಲ ವಿಕಂಪಿಸಿದಂತಾಯಿತು. ಸದ್ದು ಬರಬರುತ್ತ ದೂರವಾಗಿ ಮರಳಿ ಬನದಿರುಳು ಸದ್ದಿಲಿಯಾಯಿತು.

ನಾನು ಸುಮ್ಮನೆ ಕಲ್ಲಾಗಿ ಕುಳಿತುಬಿಟ್ಟೆ. ದೂರದಿಂದ ಗೂಬೆಯ ಕೀಚು ದನಿಯೊಂದು ಶ್ಮಶಾನ ಪ್ರೇತದ ಕರ್ಕಶ ವಿಕಟ ಧ್ವನಿಯಂತೆ ಕೇಳಿಬಂತು. ಕಣಿವೆಯ ದೂರದಲ್ಲಿ ಬೊಗಳುತ್ತಿದ್ದ ಹಳ್ಳಿಯ ನಾಯಿ ಕತ್ತಲೆಯ ಮೌನಕ್ಕೆ ದನಿಯ ಕಲ್ಲೆಸೆಯುತ್ತಿತ್ತು. ಎಲ್ಲವೂ ಏನೋ ಒಂದು ಭೀಷಣ ರಹಸ್ಯಸ್ಥವಾಗಿದ್ದಂತೆ ಭಾಸವಾಯಿತು. ನನಗೆ ಬಂದಿದ್ದ ನಿದ್ದೆಯೆಲ್ಲ ಪಲಾಯನವಾಯಿತು. ಸುಮ್ಮನೆ ಶೂನ್ಯ ಮನಸ್ಕನಾಗಿ ಕುಳಿತೆ. ಆಲೋಚಿಸುವುದಕ್ಕೂ ಕೂಡ ಹೆದರಿಕೆಯಾಯಿತು. ಪಿಶಾಚಿಯನ್ನು ನೆನೆ ನೆನೆದು, ಹೊದಿಕೆಯೊಳಗೆ ಹುದುಗಿ, ಮೈ ಅಲ್ಲಾಡಿದರೆ ಎಲ್ಲಿ ದೆವ್ವಕ್ಕೆ ನಾನಿರುವುದು

ಗೊತ್ತಾಗಿಬಿಡುವುದೋ ಎಂದು ಹೆದರಿ ಸುಮ್ಮನೆ ಬೆವರುತ್ತ ಮಲಗುವ ಮಗುವಿನಂತೆ ಕುಳಿತುಬಿಟ್ಟೆ.

ಕುರುಡು ಕಗ್ಗತ್ತಲೆ; ಭೀಷಣ ನೀರವತೆ. ಸ್ವಲ್ಪ ಹೊತ್ತಾಯಿತು. ಇನ್ನೂ ಸ್ವಲ್ಪ ಹೊತ್ತಾಯಿತು. ಮತ್ತೂ ಸ್ವಲ್ಪ ಹೊತ್ತಾಯಿತು. ಕಾಲದ ನಡಿಗೆಯ ಸಪ್ಪಳ ಕೇಳಿಸುವಂತಿತ್ತು. ನೋಡುತ್ತಿದ್ದ ಹಾಗೆಯೆ ಇರುಳು ಕಾಣುವ ಬೆಳಕಿನ ಕನಸಿನಂತೆ ಮೂಡಣ ಬಾನೆಡೆಯಲ್ಲಿ ಏನೂ ಒಂದಿನಿತು ಹೊಳಪು ಮೈದೋರಿತು. ತಿಂಗಳು ಮೂಡಿಬರುವನೆಂದು ನನ್ನೆದೆ ಹಿಗ್ಗಿತು. ಆ ಮೌನ ತಿಮಿರಗಳ ಗುರುಭಾರದಿಂದ ಕುತ್ತಿ ನೆಲಸಮವಾಗಿದ್ದ ಮನಸ್ಸು ನಿಟ್ಟುಸಿರೆಳೆದು, ನಸು ತಲೆಯೆತ್ತಿತು. ನೋಡುತ್ತಿದ್ದ ಹಾಗೆಯೆ ಕನಸು ನನೆಕೊನೆಯೇರಿತು. ಕಾಂತಿ ಹೆಚ್ಚಿತು. ಹೊಂಬಣ್ಣವಾಯಿತು. ಬಣ್ಣಕ್ಕೆ ಬಣ್ಣವೇರಿತು. ಪರ್ವತ ಶಿಖರಶಿರೋರೇಖೆಯಲ್ಲಿ ಚಿತ್ರಿತವಾದಂತೆ ತೋರಿತು. ಉತ್ಕಂಠಿತ ಭಾವದಿಂದ ಅತ್ತಕಡೆ ಉನ್ಮೀಲಿತನಯನನಾಗಿ ದೃಷ್ಟಿಸಲಾರಂಭಿಸಿದೆ. ದೃಶ್ಯ ಅತ್ಯಂತ ರಮಣೀಯವಾಗಿತ್ತು. ನೋಡುತ್ತಿದ್ದ ಹಾಗೆಯೆ ಪೂರ್ವಾಕಾಶ ಇನ್ನೂ ಪ್ರಕಾಶಮಾನವಾಯಿತು. ಶೀತಲಚಂದ್ರಕಿರಣಸ್ನಾತ ಶ್ವೇತೋರ್ಣಸದೃಶ ಖಂಡನೀರದಗಳು ನಭೋಮಧ್ಯದಲ್ಲಿ ಮೆರೆದುವು. ಸ್ವಲ್ಪ ಹೊತ್ತಿನಲ್ಲಿಯೆ ಆಕಾಶಪಟಸ್ಥ ಸ್ವಲ್ಪ ವಿರಳ ವೃಕ್ಷ ಮಾಲೆಗಳ ಹಿಂಗಡೆಯಲ್ಲಿ ಸುಂದರ ಶಶಾಂಕನು ಗೋಚರವಾದನು. ಜೊನ್ನದ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು. ಹೊಂಗದಿರುಗಳು ಒಯ್ಯೊಯ್ಯನೆ ಅರಣ್ಯ ಪ್ರವೇಶ ಮಾಡಿದವು. ಕತ್ತಲು ನಿಬಿಡವೃಕ್ಷವಾಟಿಕೆಗಳಲ್ಲಿ ಅವಿತುಕೊಂಡಿತು. ಆದರೆ ಮೌನ ಎಂದಿನಂತೆ ಗಭೀರವಾಗಿತ್ತು. ಚಂದ್ರ ಆಕಾಶಮಾರ್ಗದಲ್ಲಿಡುವ ಹೆಜ್ಜೆಗಳ ಸದ್ದು ಕೂಡ ಕೇಳಿಸುವಂತಿತ್ತು. ಘೋರ ವಿಷಣ್ಣಳಾಗಿದ್ದ ನಿಶಾವನಿತೆ ಮಧುರ ಪ್ರಸನ್ನೆಯಾದಳು. ರುದ್ರವಾಗಿದ್ದುದೆಲ್ಲ ರಮಣೀಯವಾಗಿತ್ತು. ಚಂದ್ರ ಮೇಲೇರಿದನು. ಗಿರಿಶಿಖರವನ್ನು ದಾಟಿ ಬಂದನು. ಗಗನದಿಂದ್ಯೆತರುವ ಜ್ಯೋತ್ಸ್ನಾತುಷಾರವೃಷ್ಟಿ ಹೆಣೆದುಕೊಂಡಿದ್ದ ಶ್ಯಾಮಲಪರ್ಣಾರ್ಣವವನ್ನು ಸ್ವರ್ಣವರ್ಣಮಯವನ್ನಾಗಿ ಮಾಡಿ ಸಂದು ಗೊಂದುಗಳಲ್ಲಿ ತೂರಿಕೊಂಡು ಬಂದು ಬನದ ಸಣ್ಣಪುಟ್ಟ ಗಿಡಬಳ್ಳಿ ಹೊದರುಗಳ ಮೇಲೆ ಮಲಗಿತು. ಬೆಳ್ದಿಂಗಳ ಸೋನೆ ಎಡೆಬಿಡದೆ ಸುರಿಯಿತು. ಮರದ ನೆರಳುಗಳು ಮಾತ್ರ ಕತ್ತಲೆಗೆ ಆಶ್ರಯಸ್ಥಾನಗಳಾದುವು. ಅಲ್ಲಿಯೂ ಕೂಡ ಅವಿತುಕೊಂಡಿದ್ದ ಕತ್ತಲೆಯನ್ನು ಕಂಡುಹಿಡಿಯಬಹುದಾಗಿತ್ತು. ಜಗತ್ತೆಲ್ಲ ಚಿತ್ರೀಭೂತವಾದ ಮಧುರ ಕವನದಂತಿತ್ತು.

ಪ್ರಕೃತಿ ಉಪಾಸಕನಾಗಿದ್ದ ನಾನು ಸೌಂದರ್ಯೋಪಾಸನೆಗೆ ತೊಡಗಿದೆ. ಬೇಟೆಗಾರನಿಗೆ ಬೇಟೆಯಾಗದಿದ್ದರೂ ಕಬ್ಬಿಗನಿಗೆ ಬೇಟೆಯಾಯಿತು ಎಂದುಕೊಂಡೆ. ಕೋವಿಯನ್ನು ತೊಡೆಯಮೇಲೆ ಇಟ್ಟುಕೊಂಡು ಬಿಡುಗಣ್ಣನಾಗಿ ನೋಡತೊಡಗಿದೆ. ಅವ್ಯಕ್ತದ ಅಂತಃಕರಣಮೂರ್ತಿಯಾಗಿರುವ ರತಿ ತನ್ನ ಅನಂತ ಐಶ್ವರ್ಯವನ್ನು ಮುಕ್ತಹಸ್ತೆಯಾಗಿ ಚೆಲ್ಲಿ ಸೂಸಿದ್ದಳು. ಸೊಬಗು ಸೂರೆಯಾಗಿತ್ತು. ಆದರೆ ಪ್ರೇಕ್ಷಕರಾರು? ಶತಮಾನಗಳಿಂದ ಇದೇ ರೀತಿಯಲ್ಲಿ ಸೊಬಗು ಸೂರೆಯಾಗುತ್ತಿರುವುದು? ಎಷ್ಟು ಜನ ನೋಡಿ ಅನುಭವಿಸಿದಾರೆ? ಈ ಕಾಡಿನ ಬೆಳ್ದಿಂಗಳು ಎನಿತೆದೆಗಳನ್ನು

ವಿಕಾಸಗೊಳಿಸಿರುವುದು? ಈ ವಿಪಿನ ಚಂದ್ರಿಕೆ ಯಾರ ಆಹ್ಲಾದಕ್ಕಾಗಿ ಇಂತು ದಿನದಿನವೂ ಬೇಸರವಿಲ್ಲದೆ ನಲಿಯುವುದು? ಬಹಶಃ ನನ್ನ ಆಗಮನವನ್ನೇ ನಿರೀಕ್ಷಿಸಿ ಕೊಂಡಿದ್ದಿರಬಹುದೆ? ಇದರ ತಪಸ್ಸು ಇಂದು ಫಲಿಸಿತೇ? ಇನ್ನು ಮುಂದೆ ಹೀಗಿರುವುದಿಲ್ಲವೇ? ಹೀಗೆಲ್ಲ ಆಲೋಚಿಸಿದೆ. ತರುವಾಯ ಕಾವ್ಯಗಳಲ್ಲಿ ಓದಿದ್ದ ಚಂದ್ರೋದಯಗಳ ವರ್ಣನೆಗಳನ್ನು ನೆನೆದು ವಿಮರ್ಶಿಸಿದೆ. ಮಾತಿನ ಮಂಕುತನ ಮೇಲೆದ್ದು ತೋರಿತು. ಕಬ್ಬಗಳ ಬಡತನ ಎದೆಯಲ್ಲಿ ಒಂದು ವಿಧವಾದ ನೋವನ್ನುಂಟುಮಾಡಿತು. ಈ ಚಂದ್ರೋದಯದ, ಈ ವಿಪಿನಗಳ, ಈ ಚಂದ್ರಿಕೆಯ, ಈ ದೃಶ್ಯದ ವರ್ಣನೆ ಮಾಡಲೆಳಸುವವನೇ ಹುಚ್ಚ; ಮಾಡಿದೂ ಸಂಪೂರ್ಣವಾಗಿ ಬಣ್ಣಿಸಿಬಿಟ್ಟೆನೆಂದುಕೊಳ್ಳುವವನು ಶುದ್ಧ ಮೂರ್ಖ! ಹೀಗೆಲ್ಲ ಯೋಚಿಸಿದೆ. ತರುವಾಯ ಈ ಮಲೆನಾಡಿನ ಕಾಡುಗಳ ಸಿರಿಯನ್ನು ಅನುಭವಿಸಿದ ಬಯಲು ಸೀಮೆಯರ ಎದೆಯ ಬಡತನವನ್ನು ನೆನೆದು ಮರುಗಿದೆ. ಹೀಗೆಲ್ಲ ಯೋಚಿಸಿದೆ. ಆಲೋಚನೆಗಳಿಗೆ ಒಂದು ಕಟ್ಟು, ಒಂದು ಎಲ್ಲೆ, ಒಂದು ನಿಯಮ, ಒಂದೂ ಇರಲಿಲ್ಲ.

ತಂಗಾಳಿ ಕುಳಿರ್ಗಾಳಿಯಾಗಲಾರಂಭಿಸಿತು. ಜೊನ್ನದ ಸೋನೆಯೊಂದಿಗೆ ಇಬ್ಬನಿಯ ಸೋನೆಯೂ ಒಯ್ಯೊಯ್ಯನೆ ಇಳಿಯತೊಡಗಿತು. ಗಗನದಲ್ಲಿ ತುಂಡು ಮೋಡಗಳು ತುಂಟಹುಡುಗರಂತೆ ತಿಂಗಳನ್ನು ಸುಮ್ಮನೆ ಕಾಡುತ್ತಿದ್ದವು. ಅವುಗಳ ಕಾಟದಿಂದ ಬೆಳ್ದಿಂಗಳು ಒಮ್ಮೆ ಮಬ್ಬಾಗಿ ಒಮ್ಮೆ ಬೆಳಗುತ್ತಿತ್ತು. ಬೆಳಕು ಹೆಚ್ಚು ಕಡಿಮೆಯಾಗುತ್ತಿದ್ದುದರಿಂದ ನಿಶ್ಚಲವಾದ ಕಲ್ಲು ಗಿಡ ಹುದರುಗಳು ಹಿಂದಕ್ಕೂ ಮುಂದಕ್ಕೂ ಚಲಿಸಿದಂತಾಗುತ್ತಿತ್ತು. ಆ ಚಲನೆಗೆ ಮನಸ್ಸಿನ ಆವರಣ ವಿಕ್ಷೇಪಶಕ್ತಿಗಳು ರೂಪಗಳನ್ನು ಕಲ್ಪಿಸುತ್ತಿದ್ದವು. ನಾನು ಮೋಹಿತನಾಗಿ ಎರಡು ಮೂರು ಸಾರಿ ಯಾವುದೋ ಪ್ರಾಣಿಯೇ ಇರಬೇಕೆಂದು ಭಾವಿಸಿ ಕೋವಿಯನ್ನೆತ್ತಿ ಗುರಿಯಿಟ್ಟೆ. ಆದರೆ ಮೋಸಹೋಗಲಿಲ್ಲ. ಬೇಗನೆ ಮಾಯೆಯ ಗುಟ್ಟು ಗೊತ್ತಾಗಿ ಹೋಯಿತು. ಆಮೇಲೆ ಕಣ್ಣು ಏನೇನೋ ಮಾಯಾ ರೂಪಗಳನ್ನು ಕಾಣುತ್ತಿತ್ತು. ಆದರೆ ಮನಸ್ಸು ಅವುಗಳನ್ನೆಲ್ಲ ಖಂಡಿಸಿ ಬಿಸುಡುತ್ತಿತ್ತು. ಹೀಗೆಯೇ ಬಹಳ ಹೊತ್ತು ಕುಳಿತು ಕಾದೆ. ಎಲ್ಲ. ನೀರವವಾಗಿತ್ತು; ಎಲ್ಲ ರಮಣೀಯವಾಗಿತ್ತು; ಯಾವುದೊಂದು ಜೀವಜಂತುವೂ ಸಂಚರಿಸುವ ಚಿಹ್ನೆ ತೋರಲಿಲ್ಲ. ಹಾಗೆಯೇ ಕೋವಿಯನ್ನು ತಲೆದಿಂಬು ಮಾಡಿಕೊಂಡು, ಕಂಬಳಿಯನ್ನು ಹೊದೆದುಕೊಂಡು, ಅಂಗಾತನೆ ಮಲಗಿ, ಅನಂತಾಕಾಶದಲ್ಲಿ ಸ್ವರ್ಣಜ್ಯೋತಿರ್ಮಯ ಬಿಂಬದಿಂದ ರಂಜಿಸುತ್ತಿದ್ದ ಯಾಮಿನೀಕಾಂತನಿಂದ ಹೊರಹೊಮ್ಮಿ ಬನದ ಮೇಲೆ ಎಡೆಬಿಡದೆ ಸುರಿಯುತ್ತಿದ್ದ ಸ್ನಗ್ಧೋಜ್ಜ್ವಲಜ್ಯೋತ್ಸ್ನೆಯನ್ನು ಕಣ್ಣಿನಿಂದ ಕುಡಿಯತೊಡಗಿದೆ. ಕುಡಿದು ಕುಡಿದು ಮತ್ತೆರಿ ಕಣ್ಣು ಮುಚ್ಚಿ ನಿದ್ದೆ ಹೋದೆ.

ಎಷ್ಟು ಹೊತ್ತು ನಿದ್ದೆಮಾಡಿದೆನೋ ತಿಳಿಯದು. ಇದ್ದಕಿದ್ದ ಹಾಗೆ ನಿದ್ರಾಭಂಗವಾಗಯಿತು. ಕಾನನದ ನೀರವತೆಯನ್ನು ಆಲೋಡಿಸಿಕೊಂಡು ಈಡಿನ ಢಂಕಾರವೊಂದು ಸುತ್ತಮುತ್ತಲಿದ್ದ ಪರ್ವತ ಕಂದರಗಳಿಂದ ಪ್ರತಿಧ್ವನಿತವಾಗಿ ಮರಳಿ ಮೌನದಲ್ಲಿ ಮುಳುಗಿಹೋಯಿತು. ಅರಣ್ಯಶ್ರೇಣಿಗಳು ಕಂಪಿಸಿದುವು. ನನ್ನ ಅಟ್ಟಣೆಯಿಂದ

ಒಂದೇ ಮಾರು ದೂರದಲ್ಲಿದ್ದ ಮುತ್ತುಗದ ಮರದೆಲೆಗಳಲ್ಲಿ ಪಟಪಟ ಧ್ವನಿಯಾಯಿತು. ಕೋವಿಯಿಂದ ಸಿಡಿದ ದೊಡ್ಡ ಚರೆಗಳು ಮೃತ್ಯು ವೇಗದಿಂದ ಧಾವಿಸಿದುವೆಂದು ಗೊತ್ತಾಯಿತು. ಗಾಬರಿಯಿಂದ ಎದ್ದು ಕುಳಿತೆ. ಮಂಕುಹಿಡಿದವನಂತೆ ಸುತ್ತಲೂ ಮಿಳ್ಮಿಳನೆ ನೋಡಿದೆ. ಅದೇ ಬೆಳ್ದಿಂಗಳು; ಅದೆ ಸದ್ದಿಲಿಯಿರುಳು; ಅದೇ ನಿಬಿಡ ಕಾನನ; ಅದೆ ಹೆಮ್ಮರಗಳು; ಅದೇ ಛಾಯೆಗಳು; ಅದೇ ಬೆಳ್ಮುಗಿಲು; ಅದೇ ಇಬ್ಬನಿ ಸೋನೆ. ಢಂಕಾರ ಮಾತ್ರ ಎಲ್ಲಿಂದಲೋ ಬಂದು ಎಲ್ಲಿಯೋ ಹೋಯಿತು. ಉದ್ವೇಗದಿಂದ ಬೆವರಿದೆ. ಚರೆಗಳು ಒಂದು ಮಾರು ಈ ಕಡೆ ಬಂದಿದ್ದರೆ ನನ್ನ ಗತಿ ಏನಾಗುತ್ತಿತ್ತು ಎಂದು ಚಿಂತಿಸತೊಡಗಿದೆ. ಎಲ್ಲಿಯಾದರೂ ನನಗೇ ಬಡಿದುವೋ ಏನೋ ಎಂದು ಮೈ ಮುಟ್ಟಿ ನೋಡಿಕೊಂಡೆ. ಏಕೆಂದರೆ, ಪ್ರಾಣಿಗೆ ಗುಂಡು ಬಡಿದ ಕೂಡಲೆ ಅದರ ಅನುಭವವಾಗುವುದಿಲ್ಲ; ಸ್ವಲ್ಪ ಹೊತ್ತಾದ ಕೂಡಲೆ ಗೊತ್ತಾಗುತ್ತದೆ ಎಂಬುದನ್ನು ಹಿರಿಯರಿಂದ ಕೇಳಿ ತಿಳಿದಿದ್ದೆ. ಎಲ್ಲಿಯೂ ನನಗೆ ತಗುಲಿದಂತೆ ತೋರಲಿಲ್ಲ. ಅಂತೂ ಎದೆಯ ಬಡಿತ ನಿಲ್ಲಲಿಲ್ಲ. ದಿಕ್ಕು ಕೆಟ್ಟವನಂತೆ ಕುಳಿತುಬಿಟ್ಟೆ. ಯಾವ ಆಲೋಚನೆಯೂ ಮನಸ್ಸಿಗೆ ಹೊಳೆಯಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಸಮಾಧಾನ ತಂದುಕೊಂಡು ವಿಚಾರ ಮಾಡಲಾರಂಭಿಸಿದೆ. ಈಡನ್ನು ಹೊಡೆದವನು ಓಬುವಾಗಿರಬೇಕು, ಇಲ್ಲದಿದ್ದರೆ ತಿಮ್ಮು, ಬುದ್ಧಿಯಿಲ್ಲದೆ ನನ್ನ ಕಡೆ ಏಕೆ ಹೊಡೆದರು? ಯಾವ ಪ್ರಾಣಿಗೆ ಹೊಡೆದದ್ದು? ಕಾಡಿನ ಮಧ್ಯೆ ಮರಸಿಗೆ ಕೂತಾಗ ಒಬ್ಬರನೊಬ್ಬರು ಕರೆಯಬಾರದೆಂದು ಬೇಟೆಯ ಕಟ್ಟು. ಆದರೂ ಕರೆದು ನಿಜವನ್ನು ಕೇಳಿ ತಿಳಿಯಬೇಕೆಂದು ನಿರ್ಧರಿಸಿದೆ. ಇನ್ನೇನು ಕರೆಯಬೇಕು, ಅಷ್ಟರಲ್ಲಿ ಬಳಿಯ ಪೊದೆಯಲ್ಲಿ ಏನೋ ಏಟು ಬಿದ್ದ ನೋವಿನಿಂದ ಒದ್ದಾಡಿಕೊಳ್ಳುವಂತೆ ಸದ್ದಾಯಿತು, ಆಲಿಸಿದೆ. ಹೌದು! ಗುಂಡಿನೇಟು ಬಿದ್ದ ಜೀವಿಯೇ ಇರಬೇಕು ಎಂದು ಗೊತ್ತು ಮಾಡಿ, ಕರೆಯುವುದು ತರವಲ್ಲ ಎಂದುಕೊಂಡೆ. ಏಕೆಂದರೆ, ಗಾಯವಾದ ಜೀವಿ ಹುಲಿಚಿರತೆಗಳಲ್ಲಿ ಯಾವುದಾದರೂ ಆಗಿದ್ದರೆ ನಾನು ಕುಳಿತ ಸ್ಥಳ ಗೊತ್ತಾಗಿ, ಮೇಲೆ ನೆಗೆಯಬಹುದು. ಹೀಗೆಂದು ಸುಮ್ಮನಾದೆ. ಸ್ವಲ್ಪ ಕಾಲವಾದ ತರುವಾಯ ಸದ್ದು ನಿಂತಿತು. ಪ್ರಾಣಿ ಸತ್ತುಹೋಯಿತೆಂದು ಊಹಿಸಿದೆ. ಆದರೂ ಕರೆಯಲು ಧೈರ್ಯವಾಗಲಿಲ್ಲ. ಅಷ್ಟರಲ್ಲಿಯೇ ಪ್ರಭಾತ ಸೂಚಕವಾದ ಪುಣ್ಯ ಸಮೀರ ತಣ್ಣನೆ ತೀಡುತ್ತಿದ್ದುದರಿಂದಲೂ, ಚಂದ್ರ ಪಶ್ಚಿಮ ದಿಗಂತಾಭಿಮುಖ ನಾಗಿದ್ದುದರಿಂದಲೂ ಬೇಗೆ ಬೆಳಗಾಗುವುದೆಂದು ಬಗೆದು ಸುಮ್ಮನಾದೆ. ಬರಬರುತ್ತಾ ಇಬ್ಬನಿಯ ಸೋನೆ ಪ್ರಬಲವಾಯಿತು. ಬೆಳ್ದಿಂಗಳು ನಸುಮಬ್ಬಾಯಿತು. ಚಂದ್ರನು ಒಂದಿನಿತು ಕಾಂತಿಹೀನನಾದನು. ಮರದೆಲೆಗಳಿಂದ ಹನಿಗಳು ತಟ್‌ಪಟ್ ಎಂದು ವಿಷಣ್ಣರವದಿಂದ ಬೀಳತೊಡಗಿದುವು. ನಕ್ಷತ್ರಗಳು ಮುಸುಕಿಬರುತ್ತಿದ್ದ ಬೆಳ್ಮಂಜಿನಲ್ಲಿ ಮುಚ್ಚಿ ಹೋದುವು. ಮುಗಿಲಿನಿಂದ ಜೊನ್ನದ ಸೋನೆಯೊಂದಿಗೆ ಹಿಟ್ಟಿನ ಸೋನೆಯೂ ಇಳಿದಂತಾಯಿತು. ದೂರ ಕಣಿವೆಯಲ್ಲಿ ಊರು ಕೋಳಿಗಳ ಕೂಗು ಕೇಳಿಸಿತು. ಜಗತ್ತಿನ ಉನ್ನಿದ್ರಾವಸ್ಥೆಯ ಸೂಚನೆ ತೋರಿಬಂದಿತು. ಕಂಬಳಿಯನ್ನು ಬಲವಾಗಿ ಸುತ್ತಿಕೊಂಡು ಕೈಯಲ್ಲಿ ಕೋವಿ ಹಿಡಿದುಕೊಂಡು ಕುಳಿತೆ.

ಸ್ವಲ್ಪ ಹೊತ್ತಿನಲ್ಲಿಯೆ ಕಾಡುಕುರಿಯೊಂದು ಗಟ್ಟಿಯಾಗಿ ಅರಚುತ್ತ ಮೌನವನ್ನು ಮಥಿಸುತ್ತ ನಮ್ಮ ಹಣ್ಣಿನ ಮರದ ಕಡೆಗೆ ಬರುವಂತೆ ಭಾಸವಾಯಿತು. ಕೂಗುತ್ತ ಕೂಗುತ್ತ ಬಳಿಸಾರಿತು. ಆದರೆ ನಮ್ಮೆಡೆಗೆ ಬರಲಿಲ್ಲ. ಹಾಗೆಯೆ ಅರಣ್ಯ ಶೃಂಗಾಭಿಮುಖವಾಗಿ ತಿರುಗಿಹೋಯಿತು. ಅಷ್ಟರಲ್ಲಿ ಕಾಡಿನ ನಟ್ಟ ನಡುವೆ ಸಿಂಗಳೀಕವೊಂದು ವಿಕಟಧ್ವನಿ ಮಾಡತೊಡಗಿತು. ಅದು ಅಪರಿಚಿತ ನಾದವಾದ್ದರಿಂದ ಇಂತಹ ಪ್ರಾಣಿಯ ದನಿಯೆಂದು ಆಗ ನನಗೆ ಗೊತ್ತಾಗಲಿಲ್ಲ. ತರುವಾಯ ತಿಳಿದುಕೊಂಡೆ. ಕೂತಿದ್ದ ಹಾಗೆಯೇ ಮಡಿವಾಳ ಪಕ್ಷಿಯೊಂದು ಉಷಃಕಾಲವನ್ನು ಕರೆಯುವಂತೆ ಹಾಡತೊಡಗಿತು. ಅದರ ಇನಿದನಿ ನಾನಾ ವಿಧವಾಗಿ ನಲಿನಲಿದು ಬಂದು, ಒಂದು ತಡವೆ ಬನಗಳನ್ನು ಮುಟ್ಟಿತು; ಒಂದು ತಡವೆ ಕಣಿವೆಗಳನ್ನು ಸೇರಿತು; ಒಂದು ತಡವೆ ಗಗನಕ್ಕೇರಿತು; ಒಂದು ತಡವೆ ಪೃಥ್ವಿಯನ್ನೆಲ್ಲ ಮುದದಿಂದ ತಬ್ಬಿತು. ತುಸು ಹೊತ್ತಿನಲ್ಲಿಯೆ ಕಾಜಾಣ ಪಕ್ಷಿಯ ಗಾನದೆದುರು ಮತ್ತಾವ ಹಕ್ಕಿಯ ಗಾನವೂ ನಿಲ್ಲಲಾರದು. ಅದರೆದುರು ಕೋಗಿಲೆಯ ಪಂಚಮಸ್ವರ ಕೂಡ ಪಂಚಮ ಸ್ವರವೆ ! ಅದರ ಗಾನದ ಆಲಿಂಗನದಲ್ಲಿ ಉಷೆ ಮೈ ಮರೆಯುತ್ತಾಳೆ. ವನಗಾಯಕರಲ್ಲಿ ಕಾಜಾಣಕ್ಕೆ ಪ್ರಥಮಸ್ಥಾನ ಸಲ್ಲತಕ್ಕದ್ದು !

ಮೆಲ್ಲಮೆಲ್ಲನೆ ಬೆಳಕು ಹರಿಯಿತು. ಇಬ್ಬನಿಯ ಸೋನೆಯೂ ಬರಬರುತ್ತ ಕಡಿಮೆಯಾಯಿತು. ಬಾನಿನಿಂದ ಸುರಿದ ಕಾವಣ ಪರ್ವತ ಪ್ರಾಂತಗಳಿಂದ ಹರಿದು ಕಣಿವೆಗಳಲ್ಲಿ ನಿಂತಿತು. ಚಂದ್ರ ಅಪ್ರಫುಲ್ಲನಾದನು. ಉದಯದಿಗ್ಭಾಗದಲ್ಲಿ ಅರುಣನ ಹೊಂಬೆಳಕು ಪಸರಿಸಿತು. ತಂಗಾಳಿ ತಣ್ಣಗೆ ತೀಡಿತು. ಹೂವಿನ ಮರಗಳಲ್ಲಿ ಕೋಟ್ಯನುಕೋಟಿ ತುಂಬಿಗಳು, ಜೇನುಹುಳುಗಳು, ಹೂವಿನ ಹಕ್ಕಿಗಳು ಎಲ್ಲ ಸೇರಿ ಅನಾಹತಧ್ವನಿಮಾಡತೊಡಗಿದುವು. ಇತರ ಹಕ್ಕಿಗಳೂ ಅಲ್ಲಲ್ಲಿ ಇಂಚರಗೈದುವು. ಇರುಳಿನ ಮಾಯೆಯೆಲ್ಲ ಬಟ್ಟಬಯಲಾಯಿತು. ರಾತ್ರಿಯ ವಿಕಾರಾಕೃತಿಗಳೆಲ್ಲ ಗಿಡಮರ ಹೊದರುಗಳ ವೇಷವನ್ನು ಧರಿಸಿ ನಿಂತುವು.

ನಾನು ಓಬುವನ್ನು ಕರೆದೆ. ಅವನು "ಓ" ಎಂದನು. ಮೂವರು ಅಟ್ಟಣೆಗಳಿಂದ ಕೋವಿ ಕಂಬಳಿಗಳೊಡನೆ ಕೆಳಗಿಳಿದೆವು. ಎಲ್ಲರೂ ಮಾವಿನ ಮರದ ಬುಡವನ್ನು ಸೇರಿದೆವು.

"ಯಾರು ಈಡು ಹೊಡೆದದ್ದು?" ಎಂದೆ

"ನಾನು" ಎಂದನು ಓಬು.

"ಯಾವುದಕ್ಕೆ ಹೊಡೆದದ್ದು?" ಎಂದನು ತಿಮ್ಮು.

ಓಬು ಕತೆ ಹೇಳಿದ: "ಬಹುಶಃ ಕಣೆಹಂದಿ ಎಂದು ಕಾಣುತ್ತದೆ".

"ಬಹುಶಃ! ಕಾಣುತ್ತದೆ!– ಇದೆಂತಹ ಮಾತು! ಸರಿಯಾಗಿ ನೋಡಿ ಹೊಡೆದೆಯೋ ಇಲ್ಲವೋ?" ಎಂದೆ.

"ನಾನೇನೋ ಸರಿಯಾಗಿ ಗುರಿಯಿಟ್ಟು ಹೊಡೆದೆ. ನೋಡು, ಇಲ್ಲಿತ್ತು ಅದು. ಬಹಳ ಹೊತ್ತಿನಿಂದ ಕಟ್ ಕಟ್ ಎಂದು ಹಣ್ಣನ್ನು ಪುಡಿಮಾಡುತ್ತಿತ್ತು. ನನಗೆ ದೂರ, ನಿನಗೆ ಬಹಳ ಸಮೀಪ. ನೀನು ಹೊಡೆಯುತ್ತೀಯಾ ಎಂದು ನೋಡಿದೆ. ಅದೇಕೆ? ನೀನು ಹೊಡೆಯಬಾರದಾಗಿತ್ತೆ?" ಎಂದನು ಓಬು.

ನಾನು ಮಲಗಿದ್ದ ಸಂಗತಿ ಹೇಳಿದರೆ ಕೆಲಸ ಕೆಡುವುದೆಂದು ತಿಳಿದು, "ಏನೋ! ನನಗೇನೂ ಕಾಣಿಸಲಿಲ್ಲ. ಕಾಣಿಸಿದ್ದರೆ ಹೊಡೆಯದೆ ಬಿಡುತ್ತಿದ್ದೆನೇ? ಎಂದೆ.

ತಿಮ್ಮು " ಎಲ್ಲಿಯಾದರೂ ಮಲಗಿದ್ದೆಯೋ ಏನು?" ಎಂದನು.

"ಹಾಗೆ ರಾತ್ರಿಯೆಲ್ಲ ಎಚ್ಚರವಾಗಿರುವುದಕ್ಕೆ ಆದೀತೆ? ಸ್ವಲ್ಪ ಮಲಗಿದ್ದೆ" ಎಂದೆ.

"ಅದಕ್ಕೆ ನಾನು ಹೇಳಿದ್ದು ನಿನ್ನೆ ! ಅಟ್ಟಣೆ ಚೆನ್ನಾಗಿ ಕಟ್ಟಿದರೆ ಯಾರಿಗಾದರೂ ಹಾಗೆಯೇ, ಮಲಗುವಂತಾಗುತ್ತೆ !" ಎಂದನು ತಿಮ್ಮು.

ಓಬು ಹೊಡೆದ ಸ್ಥಳವನ್ನು ತೋರಿಸಿದನು. ಚೆನ್ನಾಗಿ ಪರೀಕ್ಷೆ ಮಾಡಿದೆವು. ಈಡೇನೊ ಅಲ್ಲಿಗೇ ಬಿದ್ದಿತ್ತು; ಚರ ಬಡಿದ ಗುರುತೂ ಕಾಣುತ್ತಿತ್ತು. ಚರೆ ನೆಲಕ್ಕೆ ಬಡಿದು ಚಿಗಿದು ನಾನು ಕೂತಿದ್ದ ಮರದ ಬಳಿಯಲ್ಲಿ ಹಾದುಹೋಗಿದ್ದುವು. ಆದರೆ, ಪ್ರಾಣಿಗೆ ಏಟು ಬಿದ್ದ ಕುರುಹು ಯಾವುದೂ ತೋರಲಿಲ್ಲ. ಮುಳ್ಳುಹಂದಿಗೆ ಗುಂಡು ಬಿದ್ದರೆ ಸಾಮಾನ್ಯವಾಗಿ ಕಣೆಗಳಾದರೂ ಉದುರಿ ಅಲ್ಲಿ ಬೀಳಬೇಕು; ಅಥವಾ ರಕ್ತಬೀಳಬೇಕು. ಯಾವುದೂ ಕಾಣಲಿಲ್ಲ.

"ಸರಿಯಾಗಿ ಪ್ರಾಣಿ ಎಂದು ಗೊತ್ತುಮಾಡಿಕೊಂಡ ಹೊಡೆದೆಯೊ? ಅಥವಾ ಬೆಳ್ದಿಂಗಳಲ್ಲಿ ಗಿಡ ಪೊದೆಗಳು ಚಲಿಸಿದಂತಾಗಲು ಹಂದಿ ಎಂದು ಭ್ರಮಿಸಿ ಹೊಡೆದೆಯೋ?" ಎಂದೆ.

ಓಬು ಸ್ವಲ್ಪ ರೇಗಿಬಿದ್ದು, "ನಾನೇನು ಇವತ್ತು ಬೇಟೆಗೆ ಬಂದವನೇ? ಚೆನ್ನಾಗಿ ನೋಡಿ ಹಂದಿ ಎಂದು ಗೊತ್ತುಮಾಡಿಕೊಂಡೇ ಹೊಡೆದಿದ್ದೇನೆ. ಗುರಿ ಕೂಡ ಸರಿಯಾಗಿ ಬಿದ್ದದೆ" ಎಂದನು.

"ಈಡು ಹಾರಿದ ಸ್ವಲ್ಪ ಹೊತ್ತಿನ ಮೇಲೆ ಏನೋ ಬಿದ್ದು ಒದ್ದಾಡಿದಂತಾಯಿತು. ಇಲ್ಲಿ ಸುತ್ತ ಹುಡುಕಿ ನೋಡೋಣ" ಎಂದು ತಿಮ್ಮು.

ಹಾಗೆಯೆ ಆಗಲಿ ಎಂದು ಎಲ್ಲರೂ ಜಾಡು ಹಿಡಿಯತೊಡಗಿದೆವು. ಎಲ್ಲಿಯೂ ಯಾವ ಚಿಹ್ನೆಯೂ ಕಾಣಲಿಲ್ಲ. ಗುರಿ ತಪ್ಪಿತೆಂದು ನಿರ್ಣಯಿಸಿ ರಾತ್ರಿಯ ಅನುಭವಗಳನ್ನು ಕುರಿತು ಗಟ್ಟಿಯಾಗಿ ಹರಟುತ್ತ ಕಾಡಿನಿಂದ ಮನೆಯ ಕಡೆಗೆ ಹೊರಟೆವು. ಮುಂದೆ ಹೋಗುತ್ತಿದ್ದ ತಿಮ್ಮು ಇದ್ದಕ್ಕಿದಂತೆ ನಿಂತು ನೆಲದ ಕಡೆ ನೋಡಿದನು. "ರಕ್ತ!" ಎಂದನು. ಎಲ್ಲರೂ ಬಗ್ಗಿ ನೋಡಿದೆವು. ಹೌದು! ರಕ್ತದ ಹನಿಗಳು ಒಣಯೆಲೆಗಳ ಮೇಲೆ ಬಿದ್ದಿದ್ದುವು. ಓಬುಗೆ ಬಹಳ ಸಂತೋಷವಾಯಿತು. " ನೋಡಿ, ಗುರಿ ತಪ್ಪಿತೆಂದು ಸುಮ್ಮನೆ ನನ್ನ ಮೇಲೆ ತಪ್ಪು ಹೊರಿಸಿದ್ದಿರಲ್ಲಾ?" ಎಂದನು. ನೆತ್ತರು ಬಿದ್ದ ಜಾಡನ್ನೇ ನೋಡುತ್ತ ಮುಂಬರಿದೆವು. ಮುಂದೆ ಮುಂದೆ ಹೋದಂತೆಲ್ಲ ನೆತ್ತರು ಮುದ್ದೆ

ಮುದ್ದೆಯಾಗಿ ಬಿದ್ದಿತ್ತು. ಪ್ರಾಣಿ ಅಲ್ಲೇ ಎಲ್ಲಿಯೋ ಸತ್ತುಬಿದ್ದಿರಬೇಕೆಂದು ಧಾವಿಸಿದೆವು. ಸುಮಾರು ಒಂದೂವರೆ ಫರ್ಲಾಂಗಿನವರೆಗೆ ರಕ್ತದ ಜಾಡು ಸಿಕ್ಕಿತು. ಆಮೇಲೆ ರಕ್ತವೂ ಸಿಕ್ಕಲಿಲ್ಲ: ಪ್ರಾಣಿಯೂ ಸಿಕ್ಕಲಿಲ್ಲ. ಹುಡುಕಿ ಹುಡುಕಿ ಬೇಸತ್ತು ಮನೆಯ ಕಡೆ ತಿರುಗಿದೆವು. ದಾರಿಯಲ್ಲಿ ಎಲ್ಲರೂ ಉಪನ್ಯಾಸ ಮಾಡತೊಡಗಿದೆವು! ನನ್ನ ಸೀನು ಕೆಮ್ಮುಗಳಿಗೆ ತಕ್ಕ ಸನ್ಮಾನವೂ ಆಯಿತು.  ಅಂತೂ ಮೊಲೆಯ ಹಾಲನ್ನು ನೆನೆದು ಕೊಟ್ಟಿಗೆಗೆ ಹಾರಿ ಹೋಗುವ ಎಳಗರುಗಳಂತೆ ಕಾಫಿತಿಂಡಿಗಳನ್ನು ನೆನೆದು ಮನೆಯ ಕಡೆಗೆ ಭರದಿಂದ ಸಾಗಿದೆವು. ಅರುಣೋದಯದ ಹೇಮಜ್ಯೋತಿ ಪೂರ್ವದಿಗ್ಭಾಗದಲ್ಲಿ ಪ್ರಬಲಿಸುತ್ತಿತ್ತು.

ದಟ್ಟವಾದ ಕಾಡನ್ನು ಹಿಂದಿಕ್ಕಿ ವನದಂಚಿಗೆ ಬಂದೆವು. ಆದರೆ ನಡೆಯಲು ಇನ್ನೂ ಪರ್ವತದ ಅರ್ಧಭಾಗ ಉಳಿದಿತ್ತು. ಅಲ್ಲೊಂದು ಬಂಡೆಗಳಿಂದ ಬಯಲಾದ ಪ್ರದೇಶವಿತ್ತು. ಅಲ್ಲಿ ನಿಂತು ನೋಡಿದೆವು, ಎಂದೂ ಮರೆಯಲಾಗದ ಸ್ವರ್ಗೀಯ ಸುಂದರದೃಶ್ಯವನ್ನು!

ನಾವು ನಿಂತ ಸ್ಥಳ ಎತ್ತರವಾಗಿತ್ತು. ಸುಮಾರು ಮೂವತ್ತು ಮೈಲಿಗಳ ದೃಶ್ಯ ನಮ್ಮೆದುರಿಗಿತ್ತು. ದಿಗಂತವಿಶ್ರಾಂತವಾದ ಸಹ್ಯಾದ್ರಿ ಪರ್ವತ ಶ್ರೇಣಿಗಳು ತರಂಗತರಂಗಗಳಾಗಿ ಸ್ಪರ್ಧೆಯಿಂದ ಹಬ್ಬಿದ್ದುವು. ದೂರ ಸರಿದಂತೆಲ್ಲ ಅಸ್ಫುಟವಾಗಿ ತೋರುತ್ತಿದ್ದುವು. ಕಣಿವೆಗಳಲ್ಲಿ ಇಬ್ಬನಿಯ ಬಲ್ಗಡಲು ತುಂಬಿತ್ತು. ವೀಚಿವಿಕ್ಷೋಭಿತ ಶ್ವೇತಫೇನಾವೃತ ಮಹಾವಾರಿಧಿಯಂತೆ ಪಸರಿಸಿದ್ದ ತುಷಾರ ಸಮುದ್ರದಲ್ಲಿ ಶ್ಯಾಮಲಗಿರಿಶೃಂಗಗಳು ದ್ವೀಪಗಳಂತೆ ತಲೆಯೆತ್ತಿಕೊಂಡಿದ್ದುವು. ಕಂದರ ಪ್ರಾಂತಗಳಲ್ಲಿದ್ದ ಗದ್ದೆ ತೋಟ ಹಳ್ಳಿ ಕಾಡು ಎಲ್ಲವೂ ಹೆಸರಿಲ್ಲದಂತೆ ಅಳಿಸಿಹೋಗಿದ್ದುವು. ದೃಷ್ಟಿಸೀಮೆಯನ್ನೆಲ್ಲ ಆವರಿಸಿದ್ದ ತುಷಾರ ಜಲನಿಧಿಯಲ್ಲಿ ಹಡುಗುಗಳಲ್ಲಿ ಕುಳಿತು ಸಂಚರಿಸಬಹುದೆಂಬಂತಿತ್ತು! ನಾವು ಮೂವರೂ ಅವಾಕ್ಕಾಗಿ ನಿಂತು ನೋಡಿದೆವು. ಇಬ್ಬನಿಯ ಕಡಲಿನಿಂದ ತಲೆಯೆತ್ತಿ ನಿಂತಿದ್ದ ಗಿರಿಶೃಂಗಗಳು ಮುಂಬೆಳಕಿನ  ಹೊಂಬಣ್ಣವನ್ನು ಹೊದೆದಿದ್ದುವು. ಬಾಲಸೂರ್ಯನ ಸ್ನಿಗ್ಧಕೋಮಲ ಸುವರ್ಣಜ್ಯೋತಿಯಿಂದ ವೃಕ್ಷರಾಜಿಗಳ ಶ್ಯಾಮಲಪರ್ಣವಿತಾನಗಳಲ್ಲಿ ಖಚಿತವಾಗಿದ್ದ ಸಹಸ್ರ ಸಹಸ್ರ ಹಿಮಮಣಿಗಳು ಅನರ್ಘ್ಯರತ್ನ ಸಮೂಹಗಳಂತೆ ವಿರಾಜಿಸುತ್ತಿದ್ದುವು. ಬೆಳ್ನೊರೆಯಂತೆ ಹಬ್ಬಿದ ಇಬ್ಬನಿಯ ಕಡಲಿನಲ್ಲಿ ಮುಳುಗಿಹೋಗಿದ್ದ ಕಣಿವೆಯ ಕಾಡುಗಳಿಂದ ಕೇಳಿಬರುತ್ತಿದ್ದ ವಿವಿಧ ವಿಹಂಗಮಗಳ ಮಧುರವಾಣಿ ಅದೃಶ್ಯರಾಗಿ ಉಲಿಯುವ ಗಂಧರ್ವಕಿನ್ನರರ ಗಾಯನದಂತೆ ಸುಮನೋಹರವಾಗಿತ್ತು. ನಾವು ಮೂವರು ಅವಾಕ್ಕಾಗಿ ನಿಂತು ನೋಡಿದೆವು! ನೋಡಿದೆವು, ನೋಡಿದೆವು, ಸುಮ್ಮನೆ ಭಕ್ತಿಯಿಂದ ಭಾವಾವಿಷ್ಟರಾಗಿ!"

ಬೇಟೆಗಾರರಾಗಿ ಬನಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದೆವು.

*****

## ಲೇಖಕರು

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಕನ್ನಡದ ಅಗ್ರಮಾನ್ಯ ಕವಿ. ಇಪ್ಪತ್ತನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ವರಕವಿ ಬೇಂದ್ರೆಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡವರು. ವಿಶ್ವಮಾನವ ಸಂದೇಶ ನೀಡಿದವರು. ಕನ್ನಡದ ಎರಡನೆಯ ರಾಷ್ಟ್ರಕವಿ. ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಸರ್ಕಾರ ಕೊಡಮಾಡುವ ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳನ್ನು ಮೊದಲ ಬಾರಿಗೆ ಪಡೆದವರು. ಮಹಾಕಾವ್ಯ : ಶ್ರೀ ರಾಮಾಯಣ ದರ್ಶನಂ, ಖಂಡಕಾವ್ಯಗಳು: ಚಿತ್ರಾಂಗದಾ, ಕೊಳಲು ಮತ್ತು ಇತರೆ 23 ಕವನ ಸಂಕಲನಗಳು, ಎರಡು ಕಥಾ ಸಂಕಲನಗಳು, ಎರಡು ಕಾದಂಬರಿಗಳು, 12 ನಾಟಕಗಳು, 6 ವಿಮರ್ಶಾ ಕೃತಿಗಳು, ಆತ್ಮಕಥೆ :ನೆನಪಿನ ದೋಣಿಯಲ್ಲಿ ಇನ್ನೂ ಹಲವು ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ.

## ಆಶಯ

ಬೇಟೆ ಎನ್ನುವ ಕಲ್ಪನೆಯನ್ನು ಬಹುವಿಶಿಷ್ಟವಾಗಿ ಚಿತ್ರಿಸಿರುವ ಕುವೆಂಪುರವರು "ಬೇಟೆಗಾರರಾಗಿ ಬನಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದೆವು". ಎನ್ನುವಲ್ಲಿನವರೆಗೆ ನಿಲ್ಲುತ್ತದೆ. ಪ್ರಕೃತಿಯ ಸೊಬಗು, ಕತ್ತಲಿನ ವರ್ಣನೆ, ಬೇಟೆಗಾರನಿಗೆ ಇರಬೇಕಾದ ಸೂಕ್ಷ್ಮತೆ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಪ್ರಕೃತಿ ಸುಮನೋಹರ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಅಭಿವ್ಯಕ್ತಿಗೊಳಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ.

## ಶಬ್ದಾರ್ಥಗಳು

ಬೈಗುಗೆಂಪು=ಸಾಯಂಕಾಲ ಸಂಜೆ, ನೇಸರ =ಸೂರ್ಯ, ತೋಟಾಕೋವಿ= ಬಂದೂಕು, ಬನಗತ್ತಲು= ಕಾಡಿನ ಕತ್ತಲು, ಹೆಮ್ಮರ=ಬೃಹದಾಕಾರ, ತಿಮಿರ=ಕತ್ತಲು, ನೀರವ=ಮೌನ, ಭೀಷಣ=ಭಯಂಕರವಾದ, ಉನ್ಮೀಲನ= ತೆರೆಯುವಿಕೆ, ತಿಲ=ಎಳ್ಳು, ವಿಪಿನ=ಕಾಡು    ಕಾಜಾಣ = ಒಂದು ಜಾತಿಯ ಹಕ್ಕಿ,

## ಪ್ರಶ್ನೆಗಳು

1. ಕಾಡಿನ ಕತ್ತಲನ್ನು ಕವಿ ವರ್ಣಿಸಿರುವ ಬಗೆಯನ್ನು ವಿವರಿಸಿ?
2. ಕಾಡಿಗೆ ಬೇಟೆಯಾಡಲು ಯಾರ್ಯಾರು ಹೊರಟರು?
3. ಬೇಟೆಗಾರನ ಮನಸ್ಥಿತಿ ಹೇಗಿರುತ್ತದೆ?
4. ಬೇಟೆಗಾರನಿಗೆ ಬೇಟೆಯಾಗದಿದ್ದರೂ ಕಬ್ಬಿಗನಿಗೆ ಬೇಟೆಯಾಯಿತು ಈ ಮಾತನ್ನು ಯಾರು ಹೇಳುತ್ತಾರೆ?
5. ಈಡು ಹೊಡೆದ ಪರಿಣಾಮ ಏನಾಯಿತು?

6. ಬನಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದೆವು ಎನ್ನುವುದರ ಹಿಂದಿನ ಆಶಯವೇನು?

**ಹೆಚ್ಚಿನ ಓದು**

1. ಸಮಗ್ರ ಗದ್ಯ–ಸಂಪುಟ–6, ಲೇ: ಕುವೆಂಪು,ಕನ್ನಡ ವಿಶ್ವವಿದ್ಯಾಲಯ, ಹೊಸಪೇಟೆ
2. ಸನ್ಯಾಸಿ ಮತ್ತು ಇತರ ಕತೆಗಳು, ಲೇ: ಕುವೆಂಪು
3. ನನ್ನ ದೇವರು ಮತ್ತು ಇತರ ಕತೆಗಳು, ಲೇ: ಕುವೆಂಪು

ವಿಜ್ಞಾನ/ಪರಿಸರ
–ಬರಹ

೧೬

# ಸಸ್ಯ ಶಾಸ್ತ್ರ

**ಡಾ. ಶಿವರಾಮ ಕಾರಂತ**

## ಸಸ್ಯ ಜೀವನ, ಪ್ರಾಣಿ ಸಸ್ಯ ಸ್ನೇಹ

## ಕೀಟಗಳ ಬಾಂಧವ್ಯ

ಪ್ರಕೃತಿಯಲ್ಲಿ ನಮಗೆ ಕಾಣಿಸದಂತೆ, ಕಾಣುವಂತೆ ಇರುವ ಸಸ್ಯಗಳ ಮತ್ತು ಪ್ರಾಣಿಗಳ ಜೀವನ ಸಂಬಂಧ ವಿಶೇಷವಾದದ್ದು, ಬೇಕ್ಟೀರಿಯಗಳ ವಿಚಾರ ಓದುವಾಗ– ಅವು ಎಷ್ಟೊಂದು ವಿಶೇಷವಾಗಿ ಸಸ್ಯಗಳಿಗೆ ಆಹಾರ ಸಂಪಾದನೆಯ ಕೆಲಸದಲ್ಲಿ ಸಹಾಯ ಮಾಡುತ್ತವೆ ಎಂಬುದನ್ನು ತಿಳಿಯಬಹುದು. ಅವುಗಳ ಚಟುವಟಿಕೆ ಬರಿಗಣ್ಣಿಗೆ ಕಾಣಿಸದಂತಹ ವ್ಯಾಪಾರ. ಅದಕ್ಕಿಂತ, ಪ್ರತ್ಯಕ್ಷವಾಗಿ ಹೂವುಗಳಿಂದ ಹೂವುಗಳಿಗೆ ಹಾರಾಡುವ ಅನೇಕ ಜಾತಿಯ ಕೀಟಗಳ ಕೆಲಸ ನಮ್ಮೆಲ್ಲರಿಗೂ ಕಾಣುವಂತಹದು. ಪುರಾತನ ಯುಗದಲ್ಲಿ ಹೇಗೆಯೇ ಇದ್ದಿರಲಿ–ಇಂದು ಸಸ್ಯಗಳಲ್ಲಿ ಕಾಣಿಸುವ ಬೀಜೋತ್ಪನ್ನ ಕ್ರಿಯೆಯನ್ನು ನೋಡುವಾಗ, ಕೀಟಗಳಿಲ್ಲದೆ ಹೋದರೆ, ಬೀಜಗಳೇ ಕಾಣಿಸಿದಂತಾಗಿ ಸಸ್ಯಗಳ ಸಂತಾನ ಕೊನೆಗೊಂಡೀತು–ಎಂದೆನಿಸಬಹುದು. ಆದಿ ಏಕಕಣ ಸಸ್ಯಗಳಲ್ಲಿ ಒಂದು ಕಣ ತಾನಾಗಿ ಒಡೆದು, ಎರಡು ಕಣಗಳಾಗುವುದನ್ನು ಕೇಳಿದ್ದೀರಿ. ಪಾಚಿ, ಬುಕುಟು ಮೊದಲಾದವುಗಳಲ್ಲಿ ಮೊಗ್ಗು ಮತ್ತು ಬೀಜಿಕೆಗಳಿಂದ ಸಂತಾನ ವೃದ್ಧಿಯಾಗುವುದನ್ನು ಕಾಣುತ್ತೇವೆ. ಇನ್ನು ಮುಂದಿನ ಹೆಜ್ಜೆಯೆಂದರೆ–ಗಂಡು ಮತ್ತು ಹೆಣ್ಣುಗಳ ಸಂಪರ್ಕದಿಂದಲೇ ಬೀಜಗಳು ಉತ್ಪನ್ನವಾಗುವ ಸ್ಥಿತಿ. ಸಸ್ಯ ಜೀವನದಲ್ಲಿ ಗಂಡು, ಹೆಣ್ಣು ಸಂತಾನ ಶಕ್ತಿಗಳನ್ನು ಒಂದುಗೂಡಿಸುವ ಕೆಲಸಕ್ಕೆ ಪ್ರಾಣಿಗಳ ನೆರವು ಹೆಚ್ಚು, ಹೆಚ್ಚಾಗಿ ಬೇಕಾಗುತ್ತ ಬಂದಿತು. ಹೂವುಗಳು ಜೇನಿನಂತಹ ಸವಿಯಾದ ವಸ್ತುಗಳನ್ನು ಕೀಟಗಳಿಗೆ ಲಂಚವಾಗಿ ಒಪ್ಪಿಸುತ್ತವೆ. ಹೂವಿನ ಬಣ್ಣಕ್ಕೂ ಮಧುವಿನ ಆಶೆಗೂ ಮೋಹಗೊಂಡ ಪತಂಗಗಳು, ಜೇನ್ನೊಣಗಳು, ಇರುವೆಗಳು, ಇನ್ನೂ ಹಲವಾರು ವಿಧದ ಕೀಟಗಳು, ಅವುಗಳ ಮೇಲೆ ಬಂದೆರಗಿದಾಗ ಪುಷ್ಪಗಳ ಪರಾಗ ಅವುಗಳ ಮೈಗೆ ಅಂಟಿಕೊಳ್ಳುತ್ತದೆ. ಆ ಮೂಲಕ ಬೀಜಗಳು ಉತ್ಪನ್ನವಾಗುತ್ತವೆ

ಎಂಬುದನ್ನು ಕೇಳಿದ್ದೀರಿ. ಈ ಕ್ರಮ ಒಂದೊಂದು ಹೂವಿನಲ್ಲಿ ಒಂದೊಂದು ತೆರನಾಗಿರುತ್ತದೆ. ಕೀಟಗಳ ಸಹಾಯವಿಲ್ಲದೆ, ಒಂದೇ ಹೂವಿನಲ್ಲಿರುವ ಕೇಸರದಿಂದ ಶಲಾಕಕ್ಕೆ ಪರಾಗವು ಬರಿಯ ಗಾಳಿಯಿಂದಲೇ ಹಾರಿ ಬೀಳಲೂ ಬಹುದು. ಆದರೆ ಅದರಿಂದ ಉತ್ಪನ್ನವಾಗುವ ಸಂತಾನ ದುರ್ಬಲಗೊಳ್ಳುತ್ತ ಹೋಗುತ್ತದೆ. ಭಿನ್ನ ಸಸ್ಯಗಳ ಪರಾಗ ಮಿಶ್ರಣದಿಂದಲೇ ಉತ್ತಮ ಸಂತಾನ ಉಂಟಾಗುತ್ತದೆ ಎಂಬುದು ಹೆಚ್ಚಿನವರ ಅನುಭವ. ಈ ಕೆಲಸಕ್ಕೆ ಬರಿಯ ಗಾಳಿ ಸಾಕಾಗಲಾರದು; ಹೂವಿಂದ ಹೂವಿಗೆ ಸಂಚರಿಸುವ ಕೀಟಗಳೂ ಬೇಕಾಗುತ್ತವೆ.

ನೂರಾರು ಬಗೆಯ ಹೂವುಗಳ ಅಂಗ, ಆಕಾರಗಳಿಗೆ, ವಾಸನೆ ಮತ್ತು ಬಣ್ಣಗಳಿಗೆ ಹೊಂದಿಕೊಂಡ ಒಂದು ವಿಚಿತ್ರ ಮೈತ್ರಿ ವಿವಿಧ ಪುಷ್ಪಗಳಿಗೂ ವಿವಿಧ ಕೀಟಗಳಿಗೂ ಬೆಳೆದುಬಂದಿರುವುದು ಕಾಣುತ್ತದೆ. ಬೀಜಗಳ ಉತ್ಪತ್ತಿ ಮತ್ತು ಸಸ್ಯ ಜೀವನದ ಪರಿಚಯಕ್ಕೆ ನಾವು ಈ ವಿಚಾರವನ್ನು ಕುರಿತು ಇನ್ನಷ್ಟು ಚೆನ್ನಾಗಿ ತಿಳಿಯಲೆತ್ನಿಸುವ.

**ವಂಶ**

ಇಂಥ ವಿವಿಧ ವರ್ಗಗಳಲ್ಲಿ, ಎಲ್ಲದಕ್ಕೂ ಇರುವಂಥ ಅಂಗರಚನೆ ಯಾವುದು– ಎಂಬುದರ ಮೇಲಿಂದ ಅವುಗಳ ವಂಶ(Phylum)ವನ್ನು ನಮೂದಿಸುತ್ತಾರೆ. ಒಂದು ವಂಶ ಇಲ್ಲವೆ ಫೈಲಮಿನಲ್ಲಿ ಒಂದು ಪ್ರತ್ಯೇಕವಾದ ಅಂಗರಚನೆಯು ಭ್ರೂಣಾವಸ್ಥೆಯಿಂದಲೂ ಕಾಣಿಸುತ್ತ ಬರಬೇಕು. ಉದಾಹರಣೆಗಾಗಿ ಹಾವುಗಳಿಗೆ, ನಾಯಿಗಳಿಗೆ, ಹುಲಿಗಳಿಗೆ, ಮನುಷ್ಯರಿಗೆ ಬೆನ್ನಿನ ಕಶೇರುಕ ಎಂಬುದಿದೆ. ಇದು ಭ್ರೂಣಾವಸ್ಥೆಯಲ್ಲಿ ಒಂದು ಕೋಲಿನಂತೆ ಕಾಣಿಸುತ್ತದೆ. ದೇಹವನ್ನೆಲ್ಲ ಆದರಿಸುವುದಕ್ಕೆ ಅದೇ ಬೆಳೆದು ರೂಪುಗೊಂಡು ಆಧಾರವಾಗುತ್ತದೆ. ಇಂಥ ಕಶೇರುಕವುಳ್ಳ ಪ್ರಾಣಿಗಳನ್ನು ಎಂಬ ವಂಶಕ್ಕೆ ಸೇರಿಸುತ್ತಾರೆ.

ಇಂಥ ವಂಶಗಳು ಕೂಡಿದರೆ ರಾಜ್ಯವಾಗುತ್ತದೆ. ಪ್ರಾಣಿ ರಾಜ್ಯ, ಸಸ್ಯರಾಜ್ಯವೆಂಬ ಎರಡು ಸ್ಪಷ್ಟವಾದ ವಿಭಾಗವನ್ನು ನಾವಿದರಲ್ಲಿ ಕಾಣಬಹುದು.

ಇದೇ ಬಗೆಯಲ್ಲಿ ಸಸ್ಯಗಳ ವಿಭಜನೆಯ ಕ್ರಮವನ್ನೂ, ನಾಮಕರಣ ಕ್ರಮವನ್ನೂ ಮಾಡಿ ಮುಂದಕ್ಕೆ ಹೋಗಿದ್ದಾರೆ. ಈಗಾಗಲೇ ಪ್ರಪಂಚದ ವಿಜ್ಞಾನಿಗಳು ಸುಮಾರು ಎರಡೂವರೆ ಲಕ್ಷ ಸಸ್ಯಜಾತಿಗಳನ್ನು ಹೀಗೆ ಗುರುತಿಸಿದ್ದಾರೆ. ಒಂಭತ್ತು ಲಕ್ಷದಷ್ಟು ಪ್ರಾಣಿ ಜಾತಿಗಳನ್ನು ಗುರುತಿಸಿದ್ದಾರೆ. ಪ್ರಪಂಚದ ಎಲ್ಲೆಡೆಗಳಲ್ಲೂ ನಡೆಯುತ್ತಿರುವ ಸಂಶೋಧನೆಗಳಿಂದ ಪ್ರಾಣಿ ಮತ್ತು ಸಸ್ಯಜಾತಿಗಳ ಈ ತಿಳಿವಳಿಕೆ ದಿನೇ ದಿನೇ ಬೆಳೆಯುತ್ತದೆ. ಹಾಗಿದ್ದರೂ ನಮ್ಮ ತಿಳಿವಳಿಕೆಗೆ ಸಿಗದ, ಪ್ರಾಣಿ ಜಾತಿ ಹಲವಿರಬಹುದು.

**ಪುಷ್ಪ ರಚನೆ**

ದಾಸವಾಳ, ಉಮ್ಮತ್ತದಂತಹ ಒಂದು ದೊಡ್ಡ ಹೂವನ್ನು ನಾವು ತೆಗೆದು ಪರೀಕ್ಷಿಸಿದಾಗಲೇ ಪುಷ್ಪ ರಚನೆಗೆ ಸಂಬಂಧಪಟ್ಟ ಮುಖ್ಯ ಅವಯವಗಳ ಪರಿಚಯ

ನಮಗಾದೀತು. ಹೂವಿನ ಮಧ್ಯಭಾಗ ಬಟ್ಟಲಂತೆ ಕುಳಿಯಾಗಿರುತ್ತದೆ. ಆ ತಟ್ಟೆಯ ತೀರ ಬುಡದಲ್ಲಿ ಹಸುರೆಲೆಗಳಂತಿರುವ ನಾಲ್ಕಾರು ದಳಗಳ ಒಂದು ಪಾತ್ರೆ ಕಾಣಿಸುತ್ತದೆ. ಅದಕ್ಕೆ ತಾಗಿ, ಸುತ್ತುವರಿದು, ಅದರ ಬೆಡಗಿಗೆ ಕಾರಣವಾದ, ನಾಲ್ಕೊ, ಐದೊ ಅಥವಾ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸುಂದರವಾದ ದಳಗಳನ್ನು ಕಾಣುತ್ತೀರಿ. ಬೇರೆ ಬೇರೆ ದಳಗಳ ಬದಲು ತುತ್ತೂರಿಯಂತಹ ಒಂದೇ ದಳವಿರಬಹುದು. ಇವುಗಳ  ನಡುವೆ ಎರಡು ಮುಖ್ಯವಾದ ಅವಯವಗಳಿವೆ. ತೀರ ನಡುವೆ ಒಂದು ಶಲಾಕೆ, ಅದರ ಸುತ್ತಲೂ ದಾಸವಾಳದಲ್ಲಿರುವಂತೆ ಶಲಾಕಕ್ಕೆ ಅಂಟಿಕೊಂಡ ಇಲ್ಲವೆ ಸುತ್ತುವರಿದ ರೇಶ್ಮೆ ಎಳೆಗಳಂತಹ ಕೇಸರಗಳನ್ನು ಕಾಣುತ್ತೀರಿ. ಈ ಕೇಸರಗಳ ತುದಿಯಲ್ಲಿ ಗೊಂಡೆಯಂತಹ ಅಂಗವನ್ನು ಕಾಣುತ್ತೀರಿ. ಇಲ್ಲೇನೇ ಬೀಜೋತ್ಪತ್ತಿಗೆ ಬೇಕಾದ ಒಂದು ಮುಖ್ಯ ವಸ್ತುವು, ಪರಾಗವು ಸೇರಿದೆ. ಸಾಮಾನ್ಯವಾಗಿ ಈ ಗೊಂಡೆಯನ್ನು ಮುಟ್ಟಿದರೆ, ಕೈಗೆ ಒಂದು ತೆರನ ಅತಿ ಸೂಕ್ಷ್ಮವಾದ ಅರಸಿನ ಪುಡಿ ಅಂಟುತ್ತದೆ.

ಇನ್ನು ನಡುವಣ ಶಲಾಕದಲ್ಲಿ ಮೂರು ಮುಖ್ಯ ಭಾಗಗಳನ್ನು ಪರಿಶೀಲಿಸಬಹುದು. ಶಲಾಕದ ತುದಿಯಲ್ಲಿ ಒಂದು ಮಿದುವಾದ ಗೊಂಡೆ ಇದೆ. ಶಲಾಕದ ಬುಡದಲ್ಲಿ ಉಬ್ಬಿದಂತಹ ಒಂದು ಕೋಶ ಕಾಣಿಸುತ್ತದೆ. ಇದು ಹೂವಿನ ಅಂಡಾಶಯ ಇದರೊಳಗೆ ಅತಿ ಸೂಕ್ಷ್ಮವಾದ ಮಣಿಗಳಂತಹ ಹಲವು ತತ್ತಿಗಳನ್ನು ಕಾಣಬಹುದು. ಕೇಸರದ ಕುಡಿಯಲ್ಲಿ ಕಾಣಿಸುವ ಪರಾಗವು ಶಲಾಕದ ಗೊಂಡೆಯಮೇಲೆ ಬಿದ್ದು, ಹೇಗೆಯೇ ಆಗಲಿ, ಅಂಡಾಶಯದ ಒಳಗಿನ ತತ್ತಿಗಳನ್ನು ಕೂಡಿದಾಗ ಮಾತ್ರ, ಬೀಜ ಉತ್ಪನ್ನವಾಗಬಲ್ಲದು. ಈ ವಿಚಿತ್ರವಾದ ಕೆಲಸಕ್ಕೆ ಕೀಟಗಳ ನೆರವು ಬೇಕಾಗುತ್ತದೆ. ತಮ್ಮ ಈ ಕೆಲಸವನ್ನು ಮಾಡಿಕೊಳ್ಳುವುದಕ್ಕಾಗಿಯೇ ಸಸ್ಯಗಳು ಒಂದೊಂದು ಜಾತಿಯ ಕೀಟಗಳಿಗೆ ಒಗ್ಗುವ, ವಿಶಿಷ್ಟವಾದ ಕಂಪನ್ನು ಬೀರುತ್ತವೆ; ಕೀಟಗಳ ಸಂತೋಷಕ್ಕಾಗಿ ಹೂವಿನ ತಟ್ಟೆಯ ಆಳದಲ್ಲಿ ಜೇನನ್ನೂ ತುಂಬಿಸಿಕೊಂಡಿರುತ್ತವೆ. ಆ ಜೇನಿನ ಆಶೆಗಾಗಿಯೇ ಜೇನ್ನೊಣದಂತಹ ನೂರಾರು ಬಗೆಯ ಕೀಟಗಳು ಹೂವಿಂದ ಹೂವಿಗೆ ಎರಗುತ್ತ, ತಮ್ಮ ನೀಳ ಸೊಂಡಿಲನ್ನು ಜೇನಿನ ಪಾತ್ರೆಯಲ್ಲಿ ಅದ್ದಿ ಹೀರುತ್ತ, ಹೊಟ್ಟೆ ತುಂಬಿಸಿಕೊಂಡು ಹಾರಾಡುತ್ತವೆ. ಒಂದೊಂದು ಲಿಲ್ಲಿ ಗಿಡಗಳಲ್ಲಿ ಸಾವಿರಾರು ತೆರನವಿವೆ. ಅವುಗಳ ಹೂವುಗಳೂ ಅಷ್ಟು ವಿವಿಧ. ಆ ವೈವಿಧ್ಯವಿರುವುದು ವಿವಿಧ ಕೀಟಗಳನ್ನು ಆಕರ್ಷಿಸುವ ಸಲುವಾಗಿ.

ಜಾತಿಯ ಹೂವು ಒಂದೊಂದು ಬಗೆಯ ಕೀಟವನ್ನೂ, ಜೇನ್ನೊಣವನ್ನೋ ಆಕರ್ಷಿಸುವುದಕ್ಕೆ ಬೇಕಾದ ಬೆಡಗನ್ನೂ, ಕಂಪನ್ನೂ, ರಚನೆಯನ್ನೂ ಪಡೆದಿದೆ. ಪರಾಗ ಮಿಶ್ರಣಗೊಂಡು, ಬೀಜವು ಉತ್ಪನ್ನಗೊಳ್ಳಬೇಕಾದರೆ, ಒಂದೊಂದು ಹೂವಿಗೂ ತಕ್ಕುದಾದ ಮಿತ್ರರೇ ಬರಬೇಕು. ಆ ಕೀಟಗಳು ಬರುವುದು ತಮ್ಮ ಹೊಟ್ಟೆ ತುಂಬಿಸುವುದಕ್ಕಾಗಿ ಒಂದೊಂದು ಹುಳುವೂ ಮಧುಸಂಗ್ರಹಕ್ಕಾಗಿ ಒಂದು ದಿನದಲ್ಲಿ ನೂರಾರು ಹೂವುಗಳ ಮೇಲೆ ಹಾರಿ ಎರಗಬೇಕಾಗುತ್ತದೆ. ಅವುಗಳು ಬಂದು ಎರಗಿ, ತಲೆ ತಗ್ಗಿಸಿ, ಜೇನನ್ನು ಕುಡಿದು ಹೋಗವಾಗ, ಈ ಪರಾಗ ಮಿಶ್ರಣದ, ಕೆಲಸ ತನ್ನಂತೆಯೇ ಆಗುತ್ತದೆ.

ಅವುಗಳ ಮೈಗೆ, ಕಾಲುಗಳಿಗೆ, ಮುಖಕ್ಕೆ ಕೇಸರದ ಕುಡಿಗಳಲ್ಲಿರುವ ಪರಾಗದ ಧೂಳು ತನ್ನಂತೆಯೆ ಅಂಟಿಕೊಳ್ಳುತ್ತದೆ. ಅವುಗಳ ದೇಹ ಶಲಾಕದ ಗೊಂಡೆಗೆ ಸವರಿದಾಗ ಪರಾಗ ವಿನಿಮಯಗೊಳ್ಳುತ್ತದೆ. ಹೀಗೆಯೇ ಒಂದು ಗಿಡದ ಪರಾಗವು ಇನ್ನೊಂದು ಗಿಡದ ಪುಷ್ಪಪಾತ್ರೆಯಲ್ಲಿರುವ ಶಲಾಕಕ್ಕೆ ಸವರಿ, ಮುಂದಣ ಸಂತಾನಕ್ಕೆ ಕಾರಣವಾಗುತ್ತವೆ.

**ಅಲ್ಲಲ್ಲೇ ಪರಾಗ ಮಿಶ್ರಣವಾಗದಂತೆ**

ಒಂದೇ ಹೂವಿನೊಂದಿಗೆ ಇರುವ ಕೇಸರದ ಕುಡಿಯಿಂದ, ಶಲಾಕಕ್ಕೆ ಪರಾಗ ಬಿದ್ದುದೇ ಆದರೆ, ಮುಂದಿನ ಸಂತತಿ ದುರ್ಬಲವಾಗಬಹುದೆಂದು ಕೇಳಿದ್ದೀರಿ. ಹೀಗಾಗದಂತೆ, ಕಾಲಕ್ರಮದಲ್ಲಿ ಪುಷ್ಪಗಳ ರಚನೆ ಅನೇಕ ವಿಧವಾಗಿ ವಿಕಾಸಗೊಂಡುದು ಕಂಡುಬರುತ್ತದೆ. ಹೂವಿನ ಕೇಸರ ಗಿಡ್ಡವಾಗಿದ್ದು ಶಲಾಕ ಉದ್ದವಾಗಿರುವುದುಂಟು; ಶಲಾಕ ಗಿಡ್ಡವಾಗಿದ್ದು, ಕೇಸರ ಉದ್ದವಾಗಿರುವುದುಂಟು. ಇವೆರಡೂ ಬಲಿಯುವ ಕಾಲ ಬೇರೆ ಬೇರೆಯಾಗಬಹುದು. ಇಂಥ ಕೆಲವೊಂದು ಉಪಾಯಗಳಿಂದ, ಅಲ್ಲಲ್ಲೇ ಪರಾಗ ಬಿದ್ದು ಬೀಜೋತ್ಪನ್ನವಾಗುವುದನ್ನು ತಪ್ಪಿಸುತ್ತದೆ.

**ಯೂಕಾ ಹೂ**

ಇದು ಮರುಭೂಮಿಯ ತಡಿಗಳಲ್ಲಿ ಬೆಳೆಯುವ ಹೂವಿನ ಜಾತಿ. ಈ ಹೂವಿನ ಶಲಾಕ ಬಹು ಉದ್ದವಾಗಿದ್ದು, ಕೇಸರ ತುಂಬ ಗಿಡ್ಡವಾಗಿರುತ್ತದೆ. ತಗ್ಗಿನಲ್ಲಿರುವ ಕೇಸರದ ಕುಡಿಯು ಪರಾಗವು ಬರಿದೆ ಶಲಾಕದ ಕುಡಿಯನ್ನು ಸೇರಲಾರದು. ಪ್ರೋನೂಬಾ (Pronuba)ಎಂಬ ಹೆಸರಿನ ಒಂದು ಹಾತೆ(moth) ತನ್ನ ಪ್ರಯತ್ನದಿಂದ ಅತ್ತ ತನ್ನ ಸಂತಾನ ಬೆಳೆಸುವ, ಇತ್ತ ಗಿಡಕ್ಕೆ ಉಪಕಾರ ಮಾಡುವ ಕೆಲಸವನ್ನು ಮಾಡುತ್ತದೆ. ಈ ಜಾತಿಯ ಹೆಣ್ಣು ಹಾತೆಯು ಉದ್ದೇಶಪಟ್ಟೆಂಬಂತೆ, ಯೂಕಾ ಹೂವಿನ ಕೇಸರದ ತುದಿಯಲ್ಲಿರುವ ಪರಾಗವನ್ನು ಉಂಡೆಯಾಗಿ ಕಟ್ಟಿ, ಹೊತ್ತುಕೊಂಡು ಹಾರಿ, ಇನ್ನೊಂದು ಹೂವಿನ ಮೇಲೆ ಎರಗುತ್ತದೆ. ಅಲ್ಲಿ ಕುಳಿತ ಬಳಿಕ, ಆ ಯೂಕಾ ಹೂವಿನ ಅಂಡಾಶಯದೊಳಕ್ಕೆ ಅದು ತನ್ನ ಮೊಟ್ಟೆಯನ್ನೂ ಇರಿಸುತ್ತದೆ. ಅದರ ಜೊತೆಯಲ್ಲಿ ತಾನು ತಂದಿರುವ ಪರಾಗದ ಉಂಡೆಯನ್ನು ತುರುಕಿಸುತ್ತದೆ. ಅದರ ಮೊಟ್ಟೆಗಳೊಡೆದು ಹುಳುಗಳಾಗುವ ಕಾಲಕ್ಕೆ, ಅವಕ್ಕೆ ಆಹಾರ ಬೇಕಷ್ಟೆ ಅಂಡಾಶಯದೊಳಗೆ ಇರಿಸಿದ ಆ ಮೊಟ್ಟೆಗಳು ಹುಳುಗಳಾಗುವಾಗ ಪರಾಗ ಮಿಶ್ರಣದಿಂದ ಬೀಜಗಳನ್ನು ತಿನ್ನುತ್ತ, ಬೆಳೆದು, ಹೂವಿನ ಗರ್ಭ ಕೋಶವನ್ನೊಡೆದು ಹೊರಕ್ಕೆ ಬರುತ್ತವೆ. ಅವು ತಿನ್ನದೆ ಉಳಿದ ಬೀಜಗಳು ನೆಲಕ್ಕೆ ಬಿದ್ದು, ಯೂಕಾ ಗಿಡದ ಸಂತಾನವನ್ನು ಹೆಚ್ಚಿಸುತ್ತದೆ. ಹೀಗೆಯೇ ಪರಸ್ಪರ ಸಹಾಯಕವಾದ ಪುಷ್ಪ ಮತ್ತು ಕೀಟಗಳ ನೂರಾರು ತೆರನ ಮೈತ್ರಿಗಳನ್ನು ಪ್ರಕೃತಿಯಲ್ಲಿ ಕಾಣಬಹುದು.

ಹಾತೆಗಳು, ನೊಣಗಳು, ಪತಂಗಗಳು, ಬಾವಲಿಗಳು, ಬಸವನಹುಳುಗಳು ಇವೆಲ್ಲ ಇದೇ ರೀತಿಯಿಂದ ವಿವಿಧ ಸಸ್ಯಗಳ ಸಂತಾನವನ್ನು ಹೆಚ್ಚಿಸುವುದಕ್ಕೆ ಕಾರಣವಾಗುತ್ತವೆ.

## ಬೀಜೋತ್ಪನ್ನ

ಕೇಸರದ ಗೊಂಡೆಯೆಂಬುದು ಅನೇಕ ಸೂಕ್ಷ್ಮ ಪರಾಗ ಕಣಗಳಿಂದ ಕೂಡಿದಂಥ ಅಂಗ. ಈ ಕಣಗಳಲ್ಲಿ ಒಂದೊಂದು ಗಟ್ಟಿಯಾಗಿದ್ದು, ಬಹುಕಾಲ ಉಳಿಯಬಲ್ಲಂತಹ ವಸ್ತುವಾಗಿದೆ. ಈ ಕಣಗಳು ಒಂದೊಂದು ಆಕಾರ, ಗಾತ್ರವುಳ್ಳದ್ದಿರಬಹುದು. ಅವುಗಳಿಗೆ ಹೊರಗೆ ಒಂದು ಪರೆಯ ಕೋಶವಿರುತ್ತದೆ; ಒಳಗಡೆ ಕಣದ್ರವ್ಯ ತುಂಬಿರುತ್ತದೆ. ಆ ದ್ರವ್ಯದಲ್ಲಿ ತೇಲಿಕೊಂಡಿರುವ ಎರಡೆರಡು ಬೀಜಾಂಗ(Nucleus)ಗಳಿರುತ್ತವೆ. ಇಂತಹ ಪರಾಗ ಕಣಗಳು, ಶಲಾಕದ ಕುಡಿಯ ಮೇಲೆ ಬಿದ್ದುವೆಂದರೆ, ಅಲ್ಲೇ ಅಂಟಿ ಹಿಡಿಯುತ್ತವೆ. ಅವುಗಳೊಳಗಿನ ಬೀಜಾಂಗಗಳ ಮೂಲಕ, ಅದರ ಬುಡದಲ್ಲಿರುವ ಅಂಡಾಶಯವನ್ನೇ ಸೇರಬೇಕು. ಇದೊಂದು ವಿಚಿತ್ರ ಪಯಣ. ಇದಕ್ಕೆ ಆ ಪರಾಗವು ಕೆಲವು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತದೆ. ಪರಾಗ ಕಣದಿಂದ ಒಂದು ಕಿರಿಯ ನಾಳ ಮೊಳೆಯುತ್ತದೆ. ಅದು ದಿನೇ ದಿನೇ ಬೆಳೆದು ಶಲಾಕದೊಳಗೆ ಇಳಿಯುತ್ತ, ಅಂಡಾಶಯವನ್ನು ಹೊಕ್ಕು ಅದರಲ್ಲಿರುವ ಅನೇಕ ತತ್ತಿ(ovule)ಗಳಲ್ಲಿ ಒಂದನ್ನು ಹೋಗಿ ಕೂಡಿಕೊಳ್ಳುತ್ತದೆ. ಹೀಗೆ ಪ್ರತಿಯೊಂದು ಪರಾಗ ಕಣವೂ, ಇದೇ ರೀತಿ ಅಂಡಾಶಯಕ್ಕೆ ದಾರಿ ಹುಡಕಬೇಕಾಗುತ್ತದೆ. ಇಂತಹ ಪರಾಗ ನಾಳಗಳು ಬೆಳೆಯುವುದಕ್ಕೆ ಕೆಲವು ಗಿಡಗಳಲ್ಲಿ ಒಂದು ದಿನ ಸಾಕಾದರೆ, ಕೆಲವು ಜಾತಿಯ ವೃಕ್ಷಗಳಲ್ಲಿ 8–10 ತಿಂಗಳ ಕಾಲ ಬೇಕಾಗಬಹುದು.

ಪರಾಗದಲ್ಲಿರುವ ಬೀಜಾಂಗಗಳು 'ಗಂಡು ಶಕ್ತಿ'ಯುಳ್ಳವು. ಗರ್ಭಕೋಶದಲ್ಲಿರುವ ತತ್ತಿಗಳು ಹೆಣ್ಣುತನವುಳ್ಳವು. ಇವುಗಳ ಮೇಳದಿಂದ ಮುಂದಿನ ಸಂತಾನವಾಗಬೇಕು. ಇದೇ ಬೀಜೋತ್ಪನ್ನ ಇಲ್ಲವೆ ಫಲಿಸುವಿಕೆ. ಪರಾಗದಲ್ಲಿ ಎರಡೆರಡು ಬೀಜಾಂಗಗಳಿವೆ ಎಂದೆವು. ಅವುಗಳಲ್ಲಿ ಒಂದು, ಪರಾಗ ನಾಳದ ತುದಿಯಲ್ಲಿದ್ದು, ನಾಳವು ತತ್ತಿಯನ್ನು ಸೇರಿಕೊಂಡೊಡನೆ ಅದನ್ನು ಕೂಡುತ್ತದೆ. ಹಿಂದೆ ಉಳಿದಿರುವುದು ಗಂಡು ಬೀಜಾಂಗ. ಅದು ಈಗ ಎರಡು ಬೀಜಾಂಗಗಳಾಗಿ ಒಡೆದು, ಆ ಮೇಲೆ ತತ್ತಿಯನ್ನು ಸೇರುತ್ತದೆ.

ಇತ್ತ ತತ್ತಿಯಲ್ಲೂ ಎರಡೆರಡು ಜಾತಿಯ ಬೀಜಾಂಗಗಳಿವೆ. ಹೆಣ್ಣು ಸತ್ವವುಳ್ಳ ಬೀಜಾಂಗ ಒಂದು; ಭ್ರೂಣದ ಕವಚಕ್ಕೆ ಬೇಕಾದಂಥ ಬೀಜಾಂಗವಿನ್ನೊಂದು. ಗಂಡು ಬೀಜಾಂಗವು, ತತ್ತಿಯ ಹೆಣ್ಣು ಬೀಜಾಂಗವನ್ನು ಕೂಡಿಕೊಂಡು ಅದು ಫಲಿಸಿದರೆ ಮಾತ್ರ ಸಾಲದು; ಪರಾಗದಿಂದ ಬಂದ ಎರಡನೆಯ ಗಂಡು ಬೀಜಾಂಗವೂ ತತ್ತಿಯಲ್ಲಿರುವ ಇನ್ನೊಂದು ತೆರನ ಬೀಜಾಂಗ(Polarnucleus)ವನ್ನೂ ಕೂಡಿಕೊಳ್ಳಬೇಕು. ಇದನ್ನು ಎಂಡೋಸ್ಪರ್ಮ್ ಎಂದು ಕರೆಯುತ್ತಾರೆ. ಮೊದಲನೆಯದು ಫಲಿಸಿ(ಗಂಡು ಬೀಜಾಂಗ ಹೆಣ್ಣು ಬೀಜಾಂಗಗಳ ಮೇಳ=zygate)ಭ್ರೂಣವೆನಿಸುತ್ತದೆ. ಅದೇನೆ ಕಣ ವಿಭಜನೆಯಿಂದ ಬೆಳೆದು ನಾಳಿನ ಗಿಡಕ್ಕೆ ಮೂಲಾಧಾರವಾದ ಎಲೆ, ತಾಳು, ಬೇರುಗಳುಳ್ಳ ಬೀಜವಾಗುವುದು. ಇನ್ನೊಂದು, ಎಂಡೋಸ್ಪರ್ಮ್ ಎಂಬುದು, ಇದರಂತೆ ಕಣ ವಿಭಜನೆಯಿಂದ ವೃದ್ಧಿಸಿ ಭ್ರೂಣಕ್ಕೆ ಬೇಕಾಗುವ ಆಹಾರ ಸಂಪತ್ತನ್ನು ಅದರ ಸುತ್ತಲು ಒದಗಿಸುತ್ತದೆ. ಇವೆರಡೂ ಕೂಡಿದ್ದನ್ನು ನಾವು ಬೀಜ, ಕಾಳು ಎಂಬ ಹೆಸರಿನಿಂದ ಕರೆಯುತ್ತೇವೆ. ಒಂದು

ಕಾಳೋ, ಬೀಜವೋ ನೆಲವನ್ನು ಸೇರಿದಾಗ ಸಸ್ಯ ಭ್ರೂಣಕ್ಕೆ ಆರಂಭದ ದಿವಸಗಳಲ್ಲಿ ಬೇಕಾಗಿ ಆಹಾರ ಸಂಗ್ರಹವನ್ನು, ಜತೆಗಳಲ್ಲಿರುವ ಕಾಳಿನ ದಳಗಳೇ ಒದಗಿಸುತ್ತವೆ. ಅದು ಸಸ್ಯ ರೂಪಿ ಶಿಶುವಿಗಾಗಿ ಕಾದಿಟ್ಟ ಆಹಾರ. ಅದು ನಮಗೂ ಆಹಾರವಷ್ಟೆ! ಆದುದರಿಂದ ನಾವೂ ಆಹಾರದ ಆಸೆಗಾಗಿ ವಿವಿಧ ರೀತಿಯ ಕಾಳು, ಬೀಜಗಳನ್ನು ಸಂಗ್ರಹಿಸುತ್ತಿರುತ್ತೇವೆ. ಅವುಗಳ ಬೆಳೆಗಳನ್ನು ಬೆಳೆಯುತ್ತೇವೆ.

## ಬೀಜ ಪ್ರಸಾರ

ಪರಾಗಕಣ ಶಲಾಕವನ್ನು ಸೇರಿ ಗರ್ಭಾಶಯದ ತತ್ತಿಯನ್ನು ಕೂಡುವುದಕ್ಕೆ ಒಂದು ದಿನ ಹಿಡಿಯುವುದುಂಟು; ಕೆಲವು ಜಾತಿಯ ವೃಕ್ಷಗಳಲ್ಲಿ ಎಂಟು ಹತ್ತು ತಿಂಗಳು ಹಿಡಿಯಲೂ ಬಹುದೆಂದೆವು. ಮುಂದೆ ಫಲಿಸಿದ ತತ್ತಿಗಳು ಹೂವಿನ ಗರ್ಭಕೋಶದಲ್ಲಿ ಬೆಳೆದು, ನಮಗೆ ಪರಿಚಿತವಾದ ಒಂದು ಕಾಳೋ, ದ್ವಿದಳ ಧಾನ್ಯವೋ, ಗೊರಟೋ, ಬೀಜವೋ ಆಗಿ ರೂಪುಗೊಳ್ಳುತ್ತದೆ. ಒಂದು ಅವರೆಯ ಕೋಡನ್ನು ಒಡೆದು ನೋಡಿದರೆ, ಒಳಗಡೆ ನಾಲ್ಕಾರು ಬೀಜಗಳಿರುವುದು ಕಾಣಿಸುತ್ತದೆ. ಹಿಂದೆ ತತ್ತಿಯ ಕೋಶವಾಗಿದ್ದ ಹಸುರು ಕವಚವು, ಅದರ ನಾಲ್ಕಾರು ಬೀಜಗಳನ್ನು ಹೊರಗಡೆಯಿಂದ ಆವರಿಸಿರುವುದು ಕಾಣುತ್ತದೆ. ಹಸಿಯಾಗಿದ್ದಾಗ, ಆ ಕೋಶವನ್ನು ಒಡೆದು ನೋಡಿದರೆ, ಅದರ ಒಳಮೈಗೂ ಬೀಜಕ್ಕೂ ಒಂದು ತೊಟ್ಟು ಅಂಟಿರುವುದು ಕಾಣುತ್ತದೆ. ಅವರೆ, ಉದ್ದು ಮೊದಲಾದ ಧಾನ್ಯದ ಕೋಡುಗಳು ಬಲಿತಾಗ, ಈ ತೊಟ್ಟು ಕಳಚುತ್ತದೆ; ಕೋಡು ಒಡೆದೊಡನೆಯೇ ಕಾಳುಗಳು ಹೊರಕ್ಕೆ ಸಿಡಿಯುತ್ತವೆ. ಮನುಷ್ಯ ತನಗೆ ಬೇಕಾದಂತೆ ಇಂತಹ ಕಾಳುಗಳನ್ನು ಸಂಗ್ರಹಿಸಿ, ಬೇಕಾದಲ್ಲಿ ನೆಡಬಹುದು. ಆದರೆ ಗಿಡ ಅವನಿಗಾಗಿ ಕಾದು ಕುಳಿತಿರದು. ಅದು ತನಗೆ ಬೇಕಾದ ರೀತಿಯಲ್ಲಿ ತಾನು ಸಂತಾನವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ತಾಯಿ ಗಿಡದಿಂದ ಬೀಜಗಳು ದೂರದೂರಕ್ಕೆ ಸಿಡಿದು, ಸರಿದು ಬಿದ್ದರೇನೇ ಪ್ರಯೋಜನ. ಅವರೆ, ಹುರುಳಿ, ಉದ್ದಿನ ಕೋಡುಗಳಲ್ಲಿ ಹಾಗಾಗುತ್ತದೆ. ಅಂತಹ ಕೋಡುಗಳು ಸಿಡಿದರೆ ಹತ್ತೆಂಟು ಅಡಿ ದೂರಕ್ಕೆ ಕಾಳು ಸಿಡಿಯಬಹುದು.

## ಗಾಳಿ ಪಯಣ

ಇನ್ನೆಷ್ಟೋ ಗಿಡಗಳಲ್ಲಿ ಹೀಗೆ ಬೀಜಗಳು ತೀರ ಸಮೀಪಕ್ಕೆ ಬಿದ್ದುವಾದರೆ, ಅವೆಲ್ಲವೂ ಗಿಡಗಳಾದರೆ, ಅವು ಬಲಿತು ಬೆಳೆಯುವುದಕ್ಕೆ ಸ್ಥಳ ಸಾಕಾಗಲಾರದು; ನೆಲದಲ್ಲಿರುವ ಸಾರವೂ ಸಾಕಾಗಲಾರದು. ಹೀಗಾಗಿ ಅನೇಕ ಗಿಡಗಳು ತಮ್ಮ ಬೀಜ ಪ್ರಸಾರಕ್ಕೆ ಕಾಲಾಂತರದಲ್ಲಿ ನೂರಾರು ಹೊಸ ಬಗೆಗಳನ್ನು ಕಂಡುಹಿಡಿಯಬೇಕಾಯಿತು. ಪರಾಗ ಮಿಶ್ರಣಕ್ಕೆ ಹೇಗೆ ಅನ್ಯಜೀವಿಗಳ ನೆರವು ಬೇಕಾಯಿತೋ, ಅವುಗಳ ಬೀಜ ಪ್ರಸಾರಕ್ಕೂ ಅನ್ಯ ಜೀವಿಗಳ ಸಹಾಯ ಬೇಕಾಯಿತು. ಜಲ ಸಸ್ಯಗಳಾದರೆ ಹರಿಯುವ ನೀರು ಎಲ್ಲೆಂದರಲ್ಲಿಗೆ ಅವುಗಳ ಬೀಜಗಳನ್ನು ಒಯ್ದು ಸಾಗಿಸಬಹುದು. ಬೀಜಗಳು ಅತಿ ಚಿಕ್ಕವಾದರೆ ಗಾಳಿಯೂ ಈ ಕೆಲಸವನ್ನು ಮಾಡಬಹುದು. ಆಗ ಅಂಥ ಬೀಜಗಳಿಗೆ ಗಾಳಿಯಲ್ಲಿ ತೇಲಬಲ್ಲ ಬೇರೆ ಉಪಕರಣ ಬೇಕಾಗುತ್ತದೆ. ಬೀಜಕ್ಕೆ ತಗಲಿಕೊಂಡು,

ಮರುವಕ(ಹುಣುಗಲು), ಕರಿಮರ (ಹೆಬ್ಬೋಗಿ) (Hopea whitiana)ಗಳಂತಹ ಬೀಜಗಳಿಗೆ ಇಂತಹ ರೆಕ್ಕೆಗಳಿವೆ. ಅವು ಗಾಳಿಯಲ್ಲಿ ಬೀಜವನ್ನು ತೇಲಿಸಿಕೊಂಡು ದೂರಕ್ಕೆ ಒಯ್ದು ಕೆಡಹುತ್ತವೆ. ಆದಿಯಲ್ಲಿ ಯಾವುದು ತತ್ತಿಯ ಕೋಶವಾಗಿತ್ತೋ, ಅದೇ ವಸ್ತು ಬೀಜಕ್ಕೆ ಇಂತಹ ರೆಕ್ಕೆಯನ್ನೊದಗಿಸಿ ಕೊಟ್ಟದ್ದು. ನೀವು ಬೂರುಗ (Bombax Malabaricum)ಮರವನ್ನು ಕಂಡಿದ್ದೀರಿ. ಬೇಸಗೆಯಲ್ಲಿ ಅದರ ಕೋಡೊಂದು ಒಡೆಯಿತೆಂದರೆ, ಒಳಗಣ ಬೀಜಗಳು ಗಾಳಿಗೆ ನಾಲ್ಕಾರು ಮೈಲು ದೂರದ ತನಕ ಚದರಿಬೀಳುತ್ತವೆ. ಅದಕ್ಕೆ ಯಾವ ನೆರವಿದೆ? ಬೀಜದ ಹೊರಕ್ಕೆ ರೇಶ್ಮೆಯಂತಹ ಸೂಕ್ಷ್ಮ ಹತ್ತಿಯ ಕವಚವಿದೆ. ಕೋಡು ಒಡೆದೊಡನೆಯೇ, ಈ ಕವಚ ಹಿಗ್ಗಿ, ಗಾಳಿಯಲ್ಲಿ ಹಗುರವಾಗಿ ತೇಲಿ ಹೋಗುವುದಕ್ಕೆ ಸಹಾಯಮಾಡುತ್ತದೆ. ಎರಡು ಮೂರು ಅಂಗುಲ ಗಾತ್ರದ ಎಕ್ಕೆ ಗಿಡವನ್ನು ಕಂಡಿದ್ದೀರಾ? ಅದರ ಕೋಡಿನ ಸಿಪ್ಪೆಯನ್ನು ತೆಗೆದರೆ, ಬೀಜಗಳೆಲ್ಲ ಮೀನಿನ ಮೈಯ್ಯ ಹೆರೆಗಳಂತೆ ಒಂದಕ್ಕೊಂದು ಅಂಟಿದ್ದು, ಕಾಣಿಸುತ್ತದೆ. ಒಂದೊಂದು ಬೀಜವೂ ಬೇರೆ ಬೇರೆಯಾಗುತ್ತದೆ. ಆ ಬೀಜಕ್ಕಂಟಿದ ರೇಶ್ಮೆಯ ಚುಂಗುಗಳು, ತಿರುವುಮುರುವು ಮಾಡಿ ಹಿಡಿದ ಕೊಡೆಯ ಆಕಾರದಲ್ಲಿ ಬಿಡಿಸಿಕೊಳ್ಳುತ್ತವೆ. ಗಾಳಿಯ ಪ್ರವಾಹಕ್ಕೆ ಬೀಜ ಸಿಕ್ಕಿತಾದರೆ, ಅದು ತಕ್ಷಣ ಮೇಲಕ್ಕೂ ದೂರಕ್ಕೂ ಏರಿ, ಗರಗರನೆ ತಿರುಗುತ್ತ ಸಾಗುತ್ತದೆ. ಈ ಸ್ಥಿತಿಯಲ್ಲಿ ಅದು ಹತ್ತೆಂಟು ಮೈಲುಗಳ ದೂರವನ್ನೂ ಸಂಚರಿಸಬಲ್ಲುದು.

**ಸವಾರಿ**

ಅನೇಕ ಗಿಡಗಳು, ಅವುಗಳಲ್ಲೂ ಹೆಚ್ಚಿಗೆ ಎತ್ತರಕ್ಕೆ ಬೆಳೆಯದಂಥ ಸಸ್ಯ ಜಾತಿಗಳು ಬೇರೆ ಉಪಾಯವನ್ನು ಕಂಡುಕೊಂಡಿವೆ. ಬಲಿತಾಗ, ಅವುಗಳ ಬೀಜಗಳನ್ನು ಸೂಕ್ಷ್ಮವಾದ ಮುಳ್ಳುಗಳೂ, ಕೊಕ್ಕೆಗಳೂ ಆವರಿಸಿಕೊಳ್ಳುತ್ತವೆ. ಇಂಥ ಸಸ್ಯಗಳ ಎಡೆಯಿಂದ ಒಂದು ಪಶು ಹಾದು ಹೋದರೆ, ಅವುಗಳ ಮೇಲೆ ಪಕ್ಷಿಗಳು ಬಂದೆರಗಿದರೆ, ಈ ಬೀಜಗಳು ತಮ್ಮ ಮುಳ್ಳು, ಚುಂಗುಗಳ ಸಹಾಯದಿಂದ ಆ ಪಶು ಇಲ್ಲವೆ ಪಕ್ಷಿಗಳ ರೋಮವನ್ನೂ, ತುಪ್ಪಳವನ್ನೂ ಅಂಟಿಕೊಳ್ಳುತ್ತವೆ. ಆ ಮೂಲಕ ಆ ಬೀಜಗಳು ತಮ್ಮ ಪ್ರಯಾಣವನ್ನು ಸಾಧ್ಯವನ್ನಾಗಿ ಮಾಡಿಕೊಳ್ಳುತ್ತವೆ.

**ಹಣ್ಣು**

ಮಾವು, ಹಲಸು, ಸೇಬು, ಪಪ್ಪಾಯಿ ಇಂತಹ ಮರಗಳ ಹಣ್ಣುಗಳನ್ನು ಕಂಡರೆ ನಮಗೆ ಬಾಯಿ ನೀರೂರುತ್ತದೆ. ಗಿಡಗಳು ನಮಗಾಗಿಯೇ ಇವನ್ನೆಲ್ಲಾ ಪಡೆಯುತ್ತಿರಬೇಕೆಂದು ನಮಗನಿಸಬಹುದು. ಆ ಗಿಡಗಳಿಗೆ ಅಂತಹ ಪರೋಪಕಾರ ಬುದ್ದಿಯಿಲ್ಲ. ಬೀಜ ಪ್ರಸಾರದ ಸ್ವಾರ್ಥದ ದೃಷ್ಟಿಯಿಂದ, ಅವು ಮಾಂಸಲವಾದ ಹಣ್ಣುಗಳನ್ನು ತಾಳುತ್ತವೆ. ಕಾಯಿ, ಹಣ್ಣುಗಳು ಬೀಜಕ್ಕೊಂದು ಬಗೆಯ ಹೊದಿಕೆ. ಬೀಜವನ್ನಾವರಿಸಿದ ಕಾಯಿ ಆ ಬೀಜಗಳು ಬಲಿಯುವ ತನಕವೂ ಮಾಗುವುದಿಲ್ಲ. ಅಂಥ ಕಾಯಿ ಹುಳಿಯಿರಬಹುದು, ಸೊನೆ ತುಂಬಿದ್ದಿರಬಹುದು. ಬೀಜ ಬಲಿಯಿತೆಂದರೆ,

ಆ ಮೇಲೆ ಕಾಯಿ ಪಕ್ವವಾಗುತ್ತದೆ. ಪಕ್ಷಿಗಳನ್ನೂ ಪ್ರಾಣಿಗಳನ್ನೂ ಆಕರ್ಷಿಸುವಂತೆ ಅದಕ್ಕೆ ಮೋಹಕವಾದ ಬಣ್ಣವೂ ಬರುತ್ತದೆ. ಕಾಯಿಗಳ ಹುಳಿ, ಒಗರು ರುಚಿಗಳು ಹೋಗಿ, ರಸ ತಿರುಳುಗಳಿಂದ ಕೂಡಿ, ಸಕ್ಕರೆಯಂತಹ ಸವಿಯನ್ನು ತಾಳಿ, ಇತರ ಪ್ರಾಣಿಗಳ ಮನಸ್ಸನ್ನು ಆಕರ್ಷಿಸುತ್ತವೆ. ಅಂತಹ ಹಣ್ಣುಗಳನ್ನು ಮೆಲ್ಲುವುದಕ್ಕೆ ಕಪಿಗಳ ಹಿಂಡು ಬರಬಹುದು. ನೂರಾರು ಪಕ್ಷಿಗಳ ಹಿಂಡು ಬರಬಹುದು. ಇವೆಲ್ಲವಕ್ಕೂ ಹಣ್ಣು ಆಹಾರ. ಹಣ್ಣುಗಳನ್ನು ಹಕ್ಕಿಗಳು ಕಚ್ಚಿ ಒಯ್ದು, ತಿಂದಾದ ಬಳಿಕ, ಬೀಜವನ್ನು ಎಲ್ಲಿಯಾದರೂ ಎಸೆಯುತ್ತವಷ್ಟೆ. ಪ್ರಾಣಿಗಳೂ ಅಂಥ ಕೆಲಸಮಾಡಬಹುದು. ಹಣ್ಣನ್ನು ತಿಂದಾದ ಮೇಲೆ ಇವಾವುವಕ್ಕೂ ಬೀಜ ಬೇಡ. ಬೀಜ ಸಹಿತವಾಗಿ ಆಲ ಮೊದಲಾದ ಮರಗಳ ಹಣ್ಣುಗಳನ್ನು ತಿಂದು, ಪಕ್ಷಿಗಳು ಆ ಬೀಜವನ್ನು ಹಿಚಿಕೆಯ ರೂಪದಲ್ಲಿ ಎಲ್ಲಿಯಾದರೂ ಚೆಲ್ಲಿಬಿಡುತ್ತವೆ. ಬೀಜಗಳಿಗೆ ಗಟ್ಟಿ ತೊಗಟೆಯಿರುವುದರಿಂದ, ಏನೂ ಹಾನಿ ಬರುವುದಿಲ್ಲ. ಅವು ಇನ್ನೊಂದು ಕಡೆಗೆ ಹೋಗಿ ಬಿದ್ದು, ಅನುಕೂಲ ಕಾಲ ಒದಗಿದಾಗ ಮೊಳೆಯುವುದಕ್ಕೆ ನೆಪವಾಗುತ್ತದೆ. ಮಾವಿನಂತೆ ಒಂದು ಹಣ್ಣು ದೊಡ್ಡದಾಗಿದ್ದರೆ, ಹಕ್ಕಿಗಳು ಅವುಗಳನ್ನು ಕಚ್ಚಿಕೊಂಡು ಹೋಗಿ, ಹಣ್ಣಿನ ಅಂಶವನ್ನು ಮಾತ್ರ ತಿಂದು, ಬೀಜವನ್ನು ಬಿಟ್ಟುಬಿಡುತ್ತವೆ. ಹೀಗೆ ಹಣ್ಣು ಇರುವುದು ನಾಳಿನ ಬೀಜ ಪ್ರಸಾರದ ಉಪಾಯಕ್ಕಾಗಿ ಸಸ್ಯಗಳು ತೊಡುವ ಆಕರ್ಷಕ ಸಾಧನ. ನೀವು ಒಂದೊಂದು ಹಣ್ಣನ್ನು ಕುರಿತು ಯೋಚಿಸಿದರೂ, ಆ ಫಲ ವೃಕ್ಷಗಳು ಮನುಷ್ಯ ಸಹಾಯವಿಲ್ಲದೆಯೂ ಊರಿಂದೂರಿಗೋ, ದೇಶದಿಂದ ದೇಶಕ್ಕೋ ಹೇಗೆ ಹಬ್ಬಿದುವು ಎಂದು ಊಹಿಸಲು ಬಂದೀತು.

### ಸಂತಾನ ರಕ್ಷಣೆಗೆ

ಬೀಜದಿಂದ ತಮ್ಮ ಸಂತಾನ ಪರಂಪರೆಯನ್ನು ಕಾಯುವುದರಲ್ಲಿ ಬೀಜ ಪ್ರಸಾರವು ಒಂದು ಮುಖ್ಯವಾದ ಉಪಾಯವಾದರೂ, ಅದೊಂದೇ ಸಾಲದು. ಗಿಡಗಳೂ, ಕಾಳುಗಳೂ, ನೂರಾರು ಅನ್ಯ ಪ್ರಾಣಿಗಳಿಗೆ ಆಹಾರವಾಗಿರುವಾಗ– ಈ ಸಂತಾನ ಪರಂಪರೆಯನ್ನು ಉಳಿಸುವ ಕೆಲಸ ಇನ್ನೂ ಕಷ್ಟತರ. ಆ ಬೀಜಗಳಿಗೆ ತೀರ ಗಟ್ಟಿಯಾದ ಹೊರಕವಚ ಇಲ್ಲವೆ ಓಡು ಇದ್ದುದಾದರೆ, ಇನ್ನೂ ಒಳಿತು. ತಾವರೆಯ ಬೀಜ ಅಂಥದು. ಸಪೋಟ, ಮಾವುಗಳು ಬೀಜದ ಓಟೆಗಳು ಅಂಥವು. ಆ ಬಗೆಯ ಕವಚಗಳಿಗೆ ಬೇರೆಯ ಗುಣಗಳೂ ಇರಬೇಕು. ಬೀಜವೊಂದು ಎಲ್ಲಿ ಹೋಗಿ ಬೀಳುತ್ತದೆ ಎನ್ನುವಂತಿಲ್ಲ; ಬಿದ್ದಲ್ಲಿನ ಹವೆ, ಬಿಸಲು, ಚಳಿ ಮೊದಲಾದ ವಿಪರೀತಗಳಿಗೂ ಅದು ಮೈಯೊಡ್ಡಿರಬೇಕು. ಅಂಥ ಶಕ್ತಿಯುಳ್ಳ ಸಸ್ಯಸಂತಾನ ಹೇಗೋ ಹೇಗೋ, ಉಳಿಯುತ್ತದೆ. ನಟ್ಟು ಬೆಳೆಸುವ ಗಿಡ, ಪೈರುಗಳ ಎಡೆಗಳಲ್ಲಿ ನಾವು ಬೇಡವೆಂದರೂ ಬೆಳೆಯುವ ಬಗೆಬಗೆಯ ಕಳೆಗಳು ಅಂಥವು! ಸಾರವಿದ್ದಲ್ಲಿ, ಇಲ್ಲದಲ್ಲಿ, ಒಂಟಿಯಾಗಿ, ಗುಂಪಾಗಿ, ಬೆಳೆದು ಇನ್ನೊಂದು ಗಿಡ ಬೆಳೆಯದಷ್ಟು ತಾವನ್ನು ಆವರಿಸುವ ಗುಣವನ್ನು ಅವು ಪಡೆದುದರಿಂದ, ಈ ಎಲ್ಲ ಜಾತಿಯ ಕಳೆಗಳೆಂಬುವು ಬದುಕಿನ ಹೋರಾಟದಲ್ಲಿ ಗೆದ್ದು

ನಿಂತ ಗಿಡಗಳಾಗಿವೆ. ನೆಗ್ಗಿನಮುಳ್ಳು, ಮಿರ್ಜಾಮುಳ್ಳು, ನಾಚಿಕೆಮುಳ್ಳು ಇಂಥ ಕಳೆಗಳ ಹಾವಳಿಯನ್ನು ನಾವು ಹೋದಲ್ಲಿ ಕಾಣುತ್ತೇವೆ. ಅವು ಬೀಜ ಪ್ರಸಾರದಲ್ಲಿ ಗಳಿಸಿದ ಯಶಸ್ಸೇ ಅದಕ್ಕೆ ಕಾರಣ. ನಾವು ನಟ್ಟು ಬೆಳೆಯಿಸುವ ಗಿಡಗಳು ಮಾನವನ ಕೃಷಿಯ ರೀತಿಯಿಂದಾಗಿ ಕೇವಲ ಅನುಕೂಲ ಸ್ಥಿತಿಯಲ್ಲೇ ಬೆಳೆಯಲು ಕಲಿತಿರುತ್ತವೆ. ವಿರುದ್ಧ ಪರಿಸ್ಥಿತಿಯನ್ನೇ ಇದಿರಿಸಬಲ್ಲ ಶಕ್ತಿ ಅವುಗಳಲ್ಲಿ ಕಡಿಮೆಯಾಗುತ್ತದೆ. ಕಳೆಗಳು ಹಾಗಲ್ಲ. ಅವುಗಳಲ್ಲಿ ಮೊದಲಿನಿಂದಲೂ ವಿರೋಧ ಶಕ್ತಿಗಳನ್ನು ಇದಿರಿಸುವ ಗುಣ ಬೆಳೆದು ಬಂದಿರುತ್ತದೆ. ಅವು ನಮ್ಮ ಹೊಲಗಳಲ್ಲಿ ತಮ್ಮದೇ ಹೆಚ್ಚಳವನ್ನು ತೋರಿಸುತ್ತವೆ.

*****

**ಲೇಖಕರು**

ಶಿವರಾಮ ಕಾರಂತರು(1902–1997) "ಕಡಲತೀರದ ಭಾರ್ಗವ", "ನಡೆದಾಡುವ ವಿಶ್ವಕೋಶ" ಎಂದೇ ಖ್ಯಾತರಾಗಿದ್ದ ಕನ್ನಡ ಸಾಹಿತ್ಯ–ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರ. ಆಡುಮುಟ್ಟದ ಸೊಪ್ಪಿಲ್ಲ, ಹಾಗೆಯೆ ಕಾರಂತರು ಬರೆಯದ ಸಾಹಿತ್ಯ ಪ್ರಕಾರವೇ ಇಲ್ಲ. ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿಲ್ಲದಿದ್ದರೂ, ಅವರ ಸಾಹಿತ್ಯ ಪರಿಶ್ರಮ ಅಪಾರವಾದುದು. ಜ್ಞಾನಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರ, ಎಂಟು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ಗಳನ್ನಿತ್ತು ಪುರಸ್ಕರಿಸಿವೆ.

ಸಾಹಿತ್ಯ, ರಂಗಭೂಮಿ, ಚಲನಚಿತ್ರ, ವಿಜ್ಞಾನ, ಚಿತ್ರಕಲೆ, ಸಂಗೀತ, ಶಿಕ್ಷಣ, ರಾಜಕೀಯ, ಪತ್ರಿಕೋದ್ಯಮ, ಭಾಷೆ, ಸಂಸ್ಕೃತಿ ಹೀಗೆ ಪಟ್ಟಿ ಬೆಳೆಯುತ್ತದೆ. ಕಾರಂತರು 'ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ'ಗಳನ್ನು ಬರೆದಿದ್ದಾರೆ. ಸಿರಿಗನ್ನಡ ಅರ್ಥಕೋಶವನ್ನು ತಯಾರಿಸಿದ್ದಾರೆ. ಯಕ್ಷಗಾನ ಕುರಿತ ಪುಸ್ತಕಗಳನ್ನು ಬರೆದಿದ್ದಾರೆ. ಶಿಲ್ಪಕಲೆ, ಚಿತ್ರಕಲೆ ಕುರಿತ ಪುಸ್ತಕಗಳನ್ನು ಬರೆದಿದ್ದಾರೆ, ಚಲನಚಿತ್ರ ನಿರ್ಮಿಸಿದ್ದಾರೆ. ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ.

**ಆಶಯ**

ವಿಜ್ಞಾನ ಬರಹ ದೃಷ್ಟಿಯಿಂದ ಕಾರಂತರ ಸಾಹಿತ್ಯ ಅತ್ಯಂತ ಮಹತ್ವ ಪಡೆಯುತ್ತದೆ. ಅವರ ಸಾಹಿತ್ಯ ಭಂಡಾರದಿಂದ ಪ್ರಾಣಿ ಸಸ್ಯ ಸ್ನೇಹ ಕುರಿತ ಲೇಖನ ಪಠ್ಯದಲ್ಲಿ ಅಳವಡಿಸಲಾಗಿದೆ. ಈ ಲೇಖನ ಕೃಷಿ ವಿಜ್ಞಾನವನ್ನ ಮಕ್ಕಳಿಗೆ ಹಾಗೂ ಆಸಕ್ತ ಓದುಗರಿಗೆ ತಲುಪಿಸಲು ಬೇಕಾಗುವ ಕೌಶಲ್ಯಗಳನ್ನು ಅದ್ಭುತವಾಗಿ ಪರಿಚಯಿಸಿದೆ.

**ಶಬ್ದಾರ್ಥ**

ಬ್ಯಾಕ್ಟೀರಿಯಾ=ಸೂಕ್ಷ್ಮರೋಗಾಣು, ಸಂತಾನ=ಸಂತತಿ ಉತ್ಪತ್ತಿ, ಅವಯವ=ದೇಹದ ಒಂದು ಭಾಗ ಅಂಗ, ಗೊಂಡೆ=ಗೊಂಚಲು ಗುಚ್ಚ, ಶಲಾಕೆ=ವಕ್ರತೆ, ಕೋಶ=ಸ್ಥೂಲ ದೇಹ, ಹಾತೆ=ಪಾತರಗಿತ್ತಿ ಚಿಟ್ಟೆ

**ಪ್ರಶ್ನೆಗಳು**

1. ಸಸ್ಯ ಜೀವನ, ಪ್ರಾಣಿ ಸಸ್ಯ ಸ್ನೇಹ ಕುರಿತಂತೆ ಲೇಖಕರು ವಿವರಿಸುವ ಬಗೆಯನ್ನು ತಿಳಿಸಿ?
2. ಪುಷ್ಪ ರಚನೆಯ ವಿವರವನ್ನು ತಿಳಿಸಿ?
3. ಯೂಕಾ ಹೂವಿನ ವಿಶೇಷತೆಯನ್ನು ವಿವರಿಸಿ?
4. ಬೀಜೋತ್ಪನ್ನ ಕುರಿತಂತೆ ಸೂಕ್ಷ್ಮ ವಿಚಾರಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
5. ಬೀಜ ಪ್ರಸಾರದ ವಿವಿಧ ಬಗೆಗಳನ್ನು ತಿಳಿಸಿ?
6. ಗಾಳಿಯಲ್ಲಿ ಬೀಜಗಳ ಪ್ರಸಾರಣೆ ವೈಶಿಷ್ಟ್ಯತೆಯನ್ನು ಬರೆಯಿರಿ?
7. ಹಣ್ಣುಗಳ ಬೀಜೋತ್ಪಾದನೆ ಹಾಗೂ ಪ್ರಸಾರವನ್ನು ವಿಶ್ಲೇಷಿಸಿ?
8. ಬೀಜ ಸಂತಾನ ರಕ್ಷಣೆಯಲ್ಲಿ ಕಂಡುಕೊಂಡ ಉಪಾಯಗಳಾವವು?

**ಹೆಚ್ಚಿನ ಓದು**

1. ವಿಜ್ಞಾನ ಪ್ರಪಂಚ, ಸಂಪುಟ–1,2,3,4 ಲೇ: ಡಾ. ಶಿವರಾಮಕಾರಂತ

ವಿಜ್ಞಾನ/ಪರಿಸರ
–ಬರಹ

೧೭

# ಜೇಡ ಜಾಲ

ಡಾ. ಟಿ.ಆರ್. ಅನಂತರಾಮು

'ಒಡಲ ನೂಲಿನಿಂದ ನೇಯುವಂತೆ ಜೇಡಜಾಲ'ಎಂದರಲ್ಲವೆ ವರಕವಿ ಬೇಂದ್ರೆ. ತಮ್ಮ ಕಲ್ಪನಾ ವಿಲಾಸ ಹೇಗೆ ಮೂರ್ತಗೊಂಡಿತು ಎಂಬುದಕ್ಕೆ ಅವರು ಕೊಟ್ಟ ಉಪಮೆ ಇದು. ನಿಜ. ಜೇಡ ಬಲೆ ಹೆಣೆಯುವುದೇ ಬೇಟೆಗೆಂದು. ಆದರೆ 25 ಮೀಟರ್ ಅಗಲದ ಜೇಡ ಬಲೆಯನ್ನು ನೋಡಿದವರುಂಟೆ? ಎರಡು ಸಿಟಿ ಬಸ್ ಉದ್ದ ಎನ್ನಿ. ಇಂಥ ಅಪರೂಪದ ಬಲೆಯನ್ನು ನೇಯ್ದಿರುವ ಜೇಡನ ಹೆಸರು ಡಾರ್ವಿನ್ ಬಾರ್ಕ್ ಸ್ಪೈಡರ್. ಇದು ಇಡೀ ನದಿಯೊಂದಕ್ಕೆ ಅಡ್ಡಗಟ್ಟೆ ಹಾಕಿದಂತೆ ಕಾಣುತ್ತದೆ. ಇನ್ನು ಜೇಡನ ಬಲೆಯೆಂದರೆ ಅದು ಪ್ರೋಟೀನ್ ತಾನೆ? ಆದರೆ ಈ ಬಲೆ ಮಳೆ, ಬಿಸಿಲಿಗೂ, ಗಾಳಿಗೂ ಜಗ್ಗಿಲ್ಲ. ಈವರೆಗೆ ಅಧ್ಯಯನ ಮಾಡಿರುವ ಜೇಡ ಬಲೆಗಿಂತ ನೂರು ಪಟ್ಟು ಗಟ್ಟಿ ಹತ್ತಿರ ಹೋಗಿ ನೋಡಿದರೆ 30 ಕೀಟಗಳು ಈ ಬಲೆ ಮಳೆ, ಬಿಸಿಲಿಗೂ, ಗಾಳಿಗೂ ಜಗ್ಗಿಲ್ಲ. ಈ ಬಲೆಗೆ ಸಿಕ್ಕಿ ಗೋತ ಹೊಡೆದಿದ್ದವು. ಆಹಾರದ ಗೋದಾಮನ್ನೇ ಜೇಡ ಜೋಪಾನ ಮಾಡಿಕೊಂಡಂತೆ ಕಾಣುತ್ತಿದೆ. ನೇಕಾರ ಜೇಡಗಳಲ್ಲಿ ಇದಕ್ಕೇ ಮೊದಲ ಪ್ರಶಸ್ತಿ. ವಾಸ್ತವವಾಗಿ ಮಡಗಾಸ್ಕರ್‌ನಲ್ಲಿರುವ ಅಂಡಾಸಿಬೆ–ಮಾಂಟಾಡಿಯ ರಾಷ್ಟ್ರೀಯ ಉದ್ಯಾನವನದಲ್ಲಿ ಈ ಬಲೆಯನ್ನು ಫಾರೆಸ್ಟ್ ಗಾರ್ಡ್ ಅದೆಷ್ಟೋ ಬಾರಿ ಪ್ರವಾಸಿಗಳಿಗೆ ತೋರಿಸಿದ್ದಾನಂತೆ. ಆದರೆ ಜಗತ್ತಿಗೆ ತಿಳಿಯುವುದು ಹೇಗೆ? ಪೋರ್ಟರಿಕೋ ವಿಶ್ವವಿದ್ಯಾಲಯದ ಸಂಶೋಧಕರು ಇದರ ಚಿತ್ರ ತೆಗೆದರು. "ಜರ್ನಲ್ ಆಫ್ ಅರಾಕ್ನಾಲಜಿ'ಯಲ್ಲಿ ಪ್ರಕಟಿಸಿದರು. ಜಗಜ್ಜಾಹೀರಾಯಿತು. ಕಳೆದ ವರ್ಷದ ಸೆಪ್ಟೆಂಬರ್ ತಿಂಗಳ ಬಂಪರ್ ಕ್ರಾಪ್‌ನಲ್ಲಿ ಇದೂ ಒಂದು.

**ಮಾಹಿತಿ ಕಿಂಡಿ:** ಜೇಡ ಮತ್ತು ಚೇಳು ಪ್ರಾಣಿ ವಿಜ್ಞಾನದಲ್ಲಿ ಆರ್ಕಿನೀಡ್ಸ್ ಎಂಬ ಒಂದೇ ಗುಂಪಿಗೆ ಸೇರಿದ ಜೀವಿಗಳು. ಎಲ್ಲ ಚೇಳುಗಳ ಬಾಲದ ಮಣಿಯಲ್ಲಿ ವಿಷವಿರುತ್ತದೆ. ಹಾಗೆಯೇ ವಿಷಕಾರಿ ಜೇಡಗಳೂ ಉಂಟು. ಜೇಡ ತನ್ನ ಹಿನ್ನೆಲೆಯ ವಾತಾವರಣಕ್ಕೆ ತಕ್ಕಂತೆ ಬಣ್ಣ ಬದಲಿಸಿಕೊಳ್ಳಬಲ್ಲದು. ಅಂಬರದಲ್ಲಿ ಜೇಡಗಳು ಸಿಕ್ಕಿಹಾಕಿಕೊಂಡು ಪಳೆಯುಳಿಕೆಗಳಾಗಿವೆ. ಇಂಥ ಪಳೆಯುಳಿಕೆಗಳನ್ನು ಆಧರಿಸಿ ಜೀವಿ ವಿಜ್ಞಾನಿಗಳು 1000 ಜೇಡ ಪ್ರಭೇದಗಳನ್ನು ವಿವರಿಸಿದ್ದಾರೆ. ಇವು ಬಲು ಮೃದು ಶರೀರಿಗಳು. ಅಂಬರದಲ್ಲಿ ಸುಲಭವಾಗಿ ಸಿಕ್ಕಿಹಾಕಿಕೊಳ್ಳುತ್ತವೆ. ಅಂಬರ ಪಾರದರ್ಶಕವಾದುದರಿಂದ ಜೀವಿಯ ಬಾಹ್ಯ ಲಕ್ಷಣಗಳೆಲ್ಲವೂ ಹಾಗೆಯೇ ಉಳಿದುಕೊಂಡಿರುತ್ತದೆ. ಈ ಚಿತ್ರದಲ್ಲಿರುವ ಜೇಡ 130 ದಶಲಕ್ಷ ವರ್ಷಗಳ ಹಿಂದಿನದು. ಅಂದರೆ ಭೂಮಿಯ ಮೇಲೆ ಡೈನೋಸಾರ್‌ಗಳ ಸಾಮ್ರಾಜ್ಯ ಉತ್ತುಂಗದಲ್ಲಿದ್ದಾಗ ಈ ಜೇಡವೂ ಇತ್ತು.

*****

## ಲೇಖಕರು

ಟಿ.ಆರ್. ಅನಂತರಾಮು, ಜನಪ್ರಿಯ ವಿಜ್ಞಾನ ಲೇಖಕರು, ವೃತ್ತಿಯಿಂದ ಭೂವಿಜ್ಞಾನಿ. ಈವರೆಗೆ ಕನ್ನಡದಲ್ಲಿ 53 ವಿಜ್ಞಾನ ಕೃತಿಗಳನ್ನು ರಚಿಸಿದ್ದಾರೆ. ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಕ್ಕೆ ಪಾತ್ರರಾಗಿದ್ದಾರೆ. 2008ರ ಪರಿಸರ ಪತ್ರಿಕೋದ್ಯಮ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ಇವರಿಗೆ ನೀಡಿದೆ.

## ಆಶಯ

ವಿಜ್ಞಾನ ಜಗತ್ತು–2010 ಕಳೆದ ವರ್ಷದ ವಿಜ್ಞಾನ ತಂತ್ರಜ್ಞಾನದಲ್ಲಾದ ಜಾಗತಿಕ ಮಟ್ಟದ ಪ್ರಮುಖ ಸಂಶೋಧನೆ ಸಾಧನೆಗಳನ್ನು ಸ್ಥೂಲವಾಗಿ ಪರಿಚಯಿಸುವ ಕೃತಿಯಾಗಿದೆ. ಸಂಶೋಧನೆಗಳನ್ನು ಸಾಮಾನ್ಯರಿಗೆ ತಲುಪಿಸಲು ಬರಹ ಹೇಗಿರಬೇಕೆಂಬುದಕ್ಕೆ ಒಂದು ಉತ್ತಮ ಉದಾಹರಣೆ

## ಶಬ್ದಾರ್ಥಗಳು

ಗೋದಾಮ= ದಾಸ್ತಾನು, ಗೋತ= ಸಾವು, ಜಗಜ್ಜಾಹಿರು= ಪ್ರಚಾರಗೊಳಿಸು

## ಪ್ರಶ್ನೆಗಳು

1. ಜೇಡಗಳ ಕುರಿತಂತೆ ವರಕವಿ ಬೇಂದ್ರೆಯವರು ಏನು ಹೇಳಿದ್ದಾರೆ?
2. ಜೇಡ ಜಾಲದ ವಿಸ್ತಾರವೆಷ್ಟು?
3. ಈ ಜೇಡ ಯಾವ ಉದ್ಯಾನದಲ್ಲಿದೆ?
4. ಜೇಡವನ್ನು ಯಾವ ಜರ್ನಲ್‌ನಲ್ಲಿ ಪ್ರಕಟಿಸಲಾಗಿದೆ?

5. ಜೇಡವು ಯಾವುದರ ಪಳೆಯುಳಿಕೆಯಾಗಿದೆ?

**ಹೆಚ್ಚಿನ ಓದು**

1. ವಿಜ್ಞಾನ ಜಗತ್ತು–2010, ಡಾ. ಟಿ.ಆರ್.ಅನಂತರಾಮು, ಡಾ.ಪಿಎಸ್ ಶಂಕರ್ ಪ್ರತಿಷ್ಠಾನ ಪ್ರಕಾಶನ, ಗುಲ್ಬರ್ಗಾ.
2. ಕನ್ನಡದಲ್ಲಿ ವಿಜ್ಞಾನ ಸಂವಹನ, ಸಂಪಾದನೆ: ಡಾ. ಟಿ.ಆರ್. ಅನಂತರಾಮು ಮತ್ತು ಪ್ರೊ. ಎಚ್.ಆರ್. ರಾಮಕೃಷ್ಣರಾವ್

ಹಾಸ್ಯ

೧೮

# ಪಶು ಚಿಕಿತ್ಸೆ

**ಬೀ.ಚಿ.**

ತಿಂಮನ ಹಸುವಿಗೊಮ್ಮೆ ಕಾಯಿಲೆ. ಮುಂದೆ ಇಕ್ಕಿದ ನೀರು ಮೇವು ಮುಟ್ಟದೆ ಮೇವು ತ್ಯಾಗ ವ್ರತವನ್ನು ಕೈಗೊಂಡಿತು. ಪ್ರಾಣಿದಯೆಯುಳ್ಳ ತಿಂಮನಿಗೆ ಪ್ರಾಣ ಹೋದಂತಾಗಿ ಪಶು ವೈದ್ಯರ ಬಳಿ ಓಡಿದ. ಬರೀ ಆಸ್ಪತ್ರೆಯಲ್ಲಿ ಎರಡು ತಾಸು ಮೂರು ಬೆಂಚಿಗಳ ಮೇಲೆ ಕುಳಿತು ಆಕಳಿಸಿ, ಮೈಮುರಿದು, ಬಾಯಿಮುಂದೆ ಚಿಟಿಗೆ ಹೊಡೆದಾದ ಮೇಲೆ, ಪಶು ವೈದ್ಯರು ಪ್ರತ್ಯಕ್ಷರಾಗಿ ಔಷಧಿಯನ್ನು ದಯಪಾಲಿಸಿದರು.

"ಈ ಗೋಲಿಯನ್ನು ಆ ಹಸು ಹೇಗೆ ಸ್ವಾಮಿ ನುಂಗಬೇಕು?"

ಎಂದು ತಿಂಮ ಮೋರೆ ನೋಡಿದ.

ಔಷಧಿ ಸೇವನೆಯ ಕ್ರಮವನ್ನು ವೈದ್ಯರು ಅರ್ಧ ಗಂಟೆ ವಿವರಿಸಿ ತಿಳಿಸಿದರು. "ಒಂದು ಊದು ಕೊಳವೆಯಲ್ಲಿ ಈ ಗೋಲಿಯನ್ನಿಕ್ಕಿ. ಒಂದು ತುದಿಯನ್ನು ಆಕಳ ಬಾಯಿಯಲ್ಲಿ ಇಟ್ಟು, ಇನ್ನೊಂದು ತುದಿಗೆ ನೀನು ಬಾಯಿ ಹಚ್ಚಿ ಊದು. ಮಾತ್ರೆಯು ತಾನೇ ಹೊಟ್ಟೆಯಲ್ಲಿ ಹೋಗುತ್ತೆ."

ತಿಳಿಯಿತೆಂದು ತಲೆಯಾಡಿಸಿ ಮನೆಗೆ ಹೊರಟ ತಿಂಮ; ಹತ್ತೇ ನಿಮಿಷಗಳಲ್ಲಿ ಕಂಗಾಲಾಗಿ ಓಡುತ್ತ ಪಶು ವೈದ್ಯರ ಹತ್ತಿರ ಬಂದ.

"ಏನೋ ತಿಂಮಾ ಪುನಃ ಬಂದೆ?"

"ತಾವು ಕೊಟ್ಟ ಮಾತ್ರೆ ನನ್ನ ಹೊಟ್ಟೆಯಲ್ಲಿ ಹೋಯಿತು ಸ್ವಾಮಿ"

"ಅದನ್ನೇಕೋ ನುಂಗಿದೆ?"

"ನನ್ನಗಿಂತಲೂ ಜೋರಾಗಿ ಹಸುವೇ ಊದಿಬಿಟ್ಟಿತು."

*****

**ಲೇಖಕರು**

ಬೀ.ಚಿ (ರಾಯಸಂ ಭೀಮಸೇನರಾವ್) (ಏಪ್ರಿಲ್ 23, 1913) ಅಂದರೆ ವೈಶಿಷ್ಟ್ಯಪೂರ್ಣ ಹಾಸ್ಯ ಬರಹಗಳಿಗೆ ಮತ್ತೊಂದು ಹೆಸರು. 'ಬರಹಗಾರನ ವೈಯಕ್ತಿಕ ಪ್ರತಿಭೆ ಜಡ ಅನುಕರಣೆಯ ಮರಳಿನಲ್ಲಿ ಇಂಗಿ ಹೋಗಬಾರದು' ಇದು ಬೀಚಿಯವರ ದೃಷ್ಟಿಕೋನ. ಕಾದಂಬರಿಗಳು, ನಾಟಕ, ಅಂಕಣ, ಹಾಸ್ಯ ಬರಹಗಳಲ್ಲಿ ತೊಡಗಿಸಿಕೊಂಡವರು. ಈ ದೃಷ್ಟಿಯನ್ನು ಕಂಡೇ ಇರಬೇಕು ತುಂಬ ಗಂಭೀರ ಬರಹಗಾರರಾದ ಶಂ.ಬಾ. ಜೋಶಿ ಯವರು ಬೀಚಿಯವರನ್ನು "ತನ್ನನ್ನು ತಾನೇ ರೂಪಿಸಿಕೊಂಡ ಅಪೂರ್ವ ಸ್ವಯಂಭೂ" ಎಂದು ವರ್ಣಿಸಿದ್ದಾರೆ. ಬೀ.ಚಿ ಕನ್ನಡ ಸಾಹಿತ್ಯಕ್ಕೊಂದು ಸೊಗಸು ಮೂಡಿಸಿದ್ದಾರೆ.

**ಆಶಯ**

ಹಾಸ್ಯ ಬಲ್ಲವನ ಸಹವಾಸವೆಂದರೆ ಹಾಲು ಜೇನು ಸವಿದಂತೆ. ಹಾಸ್ಯವನ್ನು ಇತರರಿಗೆ ಕೊಡುವುದರಲ್ಲಿಯೇ ಬೀಚಿಯವರ ಶ್ರೇಷ್ಠತೆಯಷ್ಟೇ ಅಲ್ಲ, ಇತರರೊಂದಿಗೆ ಅದನ್ನು ಅವರಷ್ಟೇ ತನ್ಮಯತೆಯಿಂದ ಸವಿಯುವುದರಲ್ಲಿಯೂ ಅವರು ತಮ್ಮ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತಾರೆ. ನಗುವುದೂ ನಗಿಸುವುದೂ ಎರಡೂ ದೊಡ್ಡಗುಣಗಳು. ಅವೆರಡನ್ನೂ ಅಂಗೈಯಲ್ಲಿ ಹಿಡಿದವನಿಗೆ ಅಮರತ್ವ ಅಂಗಾಲಿನ ಅಡಿಯಲ್ಲಿ. ಹಾಸ್ಯ ಪ್ರವೃತ್ತಿಗೆ ಬೀಚಿ ಕೊಟ್ಟಿರುವ ಇನ್ನೊಂದು ಹೆಸರು "ತಿಂಮತನ" ನಾವು ನಕ್ಕರೆ ನಮ್ಮೊಂದಿಗೆ ಜಗತ್ತು ನಗುತ್ತದೆ. ಜಗತ್ತನ್ನು ಜೀವನದ ಒಂದು ಭಾಗವನ್ನಾಗಿ ತೆಗೆದುಕೊಳ್ಳಿರೆಂದು ಬೀಚಿ ಹೇಳುತ್ತಾರೆ.

**ಶಬ್ದಾರ್ಥ**

ಗೋಲಿ=ಮಾತ್ರೆ, ಮೋರೆ=ಮುಖ, ತಾಸು=ಸಮಯ, ಗಂಟೆ

**ಮಾದರಿ ಪ್ರಶ್ನೆಗಳು**

1. ತಿಂಮನ ಹಸುವಿಗೆ ಯಾವ ಕಾಯಿಲೆ ಇತ್ತು?
2. ತಿಂಮನು ಹಸುವಿಗೆ ಯಾವ ಔಷಧವನ್ನು ನೀಡಿದನು.
3. ತಿಂಮನು ಹಸುವಿಗೆ ಔಷಧವನ್ನು ನೀಡಲು ಯಾವ ವಿಧಾನವನ್ನು ಅನುಸರಿಸಿದ?

**ಹೆಚ್ಚಿನ ಓದು**

1. ತಿಂಮನ ತಲೆ, ಅಂದನಾ ತಿಂಮ, ತಿಂಮ್ಮಾಯಣ, ತಿಂಮನ ರಸಾಯನ ಲೇ : ಬೀ.ಚಿ.

ಸಾಹಿತಿಗಳ
ಪರಿಚಯ

೧೯

# ಜ್ಞಾನಪೀಠ ಪುರಸ್ಕೃತ ಸಾಹಿತಿಗಳು

**ಡಾ. ಸಾಸ್ವೆಹಳ್ಳಿ ಸತೀಶ್**

## ಕುವೆಂಪು

'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಕನ್ನಡ ಸೇವೆಗೆ ದೀಕ್ಷೆ ನೀಡಿದವರು, 'ಕರ್ನಾಟಕವೆಂಬುದು ಬರಿ ಹೆಸರೆ ಮಣ್ಣಿಗೆ; ಇದು ಮಂತ್ರ ಕಣ, ಇದು ಶಕ್ತಿ ಕಣಾ' ಎಂದು ಅಭಿಮಾನ ಮೂಡಿಸಿದವರು ಕುವೆಂಪು. ಕುವೆಂಪು ಎನ್ನುವುದೂ ಕೂಡ ಈಗ ಕೇವಲ ಹೆಸರಲ್ಲ ಅದೊಂದು ಚೈತನ್ಯ, ವಿರಾಟ್ ಪ್ರಜ್ಞೆ.

ಕುವೆಂಪುರವರು ಡಿಸೆಂಬರ್ 29,1904ರಲ್ಲಿ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ ಹಿರೇಕೊಡಿಗೆ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದರು. ಅದು ಅವರ ತಾಯಿ ಸೀತಮ್ಮನವರ ತವರುಮನೆ. ತಂದೆ ವೆಂಕಟಪ್ಪನವರದು ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ. ನಿತ್ಯಹರಿದ್ವರ್ಣದಿಂದ ಕೂಡಿದ ಈ ಪರಿಸರ ಅವರ ಕಾವ್ಯ ರಚನೆಗೆ ಸ್ಫೂರ್ತಿಯಾಯಿತು. ಕೂಲಿ ಮಠದಲ್ಲಿ ಆರಂಭವಾದ ಅವರ ಕಲಿಕೆ ತಂದೆಯವರ ಆಸೆಯಂತೆ ತೀರ್ಥಹಳ್ಳಿಯಲ್ಲಿ ಮುಂದುವರೆಯಿತು. 1920ರಲ್ಲಿ ಪ್ರೌಢಶಾಲಾ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದರು. ಹಾರ್ಡ್‌ವಿಕ್ ಪ್ರೌಢಶಾಲೆಯಲ್ಲಿ ಕುವೆಂಪುರವರಿಗೆ ಆಂಗ್ಲಭಾಷೆಯಲ್ಲಿಯೇ ಆಸಕ್ತಿ ಹೆಚ್ಚಾಗಿ ಸ್ವಯಂ ಓದಿಕೊಳ್ಳುತ್ತಾ ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದರು. ಫಲವಾಗಿ ಇವರ ಮೊದಲ ಕವನ ಸಂಕಲನ 'ದ ಬಿಗಿನರ್ಸ್ ಮ್ಯೂಸ್' ಪ್ರಕಟಗೊಂಡಿತು. ಇದನ್ನು ಐರಿಷ್ ದೇಶದ ಖ್ಯಾತ ಕವಿ ಹೆಚ್.ಜಿ. ಕಸಿನ್ಸ್‌ರವರಿಗೆ ತೋರಿಸಿದರು. ಅವರು ಅಭಿವ್ಯಕ್ತಿಯು ಮಾತೃಭಾಷೆಯಲ್ಲಿ ಹೆಚ್ಚು ಪರಿಣಾಕಾರಿಯಾಗಿರುತ್ತದೆ ಎಂದು ಸಲಹೆ ಕೊಟ್ಟ ಮೇಲೆ ಕನ್ನಡದಲ್ಲಿ ಬರೆಯಲು ಆರಂಭಿಸಿದರು. ಮಹಾಕವಿಯೋರ್ವನ ಉದಯ ಹೀಗೆ ಆಗಿದ್ದು ವಿಶೇಷ.

ಕನ್ನಡ ಭಾಷೆಯಲ್ಲಿನ ಅಪಾರ ಸಾಹಿತ್ಯವನ್ನು ಓದಿದ ಕುವೆಂಪು ರಾಮಕೃಷ್ಣಾಶ್ರಮದ ಪ್ರಭಾವಕ್ಕೆ ಒಳಗಾದರು. ಪರಮಹಂಸರ ಕೃತಿಗಳನ್ನು ಓದಿದರು.

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಖಾದಿ ಧರಿಸಿದರು. ತನಗೆ ಇಷ್ಟವಾಗದ ಸಿದ್ಧಾಂತವನ್ನು ಒಪ್ಪಿದವರೂ ಅಲ್ಲ. ಇಷ್ಟವಾಗದ ಕೆಲಸ ಮಾಡಿದವರೂ ಅಲ್ಲ.

1924ರಲ್ಲಿ 'ಅಮಲನ ಕತೆ' ಯನ್ನು ಪ್ರಕಟಿಸಿದ ಇವರು ತತ್ವಶಾಸ್ತ್ರದಲ್ಲಿ ಬಿ.ಎ. ಮುಗಿಸಿ ಕನ್ನಡ ಎಂ.ಎ. ಸೇರಿಕೊಂಡರು. ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ.ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾದರು. 1928ರಲ್ಲಿ ಬೊಮ್ಮನಹಳ್ಳಿ ಕಿಂದರಜೋಗಿ' ಯನ್ನು ಮಕ್ಕಳಿಗಾಗಿ ನೀಡಿದರು. 1937ರಲ್ಲಿ ಹೇಮಾವತಿಯವರೊಡನೆ ವಿವಾಹವಾದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನಂತರ ಅಲ್ಲಿಯೇ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದರು. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ವಿಶ್ವವಿದ್ಯಾಲಯವನ್ನು ಬಹು ಎತ್ತರಕ್ಕೆ ಕೊಂಡೊಯ್ದರು. ಮೈಸೂರಿನ 'ಉದಯ ರವಿ' ಯಲ್ಲಿ ತಮ್ಮ ವಿಶ್ರಾಂತ ಜೀವನ ಕಳೆದರು.

'ಕೊಳಲು' ಕವನ ಸಂಕಲನದಿಂದ ಆರಂಭಿಸಿ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಎರಡು ಬೃಹತ್ ಕಾದಂಬರಿಗಳೂ ರಚಿಸಿದ್ದಲ್ಲದೇ ಆಧುನಿಕ ರೀತಿಯಲ್ಲಿ ಯೋಚಿಸುತ್ತಾ ಜಲಗಾರ, ಸ್ಮಶಾನ ಕುರುಕ್ಷೇತ್ರ, ಬೆರಳ್ಗೆ ಕೊರಳ್, ಶೂದ್ರ ತಪಸ್ವಿ, ಇತ್ಯಾದಿ ನಾಟಕಗಳನ್ನು ಬರೆದರು. ಮಹಾಕಾವ್ಯಗಳನ್ನು ಮುರಿದುಕಟ್ಟುವ ಪರಂಪರೆಯನ್ನು ಹಾಕಿಕೊಟ್ಟರು. ಕುವೆಂಪುರವರ ಸಾಹಿತ್ಯ ತೇರಿನ ಕಳಶ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ. ರಾವಣ, ಕೈಕೇಯಿ ಮುಂತಾದ ಪಾತ್ರಗಳನ್ನು ಉದ್ಧರಿಸಿದರು. ಈ ಅಸಾಮಾನ್ಯ ಸಾಧನೆಗಾಗಿ ಅವರಿಗೆ ಜ್ಞಾನ ಪೀಠ ಪ್ರಶಸ್ತಿ ಹುಡುಕಿಕೊಂಡು ಬಂತು. ಇದು ಕನ್ನಡಕ್ಕೆ ಬಂದ ಮೊದಲ ಜ್ಞಾನ ಪೀಠ. ಕುವೆಂಪುರವರನ್ನು ಕರ್ನಾಟಕ ರತ್ನ, ಪಂಪ ಪ್ರಶಸ್ತಿ, ಪದ್ಮಭೂಷಣ, ರಾಷ್ಟ್ರಕವಿ ಮುಂತಾದ ಪ್ರಶಸ್ತಿಗಳು ಅರಸಿ ಬಂದವು. ಅನೇಕ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿಗಳೂ ಬಂದವು. ಇವೆಲ್ಲಾ ಪ್ರಶಸ್ತಿಗಳೂ ತಮ್ಮ ಗೌರವವನ್ನು ಹೆಚ್ಚಿಸಿಕೊಂಡವು ಎಂದರೆ ಅತಿಶಯೋಕ್ತಿ ಏನಲ್ಲ.

ಕುವೆಂಪು ಸೃಜನಶೀಲ ಬರಹದ ಜೊತೆಗೆ ವೈಚಾರಿಕ ಬರಹಗಳನ್ನು ಬರೆದರು. ವೈಜ್ಞಾನಿಕವಾಗಿಯೂ ಅವರು ಚಿಂತಿಸುತ್ತಿದ್ದರು. "ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದು ವಿದ್ಯೆಯ ಕರ್ತವ್ಯವಾಗಬೇಕು" ಎಂದು ಕರೆ ಕೊಟ್ಟರು. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಠಿ ಇವು ಪಂಚಮಂತ್ರಗಳು ಇವು ಮುಂದಿನ ದೃಷ್ಠಿಯಾಗಬೇಕೆಂದು ಅವರು ಬಯಸಿದ್ದರು. ಇಂದು ಕುವೆಂಪುರವರು ಬರಹಗಾರರು ಮಾತ್ರವಲ್ಲ ಕನ್ನಡಿಗರ ಆತ್ಮಾಭಿಮಾನವೇ ಆಗಿದ್ದಾರೆ.

## ದ.ರಾ. ಬೇಂದ್ರೆ

ಕನ್ನಡಕ್ಕೆ ಎರಡನೆಯ ಜ್ಞಾನ ಪೀಠ ಪ್ರಶಸ್ತಿ ತಂದುಕೊಟ್ಟ ಅಗ್ರಪಂಕ್ತಿಯ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ 'ಯುಗದ ಕವಿ' 'ಜಗದ ಕವಿ' 'ವರಕವಿ' ಎಂದೆಲ್ಲ ಕರೆಯಲ್ಪಡುವ ಬೇಂದ್ರೆಯವರು, ಅಂಬಿಕಾತನಯ ದತ್ತ ಎಂಬ ಕಾವ್ಯನಾಮದಲ್ಲಿ ಸಾಹಿತ್ಯ ಸೃಷ್ಟಿಸಿದವರು. 1896ರ ಜನವರಿ 31ರಂದು ಧಾರವಾಡದಲ್ಲಿ ರಾಮಚಂದ್ರ ಮತ್ತು ಅಂಬವ್ವ ದಂಪತಿಗಳಿಗೆ ಮಗನಾಗಿ ಜನಿಸಿದ ಬೇಂದ್ರೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಧಾರವಾಡದಲ್ಲೇ ಪೂರೈಸಿ ಪೂನಾ 'ಫರ್ಗೂಸನ್' ಕಾಲೇಜಿನಲ್ಲಿ ಬಿ.ಎ. ಪದವಿ ಗಳಿಸಿ ನಂತರ ಎಂ.ಎ. ಸ್ನಾತಕೋತ್ತರ ಪದವಿಯನ್ನು 1935ರಲ್ಲಿ ಪಡೆದರು.

ಬೇಂದ್ರೆಯವರು ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದರು. ಸಾಮಾನ್ಯವಾಗಿ "ಬೇಂದ್ರೆ ಮಾಸ್ತರು' ಎಂದೇ ಅವರನ್ನು ಎಲ್ಲರು ಕರೆಯುತ್ತಾರೆ. ವಿದ್ಯಾರ್ಥಿ ದಿಸೆಯಲ್ಲಿಯೇ ಕಾವ್ಯ ರಚನೆ ಪ್ರಾರಂಭಿಸಿದ ಅವರು ಕನ್ನಡ, ಮರಾಠಿ, ಸಂಸ್ಕೃತ, ಇಂಗ್ಲಿಷ್‌ನ ಅನೇಕ ಗ್ರಂಥಗಳನ್ನು ಓದಿಕೊಂಡರು. ಅವರ ಬದುಕಿನಲ್ಲಿ 'ಗೆಳೆಯರ ಬಳಗ' ಬಹಳ ಮುಖ್ಯ ಪಾತ್ರವಹಿಸುತ್ತದೆ. ಆನಂದಕಂದ, ಶಂಬಾ, ಮಧುರಚೆನ್ನ, ಕಾಪಸೆ, ಸಿಂಪಿಲಿಂಗಣ್ಣ, ಗೋಕಾಕ್, ಚುಳುಕಿ ಕೃಷ್ಣಶರ್ಮ ಮುಂತಾದ ದಿಗ್ಗಜರುಗಳು ಆ ಪಟ್ಟಿಯಲ್ಲಿದ್ದರು. ಕುವೆಂಪು ಮೊದಲ ಕವಿತೆಯನ್ನು ಇಂಗ್ಲಿಷ್‌ನಲ್ಲಿ ಬರೆದಂತೆ ಬೇಂದ್ರೆ ಮರಾಠಿಯಲ್ಲಿ ಮೊದಲ ಪದ್ಯ ರಚಿಸಿದ್ದರು. ಕುವೆಂಪು ವರ್ಡ್ಸ್‌ವರ್ಥ್‌ನಿಂದ ಪ್ರಭಾವಕ್ಕೊಳಗಾಗಿದ್ದರೆ, ಬೇಂದ್ರೆಗೆ ಕೀಟ್ಸ್ ಕವಿಯೆಂದರೆ ಅಚ್ಚುಮೆಚ್ಚು.

ತಮ್ಮ ಜೀವಿತಾವಧಿಯಲ್ಲಿಯೇ ದಂತಕತೆಯಾಗಿದ್ದ ಬೇಂದ್ರೆಯವರು ಆಕರ್ಷಕವಾದ ಜಾನಪದ ಭಾಷೆ ಬಳಸಿ ಕಾವ್ಯದ ಸೊಗಸನ್ನು ಹೆಚ್ಚಿಸಿದರು. ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ 'ನಾಕುತಂತಿ' ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ಅರಳು ಮರಳು' ಕವನ ಸಂಕಲನಗಳೂ ಸೇರಿದಂತೆ ಒಟ್ಟು ಇಪ್ಪತ್ತೊಂಬತ್ತು ಕವನ ಸಂಕಲನಗಳನ್ನು ಬೇಂದ್ರೆಯವರು ಪ್ರಕಟಿಸಿದ್ದರು.

ಬಹುಮುಖ ಪ್ರತಿಭೆಯ ಬೇಂದ್ರೆಯವರು ಕನ್ನಡದ ಜೊತೆಗೆ ಇತರೆ ಪ್ರಾಕಾರಗಳ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಒಂದು ಕಥಾಸಂಕಲನ, ಎರಡು ಉಪನ್ಯಾಸ ಸಂಗ್ರಹ, ಏಳು ಅನುವಾದ ಕೃತಿಗಳು, ಐದು ಮರಾಠಿ ಗ್ರಂಥಗಳು ಹಾಗೂ ಒಂದು ಆಂಗ್ಲ ಕೃತಿಯನ್ನೂ ಸೇರಿದಂತೆ ಬೇಂದ್ರೆಯವರು ಒಟ್ಟು 67 ಕೃತಿಗಳನ್ನು ರಚಿಸಿದ್ದಾರೆ. 'ಸಾಯೋ ಆಟ', 'ಜಾತ್ರೆ', 'ಮಂದಿ ಮನಿ', 'ಉದ್ಧಾರ', 'ದೆವ್ವದ ಮನೆ' ಇತ್ಯಾದಿ ಅಸಂಗತ ನಾಟಕಗಳನ್ನೂ ರಚಿಸಿದರು.

ಶಿವಮೊಗ್ಗದಲ್ಲಿ ನಡೆದ 27ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಬೇಂದ್ರೆಯವರಿಗೆ, 1959ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1968ರಲ್ಲಿ 'ಪದ್ಮಶ್ರೀ' ಪ್ರಶಸ್ತಿ, 1966ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು 1968ರಲ್ಲಿ

ಮೈಸೂರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಹೈದರಾಬಾದಿನ ಹಿಂದೀ ಪ್ರಚಾರ ಸಭಾದವರು ನೀಡುವ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ, ಉಡುಪಿ ಮಠದಿಂದ 'ಕರ್ನಾಟಕ ಕವಿಕುಲ ತಿಲಕ' ಎಂಬ ಬಿರುದು ಮತ್ತು ಪ್ರಶಸ್ತಿಗಳು ಲಭಿಸಿವೆ.

"ಕುರುಡು ಕಾಂಚಾಣ ಕುಣಿಯುತ್ತಲಿತ್ತು
ಕಾಲಿಗೆ ಬಿದ್ದವರ ತುಳಿಯುತ್ತಲಿತ್ತು"

"ನಾನು ಬಡವಿ, ಆತ ಬಡವ
ಒಲವೆ ನಮ್ಮ ಬದುಕು"

"ಮೂಡಲ ಮನೆಯ ಮುತ್ತಿನ ನೀರಿನ
ಎರಕವ ಹೊಯ್ದಾ"

ಇಂಥ ಅದೆಷ್ಟೋ ರಸವತ್ತಾದ ಸಾಲುಗಳನ್ನು ಕನ್ನಡಿಗರಿಗೆ ಸತ್ವದ ಕೋಲ್ಮಿಂಚಿನಂತೆ ನೀಡಿದ ಬೇಂದ್ರೆಯವರನ್ನು ಪದ ಗಾರುಡಿಗ ಎಂದೂ ಕರೆಯುವುದು ಸಮಂಜಸವಾಗಿದೆ. ಶ್ರೀಯುತರು 1981ರ ದೀಪಾವಳಿ ದಿನ ಮುಂಬೈನಲ್ಲಿ ಅಸುನೀಗಿದರು.

### ಶಿವರಾಮ ಕಾರಂತ

ಕೋಟ ಶಿವರಾಮ ಕಾರಂತರು 'ಕಡಲ ತೀರದ ಭಾರ್ಗವ' ಎಂದು ಹೆಸರು ಪಡೆದವರು. 'ಆಡು ಮುಟ್ಟದ ಸೊಪ್ಪಿಲ್ಲ ಕಾರಂತರು ಬರೆಯದ ಸಾಹಿತ್ಯವಿಲ್ಲ' ಎಂದು ಅನೇಕರು ಹೇಳಿದ್ದಾರೆ. ಅವರು ಕನ್ನಡ ಸಾಹಿತ್ಯ ಲೋಕದ ವಿರಾಟ್‌ಶಕ್ತಿ, 'ನಡೆದಾಡುವ ವಿಶ್ವಕೋಶ' ಕವಿಯಾಗಿ, ಲೇಖಕರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ ಸಾಧನೆ ಮಾಡಿದ್ದಲ್ಲದೇ ಯಕ್ಷಗಾನ ಕ್ಷೇತ್ರಕ್ಕೆ ಹೊಸಕಾಣಿಕೆ ನೀಡಿ, ಅದಕ್ಕೆ ವಿಶೇಷ ಮೆರುಗನ್ನು ನೀಡಿದವರು.

ಶಿವರಾಮ ಕಾರಂತರು ಉಡುಪಿ ಜಿಲ್ಲೆಯ 'ಕೋಟ' ಎಂಬಲ್ಲಿ 10–10–1903ರಂದು ಜನಿಸಿದರು. ಇವರ ತಂದೆ ಶೇಷಕಾರಂತರು ತಾಯಿ ಲಕ್ಷ್ಮೀ. ಇವರ ತಂದೆ ಶಿಕ್ಷಕರಾಗಿದ್ದು ಮುಂದೆ ಜವಳಿ ಅಂಗಡಿ ಆರಂಭಿಸಿದರು. ಕುಂದಾಪುರದ ಬೋರ್ಡ್‌ಶಾಲೆಯಲ್ಲಿ ಕಾರಂತರು ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, 1920ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿ, ಎಫ್.ಎ. ಪದವಿಯ ಅಭ್ಯಾಸಕ್ಕಾಗಿ ಮಂಗಳೂರಿಗೆ ಹೋದರು.

ಪ್ರೌಢಶಾಲಾ ಜೀವನದಲ್ಲಿ ಕಾರಂತರ ಮೇಲೆ ಶಿಕ್ಷಕರಾದ ರಂಗರಾಯರು, ಮಳಲಿ ಸುಬ್ಬರಾಯರು ಪ್ರಭಾವ ಬೀರಿದರು. ಕಾವ್ಯ ಸಾಹಿತ್ಯ ಯಕ್ಷಗಾನಗಳಲ್ಲಿ ಕಾರಂತರಿಗೆ ಆಸಕ್ತಿ ಮೂಡಿತು. ಸಹಜವಾಗಿಯೇ ತಮ್ಮ ಪರಿಸರದಲ್ಲಿದ್ದ ಹೊಲ, ಗದ್ದೆ, ಪರ್ವತ, ಸಾಗರ ತೀರಗಳು ಕಾರಂತರಿಗೆ ಪ್ರಕೃತಿ ಪ್ರೇಮವನ್ನು ಹೊಂದುವಂತೆ ಮಾಡಿದವು. ಶಾಲೆ ಸೆರೆಮನೆ ಎಂಬ ಭಾವನೆ ಅವರಲ್ಲಿತ್ತು.

1920ರಲ್ಲಿ ದೇಶದಲ್ಲಿ ಅಸಹಕಾರ ಚಳುವಳಿ ಆರಂಭವಾದಾಗ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಮುಂದೆ ಯಾವುದೇ ಪದವಿಯನ್ನೂ ಅಧ್ಯಯನ ಮಾಡದೆ 'ನಿಜವಾದ ವ್ಯಕ್ತಿತ್ವ ವಿಕಾಸವೇ ಶಿಕ್ಷಣದ ಗುರಿ'ಯೆಂದು ತಿಳಿದು ಸಾಹಿತ್ಯ ಕ್ಷೇತ್ರವನ್ನು ಆಯ್ದುಕೊಂಡರು. ತಮ್ಮ ಜೀವನವನ್ನೇ ವಿದ್ಯಾಭ್ಯಾಸದಂತೆ ಕಂಡರು. ಜೀವನ ರಂಗವನ್ನೆ ವಿಶ್ವವಿದ್ಯಾಲಯವೆಂದು ತಿಳಿದರು.

ಸಾಹಿತ್ಯ ಕೃಷಿಯೇ ನನ್ನ ಕಾಯಕ ಎಂದು ದೃಢವಾಗಿ ನಿರ್ಧರಿಸಿದ ಕಾರಂತರು ಮರಳಿ ಮಣ್ಣಿಗೆ, ಮೂಕಜ್ಜಿಯ ಕನಸುಗಳು, ಚಿಗುರಿದ ಕನಸು, ಚೋಮನದುಡಿ, ಮೈಮನಗಳ ಸುಳಿಯಲ್ಲಿ ಸೇರಿದಂತೆ ಉತ್ಕೃಷ್ಟವಾದ ಕಾದಂಬರಿಗಳನ್ನು ರಚಿಸಿದರು. ಇವು ಮನರಂಜನೆಯ ಸರಕಾಗದೆ ಓದುಗನ ಕಣ್ತೆರೆಸುವಂತೆ ಇದ್ದವು. ಮುಕ್ತದ್ವಾರ, ಕರ್ಣಾರ್ಜುನ, ಬೌದ್ಧಯಾತ್ರೆ, ಗರ್ಭಗುಡಿ ಇತ್ಯಾದಿ ನಾಟಕಗಳನ್ನು ರಚಿಸಿದರು. ಸೀಳ್ಗವನ, ರಾಷ್ಟ್ರಗೀತೆ, ಸುಧಾಕರ ಇವು ಕವನ ಸಂಕಲನಗಳು.

ಹುಚ್ಚುಮನಸ್ಸಿನ ಹತ್ತು ಮುಖಗಳು ಆತ್ಮಚರಿತ್ರೆ, ಹಸಿವು, ಹಾವು, ತೆರೆಯ ಮರೆಯಲ್ಲಿ ಕಥಾ ಸಂಗ್ರಹಗಳು ಇವುಗಳಲ್ಲದೇ ಪ್ರಬಂಧಗಳು, ಜೀವನ ಚರಿತ್ರೆ ಪ್ರವಾಸ ಸಾಹಿತ್ಯಗಳನ್ನೂ ರಚಿಸಿದರು. ಭಾರತೀಯ ವಾಸ್ತುಶಿಲ್ಪ, ಭಾರತೀಯ ಚಿತ್ರಕಲೆ, ಕಲೆಯದರ್ಶನ, ಯಕ್ಷಗಾನ ಬಯಲಾಟ ಕರ್ನಾಟಕದ ನೃತ್ಯಸಂಪ್ರದಾಯ ಮತ್ತು ಜಾನಪದಕಲೆ, ಕಲಾಪ್ರಪಂಚ ಇತ್ಯಾದಿಗಳು ಕಲೆಯ ಬಗ್ಗೆ ಅವರು ನೀಡಿರುವ ವಿಶೇಷ ಪುಸ್ತಕಗಳು. ದೇಶವಿದೇಶಗಳಲ್ಲಿ ಸಂಚರಿಸಿದ ಕಾರಂತರು ಪ್ರವಾಸ ಸಾಹಿತ್ಯವನ್ನೂ ಬರೆದಿದ್ದಾರೆ. ಇವರ ಬರವಣಿಗೆಯನ್ನು ಚಿಕ್ಕ ಪರಿಚಯ ಪತ್ರದಲ್ಲಿ ಹಿಡಿದಿಡುವುದು ಕಷ್ಟಸಾಧ್ಯ. 1950ರಲ್ಲಿ ಕಾರಂತರು 'ವಿಚಾರವಾಣಿ' ಎಂಬ ಪತ್ರಿಕೆ ಆರಂಭಿಸಿ ಪತ್ರಿಕಾ ರಂಗದಲ್ಲೂ ಕೈಯಾಡಿಸಿದರು.

ಶಿವರಾಮ ಕಾರಂತರ ಕೊಡುಗೆ ಕನ್ನಡ ನಾಡಿಗೆ ಅಪೂರ್ವವಾದುದು. ಪ್ರಕೃತಿ ಪ್ರಿಯರೂ ಹೊಸತನದ ಅನ್ವೇಷಕರೂ ಆಗಿದ್ದರು. ಯಾವುದನ್ನೂ ಪ್ರಶ್ನಿಸದೆ, ವಿಮರ್ಶಿಸದೆ ಒಪ್ಪುತ್ತಿರಲಿಲ್ಲ. ಅದರಿಂದಾಗಿಯೇ ಅವರು ಯಶಸ್ವಿಯಾದದ್ದು. "ನನಗೆ ಬಾಳು ಮುಖ್ಯ, ಬಾಳನ್ನು ತಿಳಿಯಲು ಬೇಕಾದ ಸಾಧನಗಳೂ ಅಷ್ಟೇ ಮುಖ್ಯ. ಇಂದ್ರಿಯಗಳು ನಮ್ಮ ವೈರಿಗಳಲ್ಲ. ಅವುಗಳಿಂದ ಬೆಳೆಯುವ ಮನಸ್ಸು ಬುದ್ಧಿಗಳು ನಮ್ಮ ವೈರಿಗಳಾಗಲಾರವು. ಅವು ಜೀವನದ ಪ್ರಮುಖ ಸಾಧನಗಳು" ಎಂದು ತಮ್ಮ 'ಹುಚ್ಚುಮನಸ್ಸಿನ ಹತ್ತುಮುಖಗಳು' ಕೃತಿಯಲ್ಲಿ ಹೇಳಿದ್ದಾರೆ.

ಕಾರಂತರು ತಮ್ಮ ಶಿಷ್ಯೆ, ನರ್ತಕಿ ಲೀಲಾರವರನ್ನು 1936ರಲ್ಲಿ ಮದುವೆಯಾದರೂ ಆಗಿನ ಕಾಲಕ್ಕೆ ಅಂತರ್ಜಾತಿ ವಿವಾಹವಾಗಿ ತಾನೆಷ್ಟು ಪ್ರಗತಿಪರ ಆಲೋಚನೆಗಳನ್ನು ಹೊಂದಿದ್ದೇನೆ ಎಂಬುದನ್ನು ನಾಡಿಗೆ ತೋರಿಸಿದರು. ನುಡಿದಂತೆ ನಡೆದರು.

ಯಕ್ಷಗಾನ ಬಯಲಾಟ ಕೃತಿಯನ್ನು ರಚಿಸಿದ ಕಾರಂತರು ಸ್ವತಃ ಕುಣಿದು, ಅಭಿನಯಿಸಿ ತೋರಿಸಿದರು. ವೇಷ, ವಸ್ತ್ರವಿನ್ಯಾಸಗಳನ್ನು ಸರಳೀಕರಿಸಿಕೊಟ್ಟರು.

ಹಾಡುವುದನ್ನು ಉತ್ತಮಗೊಳಿಸಿದರು. ಯಕ್ಷರಂಗವನ್ನು ಸ್ಥಾಪಿಸಿದ ಕಾರಂತರು ದೇಶ ವಿದೇಶಗಳಲ್ಲಿ ಪ್ರದರ್ಶನವನ್ನು ಏರ್ಪಡಿಸಿದರು. ಮಕ್ಕಳ ಸಾಹಿತ್ಯ ರಚಿಸಿದರು. 'ಬಾಲವನ' ಸ್ಥಾಪಿಸಿದರು. ಚಲನಚಿತ್ರ ಕ್ಷೇತ್ರಕ್ಕೂ ಕೆಲಸ ಮಾಡಿದರು, ಗೋಕಾಕ್ ಚಳುವಳಿ, ಪರಿಸರ ರಕ್ಷಣೆಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕಡೆಗೆ ಲೋಕಸಭಾ ಚುನಾವಣೆಗೆ ನಿಂತು ಸೋತರು. ತನಗೆ ಸರಿ ಅನ್ನಿಸಿದ್ದನ್ನು ಪಟ್ಟು ಹಿಡಿದು ಮಾಡುವ ಸ್ವಭಾವ ಅವರದ್ದಾಗಿತ್ತು.

ಇಂತಹ ಬಹುಮುಖ ಪ್ರತಿಭೆಯ ಕಾರಂತರಿಗೆ 1978ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಮಧ್ಯಪ್ರದೇಶ ಸರಕಾರದ ತುಲಸೀ ಸಮ್ಮಾನ, ಪಂಪ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಭಾರತ ಸರ್ಕಾರದ ಅತ್ಯುನ್ನತ ಗೌರವ ಪದ್ಮಭೂಷಣ ಪ್ರಶಸ್ತಿಗಳ ಜೊತೆ ಅನೇಕ ಪ್ರಶಸ್ತಿ ಗರಿಗಳು ಅವರ ಕಿರೀಟ ಅಲಂಕರಿಸಿದವು. ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳೂ ಇವರನ್ನು ಅಲಂಕರಿಸಿದವು.

ದೈತ್ಯ ಪ್ರತಿಭೆ ಕಾರಂತರು 1998ರಲ್ಲಿ ತೀರಿಕೊಂಡರು ಆಗ ಅವರಿಗೆ ತೊಂಭತ್ತಾರು ವರ್ಷ. ಅವರ ನಿಧನರಾದುದು ಕನ್ನಡ ಸಾಹಿತ್ಯ ಲೋಕಕ್ಕೆ ನಷ್ಟವಾದರೂ ಅವರು ಬರೆದ ಸಾಹಿತ್ಯ ಮಾತ್ರ ಅವರ ಹೆಸರನ್ನೂ ಎಂದೆಂದಿಗೂ ಅಜರಾಮರವಾಗಿಸಿದೆ.

## ಮಾಸ್ತಿ ವೆಂಕಟೇಶ್ ಅಯ್ಯಂಗಾರ್

ಕನ್ನಡಿಗರಿಗೆ 'ಶ್ರೀನಿವಾಸ ಮತ್ತು ವೆಂಕಟೇಶ ಅಯ್ಯಂಗಾರ್' ಎಂದರೆ ಪ್ರಾಯಶಃ ವಿವರಣೆ ಬೇಕಾದೀತು. ಆದರೆ 'ಮಾಸ್ತಿ' ಎಂಬ ಹೆಸರು ಮಾತ್ರ ಜನಜನಿತವಾದುದು. 'ಮಾಸ್ತಿ ಕನ್ನಡದ ಆಸ್ತಿ' 'ಸಣ್ಣ ಕತೆಗಳ ಜನಕ' ಎಂದೇ ಪ್ರಸಿದ್ಧರಾಗಿರುವ ವೆಂಕಟೇಶ ಅಯ್ಯಂಗಾರರು 1896ರ ಜೂನ್ 6ರಂದು ಕೋಲಾರ ಜಿಲ್ಲೆಯ ಮಾಸ್ತಿ ಎಂಬ ಹಳ್ಳಿಯಲ್ಲಿ, ರಾಮಸ್ವಾಮಿ ಅಯ್ಯಂಗಾರ್ ಮತ್ತು ತಿರುಮಲಮ್ಮ ದಂಪತಿಗಳ ಮಗನಾಗಿ ಜನಿಸಿದರು.

ಆರಂಭಿಕ ವಿದ್ಯಾಭ್ಯಾಸವನ್ನು ಮಾಸ್ತಿ ಹಾಗೂ ಹೊಂಗೇನಹಳ್ಳಿಯ ಶಿವಾರಪಟ್ಟಣದ ಶಾಲೆಗಳಲ್ಲಿ ನಡೆಸಿ ನಂತರ ಮೈಸೂರಿನಲ್ಲಿ ವಾರಾನ್ನದ ವಿದ್ಯಾರ್ಥಿಯಾಗಿದ್ದುಕೊಂಡು, ಹೈಸ್ಕೂಲ್ ಶಿಕ್ಷಣ ಮುಗಿಸಿ ಮಹಾರಾಜ ಕಾಲೇಜಿನಲ್ಲಿ 'ಎಫ್‌ಎ' ಪರೀಕ್ಷೆಯನ್ನೂ ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಚಿನ್ನದ ಪದಕದೊಂದಿಗೆ ಬಿ.ಎ. ಪದವಿಯನ್ನು ಪಡೆದುಕೊಳ್ಳುತ್ತಾರೆ. ಮೈಸೂರು ಸಿವಿಲ್ ಪರೀಕ್ಷೆಯನ್ನು ಪಾಸುಮಾಡಿ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕಗೊಳ್ಳುತ್ತಾರೆ.

ಆಂಗ್ಲ ಸಾಹಿತ್ಯಾಭಿಮಾನಿಯಾಗಿದ್ದ ಮಾಸ್ತಿಯವರಿಗೆ ಕನ್ನಡದಲ್ಲೇ ಬರೆದು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಪ್ರೇರೇಪಣೆ ರೈತನೊಬ್ಬ ಮಾತಿನಿಂದಾಗಿರುತ್ತದೆ.

'ರಂಗನ ಮದುವೆ' ಎಂಬ ಸಣ್ಣ ಕತೆಯ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಮಾಸ್ತಿ ಸುಮಾರು 15 ಸಂಪುಟಗಳಷ್ಟು ಸಣ್ಣ ಕತೆಗಳ ಬೃಹತ್ ಸಾಹಿತ್ಯ ರಚಿಸಿ ಸಣ್ಣಕತೆಗಳ ಜನಕ ಎಂಬಹ 'ಖ್ಯಾತಿ'ಗೆ ಪಾತ್ರರಾಗಿರುತ್ತಾರೆ. ಅಲ್ಲದೇ ಸುಬ್ಬಣ್ಣ, ಚನ್ನಬಸವನಾಯಕ, ಚಿಕ್ಕವೀರರಾಜೇಂದ್ರ, ಶೇಷಮ್ಮ, ಮಾತುಗಾರ ರಾಮಣ್ಣ ಮುಂತಾದ ಕಾದಂಬರಿಗಳನ್ನು, ಬಿನ್ನಹ, ಅರುಣ, ತಾವರೆ, ಚೆಲುವು, ಗೌಡರಮಲ್ಲಿ, ರಾಮನವಮಿ ಮೂಕನ ಮಕ್ಕಳು ಸುನೀತ, ಮುಂತಾದ ಕವನ ಸಂಕಲನಗಳನ್ನು, ತಾಳಿಕೋಟೆ, ಶಾಸ್ತ್ರ, ಸಾವಿತ್ರಿ, ಕಾಕನಕೋಟೆ, ಯಶೋಧರ, ಭಟ್ಟರ ಮಗಳು, ಅಜ್ಜನ ದಾರಿ ಇತ್ಯಾದಿ ಮತ್ತು ರವೀಂದ್ರನಾಥ ಠಾಗೋರ್, ಶ್ರೀ ರಾಮಕೃಷ್ಣ, ನವರತ್ನರಾಮರಾವ್ ಇತ್ಯಾದಿ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಹೀಗೆ ಕತೆ ಕಾವ್ಯ ಕಾದಂಬರಿ, ವಿಮರ್ಶೆ, ಚಿಂತನೆ, ನಾಟಕ ಮತ್ತು ಅನುವಾದಗಳನ್ನೊಳಗೊಂಡಂತೆ 100ಕ್ಕೂ ಮಿಕ್ಕಿ ಕೃತಿಗಳನ್ನು ಮಾಸ್ತಿಯವರು ಕೊಡುಗೆಯಾಗಿ ನೀಡಿದ್ದಾರೆ.

1929ರಲ್ಲಿ ಬೆಳಗಾವಿಯಲ್ಲಿ ನಡೆದ 15ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. 1942ರಲ್ಲಿ 'ರಾಜಸೇವಾ ಪ್ರಸಕ್ತ' ಬಿರುದು, 1969ರಲ್ಲಿ ಸಣ್ಣ ಕತೆಗಳ ಸಂಪುಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1972ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1974ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಕೂಡ ಲಭ್ಯವಾಗಿದೆ.

1956ರಲ್ಲಿ ಕನಾಟಕ ವಿ.ವಿ. 1997ರಲ್ಲಿ ಮೈಸೂರು ವಿವಿ.ಗಳು ಗೌರವ ಡಾಕ್ಟರೇಟ್ ನೀಡಿದ್ದಾರೆ. 1983ರ ಅವರ ಚಿಕವೀರರಾಜೇಂದ್ರ ಕಾದಂಬರಿಗೆ ಸರ್ವೋಚ್ಚ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿ ಲಭಿಸಿವೆ.

1986ರಲ್ಲಿ ತಮ್ಮ ಜನ್ಮ ದಿನಾಂಕವಾದ ಜೂನ್ 6ರಂದೇ ನಿಧನಾರಾಗುವ ಮೂಲಕ ಮರಣದಲ್ಲೂ ವೈಶಿಷ್ಟ್ಯ ಹಾಗೂ ಉದಾತ್ತತೆಯನ್ನು ಮೆರೆದ ಮಾಸ್ತಿಯವರು ಬದುಕು ಬರಹಗಳನ್ನು ಗಮನಿಸಿದಾಗ ಅವರಲ್ಲಿ ಹೃದಯ ಮಾಧುರ್ಯ ಮತ್ತು ಜ್ಞಾನದ ಬೆಳಕುಗಳೆರಡೂ ಸಂಗಮಿಸಿದ್ದವು.

ಮಾಸ್ತಿಯವರಂತಹ ಸಜ್ಜನರನ್ನ ಪಡೆದ ಕನ್ನಡನಾಡು ಧನ್ಯ.

## ವಿನಾಯಕ ಕೃಷ್ಣ ಗೋಕಾಕ್

ಕನ್ನಡಕ್ಕೆ ಐದನೆಯ ಜ್ಞಾನ ಪೀಠ ಪ್ರಶಸ್ತಿ ತಂದುಕೊಟ್ಟ 'ವಿನಾಯಕ ಕೃಷ್ಣ ಗೋಕಾಕ್'ರು ಕನ್ನಡ ಸಾಂಸ್ಕೃತಿಕ ಕ್ಷೇತ್ರವನ್ನು ರಾಷ್ಟ್ರಮಟ್ಟಕ್ಕೇರಿಸಿದ ಮೇರು ಪ್ರತಿಭೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾದ ಪ್ರಥಮ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಲ್ಲದೆ ಭಾರತೀಯ ಜ್ಞಾನ ಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರಥಮ ಕನ್ನಡಿಗರೂ ಹೌದು. ಇವರಿಗೆ ಶಿಕ್ಷಣ ಮತ್ತು ಸಾಹಿತ್ಯ ಜೀವನದ ಮಂತ್ರಗಳಾಗಿದ್ದವು.

ಪ್ರಾಧ್ಯಾಪಕರೂ, ವಿಶ್ವವಿದ್ಯಾಲಯವೊಂದರ ಉಪಕುಲಪತಿಗಳೂ ಆಗಿದ್ದ ವಿ.ಕೃ.ಗೋಕಾಕರು, ಬರವಣಿಗೆ ಕ್ಷೇತ್ರದಲ್ಲಿ ಅಸಾಮಾನ್ಯ ಕವಿಗಳೂ, ಕಾದಂಬರಿಕಾರರೂ, ವಿಮರ್ಶಕರೂ ಆಗಿದ್ದರು. ಮಹಾಕಾವ್ಯಗಳ ಕಾಲ ಮುಗಿಯಿತೇನೋ ಎಂದುಕೊಳ್ಳುವ ಕಾಲದಲ್ಲಿ 'ಭಾರತ ಸಿಂಧೂ ರಶ್ಮಿ' ಎಂಬಂತೆ ಮಹಾಕಾವ್ಯ ರಚಿಸಿ ಆ ಮೂಲಕ ಕನ್ನಡಕ್ಕೆ ಐದನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಹೆಮ್ಮೆಯ ಲೇಖಕರಿವರು.

ಗೋಕಾಕರು 1909ರ ಆಗಸ್ಟ್ 10 ರಂದು ಧಾರವಾಡ ಜಿಲ್ಲೆಯ ಸವಣೂರು ಎಂಬ ತಾಲ್ಲೂಕಿನಲ್ಲಿ ಜನಿಸಿದರು. ಇವರ ತಂದೆ ಕೃಷ್ಣರಾವ್, ತಾಯಿ ಸುಂದರಾಬಾಯಿ, ಬಾಲ್ಯದ ವಿದ್ಯಾಭ್ಯಾಸ ಸವಣೂರಿನಲ್ಲಿಯೇ ಮಾಡಿ ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ 1929ರಲ್ಲಿ ಬಿ.ಎ. ಪದವಿ ಪಡೆದು 1931ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಗಳಿಸಿ ಪುಣೆಯ 'ಫರ್ಗುಸನ್' ಕಾಲೇಜಿನಲ್ಲಿ 'ಇಂಗ್ಲಿಷ್ ಅಧ್ಯಾಪಕರಾಗಿ ನೇಮಕಗೊಂಡಿದ್ದರು. ತಮ್ಮ 14ನೇ ವಯಸ್ಸಿಗೆ ಶೆಲ್ಲಿ, ಲಾಂಗ್ ಫೆಲೋ ಮೊದಲಾದ ಪ್ರಸಿದ್ಧ ಆಂಗ್ಲ ಕವಿಗಳನ್ನು ಓದಿಕೊಂಡು ಪ್ರಭಾವಿತರಾಗಿ 'ಲೈಲಾ' ಎಂಬ ಇಂಗ್ಲಿಷ್ ಕವಿತೆ ರಚಿಸಿದರು.

ಬೇಂದ್ರೆಯವರ 'ಗೆಳೆಯರ ಬಳಗ'ದ ಸದಸ್ಯರೇ ಆಗಿದ್ದ ಗೋಕಾಕರು ಗೆಳೆಯರಿಂದ ಪ್ರಭಾವಿತರಾಗಿ ಬೇಂದ್ರೆಯವರನ್ನು ಕಾವ್ಯಗುರುಗಳಂತೆ ಸ್ವೀಕರಿಸಿದ್ದರು. 1934ರಲ್ಲಿ 'ಕಲೋಪಾಸಕ' ಎಂಬ ಕವನ ಸಂಕಲನ ಪ್ರಕಟಿಸಿದರು.ಕಾವ್ಯ, ಮಹಾಕಾವ್ಯ, ನಾಟಕ ಕಾದಂಬರಿ, ಆತ್ಮವೃತ್ತ, ಪ್ರವಾಸ ಕಥನ, ಪ್ರಬಂಧಗಳು, ವಿಮರ್ಶೆ ಇತ್ಯಾದಿಗಳನ್ನೆಲ್ಲ ಒಳಗೊಂಡಂತೆ ಒಟ್ಟು ಐವತ್ತೈದು ಸೃಜನಾತ್ಮಕ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಗೋಕಾಕರು ನೀಡಿದ್ದಾರೆ.

1958ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಇವರಿಗೆ, 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, 1979ರಲ್ಲಿ ಕ್ಯಾಲಿಫೋರ್ನಿಯಾದ ಫೆಸಿಫಿಕ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿರುತ್ತವೆ. 1960ರಲ್ಲಿ 'ದ್ಯಾವಾ ಪೃಥವೀ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1983ರಲ್ಲಿ 'ಭಾರತ ಸಿಂಧೂ ರಶ್ಮಿ' ಮತ್ತೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1986ರಲ್ಲಿ ರಾಜಾಜಿ ಪ್ರಶಸ್ತಿ ಮತ್ತು 1990ರಲ್ಲಿ ಸರ್ವಶ್ರೇಷ್ಠವಾದ ಜ್ಞಾನಪೀಠ ಪ್ರಶಸ್ತಿಯೂ ಲಭಿಸಿದೆ.

ಇಂತಹ ಪಾಂಡಿತ್ಯಪೂರ್ಣ ಸಾಹಿತಿಗಳಾದ ಗೋಕಾಕರು ಶ್ರೀಸಾಮಾನ್ಯರ ಮನದಲ್ಲೂ ನೆಲೆ ನಿಲ್ಲಲು ಕಾರಣವಾಗಿದ್ದು, ಐತಿಹಾಸಿಕ ಗೋಕಾಕ್ ಚಳುವಳಿ ನಡೆದದ್ದು. ಇವರು ಭಾಷೆಯ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ನೀಡಿದ ವರದಿಯನ್ನು ಸರ್ಕಾರ ಜಾರಿಗೆ ತರಲು ಮೀನಮೇಷ ಎಣಿಸಿದ್ದ ನಂತರ ಕನ್ನಡಕ್ಕೆ ಜಯ ಲಭಿಸಿದ್ದು ಈಗ ಇತಿಹಾಸ.

'ವಿನಾಯಕ' ಎಂಬ ಕಾವ್ಯನಾಮದಿಂದ ಸಾಹಿತ್ಯ ರಚಿಸಿದ ಗೋಕಾಕರ ಪ್ರಥಮ ಕವನ ಸಂಕಲನಗಳೆಂದರೆ, 'ಕಲೋಪಾಸ' 'ಪಯಣ' 'ಸಮುದ್ರ ಗೀತೆಗಳು'

ಪ್ರೇಮ ಕಾಶ್ಮೀರ' ಉಗಮ, ಭಾಗವತ ನಿಮಿಷಗಳು, ಭಾವರಾಗ, ಕೊನೆಯ ದಿನಗಳು ಮುಂತಾದವು. ದ್ಯಾವಾ ಪೃಥವೀ ಖಂಡಕಾವ್ಯ ಮತ್ತು ಭಾರತ ಸಿಂಧೂ ರಶ್ಮಿ ಮಹಾಕಾವ್ಯ. ಈ ಅಪ್ರತಿಮ ಪ್ರತಿಭೆ 1992ರ ಏಪ್ರಿಲ್ 28ರಂದು ಮುಂಬಯಿಯಲ್ಲಿ ಇಹಲೋಕ ತ್ಯಜಿಸಿದರು.

## ಗಿರೀಶ್ ಕಾರ್ನಾಡ

ಗಿರೀಶ್ ಕಾರ್ನಾಡ, ಭಾರತದ ಶ್ರೇಷ್ಠ ನಾಟಕಕಾರಲ್ಲಿ ಇವರೂ ಒಬ್ಬರು. ರಂಗನಟ, ನಾಟಕಕಾರ, ಚಲನಚಿತ್ರ ಹಾಗೂ ಕಿರುತೆರೆಯ ನಟ, ನಿರ್ದೇಶಕ, ಚಿತ್ರಕಥಾ ಲೇಖಕ, ಭಾಷಾಂತಕಾರ ಹಾಗೂ ಉತ್ತಮ ಆಡಳಿತಗಾರ. ನಾಟಕ ರಚನೆಗಾಗಿಯೇ ಅವರಿಗೆ ಬಂದಿರುವ 'ಜ್ಞಾನಪೀಠ ಪ್ರಶಸ್ತಿ' ಕನ್ನಡಿಗರು ಮಾತ್ರವಲ್ಲ ಭಾರತೀಯರೆಲ್ಲರೂ ಹರ್ಷಪಡುವಂಥದ್ದು.

ಕಾರ್ನಾಡರು ಸ್ವಾತಂತ್ರ್ಯ ಪೂರ್ವದ ಅವಿಭಜಿತ ಮುಂಬಯಿ ಪ್ರಾಂತ್ಯದ ಮಥೆರಾನ್‌ನಲ್ಲಿ 1938ರ ಮೇ 19ರಂದು ಜನಿಸಿದರು. ಮೂಲತಃ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಶಿರಸಿಯವರು. ಕೃಷ್ಣಾಬಾಯಿ ಮತ್ತು ರಘುನಾಥ ಕಾರ್ನಾಡರ ಕಿರಿಯ ಮಗನಾದ ಗಿರೀಶರು ಕೊಂಕಣಿ ಮಾತೃಭಾಷೆಯಾಗಿದ್ದರೂ ಕನ್ನಡವನ್ನು ಮೊದಲ ಭಾಷೆಯಾಗಿಸಿಕೊಂಡರು. ಪ್ರಾಥಮಿಕ ಶಿಕ್ಷಣವನ್ನು ಶಿರಸಿಯಲ್ಲಿ ಪ್ರಾರಂಭಿಸಿದ ಕಾರ್ನಾಡರು ಅಲ್ಲಿನ ನಾಟಕ ಕಂಪೆನಿಗಳು ಯಕ್ಷಗಾನ ಕಾರ್ಯಕ್ರಮಗಳಿಂದ ಆಕರ್ಷಿತರಾಗಿದ್ದರು. ಧಾರವಾಡದ ಬಾಸೆಲ್ ಮಿಶನ್ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢಶಿಕ್ಷಣವನ್ನೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿಯನ್ನು ಪಡೆದರು. ಮುಂದೆ ಮುಂಬೈ ವಿಶ್ವವಿದ್ಯಾಲಯದ ಸಂಖ್ಯಾಶಾಸ್ತ್ರ ವಿಭಾಗದಲ್ಲಿ ಎಂ.ಎ ಗೆ ದಾಖಲಾದರು.

ಮರಾಠಿ ರಂಗಭೂಮಿ ಕಾರ್ನಾಡರಿಗೆ ಆಧುನಿಕ ರಂಗಭೂಮಿಯ ಪರಿಚಯ ಮಾಡಿಕೊಟ್ಟಿತು. ಸ್ಟ್ರಿಂಡ್‌ಬರ್ಗ್‌ನ 'ಮಿಸ್ ಜ್ಯೂಲಿ' ನಾಟಕ ಗಿರೀಶರನ್ನು ರಂಗಭೂಮಿಯೆಡೆಗೆ ಸೆಳೆಯಿತು. ಗಿರೀಶರು ಮುಂಬಯಿಯಲ್ಲಿದ್ದ ಕೆಲವೇ ದಿನಗಳು, ಮುಂದೆ ಅವರು ಕನ್ನಡ ರಂಗಭೂಮಿಗೆ ಹೊಸದಿಕ್ಕು ತೋರುವ ದಿನಗಳಾಗಿದ್ದು ವಿಶೇಷ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಎಂ.ಎ ಮಾಡುವುದಕ್ಕಾಗಿ ಗಿರೀಶರಿಗೆ ಪ್ರತಿಷ್ಠಿತ 'ರ್ಹೋಡ್ಸ್' ವಿದ್ಯಾರ್ಥಿವೇತನ ದೊರೆಯಿತು. ಮುಂಬಯಿ ಶಿಕ್ಷಣವನ್ನು ಮೊಟಕುಗೊಳಿಸಿ ಆಕ್ಸ್‌ಫರ್ಡ್‌ಗೆ ತೆರಳಿದರು. 1960ರಿಂದ 1963ರವರೆಗೆ ಅಲ್ಲಿದ್ದ ಗಿರೀಶರು ತತ್ವಶಾಸ್ತ್ರ ರಾಜಕೀಯ ಶಾಸ್ತ್ರ ಮತ್ತು ಅರ್ಥಶಾಸ್ತ್ರವನ್ನು ಅಧ್ಯಯನ ಮಾಡಿದರು. ಈ ಸಮಯದಲ್ಲೇ ಇಂಗ್ಲೆಂಡಿನ ಅದ್ಭುತ ರಂಗಭೂಮಿ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು.

ಪಾಶ್ಚಾತ್ಯ ರಂಗಭೂಮಿಯ ವಿವಿಧ ಮಜಲುಗಳನ್ನು ಪರಿಚಯಿಸಿತು. 1962–63ರಲ್ಲಿ 'ಮ್ಯಾಗಡಲೀನ್ ಜೂನಿಯರ್ ಕಾಮರ್ಸ್‌ರೂಮಿನ ಅಧ್ಯಕ್ಷರಾಗಿ 'ಆಕ್ಸ್‌ಫರ್ಡ್ ಯೂನಿಯನ್ ಸೂಸೈಟಿಯ' ಅಧ್ಯಕ್ಷರಾಗಿ ತಮ್ಮ ಅರಿವನ್ನು ಹಿಗ್ಗಿಸಿಕೊಂಡರು.

ಈ ಮಧ್ಯೆ ಬಹುದಿನಗಳಿಂದ ತಮ್ಮನ್ನು ಎಡೆಬಿಡದೆ ಕಾಡುತ್ತಿದ್ದ ವಸ್ತುವನ್ನು ಆಧಾರವಾಗಿಟ್ಟುಕೊಂಡು 'ಯಯಾತಿ' ನಾಟಕ ರಚಿಸಿದರು, ಆ ಮೂಲಕ ಪುರಾಣ, ಜಾನಪದ, ಇತಿಹಾಸದ ವಸ್ತುಗಳಿಂದ ಇಂದಿನ ಮನಸ್ಸುಗಳಿಗೆ ಕನ್ನಡಿ ಹಿಡಿಯುವ, ಆ ಮೂಲಕ ಸಮಾಜದ ಪ್ರತಿಬಿಂಬವನ್ನು ತೋರುವ ಜಾದೂಗಾರನ ಪ್ರವೇಶ ಕನ್ನಡ ರಂಗಭೂಮಿಗೆ ಆಯಿತು. ತದನಂತರದಲ್ಲಿ ಅವರು ಇತಿಹಾಸದ ವಸ್ತುಗಳನ್ನಾಧರಿಸಿ ತುಘಲಕ್, ತಲೆದಂಡ ಮತ್ತು ಟೀಪು ಸುಲ್ತಾನ ಕಂಡ ಕನಸು ನಾಟಕಗಳನ್ನೂ, ಪೌರಾಣಿಕ ವಸ್ತು ಇಟ್ಟುಕೊಂಡು  ಮಾ ನಿಷಾದ, ಹಿಟ್ಟಿನ ಹುಂಜ, ಅಗ್ನಿ ಮತ್ತು ಮಳೆ ನಾಟಕಗಳನ್ನೂ, ಜಾನಪದ ವಿಷಯವನ್ನು ಆಧರಿಸಿ ಹಯವದನ, ನಾಗಮಂಡಲ ನಾಟಕಗಳನ್ನೂ, ಅಂಜುಮಲ್ಲಿಗೆ, ಬಿಂಬ, ಮದುವೆ ಆಲ್ಬಂ, ಬೆಂದಕಾಳೂರು ಆನ್ ಟೋಸ್ಟ್ ಎಂಬ ಸಾಮಾಜಿಕ ನಾಟಕಗಳನ್ನು ರಚಿಸಿದರು. ಕೆಲವು ನಾಟಕಗಳನ್ನು ಕಾರ್ನಾಡರೇ ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಬಾದಲ್ ಸರ್ಕಾರ 'ಏವಂ ಇಂದ್ರಜಿತ್' ನಾಟಕವನ್ನು ಇಂಗ್ಲಿಷ್‌ಗೆ ಅನುವಾದಿಸಿ ತಾನೊಬ್ಬ ಸಮರ್ಥ ಅನುವಾದಕ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಸಿನಿಮಾರಂಗದಲ್ಲಿಯೂ ಕಾರ್ನಾಡರು ಚಿತ್ರಕತೆ, ಸಂಭಾಷಣೆಕಾರನಾಗಿ, ನಟ ನಿರ್ದೇಶಕನಾಗಿ ತನ್ನದೇ ಛಾಪುಮೂಡಿಸಿದರು. ವಂಶವೃಕ್ಷ, ಕಾಡು, ತಬ್ಬಲಿಯು ನೀನಾದೆ ಮಗನೆ, ಒಂದಾನೊಂದು ಕಾಲದಲ್ಲಿ, ಉತ್ಸವ್(ಹಿಂದಿ), ಪೊಘರ್(ಹಿಂದಿ) ಸಿನಿಮಾಗಳನ್ನು ನಿರ್ದೇಶಿಸಿದರು. ಸಂಸ್ಕಾರ ಚಿತ್ರಕ್ಕೆ ಚಿತ್ರಕತೆ ಸಂಭಾಷಣೆ ಬರೆದಿರುವುದಲ್ಲದೇ ಪಾತ್ರವನ್ನು ನಿರ್ವಹಿಸಿದ್ದಾರೆ. ಕನ್ನಡ, ಹಿಂದಿ, ತೆಲುಗು, ತಮಿಳು, ಬೆಂಗಾಲಿ ಸೇರಿದಂತೆ ಅನೇಕ ಭಾಷಾ ಚಿತ್ರಗಳಲ್ಲಿ ನಟಿಸಿ ಬಹುಭಾಷಾ ನಟರೆಂದೇ ಖ್ಯಾತಿಗಳಿಸಿದ್ದಾರೆ. ಸಿನಿಮಾರಂಗದ ಶ್ರೇಷ್ಠ ಪ್ರಶಸ್ತಿಗಳಾದ ರಾಷ್ಟ್ರಪತಿ ಚಿನ್ನದ ಪದಕ, ರಾಷ್ಟ್ರ ಪ್ರಶಸ್ತಿ, ಕರ್ನಾಟಕವೂ ಸೇರಿದಂತೆ ಹಲವು ರಾಜ್ಯ ಪ್ರಶಸ್ತಿಗಳು ಇವರ ಮುಡಿಗೇರಿವೆ.

ಅನೇಕ ಸಾಕ್ಷ್ಯ ಚಿತ್ರಗಳನ್ನೂ ನಿರ್ಮಿಸಿ ನಿರ್ದೇಶಿಸಿರುವ ಕಾರ್ನಾಡರು ರಾಷ್ಟ್ರಕವಿ ಕುವೆಂಪುರವರ ಕಾನೂರು ಹೆಗ್ಗಡತಿ ಕಾದಂಬರಿಯನ್ನು ಕನ್ನಡದಲ್ಲಿ ಚಲನಚಿತ್ರವಾಗಿ, ಹಿಂದಿಯಲ್ಲಿ ಧಾರವಾಹಿಯಾಗಿ ನಿರ್ದೇಶಿಸಿದರು. 'ಕನಕ–ಪುರಂದರ' ಸಾಕ್ಷ್ಯ ಚಿತ್ರಕ್ಕೆ ಪ್ರತಿಷ್ಠಿತ 'ಗೋಲ್ಡನ್ ಲೋಟಸ್' ಪ್ರಶಸ್ತಿ ಪಡೆದರು. ಹೀಗೆ ಸೃಜನಶೀಲ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದರೂ ತಮಗೆ ಬಂದ ಆಡಳಿತಾತ್ಮಕ ಜವಾಬ್ದಾರಿಗಳನ್ನು ಅಷ್ಟೇ ನಿಷ್ಠೆಯಿಂದ ಮಾಡಿದರು.

ಪುಣೆಯಲ್ಲಿರುವ ಫಿಲ್ಮ್ ಮತ್ತು ಟೆಲಿವಿಜನ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕರಾಗಿ, ಕರ್ನಾಟಕ ನಾಟಕ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿ, ರಾಷ್ಟ್ರೀಯ ಸಂಗೀತ, ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಅನನ್ಯ ಸೇವೆ ಸಲ್ಲಿಸಿದರು. ಲಂಡನ್‌ನಲ್ಲಿರುವ ನೆಹರೂ ಸಾಂಸ್ಕೃತಿಕ ಕೇಂದ್ರದ ಮುಖ್ಯಸ್ಥರಾಗಿ ಭಾರತದ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸ ಮಾಡಿ ಆ ಕೇಂದ್ರಕ್ಕೆ ಹೊಸ ಜೀವ ತುಂಬಿದರು. ವಿದೇಶದ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆಲಸ ನಿರ್ವಹಿಸಿದ್ದಾರೆ.

1972ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಬಿ.ವಿ.ಕಾರಂತರು ನಿರ್ದೇಶಿಸಿದ ಮೂರುದಿನಗಳ ಬಯಲು ನಾಟಕೋತ್ಸವದಲ್ಲಿ ಮೂರು ನಾಟಕಗಳು ಪ್ರದರ್ಶಿತಗೊಂಡವು ದೊರೆ ಈಡಿಪಸ್ ಹಾಗೂ ಜೋಕುಮಾರಸ್ವಾಮಿ ನಾಟಕಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ ಗಿರೀಶರು, ಹೊಚ್ಚ ಹೊಸ ಪ್ರಯೋಗಗಳೊಂದಿಗೆ ಕನ್ನಡಿಗರ ಗಮನ ಸೆಳೆದದ್ದು ಮಾತ್ರವಲ್ಲ ಕರ್ನಾಟಕದ ಹವ್ಯಾಸಿ ರಂಗಭೂಮಿ ಆಧುನಿಕತೆಯತ್ತ ತೆರೆದುಕೊಳ್ಳಲು ಸ್ಪಷ್ಟವಾದ ಹಾದಿಯನ್ನು ನಿರ್ಮಿಸಿದರು. ಈ ಸ್ಫೂರ್ತಿಯ ಫಲವಾಗಿ ಕನ್ನಡದಲ್ಲಿ ಅನೇಕ ಹೊಸ ರಂಗಕರ್ಮಿಗಳು ಮಹತ್ತರವಾದ ಕೆಲಸಗಳನ್ನೂ ಮಾಡಲು ಪ್ರಾರಂಭಿಸಿದರು.

ಇಂತಹ ಬಹುಮುಖ ಪ್ರತಿಭೆಯ ಕಾರ್ನಾಡರಿಗೆ ಒಟ್ಟು ಸಾಹಿತ್ಯ ರಚನೆಗಾಗಿ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಗುಬ್ಬಿವೀರಣ್ಣ ಪ್ರಶಸ್ತಿ, ಕಾಳಿದಾಸ ಸಮ್ಮಾನ್ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕಮಲಾದೇವಿ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳು ಹುಡುಕಿಕೊಂಡು ಬಂದವು. ಇವೆಲ್ಲವನ್ನೂ ಪಡೆದ ಮೇಲೆಯೂ ಕಾರ್ನಾಡರು ತಮ್ಮ ಸೃಜನಶೀಲ ಚಟುವಟಿಕೆಗಳನ್ನು ಹೆಚ್ಚು ಮಾಡಿದರೆ ವಿನಃ ಅವುಗಳಿಂದ ಬೀಗಲಿಲ್ಲ.

ಕಾರ್ನಾಡರ ಪತ್ನಿ ಸರಸ್ವತಿ, ಮಗಳು ಶಾಲ್ಮಲೀರಾಧಾ, ಮಗ ರಘು ಅಮೇಯರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಕಾರ್ನಾಡರ ತುಘಲಕ್ ನಾಟಕದಲ್ಲಿ ತುಘಲಕ್‌ನೇ ಹೇಳುವ ಒಂದು ಮಾತಿದೆ "ನೆಲದಲ್ಲಿ ಬೇರಿಳಿಯುವ ಮೊದಲು ನಕ್ಷತ್ರದಲ್ಲಿ ಟೊಂಗೆ ಬಿಚ್ಚುವುದು ಹೇಗೆ?" ಬೇರು ಮತ್ತು ಚಿಗುರುಗಳ ಮಧ್ಯದ ಬಾಂಧವ್ಯವನ್ನು ನೆಲ ಮತ್ತು ಬಾನುಗಳ ಸವಿಸ್ತಾರ ಅವಕಾಶದಲ್ಲಿ ಸ್ಥಾಪಿಸುವ ಹಂಬಲದ ಮಾತಿದು. ಗಿರೀಶರ ಸಾಧನೆಯನ್ನು ಗಮನಿಸಿದವರಿಗೆ ಈ ಮಾತು ತುಘಲಕ್‌ಗಿಂತ ಅವರಿಗೆ ಹೆಚ್ಚು ಅನ್ವಯವಾಗುತ್ತದೆ ಎನಿಸುತ್ತದೆ. ಧಾರವಾಡದ ಸಾಂಸ್ಕೃತಿಕ ನೆಲದಲ್ಲಿ ನಿಧಾನವಾಗಿ ಗರಿಬಿಚ್ಚಿದ ಅವರ ಸೃಜನಶೀಲ ಪ್ರತಿಭೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಡಿದೆ. ಇಂತಹ ಮಹಾನ್ ಪ್ರತಿಭೆ ಕನ್ನಡದ್ದು, ಕರ್ನಾಟಕದ್ದು ಎಂದು ಹೇಳಿಕೊಳ್ಳುವುದೇ ನಮ್ಮ ಹೆಮ್ಮೆ.

## ಡಾ. ಯು.ಆರ್. ಅನಂತಮೂರ್ತಿ

ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಕರ್ನಾಟಕ ಕಂಡ ಶ್ರೇಷ್ಠ ಚಿಂತಕರು. 1932ರ ಡಿಸೆಂಬರ್ 21ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ತಾಲ್ಲೂಕು 'ಮೇಳಿಗೆ' ಎಂಬ ಗ್ರಾಮದಲ್ಲಿ ಯು. ರಾಜಗೋಪಾಲಚಾರ್ಯ ಮತ್ತು ಶ್ರೀಮತಿ ಸತ್ಯಮ್ಮ ದಂಪತಿಗಳ ಮಗನಾಗಿ ಜನಿಸಿದ ಇವರು, ಬ್ರಾಹ್ಮಣರೇ ಅಧಿಕವಾಗಿದ್ದ 'ದೂರ್ವಾಸಪುರ'ದಲ್ಲಿ ತಮ್ಮ ಬಾಲ್ಯವನ್ನು ಕಳೆದರು.

ಸಂಸ್ಕೃತ ಪಾಠಶಾಲೆಯಲ್ಲಿ ಅವರ ವಿದ್ಯಾಭ್ಯಾಸ ಮತ್ತು ವೇದ ಅಧ್ಯಯನ ನಡೆಸಿ ತೀರ್ಥಹಳ್ಳಿ ಮತ್ತು ಶಿವಮೊಗ್ಗಗಳಲ್ಲಿ ಆರಂಭಿಕ ಶಿಕ್ಷಣವನ್ನು ಪೂರೈಸಿ ತಮ್ಮ ಸಾಂಪ್ರದಾಯಿಕ ಪರಿಸರದಿಂದ ಬಿಡುಗಡೆ ಪಡೆದು ಮೈಸೂರಿಗೆ ಬಂದು 1956ರಲ್ಲಿ ಚಿನ್ನದ ಪದಕದೊಂದಿಗೆ ಇಂಗ್ಲಿಷ್ ಎಂಎ ಪದವಿ ಪಡೆಯುತ್ತಾರೆ. ಪ್ರತಿಭಾವಂತರಾಗಿದ್ದ ಇವರು 1956–63ರ ತನಕ ಶಿವಮೊಗ್ಗ, ಹಾಸನದ ಇಂಟರ್ ಮೀಡಿಯಟ್ ಕಾಲೇಜು ಮತ್ತು ಮೈಸೂರಿನ ಮಹಾರಾಜ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ಕಾಮನ್ ವೆಲ್ತ್ ವಿದ್ಯಾರ್ಥಿವೇತನ ಪಡೆದು ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದಿಂದ "Politics and fiction in the 1930s" ಎಂಬ ಪ್ರೌಢ ಪ್ರಬಂಧಕ್ಕೆ ಪಿಹೆಚ್.ಡಿ ಪಡೆಯುತ್ತಾರೆ. ಅನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ರೀಡರಾಗಿ ಸೇವೆ ಸಲ್ಲಿಸಿದ್ದಾರೆ. 1987ರಲ್ಲಿ ಕೊಟ್ಟಾಯಂನ ಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಕಗೊಳ್ಳುತ್ತಾರೆ. 1992ರಲ್ಲಿ ಸ್ವಯಂ ನಿವೃತ್ತಿ ಪಡೆದ "ನ್ಯಾಷನಲ್ ಬುಕ್ ಟ್ರಸ್ಟ್"ನ ಅಧ್ಯಕ್ಷರಾಗಿ  ನೇಮಕಗೊಳ್ಳುತ್ತಾರೆ.

ವಿದ್ಯಾರ್ಥಿ ದೆಸೆಯಲ್ಲಿ ಮೈಗೂಡಿಸಿಕೊಂಡಿದ್ದ ಸಂಘಟನಾ ಶಕ್ತಿ ಹಾಗೂ ಸಾಮಾಜಿಕ ಚಳುವಳಿ ಮುಂದುವರಿಸಿದ  ಮೂರ್ತಿಯವರು ಸಾಹಿತ್ಯದಿಂದಷ್ಟೇ ಅಲ್ಲದೆ ಅದ್ಭುತ ಮಾತುಗಾರಿಕೆಯಿಂದ ಪ್ರಸಿದ್ಧರಾಗಿದ್ದರು. ದೇಶ ವಿದೇಶಗಳ ಹಲವು ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ.

ಸಣ್ಣ ಕತೆಗಾರರು, ಕಾದಂಬರಿಕಾರರೆಂದೇ ಸಾಹಿತ್ಯವಲಯದಲ್ಲಿ ಹೆಸರಾಗಿರುವ ಮೂರ್ತಿಯವರು ಎಂದೆಂದೂ ಮುಗಿಯದ ಕಥೆ, ಮೌನಿ, ಪ್ರಶ್ನೆ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ ಮುಂತಾದ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಮೊದಲ ಕಾದಂಬರಿಯಾದ 'ಸಂಸ್ಕಾರ' ಭಾರತದ ಎಲ್ಲಾ ಭಾಷೆಗಳಿಗೆ ಅನುವಾದಗೊಂಡಿದೆ. ಇಂಗ್ಲಿಷ್, ಫ್ರೆಂಚ್, ರಷ್ಯನ್ ಹಾಗೂ ಹಂಗೇರಿಯನ್ ಭಾಷೆಗಳಿಗೂ ಅನುವಾದಗೊಂಡಿದೆ. ಭಾರತೀಪುರ, ಅವಸ್ಥೆ, ದಿವ್ಯ, ಭವ ಅವರ ಇತರೆ ಕಾದಂಬರಿಗಳು. ಮಿಥುನ ಹದಿನೈದು ಪದ್ಯಗಳು, ಅಜ್ಜನ ಹೆಗಲ ಸುಕ್ಕುಗಳು ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮೂರ್ತಿಯವರು ಆವಾಹನೆ ಎಂಬ ನಾಟಕವನ್ನೂ, ಪ್ರಜ್ಞೆ ಮತ್ತು ಪರಿಸರ ವಿಮರ್ಶಾ ಕೃತಿಗಳನ್ನು ಹೊರತಂದಿದ್ದಾರೆ.

ಇವರು ಸಂಸ್ಕಾರ, ಅವಸ್ಥೆ, ಬರ, ಘಟಶ್ರಾದ್ಧ ಎಂಬ ಕಾದಂಬರಿಗಳನ್ನಾಧರಿಸಿದ ಚಲನ ಚಿತ್ರಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿವೆ. 1984ರ ಕರ್ನಾಟಕ ಸಾಹಿತ್ಯ ಅಕಾಡೆಮಿ ವಿಶೇಷ ಪುರಸ್ಕಾರ, ಅದೇ ವರ್ಷ ರಾಜ್ಯೋತ್ಸವ ಪ್ರಶಸ್ತಿ, 1994ರಲ್ಲಿ  ಮಾಸ್ತಿ ಪ್ರಶಸ್ತಿಯ ಜೊತೆ ಇವರ ಸಮಗ್ರ ಸಾಹಿತ್ಯಕ್ಕೆ 'ಜ್ಞಾನಪೀಠ' ಪ್ರಶಸ್ತಿಯೂ ಲಭಿಸಿದೆ. 1998ರ ಭಾರತ ಸರ್ಕಾರದ 'ಪದ್ಮಭೂಷಣ' ಪ್ರಶಸ್ತಿ ಪಡೆದ ಅನಂತಮೂರ್ತಿಯವರು ತಮ್ಮ ಸಾಹಿತ್ಯ ಮತ್ತು ವಾಕ್‌ಚಾತುರ್ಯದಿಂದ, ವಿಷಯಗಳ ನಿಖರವಾದ ಮಂಡನೆಯಿಂದ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಠವಾಗಿ ಕಾಣಿಸುತ್ತಾರೆ. 'I can contradict my statement the very next moment' ಎನ್ನುತ್ತಿದ್ದ

ಮೂರ್ತಿಯವರು ಸದಾ ತಮ್ಮ ಹೇಳಿಕೆಗಳಿಂದ ವಿವಾದಕ್ಕೆ ಒಳಗಾಗುತ್ತಿದ್ದುದು ಸತ್ಯ. ಇಂಥ ಪ್ರತಿಭಾನ್ವಿತ ಸಾಹಿತಿ 2014ರ ಆಗಸ್ಟ್ 22ರಂದು ಬೆಂಗಳೂರಿನಲ್ಲಿ ಇಹಲೋಕ ತ್ಯಜಿಸಿದರು.

## ಡಾ. ಚಂದ್ರ ಶೇಖರ ಕಂಬಾರ

ಉತ್ತರ ಕರ್ನಾಟಕದ ದೇಸಿ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿರುವ ಕವಿ. ನಾಟಕಕಾರ ಕಂಬಾರರು ಬೆಳಗಾವಿ ಜಿಲ್ಲೆಯ ಘೋಡಗೇರಿಯಲ್ಲಿ 1937 ಜನವರಿ 2 ರಂದು ಜನಿಸಿದರು. ಅವರ ತಂದೆ ಬಸವಣ್ಣಪ್ಪ ತಾಯಿ ಚೆನ್ನಮ್ಮ. ಕಮ್ಮಾರಿಕೆ ವೃತ್ತಿಯ ಬಡ ಕುಟುಂಬದಲ್ಲಿ ಹುಟ್ಟಿದ ಕಂಬಾರರು ಸಾಂಸ್ಕೃತಿಕವಾದ ಸಿರಿವಂತಿಕೆಯಲ್ಲಿ ಬೆಳೆದರು. ಘೋಡಗೇರಿ ಪುಟ್ಟಹಳ್ಳಿಯಾದರೂ ಸಾಂಸ್ಕೃತಿಕವಾಗಿ ಸದಾ ಜೀವಂತಿಕೆಯಿದ್ದ ಹಳ್ಳಿ. ಈ ಹಳ್ಳಿಯ ಸಮಸ್ತ ಚಟುವಟಿಕೆಗಳು ಕಂಬಾರರ ಮೇಲೆ ಗಾಢ ಪ್ರಭಾವ ಬೀರಿರುವುದನ್ನು ನಾವು ಅವರ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾಣಬಹುದು.

ಹುಟ್ಟಿದ ಊರಲ್ಲೇ ಪ್ರಾಥಮಿಕ ಶಾಲೆಗೆ ಸೇರಿದರೂ ಮನೆಯವರ ಒತ್ತಾಯಕ್ಕೆ ಶಾಲೆಗೆ ಹೋಗುತ್ತಿದ್ದ ಕಂಬಾರರಿಗೆ ಶಾಲೆಯ ಮೆಟ್ಟಿಲು ಹತ್ತದ ಗೆಳೆಯರು, ಘಟಪ್ರಭಾ ನದಿ, ಆಟೋಟಗಳು ಹೆಚ್ಚು ಪ್ರಿಯವಾಗಿದ್ದವು. ಗ್ರಾಮೀಣ ಬದುಕಿನ ಉಸಿರಾಗಿದ್ದ ಸಂಗ್ಯಾಬಾಳ್ಯಾ, ಶ್ರೀ ಕೃಷ್ಣಪಾರಿಜಾತ, ಲಾವಣಿ ಮತ್ತು ಗೀಗಿ ಮೇಳಗಳು ಕಂಬಾರರ ಹೃದಯ ಸೂರೆಗೊಂಡು ಮನದಾಳಕ್ಕೆ ಇಳಿದವು. ಹಳ್ಳಿಯ ಈ ಸಾಂಸ್ಕೃತಿಕ ವಾತಾವರಣವೇ ಕಂಬಾರರಲ್ಲಿ ಸಾಂಸ್ಕೃತಿಕ ಚೈತನ್ಯವನ್ನೂ ಉಕ್ಕಿಸಿದವು. ಮುಲ್ಕೀ ಪರೀಕ್ಷೆ ಪಾಸು ಮಾಡಿದ ನಂತರ ಗೋಕಾಕ್‌ನ ಪ್ರೌಢಶಾಲೆಗೆ ಸೇರಿದರು. ಆದರೆ ತಂದೆಯವರ ಬಡತನದ ಕಾರಣದಿಂದ ಶಿಕ್ಷಣಕ್ಕೆ ತಿಲಾಂಜಲಿ ಇಡುವ ಸಂದರ್ಭ ಒದಗಿಬಂತು. ಆಗ ಗುರುಗಳಾದ ಕೃಷ್ಣಮೂರ್ತಿ ಪುರಾಣಿಕರು ಕಂಬಾರರನ್ನು ಸಾವಳಗಿಮಠದಲ್ಲಿ ವಸತಿ ವ್ಯವಸ್ಥೆ ಮಾಡಿ ಸೇರಿಸಿದರು. ಈ ಸಾವಳಗಿ ಸ್ವಾಮಿಗಳು ಮತ್ತು ಮಠ ಇವರ ವ್ಯಕ್ತಿತ್ವವನ್ನು ರೂಪಿಸಿದವು. ಹಾಗಾಗಿಯೇ ತಮ್ಮ ಅನೇಕ ಕೃತಿಗಳಲ್ಲಿ ಅವಕಾಶವಾದಾಗಲೆಲ್ಲಾ ಸಾವಳಗಿ ಮಠವನ್ನು ನೆನಪಿಸಿದ್ದಾರೆ.

ಬೆಳಗಾವಿಯಲ್ಲಿ ಕಲಾವಿಭಾಗದ ವಿದ್ಯಾರ್ಥಿಯಾಗಿದ್ದಾಗಲೇ ಕಂಬಾರರು 'ಅಣ್ಣ–ತಂಗಿ' ಕಾದಂಬರಿ ಬರೆದು ಗುರುಗಳಾದ ಭೂಸನೂರು ಮಠ ಅವರ ಮುಂದಿಟ್ಟು ಅವರ ಸಲಹೆ ಸ್ವೀಕರಿಸಿ ಹೆಚ್ಚು ಓದುವ ಬರೆಯುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಇಂಟರ್ ಮೀಡಿಯಟ್‌ನಲ್ಲಿದ್ದಾಗ 'ಬೆಂಬತ್ತಿದ ಕಣ್ಣು' ನಾಟಕ, ಬಿ.ಎ. ಪದವಿ ಮುಗಿಯುತ್ತಿದ್ದಂತೆ ಮುಗುಳು ಕವನ ಸಂಕಲನ ಪ್ರಕಟಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆದು ಇಲ್ಲಿಯೇ "Origin and Development of Karnataka folk theatre" ಎಂಬ ಮಹಾಪ್ರಬಂಧಕ್ಕಾಗಿ ಪಿಹೆಚ್.ಡಿ ಪದವಿ ಪಡೆದರು.

ಬೆಳಗಾವಿಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುವಾಗ ಅವರ ಪ್ರಸಿದ್ಧ ಕೃತಿ 'ಹೇಳತೇನ ಕೇಳ' ಬರೆದರು. ಮುಂದೆ ಅದು ಗೋಪಾಲಕೃಷ್ಣ ಅಡಿಗರ ಮುತುವರ್ಜಿಯಿಂದ ಪ್ರಕಟವಾಯಿತು. ಕಂಬಾರರು ಕೇವಲ ಬರಹಗಾರ ಮಾತ್ರವಲ್ಲ ಅದ್ಭುತವಾಗಿ ಹಾಡಬಲ್ಲವರಾಗಿದ್ದರು. ಹಾಗಾಗಿಯೇ ಬಹಳಷ್ಟು ಪ್ರಸಿದ್ಧಿ ಪಡೆದರು. ಸಾಗರ, ಉಡುಪಿ ಹೀಗೆ ಬೇರೆ ಬೇರೆ ಕಾಲೇಜುಗಳಲ್ಲಿ ಕೆಲಸ ಮಾಡಿ ಅಮೇರಿಕಾದ ಚಿಕಾಗೋ ವಿಶ್ವವಿದ್ಯಾಲಯಕ್ಕೆ ಫುಲ್ ಬ್ರೈಟ್ ಸ್ಕಾಲರ್ ಆಗಿದ್ದು, ಅಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದರು. ಅಲ್ಲಿಂದ ಬಂದ ನಂತರ ಬೆಂಗಳೂರು ವಿಶ್ವವಿದ್ಯಾಲಯ ಅಧ್ಯಾಪಕರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿ ನೇಮಕಗೊಂಡು ಆರು ವರ್ಷಗಳ ಕಾಲ ಅತ್ಯಂತ ಕಾಳಜಿಯಿಂದ ವಿಶ್ವವಿದ್ಯಾಲಯ ಕಟ್ಟಿ ಬೆಳಸಿದರು.

ಕಂಬಾರರು ಬೆಂಬತ್ತಿದ ಕಣ್ಣು, ನಾರ್ಸಿಸಸ್, ಋಷ್ಯ ಶೃಂಗ, ಜೋಕುಮಾರಸ್ವಾಮಿ, ಚಾಳೇಶ, ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ, ಜೈಸಿದ ನಾಯಕ, ಕಾಡುಕುದುರೆ, ನಾಯೀಕತೆ, ಖರೋಬರ, ಮತಾಂತರ(ಭಾರತಾಂಬೆ), ಹರಕೆಯಕುರಿ, ಸಾಂಬಶಿವ ಪ್ರಹಸನ, ಹುಲಿಯ ನೆರಳು, ಬೆಪ್ಪು ತಕ್ಕಡಿ ಬೋಳೇ ಶಂಕರ, ತುಕ್ರನ ಕನಸು, ಸಿರಿಸಂಪಿಗೆ, ಮಹಾಮಾಯಿ, ಪುಷ್ಪರಾಣಿ ನಾಟಕಗಳ ಜೊತೆಗೆ ಕೆಲವು ಏಕಾಂಕ ನಾಟಕಗಳನ್ನು ಬರೆದರು. ಇತ್ತೀಚೆಗೆ 'ಶಿವರಾತ್ರಿ' ನಾಟಕ ಬರೆದಿರುವ ಇವರು ತಮ್ಮ ಬಹುಮುಖಿ ಪರಂಪರೆಯ ಅರಿವು ಮತ್ತು ಆಧುನಿಕ ಪ್ರಜ್ಞೆಯ ಜತೆಗೆ ದೇಸಿಯ ಜಾನಪದದ ಕಥನ ಕಾವ್ಯ ಮಾರ್ಗದಲ್ಲಿ ಸಾಗಿಬಂದ ತಮ್ಮ ನಾಟಕಗಳಲ್ಲಿ ದೇಸಿಯತೆಯನ್ನು ಹೆಚ್ಚು ಸಂಭ್ರಮ ಸಮೃದ್ಧತೆಯಿಂದ ಪ್ರಕಟಗೊಳಿಸುವ ಮೂಲಕ ಆಧುನಿಕ ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿದ ವಿಶಿಷ್ಟ ನಾಟಕಕಾರರು.

ಕಂಬಾರರು ಸಮಕಾಲೀನ ಕಾವ್ಯ ಪರಂಪರೆಗೆ ಭಿನ್ನವಾದ ವಿಶಿಷ್ಟವಾದ ಕಾವ್ಯಗಳನ್ನು ನೀಡಿದವರು, ಮುಗುಳು, ಹೇಳತೇನಕೇಳ, ತಕರಾರಿನವರು, ಸಾವಿರದ ನೆರಳು, ಬೆಳ್ಳಿಯ ಮೀನು, ಅಕ್ಕಕ್ಕು ಹಾಡುಗಳೇ ಕವನ ಸಂಕಲನದ ಜೊತೆಗೆ 'ಚಕೋರಿ' ಎಂಬ ಮಹಾಕಾವ್ಯವನ್ನು ವಿಶಿಷ್ಟ ಮಾದರಿಯ ನಿರೂಪಣಾಕ್ರಮದಲ್ಲಿ ಬರೆದಿದ್ದಾರೆ. ಅಣ್ಣ ತಂಗಿ, ಕರಿಮಾಯಿ, ಸಿಂಗಾರೆವ್ವ ಮತ್ತು ಅರಮನೆ ಇವರ ಕಾದಂಬರಿಗಳು, ಇವುಗಳ ಜೊತೆಗೆ ಸಂಗ್ಯಾಬಾಳ್ಯಾವೂ ಸೇರಿದಂತೆ ಅನೇಕ ಸಂಶೋಧನಾ ಕೃತಿಗಳನ್ನು ಸಂಪಾದಿಸಿದ್ದಾರೆ.

ಕಂಬಾರರು ಚಲನಚಿತ್ರ ಕ್ಷೇತ್ರದಲ್ಲಿಯೂ ತಮ್ಮ ವಿಶಿಷ್ಟ ಛಾಪನ್ನು ಮೂಡಿಸಿದರು. ಕತೆಗಾರರಾಗಿ, ಸಂಗೀತ ನಿರ್ದೇಶಕರಾಗಿ, ಚಿತ್ರಕತೆ ಬರೆದು ಅನೇಕ ಪ್ರಶಸ್ತಿಗಳನ್ನು ಪಡೆದರು. ಕಾಡುಕುದುರೆ, ಸಂಗೀತ, ಹರಕೆಯ ಕುರಿ, ಸಿಂಗಾರವ್ವ ಮತ್ತು ಅರಮನೆ ಚಿತ್ರಗಳು ವಿವಿಧ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದವು.

ಕಂಬಾರರು ಅತ್ಯುತ್ತಮ ಆಡಳಿತಗಾರರೆಂಬುದಕ್ಕೆ ಇಂದಿನ ಕನ್ನಡ ವಿಶ್ವವಿದ್ಯಾಲಯವೇ ಸಾಕ್ಷಿ. ಇದರ ಜೊತೆಗೆ ಅವರು ಕರ್ನಾಟಕ ಜಾನಪದ ಮತ್ತು

ಯಕ್ಷಗಾನ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆಯ ಅಧ್ಯಕ್ಷರಾಗಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸದಸ್ಯರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದರು.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಜೀವನಾನುಭವ ಕಟ್ಟಿಕೊಟ್ಟು ರಂಗಭೂಮಿ ಮತ್ತು ನಾಟಕ ರಚನೆಯ ಏಕತಾನತೆ ಮುರಿದು, ಪಾಶ್ಚಾತ್ಯ ತಂತ್ರ ಚಿಂತನೆಗಳಿಗೆ ಮಾರುಹೋಗಿದ್ದವರ ನಡುವೆ ಕನ್ನಡದ ಅನುಭವಗಳ ನಾಟಕಗಳನ್ನು ಕಟ್ಟಿದ್ದು, ಅಂಚಿಗೆ ತಳ್ಳಲ್ಪಟ್ಟ ಸಮುದಾಯದವರ ಆತಂಕಗಳಿಗೆ ದಾರಿ ನೀಡಿದ್ದು ಕಂಬಾರರ ಶ್ರೇಷ್ಠತೆ. ಈ ಎಲ್ಲಾ ಸಾಧನೆಗಳಿಗಾಗಿ ಅವರು ಪದ್ಮಶ್ರೀ ಒಳಗೊಂಡಂತೆ, ಕಬೀರ್ ಸಮ್ಮಾನ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ, ನಂದಿಕಾರ್, ಕುಮಾರನ್ ಆಶನ್, ಮಾಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾದರು.

ಕನ್ನಡ ಮಣ್ಣಿನಿಂದ ಬಂದ ಅಪ್ಪಟ ದೇಸೀ ಶೈಲಿಯ ಬರಹಗಾರ ಚಂದ್ರಶೇಖರ ಕಂಬಾರರು ಕನ್ನಡ ಸಾಹಿತ್ಯ ಲೋಕವನ್ನೂ ಜಾನಪದ ಲೋಕವನ್ನು ಶ್ರೀಮಂತಗೊಳಿಸಿದವರು. ಅಂತರರಾಷ್ಟ್ರೀಯ ಮನ್ನಣೆ ಗಳಿಸಿದರೂ ಕನ್ನಡತನವನ್ನು ಬಿಟ್ಟುಕೊಡದೇ ಇರುವುದೇ ಇವರ ಹೆಚ್ಚುಗಾರಿಕೆ.

*****

**ಲೇಖಕರು**

ಡಾ. ಸಾಸ್ವೆಹಳ್ಳಿ ಸತೀಶ್ ಅವರು ಮೂಲತಃ ರಂಗಕರ್ಮಿ. ಇವರು ನೂರಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕನ್ನಡದ ಮೇಷ್ಟ್ರಾದ ಇವರು ಪಾಠ ಮಾಡುತ್ತಲೇ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಅವರಿಗೋಸ್ಕರವೇ ನಾಟಕಗಳನ್ನು ಆಡಿಸಿ ಇಂದು ರಂಗಭೂಮಿಗೆ ಹಲವಾರು ಯುವ ನಟರನ್ನು ಕೊಟ್ಟವರು. ಭಾರತದ ಶ್ರೇಷ್ಠ ನಾಟಕಕಾರ ಗಿರೀಶ್ ಕಾರ್ನಾಡರ ನಾಟಕಗಳ ಕುರಿತು ಆಳವಾದ ಅಧ್ಯಯನ ನಡೆಸಿದ್ದಾರೆ. ಕಾರ್ನಾಡರ ಕುರಿತಂತೆ "ನೆಲದೊಳಗೆ ಬೇರಿಳಿಯುವ ಮುನ್ನ" ಎಂಬ ಸಂಶೋಧನಾ ಕೃತಿಯನ್ನು ಪ್ರಕಟಿಸಿದ್ದಾರೆ. ಕಿತ್ತೂರ ಶಿವರಂಜನಿ ಎಂಬ ನಾಟಕವನ್ನು ರೂಪಾಂತರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಇವರೊಬ್ಬ ಪ್ರತಿಭಾವಂತ ನಟರು ಆಗಿದ್ದಾರೆ. ರಂಗಭೂಮಿಗೆ ಬೇಕಾದ ಸಂಘಟನಾ ಕೌಶಲ್ಯ, ತಾಳ್ಮೆ ಪರಿಶ್ರಮ ಮತ್ತು ಸಾಹಸಕ್ಕೆ ಕೈಹಾಕುವ ಕ್ರಿಯಾಶೀಲ ರಂಗಕರ್ಮಿಯಾಗಿದ್ದಾರೆ.

**ಆಶಯ**

ಕನ್ನಡ ಜ್ಞಾನ ಪೀಠ ಪುರಸ್ಕೃತ ಶ್ರೇಷ್ಠ ಸಾಹಿತಿಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಒದಗಿಸುವುದು ಹಾಗೂ ಈ ಕುರಿತು ಅಧ್ಯಯನಕ್ಕೆ ಪ್ರೋತ್ಸಾಹಿಸುವುದು.

**ಶಬ್ದಾರ್ಥಗಳು**

ಕಲ್ಪವೃಕ್ಷ=ಬೇಡಿದುದನ್ನು ಕೊಡುವ ಸ್ವರ್ಗಲೋಕದ ಒಂದು ಮರ, ಅಗ್ರಪಂಕ್ತಿ=ಮೊದಲ ಸಾಲು, ಆತ್ಮಾಭಿಮಾನ=ಆತ್ಮಗೌರವ ಸ್ವಾಭಿಮಾನ,

ಅತಿಶಯೋಕ್ತಿ=ಉತ್ಪ್ರೇಕ್ಷೆ, ಅಸಂಗತ=ಅಸಂಬದ್ಧವಾದುದು, ಕೋಲ್ಮಿಂಚು=ಕಣ್ಣು ಕೋರೈಸುವ ಮಿಂಚು, ಮೊಡಲ=ಸೂರ್ಯಉದಯಿಸುವ ದಿಕ್ಕು ಪೂರ್ವದಿಕ್ಕು, ಉದಾತ್ತತೆ=ವೈಭವ ಭವ್ಯತೆ, ಮಾಧುರ್ಯ=ಸವಿ ರುಚಿ ಸೊಗಸು, ಸರ್ವೋಚ್ಚ=ಶ್ರೇಷ್ಠತೆ ಕಟ್ಟಕಡೆ, ವಿಮರ್ಶಕ=ಗುಣದೋಷಗಳನ್ನು ಪರಿಶೀಲಿಸುವವನು ವಿವೇಚಿಸುವವನು, ಅಪ್ರತಿಮ=ಎಣೆಯಿಲ್ಲದ ಹೋಲಿಸಲಾಗದ, ಅರಿವು=ತಿಳಿವು, ಸವಿಸ್ತಾರ=ವಿವರಗಳನ್ನು ಒಳಗೊಂಡ, ಸಮಸ್ತ=ಎಲ್ಲ ಸಕಲ, ತಿಲಾಂಜಲಿ=ಆಸೆಯನ್ನು ಬಿಡುವುದು, ಮುತುವರ್ಜಿ=ಆಸಕ್ತಿ ಶ್ರದ್ಧೆ ಜಾಗರೂಕತೆ, ಛಾಪು=ಪ್ರಭಾವ ವರ್ಚಸ್ಸು

**ಪ್ರಶ್ನೆಗಳು**

1. ರಾಷ್ಟ್ರಕವಿ ಕುವೆಂಪು ಅವರ ಬದುಕು ಸಾಧನೆ ಕುರಿತು ಬರೆಯಿರಿ.?
2. ವರಕವಿ ಬೇಂದ್ರೆಯವರ ಕುರಿತು ಸಂಕ್ಷಿಪ್ತವಾಗಿ ವಿವರಿಸಿ?
3. ಶಿವರಾಮಕಾರಂತರ ಜೀವನ ಸಾಧನೆಗಳನ್ನು ತಿಳಿಸಿ?
4. ಮಾಸ್ತಿಯವರ ಜೀವನ ಸಾಧನೆಯನ್ನು ಬರೆಯಿರಿ ?
5. ವಿ.ಕೃ.ಗೋಕಾಕ್‌ರವರನ್ನು ಸಾಹಿತ್ಯದ ಸಾಧನೆಯನ್ನು ಪರಿಚಯಿಸಿ?
6. ಗಿರೀಶ್ ಕರ್ನಾಡ್ ಅವರ ರಂಗಭೂಮಿಯ ಕೊಡುಗೆ ಕುರಿತು ಬರೆಯಿರಿ?
7. ಡಾ. ಯು.ಆರ್. ಅನಂತಮೂರ್ತಿ ಅವರ ಕುರಿತು ಸಂಕ್ಷಿಪ್ತವಾಗಿ ತಿಳಿಸಿ?
8. ಡಾ. ಚಂದ್ರಶೇಖರ ಕಂಬಾರ ಅವರ ಬದುಕುಬರಹಗಳನ್ನು ವಿವರಿಸಿ?

**ಹೆಚ್ಚಿನ ಓದು**

1. ಸಾಲು ದೀಪಗಳು: ಜಿ.ಎಸ್. ಸಿದ್ಧಲಿಂಗಯ್ಯ, ಎಂ.ಎಚ್. ಕೃಷ್ಣಯ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಹೊಸಗನ್ನಡ ಸಾಹಿತ್ಯ ಚರಿತ್ರೆ: ಪ್ರೊ. ಎಲ್.ಎಸ್. ಶೇಷಗಿರಿರಾವ್, ಸ್ವಪ್ನ ಬುಕ್ ಹೌಸ್, ಬೆಂಗಳೂರು.

## ಪಠ್ಯಕ್ರಮ

**ಸೂಚನೆ:** ಈ ಕೆಳಗಿನ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ಒಂದಕ್ಕಿಂತ ಹೆಚ್ಚು ಪಾಠಗಳಿರುವಾಗ ಕನಿಷ್ಠ ಒಂದು ಪಾಠವನ್ನು ಬೋಧಿಸುವುದು

**1. ಸಂಸ್ಕೃತಿ ಪರಿಚಯ :**

ಕರ್ನಾಟಕ ಸಂಸ್ಕೃತಿಯ ಒಂದು ಚಿತ್ರ : ಡಾ. ರಹಮತ್ ತರೀಕೆರೆ

**2. ವಿಮರ್ಶೆ:**

ಹುಲ್ಲು ಕಣವಿಯವರ ಒಂದು ಕವನ ವಿಮರ್ಶೆ: ಗೌರೀಶ್ ಕಾಯ್ಕಿಣಿ

**3. ನುಡಿ ಚಿತ್ರ:**

ವಂಶವಾಹಿ ಮಹಾಮೋಜಣಿ : ನಾಗೇಶ ಹೆಗಡೆ

ಯಾತಕ್ಕೆ ಮಳೆ ಹೋದವೋ... ಮೂಲ: ಪಿ. ಸಾಯಿನಾಥ್, ಕನ್ನಡಕ್ಕೆ : ಜಿ.ಎನ್. ಮೋಹನ್

**4. ವೃತ್ತಿ ಬದುಕು :**

ಎರಡನೇ ಅಚಾತುರ್ಯ : ಡಾ. ಗಣೇಶ ಎಂ. ನಿಲೇಸರ

**5. ಅಂಕಣ ಸಾಹಿತ್ಯ:**

ಆಹಾರ : ಈಶ್ವರ ದೈತೋಟ

**6. ವಚನ ಸಾಹಿತ್ಯ:**

ವಚನ ಸಾಹಿತ್ಯದಲ್ಲಿ ಕೃಷಿ : ವಚನಕಾರರು

**7. ಸರ್ವಜ್ಞ ಸಾಹಿತ್ಯ:**

ಸರ್ವಜ್ಞ ಸಾಹಿತ್ಯದಲ್ಲಿ ಕೃಷಿ : ಡಾ.ಕೆ.ಸಿ.ಶಶಿಧರ

**8. ಕವನ:**

ಅವ್ವ : ಪಿ. ಲಂಕೇಶ್

ತೆಂಗು : ಡಾ. ಜಿ.ಎಸ್. ಶಿವರುದ್ರಪ್ಪ,

ಅಲ್ಲೆ ಕುಂತವರೆ : ಡಾ. ಸಿದ್ಧಲಿಂಗಯ್ಯ

ಮಿಶ್ರ ತಳಿಗಳು : ಡಾ. ಎಂ. ಮಹದೇವಪ್ಪ

**9. ವ್ಯಕ್ತಿ ಪರಿಚಯ:**

ಕೃಷಿ ಋಷಿ ಶಂಕರ ಲಂಗಟಿ: ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ

10. **ಕಥೆ:**

ನೀರು : ಬಸವರಾಜು ಕುಕ್ಕರಹಳ್ಳಿ

11. **ಕುವೆಂಪು ಸಾಹಿತ್ಯ:**

ಕಾಡಿನಲ್ಲಿ ಕಳೆದ ಒಂದಿರುಳು: ಕುವೆಂಪು

12. **ವಿಜ್ಞಾನ/ಪರಿಸರ – ಬರಹ**

ಸಸ್ಯಶಾಸ್ತ್ರ : ಡಾ. ಶಿವರಾಮ ಕಾರಂತ

ಜೇಡ ಜಾಲ : ಡಾ. ಟಿ. ಆರ್. ಅನಂತರಾಮು

13 **ಹಾಸ್ಯ:**

ಪಶು ಚಿಕಿತ್ಸೆ: ಬೀ.ಚಿ.

14. **ಸಾಹಿತಿಗಳ ಪರಿಚಯ:**

ಜ್ಞಾನಪೀಠ ಪುರಸ್ಕೃತ ಸಾಹಿತಿಗಳು : ಡಾ. ಸಾಸ್ವೆಹಳ್ಳಿ ಸತೀಶ್